14-06-2017

**ಕರ್ನಾಟಕ ವಿಧಾನಸಭೆ**

**ಬುಧವಾರ ದಿನಾಂಕ 14ನೇ ಜೂನ್ 2017**

**14ನೇ ವಿಧಾನಸಭೆ, 14ನೇ ಅಧಿವೇಶನ**

**ವಿಷಯಾನುಕ್ರಮಣಿಕೆ**

**(INDEX)**

**1.ಪ್ರಶ್ನೋತ್ತರಗಳು.**

**ಅ.ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.**


ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ (108/838)
ಶ್ರೀ ಎಂ. ಕೃಷ್ಣಪ್ಪ (ವಸತಿ ಸಚಿವರು)
ಶ್ರೀ ದತ್ತಾತ್ರೇಯ ಸಿ ಪಾಟೀಲ ರೇವೂರ (110/1530)
ಶ್ರೀ ಆರ್.ರೋಷನ್ ಬೇಗ್ (ನಗರಾಭಿವೃದ್ಧಿ ಸಚಿವರು)
ಶ್ರೀ ಪ್ರತಾಪಗೌಡ ಪಾಟೀಲ್ (111/1057)
ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
ಶ್ರೀ ಜೆ.ಆರ್.ಲೋಬೋ (112/1236)
ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)
ಶ್ರೀ ಪಿ.ಆರ್. ಸುಧಾಕರ ಲಾಲ್ (113/1661)
ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)
ಶ್ರೀ ಎಚ್.ಎಸ್.ಶಿವಶಂಕರ್ (114/1251)
ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (117/234)
ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
ಶ್ರೀ ಜಿ.ಎಚ್. ಶ್ರೀನಿವಾಸ್ (119/1243)
ಶ್ರೀ ರಾಮಲಿಂಗಾ ರೆಡ್ಡಿ (ಸಾರಿಗೆ ಸಚಿವರು)
ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ (118/ 1545)
ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)


**ದಿನಾಂಕ 07-06-2017 ರ 3ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**


ಶ್ರೀ ಜಿ.ಜಿ.ಹೆಚ್.ತಿಪ್ಪಾರೆಡ್ಡಿ (31/60)
ಶ್ರೀ ಎಂ. ಕೃಷ್ಣಪ್ಪ (ವಸತಿ ಸಚಿವರು)


ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

## 14-06-2017

**ಆ.ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ದಿನಾಂಕ: 14.06.2017ರ ಎಂಟನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 193 ಪ್ರಶ್ನೆಗಳ ಪೈಕಿ 97 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು. (ಅನುಬಂಧ-1) (4-7)

**2.ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.**

1.ವಿಷಯ:ಗುಂಡ್ಲುಪೇಟೆಯ ಬೊಮ್ಮಲಾಪುರ ಗ್ರಾಮದಲ್ಲಿ ನಾಯಕ ಸಮಾಜದವರಿಗೆ ರಕ್ಷಣೆ ಕೊಡುವಂತಹ ಕೆಲಸ ಮಾಡುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

2.ವಿಷಯ:ಶಾಲಾ ಪಠ್ಯ ಪುಸ್ತಕ ಪೂರೈಸುವಲ್ಲಿ ಸರ್ಕಾರದ ವೈಫಲ್ಯದ ಕುರಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**3. ವಿತ್ತೀಯ ಕಾರ್ಯಕಲಾಪಗಳು.**

2017-18ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮಂಡನೆಗೆ ಅನುಮತಿ ಕೋರಿಕೆ

2017-18ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೇ ಕಂತು)

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)
ಮಂಡಿಸಲಾಯಿತು

(ಅನುಬಂಧ-2)

**4.ಶಾಸನ ರಚನೆ.**

ವಿಧೇಯಕಗಳ ಮಂಡನೆಗೆ ಅನುಮತಿ ಕೋರಿಕೆ

**ಕರ್ನಾಟಕ ರಾಜ್ಯ ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017**

ಶ್ರೀ ಬವಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)
ವಿಧೇಯಕವನ್ನು ಮಂಡಿಸಲಾಯಿತು

(ಅನುಬಂಧ-3)

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

**ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017**
ಶ್ರೀ ಬವಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)
ವಿಧೇಯಕವನ್ನು ಮಂಡಿಸಲಾಯಿತು

(ಅನುಬಂಧ-4)

**ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕ, 2017**
ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)
ವಿಧೇಯಕವನ್ನು ಮಂಡಿಸಲಾಯಿತು

(ಅನುಬಂಧ-5)

**ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ, 2017**
ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು)
ವಿಧೇಯಕವನ್ನು ಮಂಡಿಸಲಾಯಿತು

(ಅನುಬಂಧ-6)

## 5. ವಿತ್ತೀಯ ಕಾರ್ಯಕಲಾಪಗಳು.

2017-18ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) (10-32)
ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ (32-33)

## 6.ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ.

1.ವಿಷಯ:ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಗರ ಶಾಖೆಯಲ್ಲಿ ನಡೆದಿರುವ ಅಕ್ರಮ ಹಾಗೂ ಅವ್ಯವಹಾರಗಳ ಪ್ರಕರಣಗಳನ್ನು ಸಿ.ಬಿ.ಐ.ಗೆ ವಹಿಸುವುದು ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.
ಶ್ರೀ ಲಕ್ಷ್ಮಣ ಸಂಗಪ್ಪ ಸವದಿ

2.ವಿಷಯ:ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಜಮೀನಿನಲ್ಲಿ ಜೀವನೋಪಯೋಗಕ್ಕಾಗಿ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಬಡ ರೈತರಿಗೆ ಕಂದಾಯ ಇಲಾಖೆಯ ಕಾಯ್ದೆ 192ಎ ಮತ್ತು 192ಬಿ ಯಿಂದ ಅನ್ಯಾಯವಾಗುತ್ತಿರುವುದರಿಂದ ಅಗತ್ಯ ತಿದ್ದುಪಡಿ ತರುವ ಬಗ್ಗೆ.
ಶ್ರೀ ಬಿ.ಬಿ.ನಿಂಗಯ್ಯ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

**7.ಗಮನ ಸೆಳೆಯುವ ಸೂಚನೆಗಳು.**

1.ವಿಷಯ:ಹಾಸನ-ಮೈಸೂರು ರಸ್ತೆಯ ಮಧ್ಯದಲ್ಲಿರುವ ಹಂಗರಹಳ್ಳಿ ಗ್ರಾಮದ ಕಸ್ತೂರಬಾ ವಸತಿ ಶಾಲೆಯಲ್ಲಿ ಪದವಿ ಪೂರ್ವ ತರಗತಿಗಳನ್ನು ಆರಂಭಿಸುವ ಅವಶ್ಯಕ ಬೋಧಕ/ಬೋಧಕೇತರ ಸಿಬ್ಬಂದಿಯ ಹುದ್ದೆಗಳೊಂದಿಗೆ ಮಂಜೂರು ಮಾಡುವ ಬಗ್ಗೆ.
ಶ್ರೀ ಹೆಚ್.ಕೆ.ಕುಮಾರಸ್ವಾಮಿ

2.ವಿಷಯ:ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಕಬ್ಬಿಣದ ಅದಿರನ್ನು ಪೂರೈಸಲು ಗಣಿಯನ್ನು ಮಂಜೂರು ಮಾಡುವ ಬಗ್ಗೆ.
ಶ್ರೀ ಎಂ.ಜೆ.ಅಪ್ಪಾಜಿ
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)(ಗಣಿ ಮತ್ತು ಭೂ ವಿಜ್ಞಾನ ಸಚಿವರ ಪರವಾಗಿ)

3.ವಿಷಯ:ಮಂಡ್ಯ ಜಿಲ್ಲೆ ಕೆ.ಆರ್ ಪೇಟೆ ತಾಲ್ಲೂಕಿನ ಮುರುಕನಹಳ್ಳಿಯಲ್ಲಿ ನಡೆದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪವೆಸಗಿರುವ ಡಿ.ವೈ.ಎಸ್.ಪಿ. ಯವರನ್ನು ಅಮಾನತ್ತುಗೊಳಿಸದಿರುವ ಬಗ್ಗೆ.
ಡಾ:ನಾರಾಯಣಗೌಡ
ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)(ಗೃಹ ಸಚಿವರ ಪರವಾಗಿ)

4.ವಿಷಯ:ಸಿದ್ದಾಪುರ ಗ್ರಾಮ ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ ಸರ್ವೆ ನಂ.3/1ಎಪಿ/1ರ ಜಮೀನನ್ನು ಆಸ್ಪತ್ರೆ ನಿರ್ಮಾಣ ಮಾಡಲು ಬಿ.ಎಂ.ಟಿ.ಸಿ. ಯಿಂದ ಆರೋಗ್ಯ ಇಲಾಖೆಗೆ ಹಸ್ತಾಂತರಿಸದೇ ಇರುವ ಬಗ್ಗೆ.
ಶ್ರೀ ಅರವಿಂದ ಲಿಂಬಾವಳಿ
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)(ಕಂದಾಯ ಸಚಿವರ ಪರವಾಗಿ)

5.ವಿಷಯ:ರಾಷ್ಟ್ರೀಯ ಹೆದ್ದಾರಿಯಿಂದ ಹಾಸನ ಜಿಲ್ಲೆ ಸಕಲೇಶಪುರ ನೂತನ ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ದುರಸ್ತಿ ಪಡಿಸಿರುವ ಬಗ್ಗೆ.
ಶ್ರೀ ಹೆಚ್.ಕೆ.ಕುಮಾರಸ್ವಾಮಿ
ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

6.ವಿಷಯ:ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ರಾಷ್ಟ್ರೀಯ ಹೆದ್ದಾರಿ 234 ರಲ್ಲಿ ಬಾಣಾವರದಿಂದ ಹುಳಿಯಾರು ಭಾಗದ ರಸ್ತೆ ಟೆಂಡರನ್ನು ರದ್ದುಗೊಳಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ.
ಶ್ರೀ ಕೆ.ಎಂ.ಶಿವಲಿಂಗೇಗೌಡ
ಡಾ:ಹೆಚ್.ಸಿ.ಮಹದೇವಪ್ಪ (ಲೋಕೋಪಯೋಗಿ ಸಚಿವರು)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

## 14-06-2017

7.ವಿಷಯ:2017-18ನೇ ಸಾಲಿಗೆ ಸಂಬಂಧಿಸಿದಂತೆ ನಂಜುಂಡಪ್ಪ ಅನುಷ್ಠಾನ ಸಮಿತಿಯಿಂದ ಹಿಂದುಳಿದ 114 ತಾಲ್ಲೂಕುಗಳಿಗೆ ಸೀಮಿತವಾಗಿ ಅಭಿವೃದ್ಧಿ ಯೋಜನೆಗೆ ಅನುದಾನ ಬಿಡುಗಡೆ ಮತ್ತು ಅನುಷ್ಠಾನಗೊಳಿಸುವ ಬಗ್ಗೆ.
ಶ್ರೀ ಪಿ.ಟಿ.ಪರಮೇಶ್ವರ ನಾಯಕ್
ಶ್ರೀ ಎಂ.ಆರ್.ಸೀತಾರಾಂ (ಯೋಜನೆ ಮತ್ತು ಸಾಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

8.ವಿಷಯ:ಹಾಸನ ಜಿಲ್ಲೆ ಯಗಚಿ ಜಲಾಶಯ ಯೋಜನೆಯ ಎಡದಂಡೆ ನಾಲೆ ಕಾಮಸಮುದ್ರ ಶಾಖಾ ನಾಲೆ ಕಿ.ಮಿ.0.00 ಯಿಂದ 35.00ರವರೆಗೆ ಅಭಿವೃದ್ಧಿ ಕಾಮಗಾರಿಯ ಸಂಬಂಧದಲ್ಲಿ ಗ್ರಾಮಗಳ ಜಮೀನುಗಳ ಭೂ ಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ರೈತರಿಗೆ ಪರಿಹಾರವನ್ನು ನೀಡುವ ಬಗ್ಗೆ.
ಶ್ರೀ ಹೆಚ್.ಕೆ.ಕುಮಾರಸ್ವಾಮಿ
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಕಂದಾಯ ಸಚಿವರ ಪರವಾಗಿ)

9.ವಿಷಯ:ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ 2018ರಲ್ಲಿ ನಡೆಯಲಿರುವ ಮಹಾಮಸ್ತಕಾಭಿಷೇಕ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಶ್ರವಣಬೆಳಗೊಳ, ಹಾಸನ ನಗರ, ಬೇಲೂರು, ಹಳೇಬೀಡು ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳನ್ನು ಪಾರದರ್ಶಕವಾಗಿ ಕೈಗೊಳ್ಳುವ ಬಗ್ಗೆ.
ಶ್ರೀ ಹೆಚ್.ಎಸ್. ಪ್ರಕಾಶ್
ಶ್ರೀ ಎ. ಮಂಜು (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು)(ಲೋಕೋಪಯೋಗಿ ಸಚಿವರ ಪರವಾಗಿ)

10.ವಿಷಯ:ರಾಜ್ಯದಲ್ಲಿ ಕುಡುಒಕ್ಕಲಿಗ ಜನಾಂಗದವರನ್ನು ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನಂತೆ 3ಎ ವರ್ಗಕ್ಕೆ ಸೇರ್ಪಡೆಗೊಳಿಸುವ ಬಗ್ಗೆ.
ಶ್ರೀ ಎನ್.ಹೆಚ್.ಕೋನರೆಡ್ಡಿ
ಶ್ರೀ ಎ. ಮಂಜು (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು) (ಸಮಾಜ ಕಲ್ಯಾಣ ಸಚಿವರ ಪರವಾಗಿ)

**8.ಅನುಬಂಧಗಳು-6.**

*********

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

**ಕರ್ನಾಟಕ ವಿಧಾನ ಸಭೆ**

ಬುಧವಾರ, ದಿನಾಂಕ 14ನೇ ಜೂನ್ 2017 ರಂದು ಸದನವು

ವಿಧಾನ ಸೌಧದ

ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 02 ನಿಮಿಷಗಳಿಗೆ ಸಮಾವೇಶಗೊಂಡಿತು

ಅಧ್ಯಕ್ಷರು **ಶ್ರೀ ಕೆ.ಬಿ.ಕೋಳಿವಾಡ್** ರವರು ಪೀಠವನ್ನು ಅಲಂಕರಿಸಿದರು

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

14-06-2017

14.06.2017 11.00(4) KS:PS

## ಪ್ರಶ್ನೋತ್ತರಗಳು

ಅ)ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು:- ಈಗ ಪ್ರಶ್ನೋತ್ತರ ಮೊದಲ ಪ್ರಶ್ನೆ ಮಾನ್ಯ ಹೆಚ್.ಸಿ.ಬಾಲಕೃಷ್ಣರವರು ಇದೆ. ಮಾನ್ಯ ಸದಸ್ಯರು ಬಂದಿಲ್ಲ. ಮುಂದಿನ ಪ್ರಶ್ನೆ ಶ್ರೀ ಸಿ.ಬಿ.ಸುರೇಶ್ ಬಾಬುರವರದು ಇದೆ. ಅವರೂ ಸಹ ಬಂದಿಲ್ಲ. ಮುಂದಿನ ಪ್ರಶ್ನೆ ಮಾನ್ಯ ಎಂ.ಪಿ.ಅಪ್ಪಚ್ಚುರಂಜನ್‌ರವರದು ಇದೆ. ತಾವು ಕೇಳಿ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:108(838)**

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಿಗಿಸಿದ್ದಾರೆ. ಆದರೆ, ಗುರಿ ಮತ್ತು ಆಯ್ಕೆಗೂ ಬಹಳಷ್ಟು difference ಇದೆ. ಹಾಗೆಯೇ ಪ್ರಗತಿಯಲ್ಲಿ 50% ಕೂಡ ಆಗಿಲ್ಲವೆಂದು ಹೇಳುವುದಕ್ಕೆ ಇಚ್ಚಿಷಪಡುತ್ತೇನೆ. 2016-17ನೇ ಸಾಲಿನಲ್ಲಿ ಪೂರ್ಣಗೊಂಡಿರುವ ಮನೆಗಳು 118, ಪ್ರಗತಿಯಲ್ಲಿರುವ ಮನೆಗಳು 3453 ಎಂದು ಮಾಹಿತಿ ಕೊಟ್ಟಿದಾರೆ. 2016-17ನೇ ಸಾಲು ಮುಗಿದರೂ ಕೂಡ ಪ್ರಗತಿ ಆಗಿಲ್ಲ. ಪೂರ್ಣಗೊಂಡಿರುವ ಮನೆಗಳು ಕೇವಲ ಬೆರಳು ಎಣಿಕೆಯಷ್ಟು ಆಗಿವೆ. ಇದಕ್ಕೆ ಕಾರಣವೇನು? ಮತ್ತೆ ಅದರ ಜೊತೆಗೆ ಹೆಚ್ಚಿನ ಮನೆಗಳನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಕೂಡ ಮಾಡಿದ್ದೇನೆ. ಆದರೆ, ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಟ್ಟಿಲ್ಲ. ಕಳೆದ ಸಾರಿ ಪತ್ರ ಕೊಟ್ಟಾಗ 500 ಮನೆಗಳನ್ನು ಶಾಸಕರಿಗೆ ಕೊಡುತ್ತೇವೆಂಬ ಮಾತನ್ನು ಹೇಳಿದ್ದರು. ಆದರೆ, ಇದುವರೆಗೂ ಕೊಟ್ಟಿಲ್ಲ. ಆದ್ದರಿಂದ, ಅದನ್ನು ಯಾವಾಗ ಕೊಡುತ್ತೀರಿ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, 2016-17ನೇ ಸಾಲಿನಲ್ಲಿ ಪ್ರಗತಿಯಲ್ಲಿರುವ ಮನೆಗಳು 3453 ಎಂದು ಇದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಮಾನ್ಯ ಶಾಸಕರ ಜೊತೆಯಲ್ಲಿ ಸ್ಥಳೀಯ

ತಿದ್ದುಪಡಿಯಾಗದ/uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಜನಪ್ರತಿನಿಧಿಗಳು ಒತ್ತಾಸೆ ಕೊಟ್ಟು ಮನೆಗಳನ್ನು complete ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎಷ್ಟೋ ಜನರು ಬೇರೆ ಬೇರೆ ಕಾರಣಗಳಿಂದ ಕೆಲಸ ಪ್ರಾರಂಭ ಮಾಡಿರುವುದಿಲ್ಲ. ಅರ್ಧಂಬರ್ಧ ಕೆಲಸವನ್ನು ಮಾಡಿರುತ್ತಾರೆ. ಆದ್ದರಿಂದ, ದಯವಿಟ್ಟು ಮಾನ್ಯ ಶಾಸಕರು ಸ್ವಲ್ಪ ಆಸಕ್ತಿ ತೆಗೆದುಕೊಂಡು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ತಾಲ್ಲೂಕುವಾರು ಹೆಚ್ಚುವರಿಯಾಗಿ 514 ಮನೆಗಳನ್ನು ನಾನು ಕೊಟ್ಟಿದ್ದೆ. ಆದರೆ, ಅದು ಬಂದಿಲ್ಲವೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್:- ಮಾನ್ಯ ಸಚಿವರೆ, ರದ್ದತಿ ಆದ ಮನೆಗಳನ್ನು ಏತಕ್ಕಾಗಿ ಕ್ಲಿಯರ್ ಮಾಡುತ್ತಿಲ್ಲ? ಯಾವ ಕಾರಣಕ್ಕಾಗಿ ರದ್ದು ಮಾಡಿದ್ದೀರಿ? ಯಾವಾಗ ಕೇಳಿದರೂ ಕೂಡ computer block ಆಗಿದೆ ಎಂದು ಉತ್ತರ ಬರುತ್ತಿದೆ. ಆದ್ದರಿಂದ, ಇದನ್ನು ಯಾವಾಗ ಕ್ಲಿಯರ್ ಮಾಡುತ್ತೀರಿ?

ಶ್ರೀ ಡಿ.ಎನ್.ಜೀವರಾಜ್:- ಮಾನ್ಯ ಅಧ್ಯಕ್ಷರೆ, ಮನೆಗಳನ್ನು ಕೊಡುವಾಗ ಜಾಗಕ್ಕೆ ಜಿಪಿಎಸ್ ಮಾಡಬೇಕೆಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳೇ ನಾನು ಹೇಳುವುದು ಬಹಳ ಗಂಭೀರವಾದ ವಿಷಯವಾಗಿದೆ. ಇದರ ಬಗ್ಗೆ ಗಮನಹರಿಸಬೇಕು. ಮನೆ ಕಟ್ಟುವುದಕ್ಕೆ ಪ್ರಾರಂಭ ಮಾಡಬೇಕಾದರೆ ಆತ ಹಿಂದೆ ಇರುವ ಹಳೆಯ ಮನೆಯಲ್ಲಿರುತ್ತಾನೆ. ನಿನ್ನ ಹಳೆಯ ಮನೆಯನ್ನು ಪೂರ್ಣವಾಗಿ ಕೆಡವಿಬಿಡು ಎಂದು ಅಧಿಕಾರಿಗಳು ಹೇಳುತ್ತಾರೆ. ಆತ ಹಳೆಯ ಮನೆಯನ್ನು ಕೆಡವಿದರೆ ಆತ ಎಲ್ಲಿ ಇರಬೇಕಾಗುತ್ತದೆ? ಹಳೆಯ ಮನೆಯಲ್ಲಿ ವಾಸವಾಗಿದ್ದುಕೊಂಡು ಮುಂದುಗಡೆ ಹೊಸ ಮನೆಯನ್ನು ಕಟ್ಟುತ್ತಿರುತ್ತಾನೆ. ಹಿಂದೆ attached ಮನೆ ಇರುವ ಕಾರಣಕ್ಕಾಗಿ ಜಿಪಿಎಸ್ ನಲ್ಲಿ ಈಗಾಗಲೇ ಮನೆ ಇದೆ ಎಂದು ತೋರಿಸುತ್ತಿರುವುದರಿಂದ ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಬ್ಲಾಕ್ ಆಗಿದೆ ಎಂದು ಕೆಳಗಡೆ ನಿಮ್ಮ EO, ಅಧಿಕಾರಿಗಳು ಹೇಳುತ್ತಾರೆ. ಅವನು ವಾಸ ಮಾಡಲಿಕ್ಕೆ ಸಣ್ಣದೊಂದು ಜೋಪಡಿ ಇರುತ್ತದೆ, ಅದನ್ನು ಕೆಡವಿಕೊಂಡರೆ ಅವನು ಇರುವುದೆಲ್ಲಿ ಎನ್ನುವ ಬಗ್ಗೆ ಮಾನವೀಯ ನೆಲೆಗಟ್ಟಿನ ಮೇಲೆ ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ, ಆ ಬಗ್ಗೆ ಯೋಚನೆ ಮಾಡಿ ಹಳೆಯ ಮನೆ ಇದರ ಜೊತೆಗೆ ಸೇರಿದೆ ಎಂದು ಹೇಳಿ ಇದನ್ನು ಕೈ ಬಿಡಬೇಕೆಂದು ನಾನು ನಿಮ್ಮ ಹತ್ತಿರ ಮನವಿ ಮಾಡುತ್ತೇನೆ.

ಶ್ರೀ ಎಂ.ಕೃಷ್ಣಪ್ಪ : ಮಾನ್ಯ ಜೀವರಾಜ್‌ರವರು ಹೇಳಿದ ಹಾಗೆ ಆ ತರಹದ rare case ಇದ್ದರೆ ಅದನ್ನು ನನಗೆ ಕಳುಹಿಸಿ ಕೊಡಲಿ ಅದನ್ನು ಪರಿಶೀಲಿಸುತ್ತೇನೆಂದು ಹೇಳುತ್ತಾ, ಈಗ ಮಾನ್ಯ ಅಪ್ಪಚ್ಚು

14-06-2017

ರಂಜನ್‌ರವರಿಗೆ ಹೇಳುವುದು ಏನೆಂದರೆ, ನಾನು ಈಗಾಗಲೇ ಹೇಳಿದ ಹಾಗೆ various reasons ಇರುತ್ತದೆ, ಅದರಲ್ಲಿ demonetization ಒಂದು. ಇದೆಲ್ಲಾ ತಮಗೆ ಗೊತ್ತಿರುವಂಥ ವಿಷಯ. ಆದ್ದರಿಂದ, ಮಾನ್ಯ ಶಾಸಕರೆಲ್ಲರೂ ಈ ಬಗ್ಗೆ ಆಸಕ್ತಿ ತೆಗೆದುಕೊಂಡು ಮಾಡಿದರೆ ಮನೆಗಳನ್ನು ಬೇಗ ಬೇಗ complete ಮಾಡುವುದಕ್ಕೆ ಆಗುತ್ತದೆ. ಬಡವರಿಗೆ ಸೂರು ಒದಗಿಸಿಕೊಡಬೇಕೆಂಬುದು ಸರ್ಕಾರ ಮತ್ತು ತಮ್ಮೆಲ್ಲರ ಗುರಿಯಾಗಿದೆ. ಆದ್ದರಿಂದ, ಇದನ್ನು ದಯವಿಟ್ಟು ಎಲ್ಲರೂ ಪಾಲನೆ ಮಾಡಬೇಕು.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಜನರಲ್ ಮನೆಗಳು ಬಹಳಷ್ಟು ಕೊರತೆಗಳಿವೆ. ಆದ್ದರಿಂದ, ತಾವು ಕೊಡುವಾಗ ವಿಶೇಷವಾಗಿ ಜನರಲ್ ಮನೆಗಳಿಗೆ ಒತ್ತು ಕೊಡತ್ತಕ್ಕಂಥ ಕೆಲಸ ಮಾಡಿ. ನಮ್ಮಲ್ಲಿ ಎಸ್‌ಸಿ/ಎಸ್‌ಟಿ ಮನೆಗಳು ಬೇಕಾದಷ್ಟು ಖಾಲಿ ಇವೆ. ಮನೆ ಕಟ್ಟುವುದಕ್ಕೆ ಸಾಧ್ಯವಾಗದೆ ಇರತಕ್ಕಂಥ ಪರಿಸ್ಥಿತಿಯಲ್ಲಿದೆ. ಆದ್ದರಿಂದ, ಅದನ್ನು ಜನರಲ್ ಆಗಿ ಡೈವರ್ಟ್ ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು:- ಮಾನ್ಯ ಸಚಿವರೆ, ಮಾನ್ಯ ಅಪ್ಪಚ್ಚು ರಂಜನ್‌ರವರು ಹೇಳತಕ್ಕಂಥ ಸಮಸ್ಯೆ ಎಲ್ಲಾ ಕಡೆ ಇದೆ. ಎಸ್‌ಸಿ/ಎಸ್‌ಟಿ ವರ್ಗದವರಿಗೆ ಮನೆ ಕೊಡುತ್ತೀರಿ. ಆದರೆ, ಎಸ್‌ಸಿ/ಎಸ್‌ಟಿ ಮನೆಗಳೆಲ್ಲಾ complete ಆಗಿಬಿಟ್ಟಿವೆ. ಜನರಲ್‌ರವರಿಗೆ ಕೊಡುವುದಕ್ಕೆ ಮನೆಗಳು ಇರುವುದಿಲ್ಲ. ಆದ್ದರಿಂದ, ಮಾನ್ಯ ಸದಸ್ಯರು ಬೇಡಿಕೆ ಚೆನ್ನಾಗಿದೆ. ಈ ಬಗ್ಗೆ ವಿಚಾರ ಮಾಡಿ ನೋಡಿ.

ಶ್ರೀ ಎಂ.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ತಾವು ಹೇಳಿರುವ ವಿಷಯ ಸರಿ ಇದೆ. ಇದನ್ನು ನಾನು ಹೇಳುವುದಕ್ಕೆ ಹೋಗಲಿಲ್ಲ. ಗುಡ್ಡಗಾಡು ಪ್ರದೇಶದಲ್ಲಿ ಎಸ್‌ಸಿ/ಎಸ್‌ಟಿ ಜನಸಂಖ್ಯೆ ಕಡಿಮೆ ಇರುವುದರಿಂದ ರದ್ದಾದ ಮನೆಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಮನೆಗಳನ್ನು ಕೊಟ್ಟಿದ್ದರೂ ಸಹ start ಮಾಡದೆ ಇರತಕ್ಕಂಥ ಕಾರಣಗಳಿವೆ. ಅವರು ಹೇಳಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಈ ವರ್ಷ ತಮಗೆಲ್ಲ ಗೊತ್ತಿರುವ ಹಾಗೆ ಬದಲಾವಣೆ ಮಾಡಲಾಗಿದೆ.

ಅಧ್ಯಕ್ಷರು:- ಎಲ್ಲಿ ಎಸ್‌ಸಿ/ಎಸ್‌ಟಿ ರವರಿಗೆ ಕೊಟ್ಟಿರುವ ಮನೆಗಳನ್ನು ಕೊಡುವುದಕ್ಕೆ ಎಸ್‌ಸಿ/ಎಸ್‌ಟಿ ಫಲಾನುಭವಿ ಇಲ್ಲದೆ ಇದ್ದಲ್ಲಿ ಅಂಥ ಮನೆಗಳನ್ನು ಜನರಲ್ ರವರಿಗೆ convert ಮಾಡಿ ಕೊಡುವುದಕ್ಕೆ ಒಂದು ಆದೇಶ ಮಾಡಿದರೆ ಸಾಕು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಆರ್.ನರೇಂದ್ರ:- ಮಾನ್ಯ ಅಧ್ಯಕ್ಷರೆ, ಎಲ್ಲಿ ಎಸ್‌ಸಿ/ಎಸ್‌ಟಿ ಫಲಾನುಭವಿಗಳು ಅಲ್ಲಿ ಇಲ್ಲದೆ ಇದ್ದಾಗ ಅದನ್ನು ಜನರಲ್‌ರವರಿಗೆ convert ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎಂ.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಎಸ್‌ಸಿ/ಎಸ್‌ಟಿ ರವರಿಗೆ ಕೊಟ್ಟಿರುವುದನ್ನು convert ಮಾಡುವುದಕ್ಕೆ ಆಗುವುದಿಲ್ಲ ಎಂದು ಬೆಳಗಾವಿ ಅಧಿವೇಶನದಲ್ಲಿ ನಾವೇ ತೀರ್ಮಾನ ತೆಗೆದುಕೊಂಡಿದ್ದೇವೆ. ಆದ್ದರಿಂದ, ಈ ವರ್ಷ ಎಸ್‌ಸಿ/ಎಸ್‌ಟಿ ವರ್ಗದವರಿಗೆ on demand ಕೊಡುವಂಥ ಕೆಲಸವನ್ನು ಸರ್ಕಾರ ಮಾಡಿರುವುದು ತಮಗೆಲ್ಲ ಗೊತ್ತಿದೆ. ಕಳೆದ ವರ್ಷ ಬಸವ ವಸತಿ ಯೋಜನೆಯಲ್ಲಿ ನಮಗೆ ಒಂದು ಲಕ್ಷ ಮನೆಗಳು ಮಾತ್ರ ಸಿಗುತ್ತಿತ್ತು. ಆದರೆ, ಬಸವ ವಸತಿ ಯೋಜನೆಯಲ್ಲಿ ಈ ವರ್ಷ ಜನರಲ್‌ರವರಿಗೆ 3,20,000 ಮನೆಗಳು ಸಿಗುತ್ತಿವೆ. ಆದ್ದರಿಂದ, ಹೆಚ್ಚಿನ ರೀತಿಯಲ್ಲಿ ಜನರಲ್‌ರವರಿಗೆ ಮನೆಗಳನ್ನು ಕೊಡತಕ್ಕಂಥ ಪ್ರಯತ್ನಗಳನ್ನು ಮಾಡುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್:- ಮಾನ್ಯ ಸಚಿವರೆ, ಕೊಡಗು ಜಿಲ್ಲೆಯಲ್ಲಿ ಬಹಳಷ್ಟು ಮನೆಗಳನ್ನು ಕಡಿಮೆ ಕೊಟ್ಟು ನಮಗೆ ಮಾತ್ರ ತಾರತಮ್ಯ ಮಾಡಿದ್ದೀರಿ. ಆದ್ದರಿಂದ, ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಕೃಷ್ಣಪ್ಪ:- ಮಾನ್ಯ ಅಪ್ಪಚ್ಚು ರಂಜನ್‌ರವರ ಪ್ರಶ್ನೆ ಕಳೆದ ಸಾರಿ ಇತ್ತು. ಈ ಸಾರಿ ಕೂಡ ಇದೆ. ಈ ವರ್ಷ ಹೆಚ್ಚಿನ ಮನೆಗಳನ್ನು ನಿಮಗೆ ಖಂಡಿತವಾಗಿ ಕೊಡುತ್ತೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ವಸತಿ ವಿಚಾರಕ್ಕೆ ಸಂಬಂಧಪಟ್ಟಂತೆ ಶಾಸಕರ ಅಧ್ಯಕ್ಷತೆಯಲ್ಲಿ vigilance committee ಇತ್ತು. ಇದಕ್ಕೆ ಕೋರ್ಟ್ ಸ್ಟೇ ಕೊಟ್ಟು ಈಗ ಶಾಸಕರಿಗೆ ಜವಾಬ್ದಾರಿ ಇಲ್ಲದಂತೆ ಮಾಡಿದೆ. ಕೋರ್ಟ್ ಸ್ಟೇ ಕೊಟ್ಟಿರುವ ಮಾಹಿತಿಯನ್ನು ನಾನು ನೋಡಿದೆ. ಆದರೆ, ಅವರಿಗೆ ಯಾರೋ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಅಲ್ಲಿ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ವಾದವನ್ನು ಮಂಡಿಸಿಲ್ಲವೆಂದು ಕಾಣುತ್ತದೆ. ಗ್ರಾಮಸಭೆಯಲ್ಲಿ ಫಲಾನುಭವಿಗಳ ಆಯ್ಕೆ ಆಗಿ ಬರುತ್ತದೆ. ಆದರೆ, ಅವರು ಸರಿಯಾಗಿ ಆಯ್ಕೆ ಮಾಡಿದ್ದಾರೆಯೋ ಇಲ್ಲವೋ ಎಂದು ನಾವು vigilance committee ಯಲ್ಲಿ ಪರಿಶೀಲನೆ ಮಾಡಿ ಅನುಮೋದನೆಯನ್ನು ಕೊಡುತ್ತಿದ್ದೆವು. ಅಷ್ಟು ಬಿಟ್ಟರೆ ನಾವೇನು ಗ್ರಾಮಸಭೆಗೆ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಆದರೆ, ಇದಕ್ಕೆ ಸ್ಟೇ ಕೊಟ್ಟಿರುವುದರಿಂದ ಈಗ ಮನೆಗಳನ್ನು ಕೊಡುವುದಕ್ಕೆ ಕೊಟ್ಟಿರುವ ಪಟ್ಟಿಯನ್ನು ನೋಡುವುದಕ್ಕಾಗಿ vigilance committeeಯ ಸಭೆಯನ್ನು ನಾವು

14-06-2017

ಕರೆಯುವಂತಿಲ್ಲ. ಹಾಗೆಯೇ ಅದಕ್ಕೆ ನಾವು ಅನುಮೋದನೆ ಕೊಡುವಂತೆಯೂ ಸಹ ಇಲ್ಲ. ಈಗ ಬೇಕಾಬಿಟ್ಟಿ ವ್ಯವಹಾರ ನಡೆಯುತ್ತಿದೆ. ಆದ್ದರಿಂದ, ಆ ಸ್ಟೇಯನ್ನು ಬೇಗ vacate ಮಾಡಿಸುವುದಕ್ಕೆ ಮಾನ್ಯ ಸಚಿವರು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಮಾಡಿಸಬೇಕೆಂದು ನಾನು ಅವರಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು:- Government advocateಗಳಿಗೆ ಹೇಳಿ vacate ಮಾಡಿಸಿ.

ಶ್ರೀ ಎಂ.ಕೃಷ್ಣಪ್ಪ:- ಮಾನ್ಯ ಸಭಾಧ್ಯಕ್ಷರೆ, ex parte ಕೋರ್ಟ್‌ಗೆ ತಪ್ಪು ಮಾಹಿತಿ ಕೊಟ್ಟು ಸ್ಟೇ ತಂದಿದ್ದಾರೆ. ನಿನ್ನೆದಿವಸ ಕೇಸ್ ಇತ್ತು ಮತ್ತೆ ನಾಳೆ ದಿವಸಕ್ಕೆ ಕೇಸ್ ಹಾಕಿಕೊಂಡಿದ್ದಾರೆ. ಈಗ ಅದರ ಬಗ್ಗೆ ಪರಿಶೀಲನೆ ಮಾಡಿದ್ದೇವೆ. ಆದಷ್ಟು ಬೇಗ ಸ್ಟೇ ವೆಕೇಟ್ ಮಾಡಿಸುವ ಕೆಲಸ ಮಾಡುತ್ತೇವೆ.

ಅಧ್ಯಕ್ಷರು:- Ok. ಮುಂದಿನ ಪ್ರಶ್ನೆ ಮಾನ್ಯ ಪಿ.ಎಂ.ನರೇಂದ್ರ ಸ್ವಾಮಿಯವರದು. ಅವರು ಬಂದಿಲ್ಲ. ಮುಂದಿನ ಪ್ರಶ್ನೆಯನ್ನು ಶ್ರೀ ದತ್ತಾತ್ರೇಯ ಸಿ.ಪಾಟೀಲ್ ರೇವೂರರವರದು ಇದೆ. ತಾವು ಕೇಳಿ.

(ಮುಂದು)

14-06-2017-11-10-5-MS-VG

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:110 (1530)
(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ದತ್ತಾತ್ರೇಯ ಸಿ ಪಾಟೀಲ ರೇವೂರ: ಮಾನ್ಯ ಸಭಾಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ 2405 ಮನೆಗಳನ್ನು ಮಂಜೂರಾತಿ ಆಗಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಇದರಲ್ಲಿ ಕೇವಲ 520 ಮನೆಗಳು ಮಾತ್ರ ಮುಗಿದಿವೆ. ಅಲ್ಲಿ ಕಟ್ಟಡ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ. ಮೂರು ವರ್ಷಗಳಾದರೂ ಕೂಡ 25% ಮುಗಿದಿರುವುದಿಲ್ಲ. ಇದರ ಜೊತೆಯಲ್ಲಿ ಇಡೀ ರಾಜ್ಯದಲ್ಲಿ Slum Board ವತಿಯಿಂದ ಮನೆಗಳ ಕೆಲಸ ನಡೆಯುತ್ತಿದೆ. ಮನೆಗಳನ್ನು ಆಯ್ಕೆ ಮಾಡುವುದು ಸಹ Slum Board ವತಿಯಿಂದಲೆ ಆಗುತ್ತಿದೆ. ಆದರೆ ಕಲ್ಬುರ್ಗಿಯಲ್ಲಿ ಮಹಾನಗರ ಪಾಲಿಕೆಯ ವತಿಯಿಂದ ಮಾತ್ರ ಆಯ್ಕೆ ಮಾಡುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದಾರೆ. ಅಲ್ಲಿಗೆ ಜನರು ಹೋಗಿ ಕೇಳಿದಾಗ ಬಹಳಷ್ಟು ಅಧಿಕಾರಿಗಳು ತೊಂದರೆಯನ್ನು



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಕೊಡುತ್ತಿದ್ದಾರೆ. ಕೇವಲ ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್ ಅಥವಾ Voter I.D. ಮೂರರಲ್ಲಿ ಯಾವುದಾದರೂ ಒಂದು ಇದ್ದರೆ ಸಾಕು ಎಂದು ಸರ್ಕಾರದ ಸುತ್ತೋಲೆ ಇದ್ದರೂ ಕೂಡ ಎಲ್ಲಾ documents compulsory ಆಗಿ ಬೇಕೆಂದು ಅಲ್ಲಿಯ ಅಧಿಕಾರಿಗಳು ಹೇಳಿ ಫಲಾನುಭವಿಗಳಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ಮಾನ್ಯ ಸಚಿವರು, ಗ್ರಾಮಾಂತರ ಪ್ರದೇಶದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ಶಾಸಕರಿಗೆ ಅಧ್ಯಕ್ಷತೆಯಲ್ಲಿ ಕೊಟ್ಟಿದ್ದಾರೆ ಇಲ್ಲಿಯೂ ಕೂಡ ಶಾಸಕರು ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಕೊಡುವ ಬಗ್ಗೆ ಕ್ರಮ ವಹಿಸಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರು ಏನು ಹೇಳುತ್ತಾರೆಂದು ಕೇಳೋಣ.

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ಅಲ್ಲಿ ಗುಲ್ಬರ್ಗಾ D.C.ಯವರು Chairman ಆಗಿದ್ದಾರೆ. ಸನ್ಮಾನ್ಯ ಸದಸ್ಯರು ಅವರುಗಳಿಗೆ ಏನು ತೊಂದರೆಯಾಗಿದೆ ಎಂದು ಹೇಳುತ್ತಿದ್ದಾರೆ. ಅಸೆಂಬ್ಲಿ ಮುಗಿದ ಮೇಲೆ ನಾನು ಗುಲ್ಬರ್ಗಾಕ್ಕೆ ಹೋಗಿ ಅಲ್ಲಿ ನಗರಪಾಲಿಕೆಯ Commissionerರವರನ್ನು ಕರೆದು ಸಮಸ್ಯೆಯನ್ನು ಬಗೆಹರಿಸುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1057

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಪ್ರತಾಪಗೌಡ ಪಾಟೀಲ್: ಮಾನ್ಯ ಸಭಾಧ್ಯಕ್ಷರೆ, ನಬಾರ್ಡ್19 ಮತ್ತು 22ರ ಯೋಜನೆಯಲ್ಲಿ ನನ್ನ ಕ್ಷೇತ್ರಕ್ಕೆ 50 ಲಕ್ಷ ಮತ್ತು 76.50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಬಾರ್ಡ್20 ಮತ್ತು 21 ರಲ್ಲಿ ಯಾವುದೇ ಅನುದಾನ ಕೊಡಲಿಲ್ಲ. ನಾನು ಮುಖ್ಯವಾಗಿ ಎರಡು ಸೇತುವೆಗಳ ಬಗ್ಗೆ ಸುಮಾರು ಮೂರು ವರ್ಷದಿಂದ ಮಾನ್ಯ ಸಚಿವರಿಗೆ ಮನವಿಯನ್ನು ಸಲ್ಲಿಸುತ್ತಾ ಬಂದಿದ್ದೇನೆ. ಮಾನ್ವಿ ತಾಲ್ಲೂಕಿನ ಎರಡು ಸೇತುವೆಗಳು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿದೆ. ಅದಕ್ಕೆ ಅನುದಾನವನ್ನು ಒದಗಿಸಬೇಕೆಂದು ಈ ಮೂಲಕ ಮಾನ್ಯ ಅಧ್ಯಕ್ಷರೆ ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಬಾರ್ಡ್ ಯೋಜನೆಯಡಿಯಲ್ಲಿ ಸುಮಾರು 10ವರ್ಷಗಳಿಂದ ನಿರ್ಮಾಣ ಮಾಡಿರುವ ರಸ್ತೆಗಳು ಇದು ಸಂಪೂರ್ಣವಾಗಿ ಹದಗೆಟ್ಟಿದ್ದು ಆ ರಸ್ತೆಗಳನ್ನು ಮತ್ತೊಂದು ಸಾರಿ ಮರುಡಾಂಬರೀಕರಣ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಮಾಡುವುದಕ್ಕೆ ಅನುದಾನವನ್ನು ಕೊಡಬೇಕು ಇಲ್ಲದೆ ಇದ್ದರೆ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿದ್ದು ಅಲ್ಲಿ ಅಡ್ಡಾಡುವುದಕ್ಕೆ ಆಗದ ಪರಿಸ್ಥಿತಿಯಾಗುತ್ತದೆ.

ಅಧ್ಯಕ್ಷರು: ಆಯಿತು. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಗೌರವಾನ್ವಿತದ ಸದಸ್ಯರ ಕಳಕಳಿಯನ್ನು ಅರ್ಥಮಾಡಿಕೊಳ್ಳುತ್ತೇವೆ. ಅವರು ಹೇಳಿದಹಾಗೆ ಕಳೆದ ಬಾರಿ ನಬಾರ್ಡ್ ಕಂತು ಏನು ಇತ್ತಿದಿತ್ತು. RIDF-22 ರಲ್ಲಿ ಸನ್ಮಾನ್ಯ ಪ್ರತಾಪಗೌಡರ constituencyಗೆ 76.50 ಲಕ್ಷ ರೂಗಳನ್ನು ಒದಗಿಸಿದ್ದೆವು. ಅವರು ಹೆಚ್ಚಿನ ಅನುದಾನ ಬೇಕೆಂದು ಕೇಳಿದ್ದರು. ಹೋದಸಾರಿ ಏನಾಯಿತೆಂದರೆ, ರಾಜ್ಯಸರ್ಕಾರವು 1500 ಕೋಟಿ ರೂಪಾಯಿಗಳನ್ನು ನಬಾರ್ಡ್‌ಗೆ ನಮ್ಮ ಪ್ರಸ್ತಾವನೆಯನ್ನು ಇಟ್ಟಿದ್ದೆವು. ಅದನ್ನು ಅವರು 850 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ನಮ್ಮ ಇಲಾಖೆಯು ಸುಮಾರು 165 ಕೋಟಿ ರೂಪಾಯಿಗಳ ಪ್ರಸ್ತಾವನೆಯು DPR ಎಲ್ಲವನ್ನು ಸಿದ್ಧಪಡಿಸಿ ನಬಾರ್ಡ್‌ಗೆ ಸಲ್ಲಿಕೆ ಮಾಡಿದ್ದೇವೆ. ಅವು ನಬಾರ್ಡ್‌ನಲ್ಲಿಯೆ ಇದೆ. ಅದನ್ನು ಅವರು ಇನ್ನು ಪರಿಶೀಲನೆ ಮಾಡುತ್ತಿದ್ದಾರೆ. FDಯವರು ಸಹಿತ ಇದನ್ನು ತಾವು ಒತ್ತಾಯಿಸಬೇಕೆಂದು ಹೇಳಿ ನಾವು ಕೋರಿದ್ದೇವೆ. ಇದರ ಜೊತೆಗೆ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ನಬಾರ್ಡ್‌ನ ಹಣವನ್ನು ಬಿಡುಗಡೆ ಮಾಡಿದ್ದೇವೆ. ಇವೆಲ್ಲಾ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಮಾನ್ಯ ಸದಸ್ಯರು ದುರಸ್ಥಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ದುರಸ್ತಿಗೆ ಹಣ ಕಡಿಮೆ ಇರುವುದು ಸಹಿತ ನಾವು ಗಮನಿಸಿ ಈಗ ಹೆಚ್ಚು ಹಣ ಬಿಡುಗಡೆ ಮಾಡುತ್ತಿದ್ದೇವೆ. ಶಾಸಕರಿಗೆ ಏನು ನಾವು Task Force ಮಾಡಿ ಹಣ ಕೊಟ್ಟಿದ್ದೇವೆ. ಆ ಹಣವನ್ನು ತಾವು ರಿಪೇರಿಗಾಗಿ ಬಳಸಿಕೊಳ್ಳುತ್ತಿದ್ದೀರಿ. ಈ ಬಗ್ಗೆ ತಮಗೂ ಗೊತ್ತಿದ್ದಹಾಗೆ ಇಲ್ಲಿಯವರೆವಿಗೆ 13-14 ಅಲ್ಲಿಂದ 16-17ರವರೆಗೆ ಒಟ್ಟು 665 ಕೋಟಿ ರೂಪಾಯಿಗಳನ್ನು ಶಾಸಕರುಗಳಿಗೆ Task Force ಮುಖಾಂತರ ದುರಸ್ತಿಗೆ ಬಿಡುಗಡೆ ಮಾಡಿದ್ದೇವೆ. ಇದಕ್ಕಾಗಿ ಹಣ ಕಡಿಮೆಯಾಗುತ್ತದೆ ಎಂದು ಗೊತ್ತಿದೆ. ಅದರಲ್ಲಿಯೆ ನಾವು ಈ ಸಂದರ್ಭದಲ್ಲಿ ದುರಸ್ತಿ ಮಾಡಿಕೊಡುತ್ತೇವೆ.

ಶ್ರೀ ಪ್ರತಾಪಗೌಡ ಪಾಟೀಲ್: ಮಾನ್ಯ ಅಧ್ಯಕ್ಷರೆ, ಎರಡು ಸೇತುವೆಗಳ ದುರಸ್ಥಿಗೆ ಸಂಬಂಧಿಸಿದಂತೆ ಮನವಿಯನ್ನು ಮಾನ್ಯ ಸಚಿವರಿಗೆ ಕೊಟ್ಟಿದ್ದೇನೆ.

14-06-2017

ಶ್ರೀ ಹೆಚ್.ಕೆ.ಪಾಟೀಲ್: ತಾವು ಯಾವ ಸೇತುವೆಗಳ ಬಗ್ಗೆ ಹೇಳಿದ್ದೀರಿ ಅವುಗಳ ವಿವರವನ್ನು ಕೊಡಿ. ಅದು ನಬಾರ್ಡ್‌ನಲ್ಲಿ ಆಗುವುದು ವಿಳಂಬವಾದರೆ 3054 ಅದನ್ನು provide ಮಾಡಿಕೊಡುತ್ತೇವೆ.

ಅಧ್ಯಕ್ಷರು: O.K.ಲೋಬೊರವರೆ ತಾವು ಪ್ರಶ್ನೆಯನ್ನು ಕೇಳಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1236

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಜೆ.ಆರ್.ಲೋಬೋ: ಮಾನ್ಯ ಅಧ್ಯಕ್ಷರೆ, ಉತ್ತರವು ಸಿಕ್ಕಿದೆ. ನಮ್ಮ ರಾಜ್ಯದಲ್ಲಿ ವಿಶ್ವವಿದ್ಯಾಲಯಗಳು ಆ ಪಟ್ಟಿಯಲ್ಲಿ ನಮ್ಮ ರಾಷ್ಟ್ರದ 100 ವಿಶ್ವವಿದ್ಯಾಲಯಗಳ ranking ನೋಡಿದರೆ ನಮ್ಮ Indian Institute of Science, Bangalore ಬಿಟ್ಟು ಮತ್ತು ಎರಡು ರಾಷ್ಟ್ರೀಯ ವಿಶ್ವವಿದ್ಯಾಲಯಗಳನ್ನು ಬಿಟ್ಟು ಉಳಿದಿರುವುದು ಒಂದು ಮೈಸೂರು ವಿಶ್ವವಿದ್ಯಾಲಯ ಮಾತ್ರ 57ನೇ ಸ್ಥಾನ ಪಡೆಯುವುದಕ್ಕೆ ಸಾಧ್ಯವಾಗಿದೆ. ಉಳಿದ ವಿಶ್ವವಿದ್ಯಾಲಯಗಳ ಬಗ್ಗೆ ಮಾನ್ಯ ಸಚಿವರು ಪಟ್ಟಿಯನ್ನು ಕೊಟ್ಟಿದ್ದಾರೆ. ಅವೆಲ್ಲವೂ deemed university ಖಾಸಗಿ universityಗಳಾಗಿವೆ. ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಿಗೆ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಎಲ್ಲಾ ವ್ಯವಸ್ಥೆಯನ್ನು ಕೊಡುತ್ತಿದ್ದೇವೆ. ಇದರ ಜೊತೆಗೆ UGC Scaleಅನ್ನು ಸಹ ಕೊಡುತ್ತಿದ್ದೇವೆ. UGC Scale ನಲ್ಲಿ research ಮಾಡಿ ಉನ್ನತ ಸ್ಥಿತಿಗೆ ತರಬೇಕೆಂದು ಕೂಡ condition ಇದೆ. ಅಂತಹ ಸ್ಥಿತಿಯಲ್ಲಿ ನಮ್ಮ ವಿಶ್ವವಿದ್ಯಾಲಯಗಳು ಏತಕ್ಕಾಗಿ ಆ ದರ್ಜೆಗೆ ಬರುತ್ತಿಲ್ಲ, ಏತಕ್ಕಾಗಿ ನಮ್ಮ ವಿಶ್ವವಿದ್ಯಾಲಯಗಳು ರಾಷ್ಟ್ರ ಮಟ್ಟದಲ್ಲಿ ಇಷ್ಟೊಂದು ಕೆಳಮಟ್ಟಕ್ಕೆ ಸ್ಥಿತಿಗೆ ಅಧೋಗತಿಗೆ ಇಳಿದಿದೆ. ಈ ಬಗ್ಗೆ ಒಂದು ವಿವರವಾದ ಚರ್ಚೆ ಕೂಡ ಆಗಬೇಕಾಗಿದೆ.

ಅಧ್ಯಕ್ಷರು: ಮಾನ್ಯ ಸಚಿವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ರಾಷ್ಟ್ರದಲ್ಲಿ ಸುಮಾರು 780 ವಿಶ್ವವಿದ್ಯಾಲಯಗಳು ಇದೆ as on today. ಆ ಪೈಕಿ within 100, ನಮ್ಮ ಕೇಂದ್ರದ ಮಾನವ ಸಂಪನ್ಮೂಲ ministry ಏನಿದೆ ಮಂತ್ರಾಲಯ



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಅದರ ಅಧ್ಯಯನದ ಪ್ರಕಾರ within 100 ನಮ್ಮ ರಾಜ್ಯದಲ್ಲಿ ಸುಮಾರು 8 ವಿಶ್ವವಿದ್ಯಾಲಯಗಳು ಮಾನ್ಯತೆಯನ್ನು ಪಡೆದಿವೆ. ಅದರಲ್ಲಿ Indian Institute of Science, Bangalore stands number one in India. ಅದೇ ತರಹ ಮೈಸೂರು ವಿಶ್ವವಿದ್ಯಾಲಯ, Public University ಇದು ನಮ್ಮ ಸರ್ಕಾರದ ವತಿಯಿಂದ ನಡೆಯುತ್ತಿದೆ ಇದು 57ನೆಯದು ಇದೆ. Private Institution ಜಗದ್ಗುರು ಶಿವರಾತ್ರೀಕೇಶ್ವರ ವಿಶ್ವವಿದ್ಯಾಲಯ 74, KLE Society 100ನೆದ್ದು ಆಗಿದೆ. ಉಳಿದಿರುವುದೆಲ್ಲಾ ಸರ್ಕಾರದ್ದೆ ಇದೆ. ಮಾನ್ಯ ಸದಸ್ಯರ ವಿಚಾರವನ್ನು ನಾನು ಒಪ್ಪುತ್ತೇನೆ. ಇಷ್ಟೆಲ್ಲಾ ನಾವು ಸಾಕಷ್ಟು ಮೂಲಭೂತ ಸೌಕರ್ಯಗಳನ್ನು ಕೊಟ್ಟಿದ್ದೇವೆ. ಸಾಕಷ್ಟು ಹಣವನ್ನು ವಿಶ್ವವಿದ್ಯಾಲಗಳಿಗೆ ಕೊಟ್ಟಿದ್ದೇವೆ. ಆದರೆ ಇನ್ನು ಹೆಚ್ಚಿನ ಗುಣಮಟ್ಟ ಆಗಬೇಕೆನ್ನುವಂತಹ ಕಳಕಳಿ ಏನಿದೆ ಅದಕ್ಕಾಗಿಯೆ ಈಗ ನಾವು ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಇಲ್ಲಿಯವರೆವಿಗೂ ಕೂಡ ಉನ್ನತ ಶಿಕ್ಷಣವನ್ನು ಹೆಚ್ಚು ಪ್ರಗತಿದಾಯಕವಾಗಿ ಮಾಡುವ ಸಲುವಾಗಿ ಒಂದು ಸಂಸ್ಥೆ ಇರಲಿಲ್ಲ. ಅದಕ್ಕಾಗಿಯೆ ಈಗ ಕರ್ನಾಟಕ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಶಿಕ್ಷಣದ ಗುಣಮಟ್ಟವನ್ನು ಹೆಚ್ಚು ಮಾಡುವ ಸಲುವಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಸಂಸ್ಥೆಯ ಅಕಾಡೆಮಿಯನ್ನು ಧಾರವಾಡದಲ್ಲಿ ಸ್ಥಾಪನೆ ಮಾಡಿದ್ದೇವೆ. ಈಗ ಅವರು training ಕೊಡುತ್ತಿದ್ದಾರೆ. M.A., Ph.D, ಆಗಿರುತ್ತಾರೆ. Not necessarily they know everything. Teaching is a skill. ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತಿದೆ LLB ಪಾಸಾದವರು ವಕಾಲತ್ತು ಮಾಡುವುದಕ್ಕಾಗುವುದಿಲ್ಲ ಅವರುಗಳು ಸೀನಿಯರ್ ಹತ್ತಿರ ಜ್ಯೂನಿಯರ್ ಆಗಿ ಕೆಲಸ ಮಾಡಬೇಕಾಗುತ್ತದೆ. It is a skill. ಅದೇ ತರಹ ಯಾರು ಪ್ರಾಧ್ಯಾಪಕರಾಗಿ M.A., Ph.D, ಮಾಡಿಕೊಂಡಿರುತ್ತಾರೆ. ಅವರದು ಯಾವ ತರಹ teaching skill ಇರಬೇಕು, body language ಹೇಗೆ ಇರಬೇಕು, ಇವೆಲ್ಲವನ್ನೂ ಕಲಿಸುವುದಕ್ಕಾಗಿಯೆ ಒಂದು ಅಧ್ಯಯನ ಸಂಸ್ಥೆಯನ್ನು ಕೊಟ್ಟು ಇನ್ನು ಮೇಲೆ training ಕೊಡುತ್ತಿದ್ದೇವೆ. ಇನ್ನು ಮೇಲೆ ಎಲ್ಲಾ professorಗಳು ಪ್ರತಿ ಎರಡು ವರ್ಷಕ್ಕೊಮ್ಮೆ refresher course ಮಾಡಿ ಗುಣಮಟ್ಟವನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಉಳಿದಂತೆ Vice Chancellor compulsory ಆಗಿ ಪಾಠ ಮಾಡಬೇಕೆಂದು ಈಗಾಗಲೇ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದೇಶವನ್ನು ಹೊರಡಿಸಿದ್ದೇವೆ. ಈಗ ಅದನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಈ ಬಗ್ಗೆ ನಾವು ಒತ್ತಾಯವನ್ನು ಮಾಡುತ್ತೇವೆ. ಹೀಗೆ ಗುಣಮಟ್ಟದ ಶಿಕ್ಷಣವನ್ನು ವಿಶ್ವವಿದ್ಯಾಲಯಗಳಲ್ಲಿ ಕೊಡುವುದಕ್ಕೆ ಎಲ್ಲಾ ರೀತಿಯ ಒಂದು ಪ್ರಯತ್ನವನ್ನು ಮಾಡುತ್ತೇವೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಾದ ಮೇಲೆ ಕೆಲವು ಬದಲಾವಣೆಗಳು ಕೂಡ ಆಗಬೇಕಾಗಿದೆ. ಅದಕ್ಕಾಗಿಯೇ ಇವತ್ತು University Comprehensive Act ಅನ್ನು ಕೂಡ ತಂದಿದ್ದೇವೆ. ಆ ವಿಚಾರದಲ್ಲಿ ತಾವು ಹೆಚ್ಚಿನ ವಿಚಾರವನ್ನು ಈ ಬೌದ್ಧಿಕ ಶಿಕ್ಷಣದಲ್ಲಿ ಏನೇನು ಮಾಡಬೇಕೆಂದು ಈ ಬಗ್ಗೆ ಚರ್ಚೆಯನ್ನು ಮಾಡಬಹುದು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು: O.K. ಮಾನ್ಯ ಸುಧಾಕರಲಾಲ್‌ರವರೆ ತಾವು ಪ್ರಶ್ನೆಯನ್ನು ಕೇಳಿ.

(ಮುಂದು)

ವಿಸ.14.06.2017/11.20/6/ಎನ್.ಸಿ.ಕೆ/ವಿ.ಜಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 113(1661)

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ಪಿ.ಆರ್.ಸುಧಾಕರ್ ಲಾಲ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ನನ್ನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 252 ಗ್ರಾಮಗಳಿದ್ದು, ಇವುಗಳ ಪೈಕಿ ಒಟ್ಟು 69 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಕೊರಟಗೆರೆ ಗ್ರಾಮ ಅತಿ ಹಿಂದುಳಿದ ಪ್ರದೇಶವಾಗಿದ್ದು ಆ ಭಾಗದ ರೈತರು, ವಿದ್ಯಾರ್ಥಿಗಳು ಮತ್ತು ವಯೋವೃದ್ಧರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಹಾಗಾಗಿ ಹೆಚ್ಚಿನ ಹಳ್ಳಿಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಬೇಕು ಎಂದು ನಾನು ಮಾನ್ಯ ಸಾರಿಗೆ ಸಚಿವರನ್ನು ಕೇಳುತ್ತೇನೆ. ಜೊತೆಯಲ್ಲಿ ನಾನು ಈಗಾಗಲೇ ಹಲವಾರು ಪತ್ರಗಳನ್ನು ಕೂಡ ಕೊಟ್ಟಿದ್ದೇನೆ. ಯಾವ್ಯಾವ ರೂಟ್‌ನಲ್ಲಿ ಬಸ್‌ಗಳನ್ನು ಕೊಡಬೇಕೆಂದು ಮತ್ತು ಡಿಪೋ ಪ್ರಾರಂಭಿಸುವ ಬಗ್ಗೆ ಕೂಡ ಕೇಳಿದ್ದೇನೆ. ಈಗ ಸ್ಥಳವನ್ನು ಕೂಡ ಈಗಾಗಲೇ ನಾವು ಗುರುತಿಸಿದ್ದೇವೆ. ಕೊರಟಗೆರೆಯಲ್ಲಿ ಏನು ಮೂಡಲಪಾಳ್ಯ ಎಂಬ ಗ್ರಾಮದಲ್ಲಿ 4 ಎಕರೆ 5 ಗುಂಟೆ ಜಾಗವನ್ನು ಡಿಪೋಗಾಗಿ ಗುರುತಿಸಿದ್ದೇವೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅದು ಯೋಗ್ಯವಾಗಿದೆ ಎಂದು ಕೂಡ ಹೇಳುತ್ತಿದ್ದಾರೆ. ಹಾಗಾಗಿ ಡಿಪೋವನ್ನು ಕೂಡ ಬೇಗ ಪ್ರಾರಂಭ ಮಾಡಬೇಕೆಂದು ನಾನು ಸಚಿವರಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು: Ok, ಏನು ಹೇಳುತ್ತಾರೆ ನೋಡೋಣ.

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು): ಅದು non-monopoly area ಆಗಿದೆ. ಸುಮಾರು 60 permits, private operators ಕೂಡ ಓಡಿಸುತ್ತಿದ್ದಾರೆ. ಯಾವ ಹಳ್ಳಿಯಲ್ಲಿ ಇಲ್ಲವೆಂದು ಪಟ್ಟಿ ಮಾಡಿಕೊಡಲಿ. ಅವರು ನನ್ನ ಕಛೇರಿಗೆ ನಾಳೆ ನಾಡಿದ್ದು ಬಂದರೆ ಉಳಿದಿರುವ ಕಡೆ ಮಾಡಿಸಿಕೊಡುತ್ತೇನೆ. ಮತ್ತೆ ಆ ಡಿಪೋ ಬಗ್ಗೆ ಹೇಳಿದ್ದಾರೆ. ನೀವು ಸ್ವಲ್ಪ ಅಲ್ಲಿರುವ DC ಯವರಿಗೆ ಹೇಳಿ ನೀವು pursue ಮಾಡಿ, ಬೇಗನೆ ಮಾತನಾಡಿ. ಈ ಬಗ್ಗೆ ನಾನು ಅವರ ಜೊತೆ ಮಾತನಾಡುತ್ತೇನೆ. ಕೊಟ್ಟರೆ ಈ ವರ್ಷವೇ ಪ್ರಾರಂಭ ಮಾಡಿಸುತ್ತೇನೆ.

ಅಧ್ಯಕ್ಷರು: ಶ್ರೀ ಹೆಚ್.ಎಸ್.ಶಿವಶಂಕರ್

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 114 (1251)**

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ಎಚ್.ಎಸ್.ಶಿವಶಂಕರ್: ಉತ್ತರ ಸರಿಯಾಗಿದೆ. ನಾನು ವೈಯಕ್ತಿಕವಾಗಿ ಅವರಲ್ಲಿ ಚರ್ಚೆ ಮಾಡಿ ನನ್ನ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುತ್ತೇನೆ. ಧನ್ಯವಾದಗಳು.

ಅಧ್ಯಕ್ಷರು: ಓಕೆ, next ಸುಬ್ಬಾರೆಡ್ಡಿ ಬಂದಿಲ್ಲವೇ, ವಿ.ಸುನಿಲ್‌ಕುಮಾರ್ ಒಂದು ನಿಮಿಷ, ಸಚಿವರು ನಿಮ್ಮ ಪ್ರಶ್ನೆಗೆ ಸಮಯ ತೆಗೆದುಕೊಂಡಿದ್ದಾರೆ. ನಾಳೆ, ನಾಡಿದ್ದು ಉತ್ತರ ಕೊಡಿಸುತ್ತೇನೆ.

ಶ್ರೀ ವಿ.ಸುನೀಲ್ ಕುಮಾರ್: ಸರ್, ನಿನ್ನೆ ನನ್ನದೊಂದು starred question ಆಗಿತ್ತು. ಅದಕ್ಕೂ ಮೂರು ದಿನಗಳು ಕೇಳಿದ್ದಾರೆ. ಇವತ್ತಿನ starred question ಗೂ ಕೂಡ ಮೂರು ದಿನಗಳು ಕೇಳಿದ್ದಾರೆ. ನನಗೆ star ಇಲ್ಲವೆಂದು ಬೇಸರವಾಗುತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು): ಅವರು ಕೊಟ್ಟಿರುವ ಉತ್ತರ ನನಗೆ ಸಮಾಧಾನವಾಗಿಲ್ಲ. ಅದಕ್ಕೆ ನಾನು ದಿನಾಂಕ: 16.06.2017 ರಂದು ನೀವು ಕೇಳಿರುವ All India

14-06-2017

Permit, Stage Carriage Permit ಸಂಬಂಧ ಪ್ರಶ್ನೆಗಳಿಗೆ detail ಆಗಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಆಯಿತು. ದಿನಾಂಕ: 16.06.2017 ರಂದು ನಿಮಗೆ ಕಳುಹಿಸಿಕೊಡುತ್ತೇನೆ ಬಿಡಿ.

ಶ್ರೀ ವಿ.ಸುನಿಲ್‌ಕುಮಾರ್: ಆಯಿತು.

ಅಧ್ಯಕ್ಷರು: ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 117(234)**

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ: ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು detail ಆಗಿ ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಚಿವರೇ ಇದರಲ್ಲಿ ಎರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಗೋಕಾಕ್ ತಾಲ್ಲೂಕಿನಲ್ಲಿ ಅರಭಾವಿ ವಿಧಾನಸಭಾ ಕ್ಷೇತ್ರವಿರುವುದರಿಂದ ಅಲ್ಲಿ ಸುಮಾರು 9 ಸಕ್ಕರೆ ಕಾರ್ಖಾನೆಗಳು ಬರುತ್ತವೆ. ತಾವು ದಯಮಾಡಿ ಜಿಲ್ಲಾಪಂಚಾಯಿತಿ ವ್ಯಾಪ್ತಿಯಲ್ಲಿ ಅನುದಾನ ಈಗಾಗಲೇ ಬಹಳ ಕಡಿಮೆ ಬರುತ್ತಿದೆ. ದಯಮಾಡಿ ತಾವು ಏನಾದರೂ ತಮ್ಮ ಅನುದಾನದಲ್ಲಿ ಮತ್ತು ಕೇಂದ್ರ ಸರ್ಕಾರದಿಂದ ವಿಶೇಷ ಅನುದಾನ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೀರಿ. ವಿಶೇಷವಾದ ಅನುದಾನವನ್ನು ತಾವು ನಮ್ಮ ತಾಲ್ಲೂಕಿನ ರೈತರ ಹಿತದೃಷ್ಟಿಯಿಂದ ಕೊಡಬೇಕು. ಏಕೆಂದರೆ 9 ಸಕ್ಕರೆ ಕಾರ್ಖಾನೆ ಇವೆ ದಯಮಾಡಿ ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ. ಮಾನ್ಯ ಸಚಿವರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವಂಥ total ನಮ್ಮ ರಾಜ್ಯದಲ್ಲಿ ಎಷ್ಟು ಕಿ.ಮೀ. ತಮ್ಮ ವ್ಯಾಪ್ತಿಗೆ ಬರುತ್ತದೆ ಎಂದು ದಯಮಾಡಿ ಹೇಳಿ. ಈಗ ತಮಗೆ ಮಾಹಿತಿ ಕೊಡಕ್ಕಾಗದಿದ್ದರೂ ಸದನ ಮುಗಿದ ನಂತರ ತಮ್ಮ ವ್ಯಾಪ್ತಿಗೆ ಎಷ್ಟು ಬರುತ್ತದೆ ಎಂಬ ಬಗ್ಗೆ ಪತ್ರದ ಮೂಲಕ ತಿಳಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಕೊಟ್ಟಿರುವಂಥ ಪ್ರಶ್ನೆಯ ಹಿನ್ನೆಲೆಯೊಳಗೆ ಉತ್ತರ ಹಾಗು ನಮ್ಮ ಇಲಾಖೆಯವರು ಹಲವಾರು ಮಾಹಿತಿಗಳನ್ನು ತರಿಸಿಕೊಂಡಿದ್ದರು. ತಾವು ಯಾವ ರಸ್ತೆಯನ್ನು ಕೇಳಿದ್ದಿರಿ. ಇತ್ತೀಚೆಗೆ ಸಾಕಷ್ಟು between 0 and 1.8 ಸುಧಾರಣೆಯನ್ನು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಮಾಡಲಾಗಿದೆ. ಕೆಲವು ಭಾಗ ಶಾಸಕರಿಗೆ ಕೊಟ್ಟಿರತಕ್ಕಂಥ ಟಾಸ್ಕ್‌ಫೋರ್ಸ್‌ನಲ್ಲಿ ಕೊಟ್ಟಿರತಕ್ಕಂಥ ಅನುದಾನ ಏನಿತ್ತು ಅದರಲ್ಲಿ ರಿಪೇರಿ ಮಾಡಿಸಿದ್ದೀರಿ. ಇನ್ನೊಂದೆರಡು ಮೂರು ಕಡೆ pipeline crossing ಆಗಿದೆ. ಅಲ್ಲಿ ಬಹುಶ: ಆ ತಗ್ಗುಗಳನ್ನು ಮುಚ್ಚಿಲ್ಲವೆನ್ನುವುದು ನಿಮ್ಮ ಉದ್ದೇಶವಾಗಿರಬೇಕು. ಇಲಾಖೆಗೆ ಈಗಾಗಲೇ ಆ ರಿಪೇರಿಗಳನ್ನು ತಕ್ಷಣವೇ ಪೂರ್ಣಗೊಳಿಸಿ ಎಂದು ನಿರ್ದೇಶನ ಕೊಟ್ಟಿದ್ದೇನೆ. ತಾವು ನಮ್ಮ ಇಲಾಖೆಯ ಒಟ್ಟು ರಸ್ತೆಗಳ ಉದ್ದಳತೆಯನ್ನು ಹೇಳಬೇಕೆಂದು ಕೇಳಿದ್ದೀರಿ. ನನ್ನ ಹತ್ತಿರ ಕೇವಲ ಗೋಕಾಕ್ ತಾಲ್ಲೂಕಿಗೆ ಸಂಬಂಧಪಟ್ಟಂತೆ ಮಾತ್ರ ಇದೆ. ಅದು ಪೂರಕ ಟಿಪ್ಪಣಿಯಲ್ಲಿರುವುದರಿಂದ ಇದನ್ನು ನಿಮಗೆ ಈಗ ಕಳುಹಿಸಿಕೊಡುತ್ತೇನೆ. ರಾಜ್ಯದ ವಿವರಗಳನ್ನು ತಮಗೆ ನಂತರದಲ್ಲಿ ಕಳುಹಿಸುತ್ತೇನೆ. ಆದರೆ ತಮ್ಮ ಮಾಹಿತಿಗಾಗಿ ನಾವು ಇಲ್ಲಿಯವರೆಗೆ 2013-14 ರಿಂದ 2017-18 ಇಲ್ಲಿಯವರೆಗೆ ಒಟ್ಟು 645.56 ಕೋಟಿ ರೂಪಾಯಿಗಳನ್ನು Taskforce ಅಡಿಯಲ್ಲಿ ಹಾಗು 663.05 ಲೆಕ್ಕಶೀರ್ಷಿಕೆ 3054 ನಲ್ಲಿ ನಾವು ಬಿಡುಗಡೆ ಮಾಡಿದ್ದೇವೆ. ಇದರ ಜೊತೆಗೆ ಇನ್ನು ತಾವೇನು ಸಲಹೆ ಕೊಟ್ಟಿದ್ದೀರಿ ಅದನ್ನು ಗಮನದಲ್ಲಿಟ್ಟುಕೊಂಡು ಮಾಹಿತಿಯನ್ನು ಕಳುಹಿಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅದಕ್ಕೆ ಪೂರಕವಾಗಿ ಈಗಾಗಲೇ ನಮ್ಮ ಶಾಸಕರು ಕೇಳಿದ ಪ್ರಶ್ನೆಗೆ ಸಂಬಂಧಿಸಿದಂತೆ ಬೆಳಗಾವಿ ಜಿಲ್ಲೆಯ ಶಾಸಕರೆಲ್ಲರ ಕೋರಿಕೆ ಏನೆಂದರೆ ಅತಿ ಹೆಚ್ಚು ಕಬ್ಬು ಬೆಳೆಯುವ ಪ್ರದೇಶವಾದ ಬೆಳಗಾವಿ ಜಿಲ್ಲೆಯಲ್ಲಿ ಸಾಕಷ್ಟು ಜಿಲ್ಲಾ ಪಂಚಾಯಿತಿ ರಸ್ತೆಗಳು ಇರುವುದರಿಂದ ನಾಳೆ ಮಳೆಗಾಲ ಮುಗಿದ ಮೇಲೆ ಕಬ್ಬು ಕಟಾವು season ಪ್ರಾರಂಭವಾಗುತ್ತದೆ. ಅದಕ್ಕಿಂತ ಪೂರ್ವದಲ್ಲಿ ಅನೇಕ ಜಿಲ್ಲಾ ಪಂಚಾಯಿತಿಯ ರಸ್ತೆಗಳ ಮೂಲಕವೇ ಕಬ್ಬು ಸಾಗಾಣಿಕೆ ಆಗುವುದು. ಅದಕ್ಕೆ ದಯಮಾಡಿ ನಾನು ವಿಶೇಷವಾಗಿ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಕಬ್ಬು ಬೆಳೆಯುವಂಥ ಪ್ರದೇಶದಲ್ಲಿ ಸಾಗಾಣಿಕೆ ಮಾಡುವುದಕ್ಕೆ ಬಹಳಷ್ಟು ತೊಂದರೆಯಾಗುವುದರಿಂದ ಚಕ್ಕಡಿಗಳು ಹೋಗುವುದಿಲ್ಲ. ಟ್ರಕ್ಸ್, ಲಾರಿಗಳು, tractors ಹೋಗುವುದಿಲ್ಲ. ಅದಕ್ಕೆ atleast ನಿಮ್ಮ ವ್ಯಾಪ್ತಿಯಲ್ಲಿ ಬರುವಂಥ ರಸ್ತೆಗಳಿಗೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: OK. Consider ಮಾಡಿ.

14-06-2017

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಆಯಿತು, ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ಆಯಿತು. ರವಿಸುಬ್ರಹ್ಮಣ್ಯ ಇಲ್ಲ, ಜಿ.ಹೆಚ್. ಶ್ರೀನಿವಾಸ್ ಕೇಳಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 119(1243)**

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ಜಿ.ಹೆಚ್.ಶ್ರೀನಿವಾಸ್: ಉತ್ತರವನ್ನು ಒದಗಿಸಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಆಟೋಗಳಲ್ಲಿ ಮೀಟರ್ ಇರುವುದಿಲ್ಲ. ತುಂಬಾ ಹಣ ಪಡೆದುಕೊಳ್ಳುತ್ತಾರೆ. ಅದಕ್ಕೆ ಅವರು ದರಪಟ್ಟಿ ರೀತಿ ಆಟೋಗಳಲ್ಲಿ ಹಾಕಿಕೊಂಡರೆ ಒಳ್ಳೆಯದು. ಕೆಲವು ತಾಂಡಾಗಳಲ್ಲಿ, ಕೇಂದ್ರ ಸ್ಥಳಗಳಲ್ಲಿ ಇಷ್ಟಿಷ್ಟು ರೇಟ್ ಆಗುತ್ತದೆಂದು ಹಾಕಿದರೆ  ಸಾರ್ವಜನಿಕರಿಗೆ ಒಳ್ಳೆಯದಾಗುತ್ತದೆ. ಅದರ ಜೊತೆಗೆ ತುಂಬಾ ಜನ ಆಟೋ ಚಾಲಕರು ಅವರು ಬ್ಯಾಡ್ಜಸ್ ತೆಗೆದುಕೊಳ್ಳಬೇಕಾದರೆ 8ನೇ ತರಗತಿ ಪಾಸ್ ಆಗಬೇಕೆಂದು ಇದೆ. 8ನೇ ತರಗತಿ ಪಾಸ್ ಆಗಿದ್ದರೆ ಮಾತ್ರ badges ಕೊಡುತ್ತೇವೆಂದು RTO office ನವರು ಹೇಳುತ್ತಾರೆ. ಅದನ್ನು 8ನೇ ತರಗತಿಯಿಂದ 7ನೇ ತರಗತಿಗೆ ಕಡಿಮೆ ಮಾಡಿದರೆ ತುಂಬಾ ಜನ ಆಟೋ ಚಾಲಕರಿಗೆ ಅನುಕೂಲವಾಗುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು) : ಸಭಾಧ್ಯಕ್ಷರೆ, ಈಗ as it is 8ನೇ ತರಗತಿ ಪಾಸ್ ಆಗಿದ್ದರೆ ಮಾತ್ರ ಬ್ಯಾಡ್ಜ್ ಕೊಡುತ್ತಾರೆ, ಡ್ರೈವಿಂಗ್ ಲೈಸೆನ್ಸ್ ಬೇಕಾಗುತ್ತದೆ. ಇದು ಕೇಂದ್ರ ಸರ್ಕಾರದಲ್ಲಿ amendment ಆಗಬೇಕು. ಪಾರ್ಲಿಮೆಂಟ್‌ನಲ್ಲಿ ಆಗಿದೆ ರಾಜ್ಯಸಭಾದಲ್ಲಿ ಆಗಬೇಕು. ಅದಾದ ಮೇಲೆ ಇದು ಮಾಡಬೇಕು. 8ನೇ ತರಗತಿ ಆಮೇಲೆ compulsory ಇರುವುದಿಲ್ಲ. ಬೆಂಗಳೂರು ನಗರದಲ್ಲಿ ಎಲ್ಲಾ ಕಡೆ ಆಟೋಗಳಿಗೆ ಮೀಟರ್ಸ್ ಇರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ, ಜಿಲ್ಲಾ ಕೇಂದ್ರಗಳಲ್ಲಿ ಆಯಾಯ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿರುತ್ತೇವೆ. Regional Transport Authority (RTA) ಇರುತ್ತದೆ. ಅವರು rates common ಆಗಿ ಮಾಡಲಿಕ್ಕಾಗುವುದಿಲ್ಲ. ಆಯಾಯ ಪ್ರದೇಶದಲ್ಲಿ ಬೆಟ್ಟಗುಡ್ಡ ಇರುವ ಪ್ರದೇಶದಲ್ಲಿ ಜಾಸ್ತಿ ಇರುತ್ತದೆ. ಸಮತಟ್ಟಾದ ಪ್ರದೇಶದಲ್ಲಿ ಕಡಿಮೆ ಇರುತ್ತದೆ. ಆಮೇಲೆ ವಿಮೆ, ತೆರಿಗೆ, ಇಂಧನ, ಬಾಟ, ವಾಹನದ

14-06-2017

ರೇಟ್ ಏನಿರುತ್ತದೆ ಇದನ್ನೆಲ್ಲಾ ನೋಡಿಕೊಂಡು ಆಯಾಯ ಜಿಲ್ಲಾಧಿಕಾರಿಗಳು rate fix ಮಾಡುತ್ತಾರೆ. ದೂರುಗಳು ಬಂದಂಥ ಸಂದರ್ಭದಲ್ಲಿ ಹೋದ ವರ್ಷವೇ 4,384 ಆಟೋಗಳ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಸುಮಾರು ರೂ. 15,34,400/- ದಂಡವನ್ನು ವಸೂಲು ಮಾಡಲಾಗಿದೆ. ಇದರ ಬಗ್ಗೆ ಪೊಲೀಸ್ ಇಲಾಖೆಯವರು ಹೆಚ್ಚು ಗಮನ ಹರಿಸಿದರೆ ಇನ್ನು ಸ್ವಲ್ಪ ಸರಿಯಾಗಿ ಉತ್ತಮಪಡಿಸಬಹುದು.

ಅಧ್ಯಕ್ಷರು: ನಾರಾಯಣಸ್ವಾಮಿ ಇಲ್ಲ, ಬಾಲಕೃಷ್ಣ ಬಂದಿದ್ದಾರೆಯೇ ಇಲ್ಲ.

(ಮುಂದು)

14.06.2017/ 11.30 (7)/ JB-CP

ಅಧ್ಯಕ್ಷರು: ನರೇಂದ್ರ ಸ್ವಾಮಿಯವರು ಇಲ್ಲ. ಸುಬ್ಬಾರೆಡ್ಡಿಯವರು ಇಲ್ಲ. ನಾರಾಯಣಸ್ವಾಮಿಯವರು ಇಲ್ಲ. ರವಿಸುಬ್ರಹ್ಮಣ್ಯನವರು ಮಾತನಾಡಿ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1545**

**(ಉತ್ತರದ ಪ್ರತಿ ಲಗತ್ತಿಸಿದೆ)**

ಶ್ರೀ ರವಿಸುಬ್ರಹ್ಮಣ್ಯ ಎಲ್.ಎ.: ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿಲ್ಲ.

ಅಧ್ಯಕ್ಷರು: ಏಕೆ ಕೊಟ್ಟಿಲ್ಲ?

ಶ್ರೀ ತನ್ವೀರ್ ಸೇಠ್: ಬಂದಿದೆಯಲ್ಲಾ?

ಅಧ್ಯಕ್ಷರು: Answer ಇದೆ.

ಶ್ರೀ ರವಿಸುಬ್ರಹ್ಮಣ್ಯ ಎಲ್.ಎ.: ಉತ್ತರ ಕೊಡಿಸಿ ಸರ್.

ಅಧ್ಯಕ್ಷರು: ಉತ್ತರ ಬಂದಿದೆ. ಹೋಗಿ ಕೊಡಿ. ಏಕೆ ಹೀಗೆ ಮಾಡುತ್ತೀರಿ?

ಶ್ರೀ ರವಿಸುಬ್ರಹ್ಮಣ್ಯ ಎಲ್.ಎ.: ಮಾನ್ಯ ಅಧ್ಯಕ್ಷರೆ, ಕಡ್ಡಾಯ ಶಿಕ್ಷಣದಲ್ಲಿ RTE seatಗಳನ್ನು ತಾವು ಏನು ಮಕ್ಕಳಿಗೆ allot ಮಾಡುತ್ತಿದ್ದೀರಿ, ಅನಿವಾರ್ಯವಾಗಿ ಯಾವುದಾದರೂ ಸಂದರ್ಭದಲ್ಲಿ ಅಂದರೆ ಶಾಲೆಗಳು ಮುಚ್ಚಿ ಹೋದಂತಹ ಸಂದರ್ಭದಲ್ಲಿ ಆ ಮಕ್ಕಳಿಗೆ ಅನ್ಯಾಯವಾಗುತ್ತಿದೆ. ಒಂದು ಶಾಲೆಯಲ್ಲಿ ಸುಮಾರು ಒಂದು ಸಾವಿರ ಮಕ್ಕಳಿದ್ದರೆ 250 ಮಕ್ಕಳು ಅಂದರೆ 25% ಎಂದರೆ ಅದರಲ್ಲಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಸುಮಾರು 250 ಮಕ್ಕಳಿರುತ್ತಾರೆ. ಆ ಮಕ್ಕಳು ಅವಕಾಶ ವಂಚಿತರಾಗುತ್ತಾರೆ, ಅದು ಒಂದು ವಿಷಯ. ಯಾವುದಾದರೂ ಮಗು RTE ನಲ್ಲಿ ಸೀಟು ತೆಗೆದುಕೊಂಡಿದ್ದು, ಕಾರಣಾಂತರಗಳಿಂದ ಅದು ಬೇರೆ ಊರಿಗೆ ಹೋದರೆ ಅಥವಾ ಶಾಲೆ ಬಿಟ್ಟು ಹೋದಂತಹ ಸಂದರ್ಭದಲ್ಲಿ ಆಗ vacate ಆದಂತಹ seat ಅನ್ನು ತಾವು ಏನು ಮಾಡುತ್ತೀರಿ? ಈ ರೀತಿ ಶಾಲೆ ಮುಚ್ಚಿದಂತಹ ಸಂದರ್ಭದಲ್ಲಿ RTE seat ಗೆ ಸಂಬಂಧಿಸಿದಂತಹ ಯಾವ ಮಕ್ಕಳಿರುತ್ತಾರೆ ಅವರಿಗೆ ಅಂತಹ ಶಾಲೆಗಳಲ್ಲಿ ಆ seat ಅನ್ನು allot ಮಾಡುವುದಕ್ಕೆ ಅವಕಾಶವಿದೆಯೇ? ಏನು ಮಾಡುತ್ತೀರಿ?

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಕೇಳಿರುವಂತಹ ಪ್ರಶ್ನೆ ಏನೆಂದರೆ, ಇವತ್ತು ಶಿಕ್ಷಣ ಇಲಾಖೆಯಲ್ಲಿ ಹೆಚ್ಚಿನ ನಿರ್ಬಂಧನೆಗಳನ್ನು ಹಾಕಿ ಹೊಸ ಶಾಲೆಗಳನ್ನು ಪ್ರಾರಂಭ ಮಾಡುವಂತಹದ್ದಕ್ಕೆ ಕಡ್ಡಾಯವಾಗಿ ಬೆಂಗಳೂರು ನಗರದಲ್ಲಿ ಅರ್ಧ ಎಕರೆಗಿಂತ ಜಾಸ್ತಿ ಜಾಗವಿದ್ದರೆ ಮಾತ್ರ ಅವಕಾಶ ಮಾಡಿಕೊಡುವಂತಹದ್ದು ಹಾಗೂ ಶಾಲೆಯ ವಾತಾವರಣದಲ್ಲಿ ಮಕ್ಕಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ಕೊಡುವಂತಹ ನಿರ್ಬಂಧನೆಗಳನ್ನು ಹಾಕಿರುವುದರಿಂದ ಕೆಲವು ಶಾಲೆಗಳು ತಾನಾಗಿ ತಾನೇ ಮುಚ್ಚಿ ಹೋಗುವಂತಹ ಪರಿಸ್ಥಿತಿಯಲ್ಲಿದೆ. ಈಗ ಮಕ್ಕಳ ಹಕ್ಕು ಕಾಯ್ದೆ 2009 ನಮ್ಮಲ್ಲಿ ಏನು ಜಾರಿಯಲ್ಲಿದೆ, ಅದರಲ್ಲಿ Right to Education ನಲ್ಲಿ RTE seat ಗಳನ್ನು ನಾವು ಏನು ಹಂಚಿಕೆ ಮಾಡುತ್ತೇವೆ, ಒಂದು ವೇಳೆ ಆ ಮಗು ಬೇರೆ ಶಾಲೆಯನ್ನು ಬಯಕೆ ಮಾಡಿದಂತಹ ಸಂದರ್ಭದಲ್ಲಿ ಅಥವಾ ಆ ಶಾಲೆ ಮುಚ್ಚಿ ಹೋದಂತಹ ಸಂದರ್ಭದಲ್ಲಿ ನಮ್ಮಲ್ಲಿ Section-5(2) ಪ್ರಕಾರ ಇದಕ್ಕೆ ಅವಕಾಶಗಳಿಲ್ಲ. ಹಾಗೆ ಇದ್ದರೂ ಕೂಡ ಅನುದಾನಿತ ಶಾಲೆಗಳಲ್ಲಿ ಅವರಿಗೆ ಸ್ಥಳಾಂತರ ಮಾಡುವಂತಹ ಅವಕಾಶವಿದೆ. ಅವರ ಪೋಷಕರು ಬಂದಂತಹ ಸಂದರ್ಭದಲ್ಲಿ ಅವರಿಗೆ ಅವಕಾಶ ಮಾಡಿಕೊಡುತ್ತೇವೆ. ಇದನ್ನು ನಾನು ನನ್ನ ಇಲಾಖೆಗೆ ಈಗಾಗಲೇ ಸ್ಪಷ್ಟವಾಗಿ ಆದೇಶ ಕೊಟ್ಟಿದ್ದೇನೆ. ಏಕೆಂದರೆ, ಕೆಲವೊಂದು ಶಾಲೆಗಳು ನಿಮ್ಮಲ್ಲಿ ಇವತ್ತು ಏನು ಮುಚ್ಚಿವೆ, ಅಲ್ಲಿ RTE ನಲ್ಲಿ ಕೊಟ್ಟಂತಹ ಸೀಟುಗಳು ಅಥವಾ ಬೇರೆ ಮಕ್ಕಳ ಹಿತದೃಷ್ಟಿಯಿಂದ ಅವರಿಗೆ ಬೇರೆ ಶಾಲೆಗಳಲ್ಲಿ ಅವಕಾಶ ಮಾಡಿಕೊಡುವಂತಹದ್ದಕ್ಕೆ ನನ್ನ ಇಲಾಖೆ ಮುಂದಾಗಿದೆ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ರವಿ ಸುಬ್ರಹ್ಮಣ್ಯ ಎಲ್.ಎ.: Grant-in-aid institutions ನಲ್ಲಿ ಶುಲ್ಕ ಕಟ್ಟಬೇಕಾಗುತ್ತದೆಯೇ?

ಶ್ರೀ ತನ್ವೀರ್ ಸೇಠ್: RTE ನಲ್ಲಿ grant-in-aid institutions ನಲ್ಲಿ RTE seat ಕೊಟ್ಟಾಗ ಮರು ಪಾವತಿ ಮಾಡುವಂತಹದ್ದು ನಮ್ಮದೂ ಇರುವುದಿಲ್ಲ. ಅಲ್ಲಿಯೂ ಸಹ ಅವರು ಶುಲ್ಕವನ್ನು ವಿಧಿಸುವಂತಹದ್ದು ಇಲ್ಲ. ಅಲ್ಲಿಯೂ ಸಹ ಉಚಿತವಾದಂತಹ ಶಿಕ್ಷಣ ಸಿಗುತ್ತದೆ. ಖಾಸಗಿ ವ್ಯಕ್ತಿಗಳು ಯಾರು RTE ನಲ್ಲಿ ಇಲ್ಲವೋ ಅವರು ಅಲ್ಲಿ ಸೀಟುಗಳನ್ನು ಪಡೆದಂತಹ ಸಂದರ್ಭದಲ್ಲಿ ನಾವು grand-in-aid institutions ನಲ್ಲಿ ಶುಲ್ಕ ನಿಗದಿ ಮಾಡಿರುವುದರಿಂದ ನಿಗದಿತ ಶುಲ್ಕವನ್ನು ಮಾತ್ರ ಕಟ್ಟಬೇಕಾಗುತ್ತದೆ.

ಶ್ರೀ ರವಿಸುಬ್ರಹ್ಮಣ್ಯ ಎಲ್.ಎ.: ಮತ್ತೊಂದು ಉಪ ಪ್ರಶ್ನೆ ನನ್ನದು ಇತ್ತು. ಅದಕ್ಕೆ ಉತ್ತರ ಬರಲಿಲ್ಲ. ಈಗ ಯಾವುದಾದರೂ ಮಗು volunteer ಆಗಿ ಸೀಟನ್ನು ಬಿಟ್ಟು ಹೋದರೆ ಆ vacant ಆಗಿರತಕ್ಕಂತಹ ಸೀಟಿಗೆ ಏನು ಮಾಡುತ್ತೀರಿ? ಎರಡನೇ ಕ್ಲಾಸ್‌ನಲ್ಲಿ ಅಥವಾ ಮೂರನೇ ಕ್ಲಾಸ್‌ನಲ್ಲಿ ಮಗು ಬಿಟ್ಟು ಹೋಗಬಹುದು. ಆಗ ಏನು ಮಾಡುತ್ತೀರಿ? ಅದನ್ನು ಭರ್ತಿ ಮಾಡುವುದಕ್ಕೆ ಏನು ಮಾಡುತ್ತೀರಿ?

ಶ್ರೀ ತನ್ವೀರ್ ಸೇಠ್: Vacant ಆಗಿರುವಂತಹದ್ದು vacant ಆಗಿಯೇ ಇರುತ್ತದೆ. ಅಲ್ಲಿ ನಾವು ಮಧ್ಯದಲ್ಲಿ fill ಮಾಡುವಂತಹ ಪ್ರಕ್ರಿಯೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವರ್ಷ ನಾವು ಒಂದನೇ ತರಗತಿಗೆ ಕೆಲವೊಂದು ಶಾಲೆಗಳಲ್ಲಿ entry level LKG ಯಲ್ಲಿ ಕೆಲವು ಸೀಟುಗಳನ್ನು ತೋರಿಸಿ ಮತ್ತೆ ಒಂದನೇ ತರಗತಿಗೆ ಜಾಸ್ತಿ ಮಾಡಿಕೊಳ್ಳುವಂತಹ ಪ್ರಕ್ರಿಯೆ ಏನಿತ್ತು ಅಂತಹದ್ದನ್ನು ನೋಡಿ ನಾವು ಈಗಾಗಲೇ ಸುಮಾರು 29 ಸಾವಿರ ಸೀಟುಗಳನ್ನು ಹೆಚ್ಚಿಗೆ ಮಾಡಿಕೊಂಡು ಈ ವರ್ಷ ನಾವು ಪಡೆದುಕೊಂಡಿದ್ದೇವೆ. ಹಾಗಾಗಿ ನಮ್ಮಲ್ಲಿರುವಂತಹದ್ದು ಎರಡು entry points ಮಾತ್ರ. LKG ಮತ್ತು ಒಂದನೇ ತರಗತಿ ಮಾತ್ರ. ಆ ಒಂದನೇ ತರಗತಿಗೂ ಸಹ ಈ ವರ್ಷ ನಾವು fill up ಮಾಡಿಕೊಂಡಿರುವುದರಿಂದ ಮುಂದಿನ ವರ್ಷ ಆ ಸಮಸ್ಯೆಯೂ ಬರುವುದಿಲ್ಲ. ಹಾಗಾಗಿ ಮಧ್ಯದಲ್ಲಿ ಆ ಮಗು ಶಾಲೆಯನ್ನು ಬಿಟ್ಟಿತು ಎಂದಾಗ ನಾವು Student



ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

Tracking System ಶಿಕ್ಷಣ ಕಿರಣ ಏನು ಮಾಡಿಕೊಂಡಿದ್ದೇವೆ, ಆ ಮಗು ತನ್ನ ಶಿಕ್ಷಣದಲ್ಲಿ ಮುಂದುವರೆಯುತ್ತಿದೆಯೇ ಅಥವಾ ಮಧ್ಯದಲ್ಲಿ ಬಿಟ್ಟಿದೆಯೇ ಎನ್ನುವುದನ್ನು ಪರಿಶೀಲನೆ ಮಾಡಿ ಆ ಮಗು ಬೇರೆ ಶಾಲೆಗೆ ಸೇರಿದರೆ ಬಿಡುತ್ತೇವೆ, ಇಲ್ಲದಿದ್ದರೆ ಮತ್ತೆ ಆ ಮಗುವಿನ ಪೋಷಕರನ್ನು ಕರೆದು ಶಾಲೆಗೆ ಸೇರಿಸುವಂತಹ ಪ್ರಕ್ರಿಯೆ ಮಾಡುತ್ತೇವೆ. RTE ನಲ್ಲಿ ಖಾಲಿಯಾದಂತಹ ಸ್ಥಾನಗಳು ಮತ್ತೆ ಭರ್ತಿ ಮಾಡುವುದಕ್ಕೆ ನಾವು ಎಲ್ಲಿಗೂ ಕೈ ಹಾಕುವುದಿಲ್ಲ.

ಶ್ರೀ ರವಿಸುಬ್ರಹ್ಮಣ್ಯ ಎಲ್.ಎ.: ನನ್ನದು ಒಂದು ಸಣ್ಣ ಸಲಹೆಯಿದೆ. ಈಗ ಆ ರೀತಿ ಯಾವುದಾದರೂ ಮಕ್ಕಳು ಬಿಟ್ಟು ಅಲ್ಲಿ vacant ಆಗುವಂತಹ ಸೀಟಿಗೆ close ಆಗಿರತಕ್ಕಂತಹ ಶಾಲೆಯ ಮಕ್ಕಳನ್ನು ಅಲ್ಲಿಗೂ ಸಹ ಹಾಕುವುದಕ್ಕೆ ಅವಕಾಶ ಕೊಡುತ್ತೀರಾ?

ಶ್ರೀ ತನ್ವೀರ್ ಸೇಠ್: ನಾನು ಪರಿಶೀಲಿಸುತ್ತೇನೆ.

ಶ್ರೀ ರವಿಸುಬ್ರಹ್ಮಣ್ಯ ಎಲ್.ಎ.: Thank you.

ಅಧ್ಯಕ್ಷರು: ತಡೆಹಿಡಿಯಲಾದ ಪ್ರಶ್ನೆಗಳು. ಮಾನ್ಯ ತಿಪ್ಪಾರೆಡ್ಡಿಯವರು ಮಾತನಾಡಿ.

**ದಿನಾಂಕ: 07-06-2017 ರ 3ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ.**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 160**

**(ಉತ್ತರದ ಪ್ರತಿ ಲಗತ್ತಿಸಿದೆ)**

ಶ್ರೀ ಜಿ.ಹೆಚ್.ತಿಪ್ಪಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಅವರ ಪ್ರಕಾರ 13,500 ಅರ್ಜಿಗಳು ನಮ್ಮಲ್ಲಿ ಉಳಿದಿರುವಂತಹದ್ದನ್ನು ಹೇಳಿದ್ದಾರೆ. ಕೆಳಗಡೆ 15 ಎಕರೆ ಈಗ ಲಭ್ಯವಿದೆ ಎಂದು ಹೇಳಿದ್ದಾರೆ. ಅದರಲ್ಲಿ ಅವರು ಮನೆ ಕೊಟ್ಟರೆ ಕೇಂದ್ರ ಸರ್ಕಾರದ G+2 ಎಂದು ಏನು ಒಂದು ಹೊಸ ವ್ಯವಸ್ಥೆಯಿದೆ, ಅದರಲ್ಲಿ 1,800 ಮನೆಗಳು ಕ್ಲಿಯರ್ ಆಗುತ್ತವೆ. ಇನ್ನೂ ಸುಮಾರು 5-6 ಸಾವಿರ ನಿವೇಶನಗಳು ಬೇಕಾಗಿರುವಂತಹ ಸಂದರ್ಭದಲ್ಲಿ ಅವರು ನಗರದ ಸುತ್ತಮುತ್ತಲೂ ಇರತಕ್ಕಂತಹ ಖಾಸಗಿಯವರದ್ದಾಗಲಿ ಅಥವಾ ಸರ್ಕಾರದ್ದಾಗಲಿ, ಖಾಸಗಿಯವರದ್ದು ಆದರೆ Sub-Registrar value ಗೆ percentage extra ಕೊಟ್ಟು ಖರೀದಿ ಮಾಡಿ ಉಳಿದ ಜನರಿಗೆ ವಸತಿಯನ್ನು ಒದಗಿಸುವಂತಹ ವ್ಯವಸ್ಥೆ ಮಾಡುತ್ತಾರಾ ಎಂದು ನಾನು ಅವರನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು: O.k.



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಎಂ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಈ 12ನೇ ತಾರೀಖಿನಂದು ಶಾಸಕರು ಹಾಗೂ ಜಿಲ್ಲಾಧಿಕಾರಿಗಳನ್ನು ಕರೆಸಿ ಸಭೆ ಮಾಡಿದ್ದೇವೆ. ಈ ಮೊದಲು ಏನು ಜಾಲಿಕಟ್ಟೆಯದು 64 ಎಕರೆ ಜಮೀನಿತ್ತು, ಅದನ್ನು ಗೋಮಾಳದ ಜಾಗ ಎಂದು ಯಾರೂ ಬಿಡದೇ ಸರ್ವೆಗೆ ಕಳುಹಿಸಿಕೊಡುವುದಕ್ಕೆ ಸರ್ವೆಗೆ ಆಗದೇ ಅದನ್ನು ಕೈಬಿಡಲಾಗಿದೆ. ಈಗ ಮೇಗಲಹಳ್ಳಿ ಎನ್ನುವ ಗ್ರಾಮದಲ್ಲಿ 15 ಎಕರೆ ಜಮೀನನ್ನು ಚಿತ್ರದುರ್ಗಕ್ಕೆ ಹೊಂದಿಕೊಂಡು ಹೋಗಿರುವುದರಲ್ಲಿ ಇವರಿಗೆ ಕೊಡುತ್ತಿದ್ದೇವೆ, ಆಶ್ರಯ ಸಮಿತಿಗೆ already ಕೊಟ್ಟಿದ್ದೇವೆ. ಈಗ ಫಲಾನುಭವಿಗಳನ್ನು ಆಯ್ಕೆ ಮಾಡುವಂತಹ ಕೆಲಸ ನಮ್ಮ ಆಶ್ರಯ ಸಮಿತಿ ಅಧ್ಯಕ್ಷರಾದ ತಿಪ್ಪಾರೆಡ್ಡಿಯವರ ಹತ್ತಿರ ಬಾಕಿ ಉಳಿದಿದೆ. ಅದನ್ನು ಮಾಡಿದರೆ ಮಾಡುತ್ತೇವೆ. ಇನ್ನೂ ಏನಾದರೂ ಜಮೀನು ಬೇಕಾದರೆ ಇದ್ದೂ ನಗರಸಭೆಯಾದ್ದರಿಂದ ಇಪ್ಪತ್ತೆರಡೂವರೆ ಲಕ್ಷ ರೂಪಾಯಿಗಳು maximum ಅಥವಾ minimum ಅದರಲ್ಲಿಟ್ಟುಕೊಂಡು ಇನ್ನೂ ಖರೀದಿ ಮಾಡಿ sites ಹಂಚುವುದಕ್ಕೆ ವ್ಯವಸ್ಥೆ ಮಾಡಿಕೊಳ್ಳಿ. G+2 ಅಥವಾ G+1 ಗೋ ಯಾವುದಕ್ಕೂ ಬೇಕಾದರೆ ಮಾಡಿಕೊಳ್ಳಲಿ.

ಅಧ್ಯಕ್ಷರು: O.k.

ಶ್ರೀ ಜಿ.ಹೆಚ್.ತಿಪ್ಪಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಮೊನ್ನೆ ಜಿಲ್ಲಾಧಿಕಾರಿಗಳನ್ನು ಹಾಗೂ ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್ನಿನ ಎಂ.ಡಿ.ಯವರನ್ನು ಕರೆಸಿ ಒಂದು ಸಭೆಯನ್ನು ಏರ್ಪಾಡು ಮಾಡಿ ಸಾಕಷ್ಟು ಚರ್ಚೆ ಮಾಡಿ ಅದಕ್ಕೆ ಒಳ್ಳೆಯ ಫಲಿತಾಂಶ ಸಹ ಸಿಕ್ಕಿದೆ. ಆದರೆ, ನಾನು ಜಿಲ್ಲಾಡಳಿತದಲ್ಲಿ ಉಳಿದ ವ್ಯವಸ್ಥೆಯನ್ನು ಮಾಡುವುದಕ್ಕೆ ಅವರು ನಿಧಾನ ಮಾಡುತ್ತಿರುವುದರಿಂದ ಮಾನ್ಯ ಸಚಿವರು ಆ ಖಾಸಗಿಯವರ ಹತ್ತಿರ ಖರೀದಿ ಮಾಡಿ market value ನಲ್ಲಿ ಖರೀದಿ ಮಾಡಿ ಕೊಡತಕ್ಕಂತಹ ವ್ಯವಸ್ಥೆಯನ್ನು ಶೀಘ್ರವಾಗಿ ಮಾಡಬೇಕೆಂದು ತಮ್ಮ ಮುಖಾಂತರ ಅವರಿಗೆ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಎಂ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಖರೀದಿ ಮಾಡುವುದು ಇದೆಲ್ಲವನ್ನು ಜಿಲ್ಲಾಧಿಕಾರಿಗಳು ಮಾಡುತ್ತಾರೆ. ಇವರು ಪ್ರಪೋಸಲ್ ಕೊಡಬೇಕು. ಯಾವ ಜಾಗ ಏನು ಎಂದು ಪ್ರಪೋಸಲ್ ಕೊಟ್ಟು ಇವರೂ ಸ್ವಲ್ಪ negotiate ಮಾಡುವುದಕ್ಕೆ ಮಧ್ಯದಲ್ಲಿ ಮಾತನಾಡಿ ಜಮೀನನ್ನು ಕೊಡಿಸಿಕೊಟ್ಟರೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಎಲ್ಲೆಲ್ಲಿ ಸೂಕ್ತವಾಗಿದೆ ಎಂದು ನೋಡಿ ಮಾಡಿದರೆ ಅನುಕೂಲ. ಇವರು ಆಶ್ರಯ ಸಮಿತಿಯ ಅಧ್ಯಕ್ಷರಾಗಿರುವುದರಿಂದ ಒಳ್ಳೆಯದಾಗುತ್ತದೆ.

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 14-06-2017ರ 08ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 193 ಪ್ರಶ್ನೆಗಳ ಪೈಕಿ 97 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ-1)

ಅಧ್ಯಕ್ಷರು: ಈಗ ಶೂನ್ಯ ವೇಳೆ. ಜಗದೀಶ್ ಶೆಟ್ಟರ್, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u>

**ವಿಷಯ: ಗುಂಡ್ಲುಪೇಟೆಯ ಬೊಮ್ಮಲಾಪುರ ಗ್ರಾಮದಲ್ಲಿನ ನಾಯಕ ಸಮಾಜದವರಿಗೆ ರಕ್ಷಣೆ ಕೊಡುವಂತಹ ಕೆಲಸ ಮಾಡುವ ಬಗ್ಗೆ.**

***

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಗುಂಡ್ಲುಪೇಟೆ ಉಪ ಚುನಾವಣೆಯಾಯಿತು. ಚುನಾವಣೆಯಾಯಿತು, result ಬಂತು ಎಲ್ಲವೂ ಆಯಿತು. ಆದರೆ, ಏನಾಗಿದೆ ಎಂದರೆ, ಗುಂಡ್ಲುಪೇಟೆಯಲ್ಲಿ ಬೊಮ್ಮಲಾಪುರ ಎಂದು ಒಂದು village ಇದೆ. ಅಲ್ಲಿ ನಾಯಕ ಸಮಾಜದ ಕುಟುಂಬಗಳಿಗೆ . ..

ಶ್ರೀ ಸಿದ್ದರಾಮಯ್ಯ: ಚಾಮರಾಜನಗರದಲ್ಲಿದೆಯೇ?



ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್: ಚಾಮರಾಜನಗರದಲ್ಲಿದೆ. ಗುಂಡ್ಲುಪೇಟೆಯಲ್ಲಿ ಉಪ ಚುನಾವಣೆಯಾಯಿತು, result ಬಂತು, ನೀವು ಗೆದ್ದಿರಿ ಎಲ್ಲವೂ ಆಯಿತು. ಆದರೆ, ಈಗ ಅಲ್ಲಿ ಯಾರು ಬಿ.ಜೆ.ಪಿ. ಪರವಾಗಿ voteಗಳನ್ನು ಹಾಕಿದ್ದಾರೆ ಎನ್ನುವಂತಹದ್ದನ್ನು identify ಮಾಡಿ, ಅದು ಯಾವ village ಎಂದರೆ ಬೊಮ್ಮಲಾಪುರ ಎನ್ನುವ ಒಂದು ಗ್ರಾಮ. ಅಲ್ಲಿ ಅವರೇ complaint ಕೊಟ್ಟಿದ್ದಾರೆ. ನಾಯಕ ಸಮಾಜದವರು ಕಾಂಗ್ರೆಸ್ supported ಕೆಲವೊಂದು ಬೆಂಗಲಿಗರು ನಮ್ಮ ಮನೆಗಳ ಮೇಲೆ attack ಮಾಡಿದ್ದಾರೆ, ನಮ್ಮ bodyಯ ಮೇಲೆ injury ಮಾಡಿದ್ದಾರೆ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಯಾವಾಗ ಆಗಿದ್ದು ಇದು?

ಶ್ರೀ ಜಗದೀಶ್ ಶೆಟ್ಟರ್: ಇತ್ತೀಚಿನ 3-4 ದಿವಸಗಳಲ್ಲಿ ಆಗಿದೆ. ಪೇಪರ್‌ನಲ್ಲಿ ಇವತ್ತೂ ಸಹ ಬಂದಿದೆ. Deccan Chronicle, ವಿಜಯ ಕರ್ನಾಟಕದಲ್ಲಿ ಬಂದಿದೆ. ಅದನ್ನೂ ನಾನು refer ಮಾಡಿದ್ದೇನೆ. (ಗೊಂದಲ) ನಾನು complete ಮಾಡುತ್ತೇನೆ. ಆಮೇಲೆ ಮಾತನಾಡಿ. ಹೀಗಾಗಿ ಈ ರೀತಿಯಾದಂತಹ ಸಂದರ್ಭದಲ್ಲಿ ಮತ್ತು ಎಲ್ಲಿಯವರೆಗೆ ಎಂದರೆ, ಈ ಸಾಮಾಜಿಕ ಬಹಿಷ್ಕಾರ ಅಂದರೆ untouchable ಬಗ್ಗೆ ಕೆಲವೊಂದು villages ನಲ್ಲಿ ಸಾಮಾಜಿಕ ಬಹಿಷ್ಕಾರ ಮಾಡುವುದು ಮಾಡುತ್ತಾರೆ. ಆ ರೀತಿ ಈ ನಾಯಕ್ community ಗಳು ಅಲ್ಲಿ ಸುಮಾರು 25 ಕುಟುಂಬಗಳಿವೆ. ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕುವಂತಹ ಕೆಲಸ ಇವತ್ತು ಆಗುತ್ತಿದೆ. Complaint ಕೊಡುವುದಕ್ಕೆ ಹೋದರೆ complaint ಅನ್ನೂ ಸಹ ತೆಗೆದುಕೊಳ್ಳುತ್ತಿಲ್ಲ. ಈ ರೀತಿಯಾದಂತಹ ಒಂದು ದೌರ್ಜನ್ಯ ಆ ಗ್ರಾಮದಲ್ಲಿ ನಡೆಯುತ್ತಿದೆ. ಅಲ್ಲಿ ಅವರು ಯಾವುದೇ ಅಂಗಡಿಗಳಿಗೆ purchase ಮಾಡುವುದಕ್ಕೆ ಹೋದರೂ ನಿಮಗೆ ಕೊಡುವುದಿಲ್ಲವೆಂದು ನೀವು ಬಿ.ಜೆ.ಪಿ.ಗೆ support ಮಾಡಿದ್ದೀರಿ ಎನ್ನುವಂತಹ ರೀತಿಯಲ್ಲಿ ಒಂದು ರೀತಿಯ ವಾತಾವರಣ ಸೃಷ್ಟಿ ಮಾಡಿದ್ದಾರೆ. ಹೀಗಾಗಿ ಅವರು ಅಲ್ಲಿ ಬದುಕುವುದಕ್ಕೆ ಆಗುತ್ತಿಲ್ಲ.

(ಮುಂದು . . .)

ದಿ:14-06-2017-11.40(08)-ಜೆ.ಎಲ್-ಸಿ.ಪಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್(ಮುಂದುವರೆದುದು): ಹೀಗಾಗಿ ಅವರು ಅಲ್ಲಿ ಬದುಕುವುದಕ್ಕೆ ಆಗುತ್ತಿಲ್ಲ, ಅದರಿಂದ ಆ ಊರಿನಲ್ಲಿ ಪ್ರವೇಶ ಮಾಡುವುದಕ್ಕೂ ಆಗುತ್ತಿಲ್ಲ. ದೂರು ಕೊಟ್ಟರೆ ದೂರನ್ನೂ ಕೂಡ ತೆಗೆದುಕೊಳ್ಳುತ್ತಿಲ್ಲ. ಗುಂಡ್ಲುಪೇಟೆ ಮಾನ್ಯ ಮುಖ್ಯಮಂತ್ರಿಗಳ ಪಕ್ಕದಲ್ಲಿರುವ ಕ್ಷೇತ್ರವಾಗಿದ್ದು, ಈ ಕ್ಷೇತ್ರದ ಬಗ್ಗೆ ನಿಮಗೆ ಸಾಕಷ್ಟು ಪರಿಚಯ ಇದೆ. ಈ ರೀತಿ ಒಂದು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಯಾರು ಯಾರಿಗೆ ಬೇಕಾದರೂ ವೋಟು ಹಾಕುತ್ತಾರೆ, ಎಲ್ಲಿಯಾದರೂ committed ಇರುತ್ತಾರೆ. ಒಂದು ಬಾರಿ ಚುನಾವಣೆ ಆದನಂತರ ಈ ರೀತಿ ದೌರ್ಜನ್ಯ ಮಾಡುವುದು, ಸಾಮಾಜಿಕ ಬಹಿಷ್ಕಾರ ಹಾಕುವುದು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸರಿ ಅಲ್ಲ. ಅವರಿಗೆ ಎಲ್ಲಾ ರೀತಿ ರಕ್ಷಣೆ ಕೊಡಿ, ಅವರ ದೂರನ್ನು ಸ್ವೀಕರಿಸಿ ಅವರಿಗೆ ರಕ್ಷಣೆ ಕೊಡುವಂತಹ ಮತ್ತು ಧೈರ್ಯವನ್ನು ಕೊಡುವಂತಹ ಕೆಲಸ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಇಲ್ಲವಾದಲ್ಲಿ unnecessary ರಾಜಕೀಯ ವೈಷಮ್ಯ ಬೆಳೆಯುತ್ತದೆ.

ಶ್ರೀ ಕೆ.ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೆ, I am on point of order.

ಶ್ರೀ ಜಗದೀಶ್ ಶೆಟ್ಟರ್: ಮೊದಲು ಇವರು ಉತ್ತರ ಕೊಡುತ್ತಾರೆ.

ಶ್ರೀ ಕೆ.ಎನ್.ರಾಜಣ್ಣ: I am on point of order. ನಾವು ನಿಯಮಗಳನ್ನು ರೂಪಿಸಿಕೊಂಡಿದ್ದೇವೆ. ತಾವು ಸಭಾಧ್ಯಕ್ಷರಾಗಿ ಬಂದನಂತರ ಕೆಲವು ಮಹತ್ತರವಾದಂತಹ ಬದಲಾವಣೆಗಳನ್ನು ಕೂಡ ತಂದಿದ್ದೀರಿ. ಆ ನಿಯಮಾವಳಿ ಪ್ರಕಾರ ನಿನ್ನೆ ಸಂಜೆಯಿಂದ ಇವತ್ತಿನ ಬೆಳಿಗ್ಗೆವರೆಗೆ ನಡೆದಿರುವಂತಹ ಘಟನೆಗಳನ್ನು ಹೊರತುಪಡಿಸಿದರೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆಯೇ?

ಅಧ್ಯಕ್ಷರು: ಇಲ್ಲಾ, ಅದಕ್ಕಾಗಿ ನಾನು ಅವರಿಗೆ ಪ್ರಶ್ನೆ ಕೇಳಿದೆ.

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಬೆಳಿಗ್ಗೆ Deccan Chronicle ಬಂದಿರುವಂತಹ ಒಂದು ಸುದ್ದಿಯ ಮಾಹಿತಿ ಪ್ರಕಾರ ಇವತ್ತು ನಾನು ಕೊಟ್ಟಿದ್ದೇನೆ. ನಮಗೂ ಕೂಡ ನಿಯಮ ಗೊತ್ತಿದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಅಧ್ಯಕ್ಷರು: 24 ಗಂಟೆ ಒಳಗೆ ಈ ಸುದ್ದಿ ಬಂದಿದೆಯೆಂದು ಹೇಳಿದ್ದಾರೆ ಅದಕ್ಕೆ ನಾನು allow ಮಾಡಿದೆ.

ಶ್ರೀ ಕೆ.ಎನ್.ರಾಜಣ್ಣ: ಇದು ಒಂದು ವಾರದ ಹಿಂದಿನ ಘಟನೆ ಹೊಸ ನಿಯಮಾವಳಿಯನ್ವಯ ನಿನ್ನೆ ಸಂಜೆಯಿಂದ ಇವತ್ತಿನ ಬೆಳಿಗ್ಗೆವರೆಗೆ ನಡೆದಿರುವಂತಹ ಘಟನೆಗಳು ಮಾತ್ರ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬೇಕು. ಅವರು ಪ್ರಸ್ತಾಪ ಮಾಡಿದ ವಿಷಯವನ್ನು ಗಮನ ಸೆಳೆಯುವ ಸೂಚನೆಯಲ್ಲಿ ತರುವುದಕ್ಕೆ ಅವಕಾಶವಿದೆ. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆಯೇ?

ಅಧ್ಯಕ್ಷರು: ತಾವು ಹೇಳುವುದು ಸರಿ, ಅದಕ್ಕೆ ಅವಕಾಶ ಇಲ್ಲ. ಈಗ ಗೃಹ ಸಚಿವರು ಇಲ್ಲ ಉತ್ತರ ತರಿಸಿಕೊಡುತ್ತೇವೆ.

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು): ಸಾಮಾಜಿಕ ಬಹಿಷ್ಕಾರ ಪ್ರಜಾಪ್ರಭುತ್ವದಲ್ಲಿ ಯಾರೂ ಹಾಕಬಾರದು ಮತ್ತು ನಾವು ಹಾಕಿದರೂ ಕೇಳಬಾರದು ನಮ್ಮ ಸರ್ಕಾರವಾಗಲಿ, ನಮ್ಮ ಪಕ್ಷವಾಗಲಿ ಅದನ್ನು ತೀವ್ರವಾಗಿ ಖಂಡಿಸುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರು ಚುನಾವಣೆಯಲ್ಲಿ ಅಲ್ಲಿ ವೋಟ್ ಹಾಕಿದರು ಎಂದು ಹೇಳಿದ ಪ್ರಶ್ನೆ ಬರುವುದಿಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಯಾರು ಯಾರಿಗೆ ಬೇಕಾದರೂ ವೋಟ್ ಹಾಕಬಹುದು ಆದರೆ ಈ ಬಗ್ಗೆ ದೂರು ತೆಗೆದುಕೊಳ್ಳುತ್ತಿಲ್ಲ ರಕ್ಷಣೆ ಇಲ್ಲ ಎಂದು ತಾವು ಪ್ರಸ್ತಾಪ ಮಾಡಿದ್ದು, ಇದರ ಬಗ್ಗೆ ತಕ್ಷಣ ವಿಚಾರಣೆ ಮಾಡುತ್ತೇವೆ. ತಾವು ಪ್ರಸ್ತಾಪ ಮಾಡಿರುವಂತಹ ಘಟನೆ ಒಂದು ವೇಳೆ ನಿಜವಾಗಿ ಆಗಿದ್ದರೆ ಕ್ರಮ ಕೈಗೊಳ್ಳುತ್ತೇವೆ ಮತ್ತು ಕೇಸ್ ರಿಜಿಸ್ಟ್ರಾರ್ ಮಾಡಿ ರಕ್ಷಣೆ ಕೊಡುವ ವ್ಯವಸ್ಥೆ ಮಾಡುತ್ತೇವೆ ಈ ವಿಷಯವನ್ನು ಗೃಹ ಸಚಿವರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು: ಹೆಚ್.ಡಿ.ರೇವಣ್ಣ ರವರು ಸದನದಲ್ಲಿ ಇಲ್ಲ, ಬಿ.ಬಿ.ನಿಂಗಯ್ಯ ರವರು ಸದನದಲ್ಲಿ ಇಲ್ಲ.

ವಿಷಯ: ಶಾಲಾ ಪಠ್ಯ ಪುಸ್ತಕ ಪೂರೈಸುವಲ್ಲಿ ಸರ್ಕಾರದ ವೈಫಲ್ಯದ ಕುರಿತು.

* * * * *

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಶಿರಸಿ): ಮಾನ್ಯ ಅಧ್ಯಕ್ಷರೆ, ಜೂನ್‌ನಿಂದ ಶೈಕ್ಷಣಿಕ ವರ್ಷ ಪ್ರಾರಂಭವಾದರೂ ನಮಗೆ ತಿಳಿದಿರುವ ಹಾಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯ ಪಠ್ಯ ಪುಸ್ತಕಗಳು ಇದುವರೆಗೆ 50% ರಿಂದ 55% ಪ್ರಮಾಣದಲ್ಲಿ ಮಾತ್ರ ನನ್ನ ಕ್ಷೇತ್ರದ ಬಿ.ಇ.ಓ ಕಛೇರಿಗೆ ತಲುಪಿದೆ. ಇಡೀ ರಾಜ್ಯದಲ್ಲಿ 50 ರಿಂದ 55% ಗಿಂತ ಜಾಸ್ತಿ ತಲುಪಿಲ್ಲವೆಂಬುದು ನಾನು ಅನೇಕ ಶಾಸಕರ ಜೊತೆ ಮಾತನಾಡಿದಾಗ ತಿಳಿಯಿತು. ಈ ಗೊಂದಲಕ್ಕೆ ಕಾರಣವಾಗಿರುವುದೇನೆಂದರೆ, ಪಠ್ಯ ಪುಸ್ತಕ ಪರಿಷ್ಕರಣೆಯದು ಅನೇಕ ರೀತಿಯ ಗೊಂದಲ ಇದೆ. ಆ ವಿಷಯವನ್ನು ನಾನು ಇನ್ನೊಮ್ಮೆ ಪ್ರತ್ಯೇಕವಾಗಿ ಪ್ರಸ್ತಾಪ ಮಾಡುತ್ತೇನೆ. ಆದರೆ ಈಗ ಇವರು 80%, 90% ಮುದ್ರಣವಾಗಿದೆಯೆಂದು ಉತ್ತರ ಹೇಳುತ್ತಾರೆ. ಮುದ್ರಣವಾಗಿದೆಯೆಂದರೆ, ಇವರಿಗೆ ಪೇಪರ್ ಸಿಗುತ್ತಿಲ್ಲ, ನಮ್ಮ ಇತಿಹಾಸದಲ್ಲಿ ಈ ರೀತಿ ಎಂದೂ ಇರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ.

ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ನೀವು ಕೇವಲ ಪ್ರಸ್ತಾಪ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಒಂದು ನಿಮಿಷ ನಾನು ಮಾತನಾಡಿ ಮುಗಿಸುತ್ತೇನೆ.

(ಗೊಂದಲ)

ಶ್ರೀ ತನ್ವೀರ್ ಸೇಠ್: ನೀವು ಬೇರೆ ಸಂದರ್ಭದಲ್ಲಿ ಭಾಷಣ ಮಾಡಿದ ಹಾಗೆ ಮಾಡಿದರೆ ಅದು ಆಗುವುದಿಲ್ಲ. ಶೂನ್ಯ ವೇಳೆಯಲ್ಲಿ ಏನು ಪ್ರಸ್ತಾಪ ಮಾಡಿದ್ದಿರೋ ಅದಕ್ಕೆ ಉತ್ತರ ಕೊಡುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಏನು ಮಾತನಾಡಬೇಕು ಏನು ಬೇಡ ಎಂದು ಹೇಳುವುದಕ್ಕೆ ಅಧ್ಯಕ್ಷರಿದ್ದಾರೆ. ನೀವು ಹೇಳುವುದಲ್ಲ.

(ಗೊಂದಲ)

ಶ್ರೀ ತನ್ವೀರ್ ಸೇಠ್: ನೀವು ಏನು ಪ್ರಸ್ತಾಪ ಮಾಡಿದ್ದೀರಿ ಅದನ್ನು ಮಾತ್ರ ಮಾತನಾಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಿಮ್ಮದೇನಿದೆ ಅದನ್ನು ನಂತರ ಮಾತನಾಡಿ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ತನ್ವೀರ್ ಸೇಠ್: ತಾವು ಲಿಖಿತವಾಗಿ ಶೂನ್ಯವೇಳೆಯಲ್ಲಿ ಏನು ಪ್ರಸ್ತಾಪ ಮಾಡಿದ್ದೀರಿ ಅದರ ಬಗ್ಗೆ ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇವರು ಮಾಡಿರುವ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ಈ ರೀತಿ ಮಾತನಾಡುವುದು.

(ಗೊಂದಲ)

ಶ್ರೀ ತನ್ವೀರ್ ಸೇಠ್: ಬೇರೆ ವಿಷಯವನ್ನೆಲ್ಲಾ ಮಾತನಾಡಿಕೊಂಡು ನಿಮ್ಮ ಊಹಾಪೋಹಗಳಿಗೆ ಉತ್ತರ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಸುಮ್ಮನಿರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ ಕೊಡಿ ನಾನು ಒಂದೇ ನಿಮಿಷದಲ್ಲಿ ಹೇಳುತ್ತೇನೆ. ಅವರು ಮಧ್ಯದಲ್ಲಿ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು: ಆಯಿತು ಬೇಗ ಹೇಳಿ ಮುಗಿಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಪುಸ್ತಕ ಮುದ್ರಣಕ್ಕೆ ಪೇಪರ್ ತೆಗೆದುಕೊಳ್ಳುವುದಕ್ಕೆ ಇತಿಹಾಸದಲ್ಲಿ ಯಾವಾಗಲೂ ಅಡ್ವಾನ್ಸ್ ಹಣವನ್ನು ಕೊಟ್ಟಿರಲಿಲ್ಲ. ಇವರು ಅಡ್ವಾನ್ಸ್ ಹಣವನ್ನು ಕೊಟ್ಟಿದ್ದಾರೆ. ಪೇಪರ್ ಸಿಗುತ್ತಿಲ್ಲ ಹಾಗಾಗಿ ಮುದ್ರಣವಾಗುತ್ತಿಲ್ಲ. ಮುದ್ರಣ ಆಗಿರುವುದು ಬೈಂಡಿಂಗ್ ಆಗಿಲ್ಲ. ಬೈಂಡಿಂಗ್ ಆಗಿರುವುದನ್ನು ಕಳುಹಿಸಿಲ್ಲ. 50% ಪುಸ್ತಕಗಳು ಹೋಗಿಲ್ಲ. 50% ಹೋಗಿರುವ ಪುಸ್ತಕ second term ದು ಹೋಗಿದೆ. First part ನ ಪುಸ್ತಕ ಹೋಗಿಲ್ಲ. ಈ ರೀತಿ ಶಿಕ್ಷಣ ಇಲಾಖೆ ಎಂಬುದು ಗೊಂದಲದ ಗೂಡಾಗಿದೆ. ಕೌನ್ಸಿಲಿಂಗ್ ಏನೆಂದು ಇನ್ನೂ ಗೊತ್ತಿಲ್ಲ, ಬೇರೆ ಬೇರೆ ಅನೇಕ ವಿಷಯಗಳಿವೆ. ಬೇಡಿಕೆಗಳ ಮೇಲೆ ಬಂದಾಗ ನಾನು ಚರ್ಚೆ ಮಾಡುತ್ತೇನೆ.

ಅಧ್ಯಕ್ಷರು: ಆಯಿತು ಆಗ ಮಾತನಾಡಿ. ಈಗ ಸರ್ಕಾರ ಏನು ಉತ್ತರ ಕೊಡುತ್ತದೆಂದು ನೋಡೋಣ.



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಇವರು ಎಷ್ಟು ದಿವಸಗಳ ಒಳಗೆ ಪುಸ್ತಕಗಳನ್ನು ತಲುಪಿಸುತ್ತಾರೆಂಬುದನ್ನು ಹೇಳಬೇಕು.

ಅಧ್ಯಕ್ಷರು: ಆಯಿತು ಅವರು ಹೇಳುತ್ತಾರೆ ಬಿಡಿ.

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಇವತ್ತು ನಮ್ಮ ಇಲಾಖೆಯಿಂದ ಒಂದನೇ ತರಗತಿಯಿಂದ ಎಂಟನೇ ತರಗತಿವರೆಗಿನ ಪಠ್ಯ ಪುಸ್ತಕಗಳನ್ನು ಪರಿಷ್ಕರಣೆ ಮಾಡಿರುವುದು ನಿಜ. ಮುದ್ರಣ ಮಾಡುವುದಕ್ಕೆ ಟೆಂಡರ್ ಪ್ರಕ್ರಿಯೆ ಮಾಡಿದಂತಹ ಸಂದರ್ಭದಲ್ಲಿ ಬರಗಾಲದ ಹಿನ್ನೆಲೆಯಲ್ಲಿ ಪ್ರಮುಖವಾದಂತಹ ಮೂರು ಕಾರ್ಖಾನೆಗಳು ಮುಚ್ಚಿ ಹೋಗಿರುವುದು ನಿಜ. ನ್ಯಾಷನಲ್ ಪೇಪರ್ ಮಿಲ್ಸ್ ಜೊತೆ ನಾವು ಮಾತುಕತೆ ಆಡಿ ಮುದ್ರಕರಿಗೆ ನಾವು ಅಡ್ವಾನ್ಸ್ ಕೊಟ್ಟಿರುವುದು ನಿಜ. ಇದ್ಯಾವುದನ್ನು ನಾನು ನಿಯಮಾವಳಿ ಬಾಹಿರವಾಗಿ ಮಾಡಿಲ್ಲ. ಹಾಗಿದ್ದರೂ ಕೂಡ 97% ರಷ್ಟು ಮುದ್ರಣಾ ಕಾರ್ಯ ಮುಗಿದಿದ್ದು, ಸುಮಾರು 90% ಪಠ್ಯ ಪುಸ್ತಕಗಳನ್ನು ಈಗಾಗಲೇ ಹಂಚಿಕೆ ಮಾಡಿದ್ದೇವೆ. ಗೌರವಾನ್ವಿತ ಶಾಸಕರ ಅಧ್ಯಕ್ಷತೆಯಲ್ಲಿ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಪಠ್ಯ ಪುಸ್ತಕಗಳನ್ನು ಹಂಚಿಕೆ ಮಾಡಿದ್ದೇವೆ. ಅವರು ಹೇಳುವಂತಹ ರೀತಿಯಲ್ಲಿ ಇದರಲ್ಲಿ ಯಾವುದೇ ಗೊಂದಲ ಆಗಿಲ್ಲ. ಯಾವುದೇ ರೀತಿಯಲ್ಲಿ ವಿಳಂಬವಾಗಿಲ್ಲ. ಅವರು ಕೂಡ ಈ ರಾಜ್ಯದ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದಾರೆ. ರಾಜ್ಯದ ಇತಿಹಾಸದಲ್ಲಿಯೇ ಶಾಲಾ ಪ್ರಾರಂಭವಾದ ದಿನವೇ ಶಿಕ್ಷಣ ಇಲಾಖೆಯಿಂದ ನಾವು ಮಕ್ಕಳಿಗೆ ಪಠ್ಯ ಪುಸ್ತಕಗಳು, ಸಮವಸ್ತ್ರ, ಷೂ ಮತ್ತು ಸೈಕಲ್ ವಿತರಣೆ ಮಾಡುವ ಕೆಲಸವನ್ನು ಈಗಾಗಲೇ ಮಾಡಿದ್ದೇವೆ. ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವಂತಹ ವಿಚಾರದಲ್ಲಿ ಮುದ್ರಣ ಕಾರ್ಯದಲ್ಲಿ ಯಾವುದೇ ವಿಳಂಬ ಆಗಿಲ್ಲ. ಲಾರಿ ಮುಷ್ಕರ ಮತ್ತೊಂದು ಇದ್ದ ಕಾರಣದಿಂದ ಸ್ವಲ್ಪ ವಿಳಂಬವಾಗಿರುವುದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಶಾಲೆ ಪ್ರಾರಂಭವಾದ ತಕ್ಷಣ ಕೊಡಬೇಕೆಂಬ ನಮ್ಮ ಪ್ರಯತ್ನ ಏನಿತ್ತು ಅದರಲ್ಲಿ ಯಾವುದೇ ಗೊಂದಲವಾಗಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅವರು ಪ್ರಸ್ತಾಪ ಮಾಡುತ್ತಿರುವ ಬೇರೆ ವಿಚಾರಗಳನ್ನು ಬೇರೆ ರೂಪದಲ್ಲಿ ತಂದಾಗ ಸರ್ಕಾರ ಸಮರ್ಥವಾಗಿ ಉತ್ತರ ಕೊಡುತ್ತದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿಯೇ 50% ಪುಸ್ತಕವನ್ನು ಇನ್ನೂ ಹಂಚಿಲ್ಲ. ಇನ್ನೂ ಪುಸ್ತಕ ಬಂದಿಲ್ಲ.

ಅಧ್ಯಕ್ಷರು: ಈಗ ಚರ್ಚೆಗೆ ಆಸ್ಪದವಿಲ್ಲ. ಅವರು ಉತ್ತರ ಕೊಟ್ಟಿದ್ದಾರೆ. ಚರ್ಚೆ ಮಾಡುವುದಕ್ಕಾಗುವುದಿಲ್ಲ ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನೀವು ಈ ರೀತಿ ಹಾರಿಕೆ ಉತ್ತರ ಕೊಟ್ಟು ಮುಗಿಸಿದರೆ ನೀವು ಎಷ್ಟು ಪುಸ್ತಕ ಕೊಟ್ಟಿದ್ದೀರಿ ಇಲ್ಲವೆನ್ನುವುದು ಜನರಿಗೆ ಗೊತ್ತಾಗುತ್ತದೆ. ನೀವು ಪುಸ್ತಕ ಕೊಟ್ಟಿದ್ದೀರೋ ಇಲ್ಲವೋ ಎಂಬುದು ಮನೆ ಮನೆಗೆ ಗೊತ್ತಾಗುತ್ತದೆ.

ಅಧ್ಯಕ್ಷರು: ಮಾನ್ಯ ಸದಸ್ಯರೆ, ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಪುಸ್ತಕ ಬಂದಿಲ್ಲ ವಿಳಂಬವಾಗಿದೆ ಎಂದು ಇವರು ಒಪ್ಪಿಕೊಳ್ಳಲಿ.

ಅಧ್ಯಕ್ಷರು: ಈ ವಿಷಯವನ್ನು ಸಚಿವರ ಗಮನಕ್ಕೆ ತಂದಿದ್ದೀರಿ ಅವರು ಉತ್ತರ ಕೊಟ್ಟಿದ್ದಾರೆ ಚರ್ಚೆ ಮಾಡುವ ಅವಶ್ಯಕತೆಯಿಲ್ಲ.

ಶ್ರೀ ತನ್ವೀರ್ ಸೇಠ್: ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಪುಸ್ತಕ ಮಾರಾಟವನ್ನು ನಿಷೇಧ ಮಾಡಿರುವ ಹಿನ್ನೆಲೆಯಲ್ಲಿ ಖಾಸಗಿ ವಿದ್ಯಾಸಂಸ್ಥೆಗಳಿಂದ ಅವರು ನಮ್ಮಿಂದ ಇನ್ನೂ ಪುಸ್ತಕ ತೆಗೆದುಕೊಳ್ಳದಿರುವ ಪ್ರಕರಣವಿದೆ. ಆದರೆ ನಿಮ್ಮ ಜಿಲ್ಲೆಯಲ್ಲಿ ನೂರಕ್ಕೆ ನೂರು ಪಠ್ಯ ಪುಸ್ತಕಗಳನ್ನು ಸರಬರಾಜು ಮಾಡಿರುವ ಮಾಹಿತಿ ನನ್ನ ಬಳಿಯಿದೆ. ಬೇರೆ ರೂಪದಲ್ಲಿ ಚರ್ಚೆ ಮಾಡುವ ಹಾಗಿದ್ದರೆ ಮಾಡಿ.

ಅಧ್ಯಕ್ಷರು: ವಿತ್ತೀಯ ಕಾರ್ಯಕಲಾಪಗಳು.

**ವಿತ್ತೀಯ ಕಾರ್ಯಕಲಾಪಗಳು**

**2017-18ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಮಂಡನೆಗೆ ಅನುಮತಿ ಕೋರಿಕೆ**

ತಿದ್ದುಪಡಿಯಾಗದ/uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 2017-18ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೆ ಕಂತು) ತಮ್ಮ ಅನುಮತಿಯೊಡನೆ ಮಂಡಿಸುತ್ತಿದ್ದೇನೆ.

(ಅನುಬಂಧ-2)

ಅಧ್ಯಕ್ಷರು: ಮಂಡಿಸಲಾಯಿತು. ಈಗ ಶಾಸನ ರಚನೆ. ವಿಧೇಯಕಗಳನ್ನು ಮಂಡಿಸುವುದು. ಮಾನ್ಯ ಬಸವರಾಜ ರಾಯರೆಡ್ಡಿಯವರು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿನಂತಿಯಿದೆ. ಅಜೆಂಡಾದಲ್ಲಿ next ತುಂಬಾ ವಿಷಯಗಳನ್ನು ತಾವು ಚರ್ಚೆಗೆ ಇಟ್ಟುಕೊಂಡಿದ್ದೀರಿ.

ಅಧ್ಯಕ್ಷರು: ಒಂದು ನಿಮಿಷ ತಮಗೆ ಅವಕಾಶ ಕೊಡುತ್ತೇನೆ. ಅದಕ್ಕಿಂತಾ ಪೂರ್ವದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಪ್ರಸ್ತಾವನೆಯನ್ನು ಮಂಡಿಸಿದ್ದಾರೆ. ಅದನ್ನು ಮತಕ್ಕೆ ಹಾಕುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು): ಇಲ್ಲಿ ಪೂರಕ ಅಂದಾಜುಗಳನ್ನು ಮಂಡಿಸಿದ್ದೇನೆ. ಅದಕ್ಕೆ ಉತ್ತರ ಕೊಡುವಾಗಲೇ ಚರ್ಚೆಯಾಗುತ್ತದೆ. ನೀವು ಅದರ ಬಗ್ಗೆ ಮಾತನಾಡುವಾಗ ಬೇಕಾದರೆ ಮಾತನಾಡಿ. I have no objection ಅದಕ್ಕೆ ನಾನು reply ಮಾಡುವಾಗ ಅದನ್ನೂ ಸೇರಿಸಿಕೊಂಡು ಉತ್ತರ ಕೊಡುತ್ತೇನೆ. ಈಗ ಒಂದು GST Bill ಇದೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ತಾವು ಇವತ್ತಿನ ಅಜೆಂಡಾವನ್ನು ದಯವಿಟ್ಟು ತೆಗೆದು ನೋಡಿ. GST bill, ಪರ್ಯಾಲೋಚನೆ ಡಿಮ್ಯಾಂಡ್ಸ್ ಮೇಲೆ ಚರ್ಚೆಯಾದ ನಂತರ ಎಂದು ಇದೆ.

ಶ್ರೀ ಆರ್.ವಿ.ದೇಶಪಾಂಡೆ: ಅವರು ಹೇಳುವುದು ಸರಿ. ತಾವು ಹೇಳುವುದು ಡಿಮ್ಯಾಂಡ್ ಮೊದಲು ಇದೆ, ಅದರ ಬಗ್ಗೆ introduction ಇದೆಯೆಂದು.

ಶ್ರೀ ಜಗದೀಶ್ ಶೆಟ್ಟರ್: ಅದನ್ನು ಮಂಡನೆ ಮಾಡಲಿ.

14-06-2017

ಶ್ರೀ ಆರ್.ವಿ.ದೇಶಪಾಂಡೆ: ಆದರೆ ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ ಇರುವುದಿಲ್ಲ ಹಾಗಾಗಿ ಈ ರೀತಿ. GST Bill generally ಎಲ್ಲರೂ ಒಪ್ಪುತ್ತಾರೆ. ಸದನದಲ್ಲಿ ಎಲ್ಲರೂ support ಮಾಡುತ್ತಾರೆ unanimous ಆಗಿ pass ಆಗಬಹುದು ಎನ್ನುವ ವಿಶ್ವಾಸ ಇದೆ.

ಶ್ರೀ ಜಗದೀಶ್ ಶೆಟ್ಟರ್: ನಾನು ಯಾವಾಗಲೂ technically objection ಮಾಡುವುದಕ್ಕೆ ಹೋಗುವುದಿಲ್ಲ. GST bill ಬಗ್ಗೆ ಪರ್ಯಾಲೋಚನೆಗೆ ಒಂದು ಬಾರಿ ಪ್ರಾರಂಭವಾಯಿತು ಎಂದರೆ ಅದರ ಮೇಲೆ ಯಾರಾದರೂ ಮಾತನಾಡುವುದಿದ್ದರೆ ಮತ್ತೆ ಡಿಬೇಟ್ ಶುರು ಆಗುತ್ತದೆ.

ಅಧ್ಯಕ್ಷರು: ಈಗ ಮಂಡನೆ ಆಗುತ್ತಿದೆ ಅಷ್ಟೆ.

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ: ಇದು GST ಮಂಡನೆ ಅಲ್ಲ ಸಾರ್ ಇದು ಚರ್ಚೆ.

ಶ್ರೀ ಜಗದೀಶ್ ಶೆಟ್ಟರ್: ಇದು GST ಪರ್ಯಾಲೋಚನೆ

ಶ್ರೀ ಆರ್.ವಿ.ದೇಶಪಾಂಡೆ: ಹೌದು.

ಅಧ್ಯಕ್ಷರು: ಪರ್ಯಾಲೋಚನೆಗೆ ಇನ್ನೂ ಬಂದಿಲ್ಲ.

(ಮುಂದುವರೆದಿದೆ)

ದಿನಾಂಕ: 14-06-2017-11.50 (09) AJ/HS

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇದು ಪಾರ್ಲಿಮೆಂಟಿನಲ್ಲಿ ಪಾಸಾಗಿರುವಂತಹ ಬಿಲ್ಲು. ಯಥಾವತ್ತಾಗಿ adopt ಮಾಡಿಕೊಂಡಿದ್ದೇವೆ. ಹೆಸರು ಮಾತ್ರ GST ಬಿಲ್ ಎಂದು ಮಾಡಿದ್ದೇವೆಯೇ ಹೊರತು Government of India ಬದಲಾಗಿ ಇಲ್ಲಿ ಮಾಡಿಕೊಂಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : Leader of opposition ಆಗಿ ವೈಯಕ್ತಿಕವಾಗಿ ನಾನು ಏನು ಮಾತನಾಡುತ್ತಿಲ್ಲ. ಯಾರಾದರೂ ಮಾತನಾಡುತ್ತೇನೆಂದರೆ, ಮಾತನಾಡುವುದಕ್ಕೆ ಅವಕಾಶ ಕೊಡಬೇಕಲ್ಲವೇ? ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ. ಆ ಸಂದರ್ಭದಲ್ಲಿ ಏನು ಮಾಡಬೇಕು?



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಅಧ್ಯಕ್ಷರು : ಪರ್ಯಾಲೋಚನೆ ಬಂದ ಸಮಯದಲ್ಲಿ ನೀವು ಮಾತನಾಡಿ. ಇದು ಬರಿ ಮಂಡನೆ. ಅದು ಇನ್ನು ಮುಂದಿದೆ.

ಶ್ರೀ ಜಗದೀಶ್ ಶೆಟ್ಟರ್ : ಆವತ್ತು ಮಂಡನೆ ಆಗಿರುವುದು. ಇವತ್ತು ಪರ್ಯಾಲೋಚನೆ ಇರುವುದು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಇದು supplementary introduction.

(ಗೊಂದಲ)

ಶ್ರೀ ಸಿದ್ದರಾಮಯ್ಯ : Supplementary introduction. ಇದು continuation.

(ಗೊಂದಲ)

ಅಧ್ಯಕ್ಷರು : Introduction ಆಗಬೇಕಾಗಿರುವ ವಿಧೇಯಕಗಳು ಇನ್ನೂ ಮೂರು ಇವೆ. Introduction ಆದ ಮೇಲೆ ಮಾತನಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : Introduction ಮಾಡುವುದಕ್ಕೆ ನನ್ನದೇನೂ ತಕರಾರು ಇಲ್ಲ. GST ಪರ್ಯಾಲೋಚನೆಯ ಮೇಲೆ ಚರ್ಚೆ ಪ್ರಾರಂಭವಾಯಿತೆಂದರೆ . . .

ಅಧ್ಯಕ್ಷರು : ಇನ್ನು ಪ್ರಾರಂಭವಾಗಿರುವುದಿಲ್ಲ. ಪ್ರಾರಂಭವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯಮಂತ್ರಿಯವರು insist ಮಾಡುತ್ತಿದ್ದಾರೆ. ಅದಕ್ಕೆ ಹೇಳುತ್ತಿರುವುದು.

ಅಧ್ಯಕ್ಷರು : ಈಗ ಪ್ರಾರಂಭವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಏಕೆಂದರೆ ನಾನು ಮಧ್ಯಾಹ್ನದ ಮೇಲೆ ಇರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಹಾಗಾದರೆ ನಾಳೆ ತೆಗೆದುಕೊಳ್ಳಿ. ಇನ್ನು ಬೇಕಾದಷ್ಟು time ಇದೆ.

ಶ್ರೀ ಸಿದ್ಧರಾಮಯ್ಯ : I have no objection. Because, ಈ ಬಿಲ್ ಅನ್ನು ಬೇಗ ಕಳುಹಿಸಿಕೊಡಬೇಕು.

ತಿದ್ದುಪಡಿಯಾಗದ ಮತ್ತು uncorrected copy ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್ : ನಾಳೆ ತೆಗೆದುಕೊಳ್ಳಿ. ನಾವು ಬಹಳಷ್ಟು ಚರ್ಚೆ ಮಾಡುವುದಿಲ್ಲ. ಕೆಲವರು ಚರ್ಚೆ ಮಾಡುವವರಿರುವುದರಿಂದ ಅವರು ಮಾಡಲಿ. ಹಾಗಾಗಿ ನಾಳೆ ತೆಗೆದುಕೊಳ್ಳಿ.

SRI SIDDARAMAIAH : I have no objection to participate in the discussion. But there is no much scope for discussion ಅಷ್ಟೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಏಕೆಂದರೆ ನಾನು ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ತಯಾರಾಗಿ ಬಂದಿರುತ್ತೇನೆ.

ಅಧ್ಯಕ್ಷರು : ಒಂದು ನಿಮಿಷ ತಾಳಿ. ನಾನು conclude ಮಾಡುತ್ತೇನೆ. ಇನ್ನು ಮೂರು ವಿಧೇಯಕಗಳು ಮಂಡಿಸಬೇಕಾಗಿದೆ. ಮಂಡಿಸಿದ ಕೂಡಲೇ ಪರ್ಯಾಲೋಚನೆಗೆ ತೆಗೆದುಕೊಳ್ಳೋಣ. ಆ ನಂತರ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಪರ್ಯಾಲೋಚನೆ ಅಂದರೆ ಹಾಗೆಯೇ. ನಿನ್ನೆ ನೀವು ಪ್ರಶ್ನೋತ್ತರ ಅವಧಿ ಮುಗಿದ ಕೂಡಲೇ demands ಮೇಲೆ ಚರ್ಚೆ ಮಾಡಿ ಎಂದು promise ಮಾಡಿದಿರಿ. ಒಂದು ಸಾರಿ ಜಿ.ಎಸ್.ಟಿ. ಬಿಲ್ ಮೇಲೆ debate ಪ್ರಾರಂಭ ಆದರೆ there will be no end at all. ಆಗ demands ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವೇ ಸಿಗುವುದಿಲ್ಲ.

SRI SIDDARAMAIAH : There will be an end. No end ಅಲ್ಲ, there will be an end.

ಶ್ರೀ ಜಗದೀಶ್ ಶೆಟ್ಟರ್ : ಹಾಗಾಗಿ ಜಿ.ಎಸ್.ಟಿ. ಬಿಲ್ಲನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಇದರಲ್ಲಿ ನನ್ನದೇನು ತಕರಾರಿಲ್ಲ ಮಾನ್ಯ ಅಧ್ಯಕ್ಷರೆ. ನಾಳೆ ನನಗೆ ಮೇಲ್ಮನೆಯಲ್ಲಿ questions ಇದ್ದು, ಅಲ್ಲಿ ಹೋಗಿ ಬಂದ ನಂತರ ಮಾತನಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಹಾಗಾದರೆ ನಾಳೆ ಮಧ್ಯಾಹ್ನ ತೆಗೆದುಕೊಳ್ಳೋಣ. ಪಾಸ್ ಆಗುವುದು ಅಷ್ಟೇ ಅಲ್ಲವೇ?

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಸಿದ್ದರಾಮಯ್ಯ : ಆಯಿತು. ನಾಳೆ ಅಲ್ಲಿಂದ ಪ್ರಶ್ನೋತ್ತರ ಅವಧಿ ಮುಗಿಸಿಕೊಂಡು ಬಂದ ಮೇಲೆ ತೆಗೆದುಕೊಳ್ಳೋಣ. ಇಲ್ಲಿಯೂ ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ತೆಗೆದುಕೊಳ್ಳೋಣ. With this agreement.

ಅಧ್ಯಕ್ಷರು : ಹಾಗಾದರೆ ಜಿ.ಎಸ್.ಟಿ. ಬಿಲ್ಲನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಈಗ ಮಂಡಿಸುವುದಾದರೆ ಮಂಡಿಸಿ.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ. ಈಗ ಬಸವರಾಜ ರಾಯರೆಡ್ಡಿ ಅವರು ವಿಧೇಯಕಗಳನ್ನು ಮಂಡಿಸುವುದು.

**ಶಾಸನ ರಚನೆ**

**ವಿಧೇಯಕಗಳ ಮಂಡನೆ**

**ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ 2017**

**(ಮಂಡನೆಗೆ ಅನುಮತಿ ಕೋರಿಕೆ)**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):** ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು. ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ, 2017ನೇ ಸಾಲಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿಯನ್ನು ನೀಡಬೇಕು.

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

14-06-2017

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಅಧ್ಯಕ್ಷರು : ಮಾನ್ಯ ಸಚಿವರು ವಿಧೇಯಕ ಮಂಡಿಸುವುದು.

ಶ್ರೀ ಬಸವರಾಜ ರಾಯರೆಡ್ಡಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಯಿತು.

(ಅನುಬಂಧ-3)

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

**ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ 2017**

**(ಮಂಡನೆಗೆ ಅನುಮತಿ ಕೋರಿಕೆ)**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):** ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು. ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ, 2017ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿಯನ್ನು ನೀಡಬೇಕು.

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಅಧ್ಯಕ್ಷರು : ಮಾನ್ಯ ಸಚಿವರು ವಿಧೇಯಕ ಮಂಡಿಸುವುದು.

ಶ್ರೀ ಬಸವರಾಜ ರಾಯರೆಡ್ಡಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಯಿತು.

(ಅನುಬಂಧ-4)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

## 14-06-2017

## ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕ 2017

## (ಮಂಡನೆಗೆ ಅನುಮತಿ ಕೋರಿಕೆ)

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):** ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು. ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ, 2017ನೇ ಸಾಲಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿಯನ್ನು ನೀಡಬೇಕು.

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಘೋಷಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಅಧ್ಯಕ್ಷರು : ಮಾನ್ಯ ಸಚಿವರು ವಿಧೇಯಕ ಮಂಡಿಸುವುದು.

ಶ್ರೀ ಬಸವರಾಜ ರಾಯರೆಡ್ಡಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಯಿತು.

(ಅನುಬಂಧ-5)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

**ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ 2017**

**(ಮಂಡನೆಗೆ ಅನುಮತಿ ಕೋರಿಕೆ)**

**ಡಾ. ಶರಣಪ್ರಕಾಶ್ ಆರ್. ಪಾಟೀಲ್ ( ವೈದ್ಯಕೀಯ ಶಿಕ್ಷಣ ಸಚಿವರು):** ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು. ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ, 2017ನೇ ಸಾಲಿನ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿಯನ್ನು ನೀಡಬೇಕು.

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಅಧ್ಯಕ್ಷರು : ಮಾನ್ಯ ಸಚಿವರು ವಿಧೇಯಕ ಮಂಡಿಸುವುದು.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಡಾ. ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಯಿತು.

(ಅನುಬಂಧ-6)

**ವಿತ್ತೀಯ ಕಾರ್ಯಕಲಾಪಗಳು**

**2017-18ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ**

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ. ಶ್ರೀ ಜಗದೀಶ್ ಶೆಟ್ಟರ್ ಅವರು ಮಾತನಾಡುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ನಾನು ಚರ್ಚೆ ಮಾಡುತ್ತಿರುವ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರು Chairನಲ್ಲಿದ್ದರು. ನಾಳೆ continue ಮಾಡಿ ಎಂದು ಹೇಳಿದ್ದರು.

ಅಧ್ಯಕ್ಷರು : Continue ಮಾಡಿ, ಬೇಡ ಎಂದು ಹೇಳುವುದಿಲ್ಲ. ಈಗಾಗಲೇ ಎರಡು ಬೇಡಿಕೆಗಳ ಮೇಲೆ ಪೂರ್ಣ ಮಾತನಾಡಿರುತ್ತೀರಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಎಷ್ಟೇ ಬೇಡಿಕೆಗಳ ಮೇಲೆ ಮಾತನಾಡಿದರೂ, ನಾನು ಮಾತನಾಡಿರುವುದು ಅಪೂರ್ಣಗೊಂಡಿರುತ್ತದೆ.

ಅಧ್ಯಕ್ಷರು : ತಾವು ನನಗೆ ಮಾತನಾಡುವುದಕ್ಕೆ ಇನ್ನೂ ಸ್ವಲ್ಪ ಅವಕಾಶ ಕೊಡಬೇಕೆಂದು ಕೇಳಿದಿರಿ. ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಅವಕಾಶ ಅಲ್ಲ. ನಿನ್ನೆ ಮಾನ್ಯ ಉಪಾಧ್ಯಕ್ಷರು ನಾಳೆ ಮುಂದುವರೆಸಿ ಎಂದು ಹೇಳಿದ್ದರು. ಬೇಕಾದರೆ ದಾಖಲಾತಿ ತೆಗೆದುನೋಡಿ. ಮುಂದುವರೆಸಿ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಮುಂದುವರೆಸಿ ಎಂದು ಹೇಳಿದ್ದರೆ, ಅವರಿಗೆ ಅವಕಾಶ ಕೊಡಬೇಕಾಗುತ್ತದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್ : ನಾನು ಮಾತನಾಡುವುದು ಬೇಡ ಎಂದರೆ ಬೇಡ. ನಿನ್ನೆಯೂ ಅದೇ ರೀತಿ ಆಯಿತು.

ಅಧ್ಯಕ್ಷರು : ಶೆಟ್ಟರ್ ಅವರೆ, ಬೇಡ ಎಂದು ಹೇಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : Leader of the Opposition ಅವರಿಗೆ ಈ ಪರಿಸ್ಥಿತಿ ಆದರೆ ಹೇಗೆ? ಆಮೇಲೆ ಅವಕಾಶ ಕೊಡಿ ಬೇಡ ಎಂದು ಹೇಳುವುದಿಲ್ಲ.

ಅಧ್ಯಕ್ಷರು : ಬೇಡಿಕೆಗಳ ಮೇಲೆ ಮುಂದುವರೆಸಿ ಎಂದು ನಿನ್ನೆಯೇ ಆದೇಶವಾಗಿದೆಯೆಂದು ಅವರು ಹೇಳುತ್ತಿದ್ದಾರೆ. ಏನಾಗಿದೆಯೆಂದು ನೋಡಿ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಅವರು ಇನ್ನೂ 2-3 ಇಲಾಖೆಯ ಮೇಲೆ ಮಾತನಾಡಬೇಕೆಂದು ಹೇಳಿದಾಗ ಮತ್ತೊಂದು ಸಾರಿ ಅವಕಾಶ ಕೊಡುತ್ತೇನೆಂದು ಹೇಳಿದಿರಿ.

ಅಧ್ಯಕ್ಷರು : ನಿನ್ನೆ ಅವರು ಮಾತನಾಡುವ ಸಂದರ್ಭದಲ್ಲಿ ನಾನು ಇರಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಾನು ಮಾತನಾಡಿರುವುದಿಲ್ಲ. ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಮೊದಲು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಆದರೆ ನನಗೆ ಅವಕಾಶ ಕೊಡುವುದಿಲ್ಲವೇ?

ಅಧ್ಯಕ್ಷರು : ಅವರು ಮಾತನಾಡಿ ಮುಗಿದ ಕೂಡಲೇ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಿನ್ನೆ ನಾನು ಅರ್ಧಕ್ಕೆ ನಿಲ್ಲಿಸಿರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : Speaker ಅವರು ಅವಕಾಶ ಕೊಟ್ಟರೆ ಮಾತನಾಡುತ್ತೇನೆ. ನಾನು ರೆಡಿಯಿದ್ದೇನೆ.

ಅಧ್ಯಕ್ಷರು : ಗೌಡರೆ, ಅವರು ಮಾತನಾಡಿ ಮುಗಿಸಿದ ಕೂಡಲೇ ಅವಕಾಶ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಶಿವಲಿಂಗೇ ಗೌಡರೆ, ನಾಳೆ, ನಾಳಿದ್ದು ಬೇಕಾದಷ್ಟು ಮಾತನಾಡಿ. ನೀವು ಬೇಡ ಎಂದರೆ ಬಿಟ್ಟು ಬಿಡುತ್ತೇನೆ.

ಅಧ್ಯಕ್ಷರು : ಶಿವಲಿಂಗೇ ಗೌಡರೆ, ಅವರು ಮಾತನಾಡಿ ಮುಗಿದ ಕೂಡಲೇ ನಿಮಗೆ ಅವಕಾಶ ಕೊಡುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅವಕಾಶ ಕೊಡುವುದಲ್ಲ. ಹಾಗಾದರೆ ನಾವು ಮಾತನಾಡುವುದು ಬೇಡವೇ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮೊದಲು ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಶಿವಲಿಂಗೇಗೌಡರೆ please co-operate ಮಾಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಿನ್ನೆ ನಾಳೆ ಬೆಳಿಗ್ಗೆ continue ಮಾಡಿ ಎಂದು ಹೇಳಿರುವುದನ್ನು ಅಧ್ಯಕ್ಷ ಪೀಠದಿಂದ ವಾಪಸ್ಸು ತೆಗೆದುಕೊಳ್ಳಲಿ. ಆಗ ಸುಮ್ಮನೆ ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು : ಅವರು ಮುಂದುವರೆಸಲಿ ಎನ್ನುವ ಬಗ್ಗೆ ರೆಕಾರ್ಡ್ ಇದೆ ಎಂದು ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಟೆಕ್ನಿಕಲಿ ಮಾಡುವುದಾದರೆ ಮಾಡಿ ನನ್ನದೇನೂ ತೊಂದರೆಯಿಲ್ಲ.

(ಗೊಂದಲ)

ಅಧ್ಯಕ್ಷರು : One should co-operate with each other. ನೀವಾದರೂ co-operate ಮಾಡಬೇಕು ಅಥವಾ ಅವರಾದರೂ co-operate ಮಾಡಬೇಕು.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರು ನಿನ್ನೆ ಹೇಳಿರುವಂತಹ ಮಾತನ್ನು ವಾಪಸ್ಸು ತೆಗೆದುಕೊಳ್ಳಲಿ, ನಾನು ಕುಳಿತುಕೊಳ್ಳುತ್ತೇನೆ. ನನ್ನದೇನೂ ಅಭ್ಯಂತರವಿಲ್ಲ.

(ಗೊಂದಲ)

ಅಧ್ಯಕ್ಷರು : ನಿನ್ನೆ ಅವರಿಗೆ ನಾಳೆ ಮುಂದುವರೆಸಿ ಎಂದು ಹೇಳಿದ್ದಾರೆ. ಉಪಾಧ್ಯಕ್ಷರು ಪೀಠದಲ್ಲಿದ್ದರು. ಹಾಗಾಗಿ ಅವರು ಮುಂದುವರೆಸುತ್ತೇನೆಂದು ಹೇಳುತ್ತಿದ್ದಾರೆ. ಯಾರಾದರೊಬ್ಬರು co-operate ಮಾಡಿ.

ಶ್ರೀ ಸಿದ್ದರಾಮಯ್ಯ : ನೀವು ಎಷ್ಟು ಹೊತ್ತು ಮಾತನಾಡುತ್ತೀರಿ?

14-06-2017

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾಯಕರೇ ಈ ರೀತಿ ಹೇಳಿದರೆ ಹೇಗೆ?

ಅಧ್ಯಕ್ಷರು : ನಿಮಗೆ ಮಾತನಾಡುವುದಕ್ಕೆ ಎಷ್ಟು ಸಮಯ ಬೇಕು? ಸದನ ನಡೆಸಬೇಕಲ್ಲವೇ ಶಿವಲಿಂಗೇಗೌಡರೆ?

ಶ್ರೀ ಸಿದ್ಧರಾಮಯ್ಯ : ನಿನ್ನೆ ಒಂದು ಗಂಟೆಗಳ ಕಾಲ ಮಾತನಾಡಿದ್ದೀರಿ. ಇನ್ನು ನೀವು ಎಷ್ಟು ಮಾತನಾಡಬೇಕು?

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾತನಾಡುವ ಸಮಯದಲ್ಲಿ ಮಾತನಾಡಿದ್ದೇನೆ. ನಾನೇದರೂ ತಪ್ಪು ಮಾತನಾಡಿದ್ದೇನೆಯೇ?

ಶ್ರೀ ಸಿದ್ದರಾಮಯ್ಯ : ನೀನು ಬಹಳ ಕರೆಕ್ಟ್ ಆಗಿ ಮಾತನಾಡುತ್ತೀಯಪ್ಪಾ! ಇನ್ನೊಂದಷ್ಟು prepare ಆಗಿ ನಾಳೆ ಪುನ: ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಈ ರೀತಿಯಾದರೆ ನನ್ನ ಹಕ್ಕನ್ನು ಕಿತ್ತುಕೊಂಡ ಹಾಗೇ ಆಯಿತು.

ಶ್ರೀ ಸಿದ್ದರಾಮಯ್ಯ : ಶಿವಲಿಂಗೇ ಗೌಡರೆ, ಇನ್ನೊಂದಷ್ಟು prepare ಆಗಿ ನಾಳೆ ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇದು ಸಂವಿಧಾನದ ಸಂಪ್ರದಾಯವನ್ನು ಬದಲಾಯಿಸಿದಂತೆ ಆಗಿಲ್ಲವೇ?

ಶ್ರೀ ಸಿದ್ದರಾಮಯ್ಯ : ನಾಳೆ ಇನ್ನೊಂದಷ್ಟು ಪ್ರಿಪೇರ್ ಆಗಿ ಮಾತನಾಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಮತ್ತು ನಾವೆಲ್ಲರೂ request ಮಾಡುತ್ತಿದ್ದೇವೆ. ಹಾಗಾಗಿ ನೀವು please co-operate ಮಾಡಿ.

ಅಧ್ಯಕ್ಷರು : ನಿಮಗೆ ಪುನ: ಮಾತನಾಡುವುದಕ್ಕೆ ಹೆಚ್ಚು ಸಮಯ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : The practice is, ಯಾವಾಗಲೂ Leader of the Opposition ಅವರು ಮಾತನಾಡುತ್ತೇನೆಂದರೆ ಅವರಿಗೆ first priority ಕೊಡಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ : Priority ಕೊಡಿ, ಬೇಡ ಎಂದು ಹೇಳುವುದಿಲ್ಲ. ವಿರೋಧ ಪಕ್ಷದ ನಾಯಕರ ಘನತೆ ಏನು ಎನ್ನುವುದೆಲ್ಲವನ್ನು ತಿಳಿದುಕೊಂಡಿದ್ದೇನೆ. ಆದರೆ ಮುಂದುವರೆಸಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಎಂದು ಹೇಳಿರುವುದಕ್ಕೆ ಹೇಳುತ್ತಿದ್ದೇನೆ. ಹಾಗಾಗಿ ಅದನ್ನು ವಾಪಸ್ಸು ತೆಗೆದುಕೊಂಡು ನಾಳೆ ಮಾತನಾಡಿ ಎಂದು ಆದೇಶ ಮಾಡಿ.

(ಗೊಂದಲ)

ಅಧ್ಯಕ್ಷರು : ಟೆಕ್ನಿಕಲಿ ಹೋಗುವುದು ಬೇಡ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : Technically you are right.

ಅಧ್ಯಕ್ಷರು : ಟೆಕ್ನಿಕಲಿ ತಾವು ಮುಂದುವರೆಸಿ ಎಂದು ಹೇಳಿರುವುದು ಸರಿ. ಆದರೆ Leader of the Opposition ಅವರು ಎದ್ದು ಮಾತನಾಡುತ್ತೇನೆಂದಾಗ ಅವಕಾಶ ಮಾಡಿಕೊಡೋಣ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅವಕಾಶ ಮಾಡೋಣ. ಆದರೆ ಶಿವಲಿಂಗೇಗೌಡ ಅವರಿಗೆ ಅವಕಾಶ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಂಡಿದ್ದೇನೆಂದು ಹೇಳಿ.

ಅಧ್ಯಕ್ಷರು : ಆ ರೀತಿ ಹೇಳುವುದು ಬೇಡ, ಅದು ರೆಕಾರ್ಡ್‌ಗೆ ಹೋಗುವುದು ಬೇಡ. ನಿಮಗೆ ಹೆಚ್ಚಿನ ಅವಕಾಶವನ್ನು ಕೊಡುತ್ತೇನೆ. ಜಗದೀಶ್ ಶೆಟ್ಟರ್ ಅವರೆ ಪ್ರಾರಂಭ ಮಾಡಿ.

(ಮುಂದು . . .)

ವಿ.ಸ.:14.06.2017.12.00.(10).ಜಿಎಂ.ಹೆಚ್ಎಸ್.

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಿನ್ನೆಯೇ ನಾನು ಈ demands ಮೇಲೆ ಮಾತನಾಡಬೇಕೆಂದು ಅಂದುಕೊಂಡಿದ್ದೆನು. ಆದರೆ, ಮತ್ತೆ ಬೇರೆ debate ನಡೆದಿದ್ದರಿಂದ ಮಾತನಾಡುವುದಕ್ಕೆ ಆಗಲಿಲ್ಲ. ಹೀಗಾಗಿ, ತಾಂತ್ರಿಕ ವಿಚಾರಗಳ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಉಳಿದೆಲ್ಲಾ ಶಾಸಕರಿಗೂ ಇಲ್ಲಿ ಮಾತನಾಡುವುದಕ್ಕೆ ಅವಕಾಶವಿದೆ. ಅದಕ್ಕಾಗಿ ಎಲ್ಲರೂ demands ಮೇಲಿನ ಚರ್ಚೆಯಲ್ಲಿ participate ಆಗಿ ಹಲವಾರು ವಿಚಾರಗಳ ಬಗ್ಗೆ ಸದನದ ಗಮನಕ್ಕೆ ತರಬೇಕೆನ್ನುವುದು ನನ್ನ ಅಭಿಲಾಷೆ ಕೂಡಾ ಆಗಿದೆ.

ಅಧ್ಯಕ್ಷರು: ಇನ್ನೂ ಮೂರು ದಿವಸಗಳವರೆಗೆ ಸಮಯವಿದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್: ಇನ್ನೂ 3 ದಿವಸಗಳವರೆಗೆ ಸಮಯವಿದೆ. ಆ ದೃಷ್ಟಿಯಿಂದ ಇವತ್ತೇನು ಬೇಡಿಕೆಗಳ ಮೇಲೆ ಚರ್ಚೆ ನಡೆದಿದೆ ಮತ್ತು ಈ ಬಾರಿ ಏನು ಸಮಸ್ಯೆಯಾಗಿದೆಯೆಂದರೆ ನಾನು ಬಿಎಸಿ ಮೀಟಿಂಗ್‌ನಲ್ಲಿಯೇ ಹೇಳಿದ್ದೆನು. ಏನೆಂದರೆ, ಇವತ್ತು ಎಲ್ಲಾ ಇಲಾಖೆಗಳನ್ನು ಒಂದೇ ಅಡಿಯಲ್ಲಿ ತೆಗೆದುಕೊಂಡು ಬಂದಿರುವುದರಿಂದ ಇಷ್ಟೆಲ್ಲಾ ಸಮಸ್ಯೆಗಳಾಗುತ್ತಿದೆ. ಬಹುಶ: ಎರಡು, ಮೂರು, ನಾಲ್ಕು ವಿಷಯಗಳನ್ನು, ಇಲಾಖೆಗಳನ್ನು ಗ್ರೂಪ್ ಮಾಡಿ ತೆಗೆದುಕೊಂಡು ಬಂದಿದ್ದರೆ ಆಗ ನಾವು ಎರಡು ಇಲಾಖೆಗಳ ಬಗ್ಗೆ ಮಾತನಾಡುತ್ತಿದ್ದೆವು. ಮತ್ತೊಬ್ಬರು ಶಾಸಕರು ಮಾತನಾಡುತ್ತಿದ್ದರು. ಆದಾದ ನಂತರ ಸಂಬಂಧಪಟ್ಟ ಸಚಿವರು ಉತ್ತರ ಕೊಟ್ಟ ಮೇಲೆ, ನಂತರ next groupನಿಂದ ಚಾಲೂ ಆಗುತ್ತಿತ್ತು. ಈ ರೀತಿಯಾದ ಒಂದು ವ್ಯವಸ್ಥೆಯಿತ್ತು. ಆದರೆ, ಇವತ್ತು ಎಲ್ಲವನ್ನೂ ಒಟ್ಟಿಗೆ ತಂದಿರುವುದರಿಂದ, ನಾವು ಇವತ್ತು ಯಾವ ಇಲಾಖೆ ಬಗ್ಗೆ ಮಾತನಾಡಬೇಕು, ಯಾವುದಕ್ಕೆ ಆದ್ಯತೆ ಕೊಡಬೇಕು ಎಂದು ನಮ್ಮಲ್ಲಿಯೇ ವಿಶ್ಲೇಷಣೆ ಚಾಲೂ ಆಯಿತು. ಹೀಗಾಗಿ, ನಾನಾದರೂ ಮೊನ್ನೆನೂ ಸಹ ತಮ್ಮ ಛೇಂಬರ್‌ನಲ್ಲಿ request ಮಾಡಿದ್ದೇನೆ. ಕೆಲವೊಂದು ಇಲಾಖೆಗಳ ಬೇಡಿಕೆಗಳ ಮೇಲೆ ನಾನು ಮಾತನಾಡುತ್ತೇನೆ. ಮತ್ತೆ ಯಾವುದಾದರೊಂದು ಇಲಾಖೆ ಉಳಿದರೆ ಮತ್ತೊಂದು ಬಾರಿ ಅವಕಾಶ ಕೊಡಿ ಎಂದು ನಾನು ತಮ್ಮಲ್ಲಿ ಮನವಿ ಮಾಡಿದ್ದೇನೆ. ಹೀಗಾಗಿ ಕೆಲವೊಂದು ಪ್ರಮುಖವಾದ ನೀರಾವರಿ ಇಲಾಖೆ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಆಡಳಿತ ವ್ಯವಸ್ಥೆ ಬಗ್ಗೆ ಕೆಲವೊಂದು ವಿಚಾರಗಳನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಕಂದಾಯ ಇನ್ನಿತರೆ ಕೆಲವೊಂದು ಇಲಾಖೆಗಳ ಬಗ್ಗೆ ಮಾತನಾಡಲು ಮತ್ತೊಂದು ಬಾರಿ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ರಾಜ್ಯದಲ್ಲಿ ಇರುವಂಥ ಸರ್ಕಾರದಿಂದ ಯಾವ ರೀತಿ ಆಡಳಿತ ನಡೆಯುತ್ತಿದೆ ಎನ್ನುವುದಕ್ಕೆ ಕೆಲವೊಂದು ಉದಾಹರಣೆಗಳನ್ನು ನಾನು ಕೊಡುತ್ತಿದ್ದೇನೆ. ನಿನ್ನೆಯ ಪತ್ರಿಕೆಯಲ್ಲಿ ಬಂದಂಥ ಹೈಕೋರ್ಟ್‌ನ ಒಂದು observationನ್ನು ನಾನು ನೋಡಿದ್ದೇನೆ.

"ಸರ್ಕಾರಕ್ಕೆ ಆಡಳಿತ ನಡೆಸಲು ಬರುವುದಿಲ್ಲ." "ರಾಜ್ಯ ಸರ್ಕಾರಕ್ಕೆ ಆಡಳಿತ ನಡೆಸಲು ಬರುವುದಿಲ್ಲವೆಂದು ಹೈಕೋರ್ಟ್ ಛೀಮಾರಿ ಹಾಕಿದೆ."

'ಅದರಲ್ಲಿ ಒಬ್ಬ ನೌಕರನನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆ ಮಾಡಿದ ಮೇಲೆ ಆ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರನಿಗೆ ತಕ್ಷಣವೇ ಜಾಗ ತೋರಿಸಲು ಸರ್ಕಾರಕ್ಕೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

14-06-2017

ಏನು ಕಷ್ಟ ಎಂದು ನ್ಯಾಯಮೂರ್ತಿಗಳು ಕಿಡಿಕಾರಿದರು'. ರಾಜ್ಯದ ಶ್ರೇಷ್ಠ ನ್ಯಾಯಾಲಯ ಇವತ್ತು ಒಂದು observation ಮಾಡಿದೆ. ಒಂದು question ಮಾಡಿದೆ. ಸರ್ಕಾರದ ಆಡಳಿತ ಹೇಗೆ ನಡೆಯುತ್ತಿದೆ ಎನ್ನುವುದಕ್ಕೆ ಈ ರೀತಿಯಾದ ಒಂದು observation ಮಾಡಿದಾಗ, ಇದು ಒಂದು ಸರ್ಕಾರದ ಆಡಳಿತಕ್ಕೆ ಹಿಡಿದ ಒಂದು ಕನ್ನಡಿ ಎಂದು ನಾನು ಹೇಳುತ್ತಿದ್ದೇನೆ.

ಇದರ ಜೊತೆಗೆ ಯಾವುದೇ ಸಮಸ್ಯೆಗಳು ಬಂದಾಗ ಸರ್ಕಾರ ಅಥವಾ ಸಚಿವರು, ಮುಖ್ಯಮಂತ್ರಿಗಳಾಗಲಿ ಅಥವಾ ಸಂಬಂಧಪಟ್ಟ ಸಚಿವರಾಗಲಿ ಒಂದು promise ಮಾಡಿದಾಗ, ಅದಕ್ಕೆ ತಕ್ಷಣವೇ ಸ್ಪಂದನೆ ಮಾಡದೇ ಇದ್ದಾಗ ಏನು ಅನಾಹುತಗಳು ಆಗುತ್ತದೆ ಎನ್ನುವುದಕ್ಕೆ, ಅಧಿಕಾರಿಗಳು ಯಾವ ರೀತಿ ಅಸಡ್ಡೆಯಿಂದ ನಡೆದುಕೊಳ್ಳುತ್ತಾರೆ ಎನ್ನುವುದಕ್ಕೆ ಇಲ್ಲಿ ಒಂದು ಉದಾಹರಣೆಯನ್ನು ಕೊಡುತ್ತೇನೆ. ಇತ್ತೀಚೆಗೆ ಬೆಂಗಳೂರಿನಲ್ಲಿ ರಾಜಕಾಲುವೆಯಲ್ಲಿ ಒಬ್ಬ ಕಾರ್ಮಿಕ, ಕುರುಬರಹಳ್ಳಿ ಜೆ.ಸಿ.ನಗರದ ರಾಜಕಾಲುವೆಯಲ್ಲಿ 'ಶಾಂತಕುಮಾರ್' ಎನ್ನುವ ಒಬ್ಬ ಕಾರ್ಮಿಕ ಹೆಚ್ಚಿನ ಮಳೆ ಬಂದಂಥ ಸಂದರ್ಭದಲ್ಲಿ ಆ ರಾಜಕಾಲುವೆಯಲ್ಲಿ ಕೊಚ್ಚಿಕೊಂಡು ಹೋಗುತ್ತಾನೆ. ಕೊಚ್ಚಿಕೊಂಡು ಹೋಗಿ ಬಹುಶ: ಇವತ್ತಿಗೆ 25 ರಿಂದ 28 ದಿವಸಗಳಾಗಿದೆ. ಇನ್ನೂವರೆಗೂ ಆತನ body ಸಿಕ್ಕಿಲ್ಲ. ಆತ ಕೊಚ್ಚಿಕೊಂಡು ಹೋಗಿಬಿಟ್ಟಿದ್ದಾನೆ. Body ಎಲ್ಲಿ ಹೋಯಿತು, ಏನು ಎನ್ನುವುದಕ್ಕೆ ಇವತ್ತು ಬಿಬಿಎಂಪಿಯವರಾಗಲಿ, ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಲಿ ಮುತುವರ್ಜಿ ವಹಿಸಿ ಎಲ್ಲಾ ರೀತಿಯಾದ ಪ್ರಯತ್ನ ಮಾಡಿದ್ದಾಗ್ಯೂ ಸಹಿತ ಆ body ಸಿಗಲಿಲ್ಲ. ರಾಜಕಾಲುವೆಯ ಪ್ರವಾಹದಲ್ಲಿ body ಕೊಚ್ಚಿಕೊಂಡು ಹೋಗಿಬಿಟ್ಟಿದೆ. ಆದರೆ, ಏನಾಗಿದೆಯೆಂದರೆ, ತಕ್ಷಣವೇ ಅವರ ಕುಟುಂಬ ವರ್ಗಕ್ಕೆ ಅಲ್ಲಿ ಉಸ್ತುವಾರಿ ಇದ್ದಂಥ ಸಚಿವರು, ಮೇಯರ್‌ರವರು ಹೋಗಿ 10 ಲಕ್ಷ ರೂಪಾಯಿಗಳ ಪರಿಹಾರಧನವನ್ನು ಘೋಷಣೆ ಮಾಡುತ್ತಾರೆ. ಆತ ಕೊಚ್ಚಿಕೊಂಡು ಹೋಗಿ ಈಗಾಲೇ 25 ರಿಂದ 30 ದಿವಸಗಳಾಗಿದೆ. ಪರಿಹಾರ ಘೋಷಣೆ ಆಯಿತು. ಆದರೆ, ಆ ಪರಿಹಾರದ ಹಣ ಆ ಕುಟುಂಬಕ್ಕೆ, ಆತನ ಹೆಂಡತಿಗೆ ಮುಟ್ಟಲಿಲ್ಲ. ಅದಕ್ಕಾಗಿ ಆತನ ಧರ್ಮಪತ್ನಿ ಹೋಗಿ ಕೇಳಿದರೆ ಏನು ಉತ್ತರ ಕೊಡುತ್ತಾರೆ ಎನ್ನುವುದು, ಅದನ್ನು ನೋಡಿದರೆ ಮನಸ್ಸಿಗೆ ಬಹಳ ಮರುಕ ಹುಟ್ಟುವಂಥದ್ದು; Indian Expressನಲ್ಲಿ front pageನಲ್ಲಿ ಒಂದು article ಬಂದಿತು. ಅಲ್ಲಿನ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಆತನ ಹೆಂಡತಿ ಹೋದಾಗ ಅವರು ಕೇಳುತ್ತಾರೆ, "Bring husband's

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

body, then take money. Officers tell wife of worker who drowned". ಎಂದರೆ ಯಾವ ರೀತಿ ಹೃದಯ ವಿದ್ರಾವಕವಾದ ಘಟನೆ ನಡೆದಿದೆ, ಅದರ ಬಗ್ಗೆ ಈ ರೀತಿ hurt ಆಗುವಂಥ statement ಕೊಟ್ಟಿರುವುದನ್ನು ನೋಡಿದರೆ, ಯಾವ ವ್ಯವಸ್ಥೆಯಿದೆ, ಸರ್ಕಾರದ ಅಧಿಕಾರಿಗಳು ಯಾವ ರೀತಿ ಹೇಳುತ್ತಿದ್ದಾರೆ ಎನ್ನುವುದು ತಿಳಿಯುತ್ತದೆ. ಇಲ್ಲಿ ನೋಡಿ, "Saraswathi is still numb from the tragedy of losing her husband Shanthakumar, a 34 years old JCB operator, who was washed away while repairing a drain in Kurubarahalli on May 20. The body was never found. The 24 years old mother of two young sons is now confronting another tragedy, official callousness. BBMP officials responsible for handling over the promised compensation have put forth a condition before Saraswathi - First produce Shanthakumar's body as proof of death, then claim the money. Bring your husband's body and then take compensation. If you want immediate compensation come along with the area MLA and take Rs. One lakh." ಈ ರೀತಿಯಾದಂಥ ಒಂದು ಹೇಳಿಕೆಯಿಂದ ಯಾವ ರೀತಿ ಅವಳ ಮನಸ್ಸಿಗೆ ಆಘಾತ ಉಂಟು ಮಾಡುತ್ತದೆ ಎನ್ನುವುದನ್ನು ದಯವಿಟ್ಟು ತಾವು ವಿಚಾರ ಮಾಡಿ. ಈ ರೀತಿಯಾದ ಒಂದು ವ್ಯವಸ್ಥೆ, ಇದರಿಂದ ಇವತ್ತಿಗೂ ಸಹ,... ಮೇ 20ಕ್ಕೆ ಆತ ಕಳೆದು ಹೋಗಿದ್ದಾನೆ. ಆದರೆ, ಇನ್ನೂವರೆಗೂ ಆ ಪರಿಹಾರಧನ ಅವಳಿಗೆ ಸಿಗಲಿಲ್ಲ. ಎಂದರೆ ಯಾವ ರೀತಿಯಾದ ಘಟನೆ ಇವತ್ತು ನಡೆಯುತ್ತಿದೆ, ಯಾವ ವ್ಯವಸ್ಥೆಯಲ್ಲಿ ಇವತ್ತು ಸರ್ಕಾರ ಇದೆ ಎನ್ನುವುದಕ್ಕೆ ಇದೊಂದು ಉದಾಹರಣೆಯನ್ನು ನಾನು ಕೊಡುತ್ತಿದ್ದೇನೆ.

14-06-2017

ಇದರ ಜೊತೆಗೆ ಇವತ್ತು ನಾವು demands ಮೇಲೆ ಚರ್ಚೆ ಮಾಡುತ್ತೇವೆ. ಬೇರೆ ಬೇರೆ ಇಲಾಖೆಗಳ ಬಗ್ಗೆ ನಾವು ಚರ್ಚೆ ಮಾಡುತ್ತೇವೆ. ಆದರೆ, ಇವತ್ತು ಯಾರು ಬಡವರಿದ್ದಾರೆ, ರಾಜ್ಯದ ಮುಖ್ಯಮಂತ್ರಿಗಳಾಗಲಿ, ಮಂತ್ರಿಗಳಾಗಲಿ ಒಟ್ಟಾರೆ ಈ ಸರ್ಕಾರ ಹೇಳುವುದು ನಾವು ಬಡವರ ಪರವಾಗಿ ಇದ್ದೇವೆ. ಹಿಂದುಳಿದ ವರ್ಗದವರ ಪರವಾಗಿ ಇದ್ದೇವೆ. ಇದನ್ನು ಬೆಳಗ್ಗೆಯಿಂದ ಸಾಯಂಕಾಲದವರೆಗೂ ಹೇಳುತ್ತಾರೆ. ಆದರೆ, ಬೇರೆ ಬೇರೆ ಇಲಾಖೆಗಳಲ್ಲಿ ಏನು beneficiaries ಇದ್ದಾರೆ, ಯಾರು ಅರ್ಹರಿರುವಂಥವರಿಗೆ ಇವತ್ತು ಆಶ್ರಯ ಮನೆಗಳು ಸಿಗಬೇಕೋ, ಯಾರು ಅರ್ಹ ಫಲಾನುಭವಿಗಳಿಗೆ ಇವತ್ತು ಎಲ್ಲಾ benefits ಸಿಗಬೇಕಾಗಿತ್ತೋ ಅದು ಸಿಕ್ಕಿದೆಯೇ ಎನ್ನುವಂಥ ವಿಮರ್ಶೆಯನ್ನೇನಾದರೂ ಈ ಸರ್ಕಾರ ಮಾಡಿದೆಯೇ ಎಂದು ನಾನು ಇವತ್ತು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಿಮಗೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ವಸತಿ ಮಂತ್ರಿಗಳು ಇಲ್ಲಿ ಇಲ್ಲ. ವಸತಿ ಮಂತ್ರಿಗಳು 6 ಲಕ್ಷ ಮನೆ ಕಟ್ಟಿದ್ದೇವೆ, 8 ಲಕ್ಷ ಮನೆ ಕಟ್ಟಿದ್ದೇವೆ, 12 ಲಕ್ಷ ಮನೆಗಳನ್ನು ಕಟ್ಟಿದ್ದೇವೆಂದು ಹೇಳುತ್ತಾರೆ. ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಎಲ್ಲೆಲ್ಲಿ ಮನೆ ಕಟ್ಟಿದ್ದಾರೆ ಯಾರು beneficiaries ಇದ್ದಾರೆ ಅವರು ಅರ್ಹರಿದ್ದಾರೆಯೋ ಅಥವಾ ಅನರ್ಹರಿದ್ದಾರೆಯೋ ಎಂದಾದರೂ ನೀವು verify ಮಾಡಿದ್ದೀರಾ ಹೇಗೆ? ಆಶ್ರಯ ಮನೆಗಳ allocationನಲ್ಲಿ ಎಷ್ಟು corruption ನಡೆಯುತ್ತಿದೆ ಎನ್ನುವ ಬಗ್ಗೆ ಎಂದಾದರೂ ವಿಚಾರ ಮಾಡಿದ್ದೀರಾ ಏನು ಎಂದು ಪ್ರಶ್ನೆಯನ್ನು ನಾನು ಇವತ್ತು ಕೇಳಬೇಕಾಗುತ್ತದೆ. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ನಿಜವಾಗಿ ಯಾರು ಅರ್ಹರಿದ್ದಾರೆ, ಯಾರು ಬಡವರಿದ್ದಾರೆ, ಯಾರು ಗುಡಿಸಲಿನಲ್ಲಿದ್ದಾರೆ ಅವರಿಗೆ ನಿಜವಾಗಿ ಇವತ್ತು ಮನೆಗಳು ಸಿಗುತ್ತಿಲ್ಲ. ಆಶ್ರಯ ಮನೆಗಳು allot ಆಗುತ್ತಿಲ್ಲ. ಈ ಗ್ರಾಮಸಭೆ ಎನ್ನುವುದೊಂದು ಡ್ರಾಮಾ. ಆ ಗ್ರಾಮಸಭೆಯಲ್ಲಿ ಫಲಾನುಭವಿಗಳ selection ಏನು ಆಗುತ್ತದೆ, ಅಲ್ಲಿ ಊರಿನವರೆಲ್ಲರೂ ಕೂಡಿಕೊಂಡು ಗ್ರಾಮಸಭೆಯಲ್ಲಿ ಇಂಥವರು ಬಡವರಿದ್ದಾರೆ, ಇವರು selection ಆಗಬೇಕೆಂದು ಲಿಸ್ಟ್ ಕೊಡುತ್ತಾರೆ, ಕೊನೆಗೆ ಆ ಲಿಸ್ಟ್‌ನಲ್ಲಿದ್ದವರಿಗೆ ಮನೆಯೇ ಸಿಗುವುದಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಗ್ರಾಮಸಭೆಯೂ ಸರಿಯಾಗಿ ಆಗುವುದಿಲ್ಲ. ಆಗಿದ್ದರೂ list final ಆಗುವುದಿಲ್ಲ. ನಾನು ಉದಾಹರಣೆ ಸಹಿತ ಹೇಳುತ್ತಿದ್ದೇನೆ. ಬೇಕಾದರೆ ನಾಳೆ ಸಂಬಂಧಪಟ್ಟ ಸಚಿವರಾಗಲಿ, ಸೆಕ್ರೆಟರಿಯಾಗಲಿ ಇದನ್ನು ಬೇಕಾದರೆ verify

ಮಾಡಲಿ. ನನ್ನ ಕಡೆ ಇವರು ಬಂದಿದ್ದರು. ಕುಂದಗೋಳ ತಾಲ್ಲೂಕಿನ ಹಿರೇಹರಕೋಣೆ ಎನ್ನುವ ಗ್ರಾಮವಿದೆ. ಅಲ್ಲಿ ಬಸವಂತಪ್ಪ ಮಹದೇವಪ್ಪ ಹೊಸಮನಿ ಎನ್ನುವ ಒಬ್ಬ ಅರ್ಜಿಯನ್ನು ಕೊಟ್ಟಿದ್ದಾನೆ. ಆತ ಬಡವ. ಸನ್ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಈ ಫೋಟೋವನ್ನು ತೋರಿಸುತ್ತೇನೆ. ಇದು ಗುಡಿಸಲು, ಈತನಿಗೆ ನಿಜವಾಗಿ ಆಶ್ರಯ ಮನೆ ಕಟ್ಟಿಸಿಕೊಡುವುದಕ್ಕೆ ಮಂಜೂರಾಗಬೇಕು. ಆದರೆ, ಆತನಿಗೆ ಆಶ್ರಯ ಮನೆ ಮಂಜೂರಾಗಲಿಲ್ಲ. ಅರ್ಹ ವ್ಯಕ್ತಿ, ಬಡವ ಆತನಿಗೆ ಸಿಗಲಿಲ್ಲ. ಅಲ್ಲಿ ಒಂದು ವ್ಯವಸ್ಥೆ, ಅಲ್ಲಿನ ಗ್ರಾಮ ಪಂಚಾಯತಿ ಸದಸ್ಯರು, ಅಲ್ಲಿನ ಅಧ್ಯಕ್ಷರು ತಮಗೆ ಯಾರು ಬೇಕೋ, ಸಂಬಂಧಿಕರು ಬೇಕೋ ಅವರಿಷ್ಟಕ್ಕೆ ಅವರ ಹೆಸರನ್ನು ತೆಗೆದುಕೊಳ್ಳುವುದು ಮತ್ತು ಪದೇ ಪದೇ ಆ familyಗೆ ಕೊಡುವುದು. ಇಲ್ಲಿ ಆತ complaint ಕೊಟ್ಟಿದ್ದಾನೆ.

(ಮುಂದುವರೆದಿದೆ)

14.06.2017 / 12.10 (11) MPL-SP

**ಶ್ರೀ ಜಗದೀಶ್ ಶೆಟ್ಟರ್ (ಮುಂದು. . .)**

ಈ ಕೆಳಗೆ ಸಹಿ ಮಾಡಿದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕುಂದಗೋಳ ತಾಲ್ಲೂಕು ಹಿರೇಹರಕೋಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮಗಳಲ್ಲಿ ಮೇಲ್ಕಂಡ ವಸತಿ ಯೋಜನೆಯಡಿ ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ನೋಡಿ ಒಬ್ಬ ಮುಗ್ಧ ರೈತ ಯಾವರೀತಿ ಇವತ್ತು ಅರ್ಜಿ ಬರೆದಿದ್ದಾನೆಂದು ನೀವೇ ಅರ್ಥ ಮಾಡಿಕೊಳ್ಳಿ. ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಅಕ್ರಮವಾಗಿ ಮನೆ ನಿರ್ಮಿಸಿ ಅರ್ಹ ಫಲಾನುಭವಿಗಳಿಂದ ಸುಮಾರು 30 ರಿಂದ 50 ಸಾವಿರ ರೂ.ಗಳನ್ನು ಪಡೆದುಕೊಂಡು direct allegation ಮಾಡಿದ್ದಾನೆ. 30 ರಿಂದ 50 ಸಾವಿರ ರೂ.ಗಳನ್ನು ಪಡೆದುಕೊಂಡು ವಾಮ ಮಾರ್ಗದಲ್ಲಿ computer ನಲ್ಲಿ entry ಮಾಡಿಸಿ ನಿಗಮದಿಂದ ಬಿಲ್ ಪಾಸ್ ಮಾಡಿಸಲಾಗಿದೆ. ಇದಕ್ಕೆ ಗ್ರಾಮ ಪಂಚಾಯಿತಿಯೇ ಹೊಣೆಯಾಗುವುದು. ಅರ್ಹ ಫಲಾನುಭವಿಗಳಿಗೆ ಮನೆಗಳನ್ನು ಮಂಜೂರು ಮಾಡಿರುವುದಿಲ್ಲ. ಈ ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಆದುದರಿಂದ ದಯವಿಟ್ಟು ತಾವು ಈ ಕುರಿತು ನಮಗೆ ನ್ಯಾಯ ಒದಗಿಸಬೇಕೆಂದು ನನ್ನ ಕಡೆ ಬಂದು ಅರ್ಜಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಕೊಡುತ್ತಾನೆ. ತಾಲ್ಲೂಕು ಪಂಚಾಯಿತಿ Executive Officer ಯಾರಿದ್ದಾರೆ, ಆತನಿಗೆ ಏನು ಅವ್ಯವಹಾರವಾಗಿದೆ ಎಂಬ ಬಗ್ಗೆ ದೂರು ಕೊಡುತ್ತಾನೆ ಮತ್ತು specific ಆಗಿ ಹೆಸರು ಹಾಕಿ ದಾಕ್ಷಾಯಿಣಿ ಪಾಟೀಲ್, ಶಾಂತವ್ವ ಹೊಸಮನಿ ಇವರು ಅನರ್ಹರಿದ್ದಾರೆ. ಇವರಿಗೆ ಮನೆ ಕೊಟ್ಟಿರುವುದು ತಪ್ಪು ಎಂದು complaint ಕೊಡುತ್ತಾನೆ. 10-15 ಜನ ಹೆಸರನ್ನು ಕೊಟ್ಟಿದ್ದಾನೆ. ಒಬ್ಬನಂತೂ ಕೆ.ಎಸ್.ಆರ್.ಟಿ.ಸಿ ನೌಕರನಾದ ದೇವಪ್ರಸಾದ್ ಮಾಳಮ್ಮನವರ್, ಈಶ್ವರಪ್ಪ ಮಾಳಮ್ಮನವರ್, ಬಸವರಪ್ಪ ಚೆನ್ನಬಸಪ್ಪ ಬಳಗಾನೂರ್ ಇವರು ಕೆ.ಎಸ್.ಆರ್.ಟಿ.ಸಿ employees. ಇವರಿಗೆ ಮನೆ ಮಂಜೂರು ಮಾಡುತ್ತಾರೆಂದರೆ ಎಷ್ಟೊಂದು ಭ್ರಷ್ಟಾಚಾರವಾಗಿದೆ ಎಂಬುದನ್ನು ನೀವು ಅರ್ಥ ಮಾಡಿಕೊಳ್ಳಿ. ಮುಖ್ಯಮಂತ್ರಿಗಳಾಗಲಿ, ಸಂಬಂಧಪಟ್ಟ ಸಚಿವರು ಇದನ್ನು verify ಮಾಡಬೇಕು. 10 ಲಕ್ಷ ಮನೆ ಕೊಟ್ಟಿದ್ದೇವೆ, 12 ಲಕ್ಷ ಮನೆ ಕೊಟ್ಟಿದ್ದೇವೆಂದು ಘೋಷಣೆ ಮಾಡುವುದು ಒಂದು ಕಡೆ. ಆದರೆ, ನಿಜವಾಗಿ ಅದರ ಲಾಭ ಬಡವರಿಗೆ ತಲುಪಿದೆಯೋ ಇಲ್ಲವೋ ಎಂದು ವಿಚಾರ ಮಾಡಬೇಕಾಗುತ್ತದೆ. ಇಲ್ಲಿ ನಾನು ಉದಾಹರಣೆ ಕೊಟ್ಟಿದ್ದೇನೆ. ಬೇಕಾದರೆ ಇದನ್ನು ಕೃಷ್ಣಪ್ಪನವರಿಗೆ ವಸತಿ ಮಂತ್ರಿಗಳಿಗೆ ನಾನು ಈ ಮನವಿಯನ್ನು ಕಳುಹಿಸಿಕೊಡುತ್ತೇನೆ. ನಾನೊಂದು letter ಇಟ್ಟಿದ್ದೇನೆ. ಇದರ ತನಿಖೆಯಾಗಬೇಕು. ಇದರ ಬಗ್ಗೆ ನಿಜಾಂಶ ಏನು ಎನ್ನುವುದು ಗೊತ್ತಾಗಬೇಕು ಮತ್ತು ಅರ್ಹರಿದ್ದಾರಲ್ಲ, ಅವರಿಗೆ benefit ಸಿಗಬೇಕು.

ಶ್ರೀ ಸಿ.ಎಸ್. ಶಿವಳ್ಳಿ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಜಗದೀಶ್ ಶೆಟ್ಟರ್‌ರವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಕುಂದಗೋಳ ನನ್ನ ತಾಲ್ಲೂಕು ಇದೆ. ಜಗದೀಶ್ ಶೆಟ್ಟರ್ ಅವರಿಗೆ ಬಂದಿರುವಂತಹ ಅರ್ಜಿಯ ಕಾಪಿಯನ್ನು ನನಗೆ ಕಳುಹಿಸಿಕೊಟ್ಟರೆ ಯಾರಿಗೆ ಅನ್ಯಾಯವಾಗಿದೆ, ಅವರಿಗೆ ನ್ಯಾಯ ಕೊಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ ರೀತಿ ಆಶ್ರಯ ಮನೆಯದು ಒಂದು ಉದಾಹರಣೆ ಕೊಟ್ಟೆ. ಈಗ ಕೃಷ್ಣಪ್ಪನವರು ಇದರ ಬಗ್ಗೆ ನೀವು ಎಲ್ಲಿಯಾದರೂ surprise ಆಗಿ visit ಮಾಡಿ. ಯಾವುದಾದರೂ ಗ್ರಾಮ ಪಂಚಾಯಿತಿಗೆ ಹೋಗಿ. ನಿಮಗೆ ಇದರ ನಿಜಾಂಶ ಏನೆಂದು ಗೊತ್ತಾಗುತ್ತದೆ. ನಿಜವಾದ ಬಡವರಿಗೆ ಯೋಜನೆಯ ಲಾಭ ಸಿಗಲಿ ಎಂದು ನಮ್ಮ ಉದ್ದೇಶ. ಆದರೆ ಬಡವರಿಗೆ ಸಿಗುವುದಿಲ್ಲ. ಯಾವುದೋ ಒಂದು ರಾಜಕೀಯ influence ಮತ್ತೊಂದು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಮ್ಮ ಸಂಬಂಧಿಕರು ಇವರುಗಳಿಗೆ ಸಿಗುತ್ತಿದೆ. ನಾನು ಆಗಲೇ ಹೇಳಿದೆ. ಕೆ.ಎಸ್.ಆರ್.ಟಿ.ಸಿ. ಯಲ್ಲಿ ಕೆಲಸ ಮಾಡುವಂತಹವರಿಗೆ ಮನೆ ಸಿಗುತ್ತದೆ ಎಂದರೆ ಏನರ್ಥ? ಅದು ಬಿ.ಪಿ.ಎಲ್ ನವರಿಗೆ ಸಿಗುವಂತಹುದು. ಕೆ.ಎಸ್.ಆರ್.ಟಿ.ಸಿ ಯಲ್ಲಿ ಕೆಲಸ ಮಾಡುವವರಿಗೆ ಸಿಗುತ್ತದೆ ಎಂದರೆ ಇನ್ನು ಯಾವರೀತಿ ಬಡವರಿಗೆ ಯೋಜನೆಯ ಲಾಭ ಸಿಗಬಹುದು? ಎಂಬುದನ್ನು ನೀವು ವಿಚಾರ ಮಾಡಿ. ಇದರ ಬಗ್ಗೆ thorough enquiry ಮಾಡಿ ಎಂದು ನಾನು ಹೇಳುತ್ತೇನೆ.

ಶ್ರೀ ಎಂ.ಕೃಷ್ಣಪ್ಪ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮೊನ್ನೆನೂ ನಾನು answer ಮಾಡಿದೆ. ಸುರಪುರ ರಾಜ ವೆಂಕಟಪ್ಪ ನಾಯಕರ ಪ್ರಶ್ನೆಯಲ್ಲಿ 170 ಮನೆಗಳು ಈ ರೀತಿ ಅನರ್ಹರಿಗೆ ಹೋಗಿದೆ. ಅದನ್ನು ವಸೂಲಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರುವುದನ್ನು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ : ಏನು ನಿಮ್ಮ constituency ನಲ್ಲಿ ಈ ರೀತಿ ಆಗಿದೆಯೆ?

ಶ್ರೀ ಜಗದೀಶ್ ಶೆಟ್ಟರ್ : ಕುಂದಗೋಳದಲ್ಲಿ. ಶಿವಳ್ಳಿಯವರು ಹೇಳಿದರು ಈಗ. ನನಗೂ ಅದರ ಕಾಪಿ ಕಳುಹಿಸಿಕೊಡಿ ಎಂದು ಹೇಳಿದರು. ಅದನ್ನು ಅವರಿಗೂ ಕೊಡುತ್ತಿದ್ದೇನೆ.

ಶ್ರೀ ಸಿ.ಎಸ್. ಶಿವಳ್ಳಿ : ನನಗೂ ಒಂದು ಕಾಪಿ ಕಳುಹಿಸಿ.

ಶ್ರೀ ಜಗದೀಶ್ ಶೆಟ್ಟರ್ : ಕೊಡುತ್ತೇನೆ.

ಶ್ರೀ ಸಿ.ಎಸ್. ಶಿವಳ್ಳಿ : ಖಂಡಿತವಾಗಿ ಅದು ಯಾರಿಗೆ ಅನ್ಯಾಯವಾಗಿದೆ ಅವರಿಗೆ ನ್ಯಾಯ ಒದಗಿಸೋಣ. ಮತ್ತೆ ಅನರ್ಹರಿಗೆ ಸಿಕ್ಕಿರುವುದನ್ನು ರದ್ದು ಪಡಿಸಲು ಕಾನೂನು ವ್ಯಾಪ್ತಿಯಲ್ಲಿ ಕ್ರಮ ಕೈಗೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಅರ್ಹರಿಗೆ ಕೊಡಿಸುವ ಕೆಲಸ ಮಾಡಿ. ಇನ್ನೊಂದು ಭ್ರಷ್ಟಾಚಾರ ಯಾವರೀತಿ ವ್ಯಾಪಕವಾಗಿದೆ ಎನ್ನುವುದು. ಅರಣ್ಯ ಇಲಾಖೆಯದು. ನಾನು ಸುಧೀರ್ಘವಾಗಿ ಮಾತನಾಡಲು ಹೋಗುವುದಿಲ್ಲ. ಕೆಲವೊಂದು points ಗಳನ್ನು ಹೇಳುತ್ತೇನೆ. ಭ್ರಷ್ಟಾಚಾರ ವ್ಯಾಪಕವಾಗಿದೆ ಎಂದು ಹೇಳುತ್ತೇವೆ. ಮೊನ್ನೆ ಮುಖ್ಯಮಂತ್ರಿಗಳ ಒಂದು statement ಅನ್ನು ನಾನು ನೋಡಿದೆ. ಒಂದು ವನ ಮಹೋತ್ಸವಕ್ಕೆ ಅವರು ಹೋಗಿದ್ದರು. ಸಸಿಗಳನ್ನು ನೆಡುವ ಕೆಲಸ. ಬಹುಶ: ರಮಾನಾಥ ರೈ ರವರು ಸದನದಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಅವರ ಗಮನಕ್ಕೆ ಈ ಭ್ರಷ್ಟಾಚಾರದ

14-06-2017

ವಿಚಾರ ಗಮನಕ್ಕೆ ಬಂದಿದೆ. 1 ಕೋಟಿ ಸಸಿಗಳನ್ನು ನೆಡುತ್ತೇವೆ, 50 ಸಾವಿರ ಸಸಿಗಳನ್ನು ನೆಡುತ್ತೇವೆ. ಹಿಂದೆ ಎಷ್ಟೆಲ್ಲಾ ಸಸಿಗಳನ್ನು ನೆಟ್ಟಿದ್ದೇವಲ್ಲ, ಅವೆಲ್ಲವೂ ಎಲ್ಲಿ ಹೋದವು ಎಂದು. ಮೊನ್ನೆ ಮುಖ್ಯಮಂತ್ರಿಗಳು ಎಲ್ಲೋ ಒಂದು ಕಡೆ ಹೋದಾಗ ಹೇಳಿದರು. ಅಲ್ರಿ ಹಿಂದೆ ಕೋಟಿಗಟ್ಟಲೆ ಸಸಿಗಳನ್ನು ನೆಟ್ಟಿದ್ದೆವಲ್ಲ, ಅವೆಲ್ಲಾ ಎಲ್ಲಿ ಹೋದವು? ಎಂದು. ನಾನು ಅದನ್ನೇ ಕೇಳುತ್ತೇನೆ. ಅರಣ್ಯ ಇಲಾಖೆಯವರು ಬಹುಶ: ಈ 15-20 ವರ್ಷಗಳ ಲೆಕ್ಕ ತೆಗೆದುಕೊಂಡು ಬಿಡಿ. ಎಷ್ಟು ಕೋಟಿ ಸಸಿಗಳನ್ನು ನೆಟ್ಟಿದ್ದಾರೆಂದು ನನಗೆ ಗುರುತಿಲ್ಲ. ಹೀಗಾಗಿ ಆ ಸಸಿಗಳು ಎಲ್ಲಿ ಹೋದವು? ಗಿಡಗಳು ಮರಗಳಾಗಿ ಬೆಳೆದವೋ, ಇಲ್ಲವೋ ? ಬಹುಶ: ನನಗೆ ಅನಿಸುತ್ತದೆ ರಮಾನಾಥ ರೈ ರವರು 10-15 ವರ್ಷದ್ದು ಶ್ವೇತಪತ್ರ ಹೊರಡಿಸಲಿ ಅವರು. ನಮ್ಮ ಇಲಾಖೆಯಿಂದ ಇಷ್ಟು ಕೋಟಿ ಸಸಿಗಳನ್ನು ನೆಡಲಾಗಿದೆ 10-15 ವರ್ಷದಲ್ಲಿ ಎಂದು. ನಮ್ಮ ಸರ್ಕಾರ ಬಂದ ಮೇಲೆ ಇಷ್ಟು ಕೋಟಿ ಸಸಿಗಳನ್ನು ನೆಡಲಾಗಿದೆ, ಇಷ್ಟು ಗಿಡಗಳು ಅಲ್ಲಿದ್ದಾವೆ. ಇದೊಂದು ಲೆಕ್ಕ ಕೊಡಲಿ. ಆಗ ಇವತ್ತೇನು ಅರಣ್ಯ ಬೆಳೆಸಬೇಕು, ಪರಿಸರದ ಬಗ್ಗೆ ಕಾಳಜಿ ತೆಗೆದುಕೊಳ್ಳಬೇಕು. ಇವೆಲ್ಲಾ ನಾವು ಮಾತನಾಡುತ್ತೇವಲ್ಲ, ಅದಕ್ಕೇನಾದರೂ ಉದ್ಧಾರ ಆಗಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಸುಮ್ಮನೆ ಈ ಅಧಿಕಾರಿಗಳಿಗೆ, ಭ್ರಷ್ಟ ವ್ಯವಸ್ಥೆಗೆ, ಭ್ರಷ್ಟಾಚಾರ ಮಾಡುವುದಕ್ಕೆ ಇದ್ದೊಂದು ಅವಕಾಶ ಸಸಿಗಳನ್ನು ನೆಡುವುದು. ನಾನು ಒಂದು ಮಾತನ್ನು ಹೇಳುತ್ತೇನೆ. ಇಲ್ಲಿ ನೋಡಿ. ನಮ್ಮ ಧಾರವಾಢದಲ್ಲಿ ವಲಯ ಅರಣ್ಯಾಧಿಕಾರಿ ಮಾವಿನ ತೋಪು ಎನ್ನುವವನಿದ್ದಾನೆ. ಆತ ಏನು ಮಾಡುತ್ತಾನೆಂದರೆ ನಗರಪ್ರದೇಶದಲ್ಲಿ ಇರಬಹುದು ಅಥವಾ ಗ್ರಾಮಾಂತರ ಪ್ರದೇಶದಲ್ಲಿರಬಹುದು. ಅಂಚಿನಗಿರಿ ಎಂದು ಒಂದು ಹಳ್ಳಿ. ಅಂಚಿನಗಿರಿ ಮೀಸಲು ಅರಣ್ಯಗಳಲ್ಲಿ ಮಾವಿನತೋಪು, ವಲಯ ಅರಣ್ಯಾಧಿಕಾರಿ ಏನು ಮಾಡುತ್ತಾನೆಂದರೆ ಅಲ್ಲಿ ಸಾವಿರಾರು ಗಿಡಗಳನ್ನು ಕಡಿದು ಹಾಕುತ್ತಾನೆ. ಮಾರಣಹೋಮ. ಕಡಿದು ಹಾಕಿ ಮತ್ತೆ ಹೊಸ ಸಸಿಗಳನ್ನು ನೆಡುತ್ತಾನೆ. ಲೆಕ್ಕ ಏನು? ನಾನು ಇಷ್ಟು ಸಸಿಗಳನ್ನು ನೆಟ್ಟೆ. ಆಮೇಲೆ ಕೆಲವೊಂದು NGO ಗಳು ಸಸಿಗಳನ್ನು ನೆಡುತ್ತಾರೆ. Forest Department ನಿಂದ ಸಸಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ತೆಗೆದುಕೊಂಡು ಹೋಗಿ ಅವರು ಸಸಿಗಳನ್ನು ನೆಡುತ್ತಾರೆ. ನಮ್ಮಲ್ಲಿ BRTC Transport ಅವರ ಕೆಲಸ ನಡೆಯುತ್ತಿದೆ. ಅವರೇನು ಮಾಡಿದರು? ಹುಬ್ಬಳ್ಳಿ-ಧಾರವಾಡ ಮಧ್ಯದಲ್ಲಿ ಬಿ.ಆರ್.ಟಿ.ಸಿ ಯೋಜನೆ ಮಾಡುವ ಸಂದರ್ಭದಲ್ಲಿ ಸಾವಿರಾರು ಮರಗಳನ್ನು ಕಡಿದು

14-06-2017

ಹಾಕಿದರು. ಹೀಗಾಗಿ ಅವರು ಅರಣ್ಯ ಇಲಾಖೆಯಿಂದ ಒಂದಿಷ್ಟು ಸಸಿಗಳನ್ನು ತೆಗೆದುಕೊಂಡು ನಾವು ಹೊಸದಾಗಿ ಸಸಿಗಳನ್ನು ನೆಡುತ್ತೇವೆ ಎಂದು ಅವರು ಒಂದಿಷ್ಟು ಹಾಕಿದರು. ಆ ಲೆಕ್ಕವೂ ಅರಣ್ಯ ಇಲಾಖೆಯೊಳಗೆ ಬಂತು. ಅದನ್ನು ನಾವೇ ನೆಟ್ಟಿದ್ದೇವೆಂದು ಮಾವಿನ ತೋಪು ಲೆಕ್ಕ ಕೊಟ್ಟಿದ್ದಾರೆ. ನಾನು ಸಂಖ್ಯೆಯನ್ನು ಹೇಳುತ್ತೇನೆ. ಇವರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ವೃತ್ತ ಇವರಿಗೆ ಒಂದು ವರದಿಯನ್ನು ಕೊಟ್ಟು mention ಮಾಡುತ್ತಾನೆ. ಎಷ್ಟು ಸಸಿಗಳನ್ನು ನೆಡಲಾಗಿದೆ? ಅದರಲ್ಲಿ ಎಷ್ಟು ಜೀವಂತ ಇವೆ, ಎಷ್ಟು ಖಾಲಿ ಗುಂಡಿ ಇವೆ ಎಂದು ತೋರಿಸುತ್ತಾನೆ. ಅದರಲ್ಲಿ 2014-15 ನೇ ಸಾಲಿನಲ್ಲಿ 7,000 ಸಸಿಗಳನ್ನು ನೆಟ್ಟಿದ್ದೇವೆ ಎಂದು ಇದೆ. ಜೀವಂತ ಸಸಿಗಳು 2608. ಸತ್ತ ಸಸಿಗಳು 206. ಖಾಲಿ ಗುಂಡಿಗಳು -79. ಅಂದರೆ ಜೀವಂತ ಸಸಿಗಳು 37% ಅಷ್ಟೆ. ಕಾಮಗಾರಿ ಪ್ರತಿಶತ 41%. ಅಂದರೆ ಉಳಿದದ್ದು ಏನಿದೆ, 41% ಅಂದರೆ 59% ನೆಡಲೇ ಇಲ್ಲ. ಆದರೆ ಈತ ಲೆಕ್ಕ ತೆಗೆದುಕೊಂಡಿದ್ದು, ಹಣ ಖರ್ಚಾಗಿದ್ದು 7 ಸಾವಿರ ಸಸಿಗೆ. 2015-16ನೇ ಸಾಲಿನಲ್ಲಿ 15 ಸಾವಿರ ಲೆಕ್ಕ ತೋರಿಸುತ್ತಾನೆ. ಅದರಲ್ಲಿ ಜೀವಂತ ಸಸಿಗಳು ಇವತ್ತು ಹೋಗಿ ನೋಡಿದರೆ 7579. ಸತ್ತ ಸಸಿಗಳು 458. ಖಾಲಿ ಗುಂಡಿಗಳು 565. ಇವೆಲ್ಲಾ ಲೆಕ್ಕ ಹಿಡಿದರೂ 15 ಸಾವಿರ ಸಸಿಗಳು ಆಗುವುದಿಲ್ಲ. ಆದರೆ ಲೆಕ್ಕ ತೆಗೆದುಕೊಳ್ಳುವುದು 15 ಸಾವಿರ. ಅಂದರೆ 57% ಅಷ್ಟೆ ಸಸಿಗಳನ್ನು ನೆಟ್ಟಿದ್ದು. ಮತ್ತೊಂದು 2016-17 ನೇ ಸಾಲಿನಲ್ಲಿ 13 ಸಾವಿರ ಸಸಿಗಳು. ಅದರಲ್ಲಿ 8888 ಮಾತ್ರ ನೆಡುತ್ತಾನೆ. ಮುಂದೆ 505 ಸತ್ತ ಸಸಿಗಳು. 94 ಖಾಲಿ ಗುಂಡಿ. 75% ಕಾಮಗಾರಿ. ಅಂದರೆ ಈ ರೀತಿಯಾದ ಅವ್ಯವಹಾರ, ಈ ರೀತಿಯ ವ್ಯವಸ್ಥೆಯ ದುರುಪಯೋಗ ಇದರಿಂದ ಸಾಕಷ್ಟು ಅವ್ಯವಹಾರವನ್ನು ಒಬ್ಬ ವ್ಯಕ್ತಿ ಮಾಡಿದ್ದಾನೆ. ಮತ್ತು ಇಲ್ಲಿ ಬೇರೆ ಬೇರೆ ನಗರಗಳಲ್ಲಿ ಸಸಿಗಳನ್ನು ನೆಡುವ ಕೆಲಸಗಳು ಆಗಿವೆ. ಬೇರೆಯವರ ಮುಖಾಂತರ. ಇಲ್ಲಿ ವಸಂತ ನಗರ, ನವನಗರದಲ್ಲಿ ಸಿಟಿಯಲ್ಲಿ ಕೋಟಿ ಲಿಂಗೇಶ್ವರ ನಗರ, ಪಟೇಲ್ ನಗರ 1700 ಎಂದು ತೋರಿಸುತ್ತಾರೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಮುಂದು. . . .)

14-06-2017

14.06.2017/12.20/12/BR/SP

ಶ್ರೀ ಜಗದೀಶ್ ಶೆಟ್ಟರ್: (ಮುಂದು)

ವಸಂತ ನಗರದಲ್ಲಿ, ನವ ನಗರದಲ್ಲಿ ಸಿಟಿಯಲ್ಲಿ ಕೋಟಿ ಲಿಂಗೇಶ್ವರ ನಗರ, ಪಟೇಲ ನಗರ, ಇಲ್ಲಿ 1200 ಎಂದು ತೋರಿಸುತ್ತಾರೆ. Actually ಅಲ್ಲಿ ಅವರು ಸಸಿ ನೆಟ್ಟಿದ್ದು 740, ಶ್ರೇಯಾನಗರದಲ್ಲಿ 600 ರಲ್ಲಿ 342 ಸಸಿ ನೆಟ್ಟಿದ್ದಾರೆ. ಚೇತನ ಪಾಲಿ ಕೇಶವಪುರ, ನೃಪತುಂಗಾ ಬೆಟ್ಟ, ಇಲ್ಲಿ 1700ರಲ್ಲಿ 109 ಸಸಿಗಳನ್ನು ಮಾತ್ರ ನೆಟ್ಟಿದ್ದಾರೆ. ಅಂದರೆ, ಇಷ್ಟೆಲ್ಲಾ records ಇವೆ. ನಾನೇ ಒಂದೇ ಒಂದು ಹೇಳುತ್ತೇನೆ. ನನ್ನ ಲೆಕ್ಕದ ಪ್ರಕಾರ ಇನ್ನೂ ಬಹಳಷ್ಟು ಮಾಹಿತಿ ಇವೆ. ಇವೆನ್ನೆಲ್ಲಾ ಹೇಳಬೇಕೆಂದರೆ ನನಗೆ ಒಂದು ತಾಸು ಬೇಕಾಗುತ್ತದೆ. One hour ಬೇಕಾಗುತ್ತದೆ. ಅಷ್ಟೊಂದು ಭ್ರಷ್ಟಾಚಾರದ ದಾಖಲೆ ಸಹಿತ ಮಂಜುನಾಥ ಬದ್ದಿ ಎಂದು ಹೇಳಿ, ಅರಣ್ಯದ ಬಗ್ಗೆ ಹೆಚ್ಚು ಕಾಳಜಿ ಇದ್ದಂತಹ ಒಬ್ಬ ವ್ಯಕ್ತಿ ಇವೆನ್ನೆಲ್ಲಾ ಮಾಹಿತಿ ಹಕ್ಕಿನಲ್ಲಿ ತೆಗೆದುಕೊಂಡು ನನ್ನನ್ನು ಬಂದು ಭೇಟಿಯಾಗುತ್ತಾರೆ. ನೋಡಿ, ಇವೆಲ್ಲ ಪ್ರತಿಯೊಂದು ದಾಖಲೆಗಳನ್ನು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ, ಸರ್ಕಾರದ ಸಂಬಂಧಪಟ್ಟವರಿಗೆ complaint ಕೊಟ್ಟಿದ್ದೇನೆ. ಇದು ಬರೀ ಹುಬ್ಬಳ್ಳಿ ವಲಯದ ದಾಖಲೆ ಅಷ್ಟೆ. ಸುಮಾರು 6.00 ಕೋಟಿ ರೂ.ಗಳ್ಟು ಅವ್ಯವಹಾರ ಆಗಿದೆ. 6.00 ಕೋಟಿ ರೂಪಾಯಿ ಭ್ರಷ್ಟಾಚಾರ! ಇನ್ನು ಇಡೀ ರಾಜ್ಯದ್ದು! ಇಡೀ ಜಿಲ್ಲೆಯದು! ಇವೆಲ್ಲ ನೋಡಿದರೆ ಅರಣ್ಯ ಇಲಾಖೆಯಲ್ಲಿ ಯಾವ ರೀತಿ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದು ಒಂದು ಉದಾಹರಣೆಯಾಗಿದೆ. ಇವೆಲ್ಲವನ್ನೂ ನಾನು ಅರಣ್ಯ ಇಲಾಖೆಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ. ಈ ಬಗ್ಗೆ ಒಂದು enquiry ಆಗಬೇಕು. ಮಾವಿನ ತೋಪು, ಅಂತೂ ಎಲ್ಲವನ್ನೂ ತೆಗೆದುಕೊಂಡು ಊಟ ಮಾಡಿಕೊಂಡು ಆರಾಮವಾಗಿ ಇದ್ದಾನೆ. ಇಷ್ಟೆಲ್ಲಾ ಈಗಾಗಲೇ ಹಿರಿಯ ಅಧಿಕಾರಿಗಳಿಗೆ, ಅರಣ್ಯ ಮಂತ್ರಿಗಳಿಗೆ complaint ಹೋಗಿದೆ. ಇವರೇನು ಹೇಳುತ್ತಾರೆಂದರೆ, ವರದಿ ತರಿಸಿಕೊಳ್ಳುತ್ತೇವೆ. Action ತೆಗೆದುಕೊಳ್ಳುತ್ತೇವೆ ಎನ್ನುತ್ತಾರೆ. ಈ ರೀತಿಯ ಭ್ರಷ್ಟ ಅಧಿಕಾರಿಗಳನ್ನು ಇನ್ನೂ ನೀವು ಉಳಿಸಿಕೊಳ್ಳುವುದಾದರೆ ಅರಣ್ಯ ರಕ್ಷಣೆ ಅಲ್ಲ, ಅರಣ್ಯ ನಾಶವಾಗಿ ಹೋಗುತ್ತದೆ. ಇದರಲ್ಲಿ ಸುಮಾರು 6.00 ಕೋಟಿ ರೂಪಾಯಿ ಅವ್ಯವಹಾರ ಆಗಿದೆ. ಈ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ರೀತಿ ಪರಿಸರದ ಬಗ್ಗೆ ಕಾಳಜಿ ಇದ್ದ ವ್ಯಕ್ತಿಗಳು ಈ ರೀತಿಯ ಭ್ರಷ್ಟಾಚಾರದ ಹಗರಣಗಳನ್ನು ಹೊರಗೆ ತೆಗೆದುಕೊಂಡು ಬಂದಾಗ ಸರ್ಕಾರವಾಗಲೀ, ಮಂತ್ರಿಗಳಾಗಲೀ ತಕ್ಷಣವೇ ಒಂದು response ಮಾಡಬೇಕಾಗುತ್ತದೆ. ಆದರೆ, ಮಾಡುವುದಿಲ್ಲ. ಹೀಗಾಗಿ, ಭ್ರಷ್ಟಾಚಾರದ ವ್ಯವಸ್ಥೆ ಹಾಗೇ ಮುಂದುವರೆಯುತ್ತದೆ. ಇದಕ್ಕೆ ಭ್ರಷ್ಟ ಅಧಿಕಾರಿಗಳು ಇನ್ನೂ ಅಲ್ಲೇ ಇದ್ದಾರೆ. ಧಾರವಾಡ ವಲಯದಲ್ಲಿ ಅಧಿಕಾರಿಯಾಗಿ ಇವತ್ತು ಕೆಲಸ ಮಾಡುತ್ತಿದ್ದಾನೆ. ಮೂರು ವರ್ಷಗಳಾಯಿತು. ಇಷ್ಟೊಂದು ಕಂಪ್ಲೆಂಟ್ ಬಂದಿವೆ. ಪತ್ರಿಕೆಗಳಲ್ಲೂ ಸಹ ಬಂದಿವೆ. ಬಹುಶ: ಎಲ್ಲಾ ಪತ್ರಿಕೆಗಳಲ್ಲೂ ಬಂದಿವೆ. ಯಾವ ಪತ್ರಿಕೆಯಲ್ಲೂ ಉಳಿದಿಲ್ಲ. ರಮಾನಾಥ ರೈರವರು ಈ ಭ್ರಷ್ಟಾಚಾರದ ಬಗ್ಗೆ ಕೇಳಿದ್ದಾರೆ. ಬಂದರೂ ಸಹ ಇದುವರೆವಿಗೂ ಅವರ ಮೇಲೆ ಯಾವುದೇ action ತೆಗೆದುಕೊಂಡಿಲ್ಲ. ಗುಳುಂ ನೀರಿನ ರಕ್ಷಣೆಗೆ ನಿಂತ ಸಬಾಕತ್, ಇನ್ನು ಬೇರೆ ಬೇರೆ ಪ್ರಕರಣಗಳದ್ದು ಇವೆ. ಆ ಕೆರೆ ಹೂಳು ತೆಗೆಯುವಂಥದ್ದು, ಆ ಕೆರೆ ಪಕ್ಕದಲ್ಲಿ ನಾನು ಗಿಡಗಳನ್ನು ನೆಡುತ್ತೇನೆಂದು ಹೇಳಿ, ಅದರಲ್ಲೇ ಅಕ್ರಮವೆಸಗಿದ್ದಾರೆ. Watcher ಗಳನ್ನು ನೇಮಕ ಮಾಡುವುದರಲ್ಲು ಸಹ ಅಕ್ರಮವೆಸಗಿದ್ದಾರೆ. ಈ ರೀತಿ ಸುಮಾರು 6.00 ಕೋಟಿ ರೂಪಾಯಿಗಳ ಅವ್ಯವಹಾರ ಒಂದೇ ಒಂದು ಪ್ರಕರಣದಲ್ಲಿ ಆಗಿದೆ. ಅದಕ್ಕಾಗಿ ಈ ರೀತಿಯ ವ್ಯಾಪಕವಾದ ಭ್ರಷ್ಟಾಚಾರ. ಇವತ್ತು ಎಲ್ಲಾ ಇಲಾಖೆಗಳಲ್ಲಿ ನಡೆಯುತ್ತಿದೆ. ಕೆಲವೊಂದು ಉದಾಹರಣೆಗಳನ್ನು ನಾನು ಕೊಡುತ್ತಿದ್ದೇನೆ. ಇದರ ಜೊತೆಗೆ ಅಕ್ರಮ ಮರಳು ಗಣಿಗಾರಿಕೆ. ಅಕ್ರಮ ಮರಳು ಗಣಿಗಾರಿಕೆ ಭ್ರಷ್ಟಾಚಾರಕ್ಕೆ ಮತ್ತೊಂದು ಹೆಸರು. ಇವತ್ತು ಎಲ್ಲೂ ಉಸುಕು ಸಿಗುತ್ತಿಲ್ಲ. ನಮ್ಮ ಭಾಗದಲ್ಲಂತೂ ಇವತ್ತು ಒಂದು load ಮರಳಿಗೆ 35,000/- ರೂ., ಬೆಂಗಳೂರಿನಲ್ಲಂತೂ ಒಂದು load ಮರಳಿಗೆ 1.00 ಲಕ್ಷ ರೂಪಾಯಿಗೆ ಉಸುಕು ಸಿಗುತ್ತದೆ. ಈ ರೀತಿಯಾದರೆ, ನಾಳೆ ಬಡವರು ಮನೆ ಕಟ್ಟಬೇಕೆಂದರೆ ಎಲ್ಲಿ ಹೋಗಬೇಕು? Even ಶ್ರೀಮಂತರು, ಮಧ್ಯಮ ವರ್ಗದ ಜನ ಸಹ ಮನೆ ಕಟ್ಟಲಾರದ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಇದಕ್ಕೆ ಕಾರಣೀಭೂತರು ಯಾರು? ಇದನ್ನು ಪದೇ ಪದೇ ನಾವಿಲ್ಲಿ ಪ್ರಸ್ತಾಪ ಮಾಡಿದಾಗ ಅಕ್ರಮ ಮರಳು ಗಣಿಗಾರಿಕೆಯನ್ನು ನಾವು ನಿಲ್ಲಿಸುತ್ತೇವೆ ಅದಕ್ಕೊಂದು policy ಮಾಡುತ್ತೇವೆಂದು ಹೇಳಿದರು. ಲಕ್ಷ್ಮೇಶ್ವರದಲ್ಲಿ ಇತ್ತೀಚೆಗೆ ಒಂದು ಘಟನೆ ನಡೆಯಿತು. ಏನಾಗಿದೆಯೆಂದರೆ, ಎಲ್ಲಾ ಕಡೆ ಮಾಮೂಲು fix ಆಗಿ ಬಿಟ್ಟಿದೆ. ಇವತ್ತು ಲೋಕೋಪಯೋಗಿ ಇಲಾಖೆ ಇರಬಹುದು, ಗಣಿಗಾರಿಕೆ ಇಲಾಖೆ ಇರಬಹುದು, ಪೊಲೀಸ್ ಇಲಾಖೆ

14-06-2017

ಇರಬಹುದು, ಎಲ್ಲಾ ಕಡೆ ಒಂದು ಮಾಮೂಲು fix ಆಗಿ ಬಿಟ್ಟಿದೆ. ಇಡೀ ರಾಜ್ಯದಲ್ಲಿ ಭ್ರಷ್ಟಾಚಾರದ ವ್ಯವಸ್ಥೆ ಎಷ್ಟು ಇದೆಯೆಂದರೆ, ಇದೇ ಒಂದು ದೊಡ್ಡದಾದ ಲಾಬಿಯಾಗಿದೆ. ಅಕ್ರಮ ಮರಳು ಗಣಿಗಾರಿಕೆಯಲ್ಲಿ ಹತ್ತಾರು ಸಾವಿರ ಕೋಟಿಯ ಹಣದ ವ್ಯವಹಾರದ ಭ್ರಷ್ಟಾಚಾರವಾಗಿದೆ. ಈ ಅಕ್ರಮ ಮರಳು ಗಣಿಗಾರಿಕೆ ಬ್ರಹ್ಮಾಂಡ ಭ್ರಷ್ಟಾಚಾರ. ಇದನ್ನು ನೋಡಿ ಬಿಟ್ಟರೆ ಬಹುಶ: ಇದನ್ನು ತಡೆಹಿಡಿಯುವ ಕೆಲಸ ಮುಖ್ಯ ಮಂತ್ರಿಗಳಿಂದಾಗಲೀ, ಮಂತ್ರಿಗಳಿಂದಾಗಲೇ ಏಕೆ ಆಗಿಲ್ಲ ಎನ್ನುವ ಪ್ರಶ್ನೆಯನ್ನು ನಾನು ಕೇಳಬೇಕಾಗುತ್ತದೆ. ಈ ಬಗ್ಗೆ ಪದೇ ಪದೇ ವಿಧಾನ ಸಭೆಯಲ್ಲಿ ಚರ್ಚೆಯಾಗುತ್ತಿದೆ. ನಾನು ಪ್ರತ್ಯೇಕವಾಗಿ ಒಂದು ನಿಯಮ 69 ರಡಿಯಲ್ಲಿ ಗದಗ ಜಿಲ್ಲೆಯಲ್ಲಿ ಮರಳು ಗಣಿಗಾರಿಕೆ ಸಲುವಾಗಿ ಟೆಂಡರ್ ಮಾಡಿದೆವಲ್ಲಾ, ಅದರಲ್ಲಿ ರಾಜ್ಯ ಸರ್ಕಾರಕ್ಕೆ ಹೆಚ್ಚಾಗಿ royalty ಬರುತ್ತಿಲ್ಲ. ಹೆಚ್ಚು royalty ಕೊಡುತ್ತೇವೆ ಎಂದು ಹೇಳುವವರ ಟೆಂಡರನ್ನು ಬಾಜೂಗೆ ಇಡುತ್ತಾರೆ. ಗದಗ ಜಿಲ್ಲೆಯ ಉದಾಹರಣೆ ಇದೆ. ಹೆಚ್ಚು royalty ಕೊಡುತ್ತೇವೆಂದು ಯಾರು ಟೆಂಡರ್ ಸಲ್ಲಿಸುತ್ತಾರೆ, ಅವರ ಟೆಂಡರ್ ಅನ್ನು ಪಕ್ಕಕ್ಕೆ ಇಡುತ್ತಾರೆ. ತಮಗೆ ಯಾರ ಮೇಲೆ ಆಸಕ್ತಿ ಇರುತ್ತದೆ ಅವರಿಗೆ ಟೆಂಡರ್ ಕೊಡುತ್ತಾರೆ. ಅದರ ಬಗ್ಗೆ ನಾನು Rule-69 ನಲ್ಲಿ ಪ್ರತ್ಯೇಕವಾಗಿ ಕೊಟ್ಟಿದ್ದೇನೆ. ಅದರಲ್ಲಿ ಇನ್ನೂ ಹೆಚ್ಚು detail ಆಗಿ ನಾನು ಮಾತನಾಡುತ್ತೇನೆ. ಇದು ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಯಾರು Assistant Commissioner ಇರಬಹುದು, ತಹಶೀಲ್ದಾರ್ ಇರಬಹುದು, ಯಾರು ಅದನ್ನು ತಡೆ ಹಿಡಿಯಲು ಹೋಗುತ್ತಾರೆ ಅವರ ಮೇಲೆ ಸಹಿತ attack ಆಗಿದ್ದನ್ನು ನಾನು ನೋಡಿದ್ದೇನೆ. ಪ್ರಾಮಾಣಿಕ ಅಧಿಕಾರಿಗಳಾದ ತಹಶೀಲ್ದಾರ್, AC, DC . . . ಉಡುಪಿಯಲ್ಲಿ AC, DC ಎಲ್ಲಾ ಹೆಣ್ಣುಮಕ್ಕಳು ಅವರು ಇವತ್ತು ಅಕ್ರಮ ಗಣಿಗಾರಿಕೆಯನ್ನು ತಡೆಯಲು ಹೋದವರಿಗೆ ಅವರ ಮೇಲೆ attack ಆಯಿತು, ಅವರನ್ನು ಕೊಂದು ಹಾಕುವ ಪ್ರಯತ್ನ ನಡೆಯಿತು. ಈ ಕಡೆ ಮಂಡ್ಯ, ಹಾಸನದಲ್ಲೂ ಸಹ AC, ತಹಶೀಲ್ದಾರ್‌ರವರ ಮೇಲೂ attack ಆಯಿತು. ಗುಲ್ಬರ್ಗಾ, ಯಾದಗಿರಿಯಲ್ಲೂ ಸಹ ಪ್ರಾಮಾಣಿಕ ಅಧಿಕಾರಿಗಳು ಏನಾದರು ತಡೆ ಹಿಡಿಯಲು ಹೋದರೆ, ಅವರ ಮೇಲೆ ಸಹ ಮಾರಣಾಂತಿಕವಾದ ಹತ್ಯೆಗಳು ನಡೆಯುತ್ತಿವೆ. ನಿಮ್ಮ ಸರ್ಕಾರ ಬಂದು ನಾಲ್ಕು ವರ್ಷ ಆದರೂ ಅಕ್ರಮ ಮರಳು ಗಣಿಗಾರಿಕೆಯನ್ನು ತಡೆಯಲು ಇನ್ನೂ ಏಕೆ ಆಗಿಲ್ಲ. ನಿಮ್ಮ ಇಲಾಖೆ ಕೆಲಸ ಮಾಡುತ್ತದೋ ಇಲ್ಲವೋ ಎನ್ನುವ ಪ್ರಶ್ನೆಯನ್ನು ನಾನು ಕೇಳಬೇಕಾಗುತ್ತದೆ. ಇವತ್ತು ನೀವು ನಿಜವಾಗಿ

14-06-2017

ಪ್ರಾಮಾಣಿಕವಾಗಿ ಮಾಡಿದ್ದರೆ ನಿಮ್ಮ ರೆವಿನ್ಯೂ ಬೇಕಾಗಿತ್ತು ಬಜೆಟ್‌ಗೆ, ಇನ್ನೂ ಹೆಚ್ಚು ನಿರೀಕ್ಷಿತ ರೆವಿನ್ಯೂ ಬರಬಹುದಾಗಿತ್ತು. ರೆವಿನ್ಯೂ ಜಾಸ್ತಿ collection ಮಾಡಬಹುದಾಗಿತ್ತು. ಅದನ್ನು regularize ಮಾಡುವುದಕ್ಕೇ ತಯಾರಿಲ್ಲ. ಏಕೆಂದರೆ ಇದನ್ನು regularize ಮಾಡುವುದಕ್ಕೆ ಯಾರಿಗೂ ಮನಸಿಲ್ಲ. ಏಕೆಂದರೆ, ಇದರಿಂದ ಸಾಕಷ್ಟು ಮಾಮೂಲು ವಸೂಲಾಗುತ್ತಿದೆ. ಮಾಮೂಲು ವಸೂಲಾಗುವುದರಿಂದ ಎಲ್ಲರಿಗೂ ಒಳ್ಳೆಯದಾಗಿದೆ. ಅದಕ್ಕಾಗಿ ಅದನ್ನು ತಡೆ ಹಿಡಿಯುವ ಪ್ರಯತ್ನಗಳು ಎಲ್ಲಿಯೂ ಆಗುತ್ತಿಲ್ಲ. ಹೀಗಾಗಿ, ಈ ಒಂದು ಭ್ರಷ್ಟಾಚಾರದ **ಬ್ರಹ್ಮಾಂಡ** ನಡೆಯುತ್ತಿವೆ. ಈ ಅಕ್ರಮ ಮರಳು ಗಣಿಗಾರಿಕೆಯಲ್ಲಿ ಹತ್ತಾರು ಸಾವಿರ ಕೋಟಿಯ ಹಣದ ವ್ಯವಹಾರ ಇಲ್ಲಿ ಆಗುತ್ತಿದೆ ಎನ್ನುವ ಮಾತನ್ನು ನಾನು ಹೇಳಬೇಕಾಗಿದೆ. ಆ ರೀತಿಯ ವ್ಯವಹಾರ ನಡೆಯುತ್ತಿದ್ದೆ, ಮತ್ತೊಮ್ಮೆ ನಾನು ಇಲ್ಲಿ ಹೇಳುತ್ತೇನೆ. Rule-69 ನಲ್ಲಿ ನಾನು ಕೊಟ್ಟಿದ್ದೇನೆ. ಇದರ ಜೊತೆಗೆ ಸರ್ಕಾರಿ ಕಚೇರಿಗಳಲ್ಲಿ ಏನಾಗಿದೆಯೆಂದರೆ, ಕಂದಾಯ ಇಲಾಖೆ ಇರಬಹುದು, Administration ಬಗ್ಗೆ ನಾನು ಮಾತನಾಡುತ್ತೇನೆ. ಮುಖ್ಯ ಮಂತ್ರಿಗಳಿಗೆ ನಾನು ಹೇಳುತ್ತೇನೆ ಯಾವುದೋ ಒಂದು ತಹಶೀಲ್ದಾರ್ office ಗೆ surprise visit ಕೊಡಿ. ಮುಖ್ಯ ಮಂತ್ರಿಗಳು, ರೆವಿನ್ಯೂ ಮಂತ್ರಿಗಳು, District Ministers ನೀವು surprise ಆಗಿ visit ಕೊಡಿ. Random ಆಗಿ visit ಮಾಡಿ. ಯಾವುದೋ ಒಂದು ತಹಶೀಲ್ದಾರ್ officeಗೆ ಹೋಗಿ. ಅಲ್ಲಿ, ಮರಣದ ದಾಖಲೆ ಕೊಡಬೇಕಾದರೆ, ಜನನದ ಬಗ್ಗೆ entry ಮಾಡಬೇಕಾದರೆ, ಒಂದು ಆದಾಯದ certificate ಪಡೆಯಬೇಕಾದರೆ, ಜಾತಿ ಪ್ರಮಾಣ ಪತ್ರ ಬೇಕು ಎಂತಾದರೆ, ಇವತ್ತು ಅಲ್ಲಿ ಹಣ ಕೊಡಲಾರದೇ. . ಅಥವಾ ಯಾರೋ middle man ಇರುತ್ತಾರೆ, middle manಗೆ ಹಣ ಕೊಡಲಾರದೇ ನಿಮಗೆ ಯಾವುದೇ ಕಾಗದ ಪತ್ರಗಳು ತಹಶೀಲ್ದಾರ್ ಕಚೇರಿಯಿಂದ ಆಗಲೀ, ಯಾವುದೇ ಇಲಾಖೆಯಿಂದ ನಿಮಗೆ ಸಿಗುವುದಕ್ಕೆ ಸಾಧ್ಯವೇ ಇಲ್ಲ. ಇವತ್ತು ನಮ್ಮ ದೇಶಪಾಂಡೆಯವರಿಗೆ KIADB ಇಲಾಖೆ ಬಗ್ಗೆ ಗೊತ್ತಿದೆ. KIADBಯಲ್ಲೂ ಸಹ ಯಾವುದೋ ಒಂದು site allocation ಆಗಲಿ, ಮತ್ತೊಂದು ಆಗಲಿ ಬಹುಶ: ಆರ್.ವಿ.ದೇಶಪಾಂಡೆರವರು ಹೇಳಿದರೂ ಅಲ್ಲಿ ನಡೆಯುವುದಿಲ್ಲ. ಏಕೆಂದರೆ, ಅಲ್ಲಿ ಮಾಮೂಲು ವ್ಯವಸ್ಥೆ ಆಗಿ ಬಿಟ್ಟಿದೆ. ಇಷ್ಟು ಹಣವೆಂದು ಹೇಳಿ ನೀವು ಕೊಟ್ಟರೆ ನಿಮ್ಮದು ಎಲ್ಲಾ ಕೆಲಸಗಳಾಗುತ್ತವೆ, file movement ಆಗುತ್ತದೆ. ದೇಶಪಾಂಡೆಯವರು phone

14-06-2017

ಮಾಡಿ ಹೇಳಿದರೂ.. . ದೇಶಪಾಂಡೆಯವರು ಸಚಿವರು ಇರಬಹುದು, ನಾವು ಕೇರ್ ಮಾಡುವುದಿಲ್ಲ ಎನ್ನುತ್ತಾರೆ. ಆ ರೀತಿ ಪರಿಸ್ಥಿತಿ ಇದೆ.

ಶ್ರೀ ಆರ್.ವಿ.ದೇಶಪಾಂಡೆ: ಜಗದೀಶ್ ಶೆಟ್ಟರ್‌ರವರೆ, ತಾವು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದೀರಿ, ಭ್ರಷ್ಟಾಚಾರ ಇಲ್ಲವೇ ಇಲ್ಲವೆಂದು ವಾದ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಅಂದರೆ, ಆದರೆ, ಎಷ್ಟು ಪಾರದರ್ಶಕತೆ ತರುವುದಕ್ಕೆ ಸಾಧ್ಯ, ಅದನ್ನು ನಾವು ನೀವು ಎಲ್ಲಾ ಸೇರಿ ತರಬೇಕಾಗುತ್ತದೆ. ಯಾವುದಾದರೂ ನಿರ್ಧಿಷ್ಟವಾದ ಉದಾಹರಣೆ ಕೊಟ್ಟರೆ ಇದೇ ಕ್ಷಣ, ಇಲ್ಲೇ ನಾನು ಅದರ ಬಗ್ಗೆ enquiry ಮಾಡಿಸುತ್ತೇನೆ ಹಾಗೂ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಿರ್ದಿಷ್ಟವಾದ ಉದಾಹರಣೆ ಕೊಡಿ. ಏಕೆಂದರೆ generalize ಮಾಡಿದರೆ ಬಹಳ ಕಷ್ಟವಾಗುತ್ತದೆ. ನಿರ್ದಿಷ್ಟವಾದ ಉದಾಹರಣೆ ಕೊಡಿ, I will definitely take action against them.

ಶ್ರೀ ಜಗದೀಶ್ ಶೆಟ್ಟರ್: ಇಲ್ಲಿ ಏನಾಗಿದೆಯೆಂದರೆ, ಕೆಲವರು ಬಂದು ನಮ್ಮ ಕಡೆ ಹೇಳುತ್ತಾರೆ. ಆಗಲೇ ಆಶ್ರಯದ ಬಗ್ಗೆ ಹೇಳಿದರು, ನನ್ನ ಕಡೆ ಬಂದು ಹೇಳಿದಾಗ ಆಯಿತು ಲಿಖಿತವಾಗಿ ಬರೆದು ಕೊಡಿ ಎಂದು ಹೇಳಿದೆ, ಬರೆದುಕೊಟ್ಟರು. 30,000/-, 40,000/- ರೂಪಾಯಿಗಳನ್ನು ಆಶ್ರಯ ಮನೆ ಕೊಡುವುದಕ್ಕೆ ತೆಗೆದುಕೊಳ್ಳುತ್ತಾರೆಂದು ಬರೆದುಕೊಟ್ಟಿದ್ದಾರೆ, ಅದರ ಬಗ್ಗೆ ನಾನು complaint ಸಹ ಕೊಟ್ಟಿದ್ದೇನೆ. ಅಂದರೆ, ಎಷ್ಟೋ ಜನ, ಬಹಳಷ್ಟು ಜನ ಬೇರೆ ಬೇರೆ ಇಲಾಖೆಯಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ ವೈಯಕ್ತಿಕವಾಗಿ ಬಂದು ಹೇಳುತ್ತಾರೆ. ಇದನ್ನು ನೀವು random ಆಗಿ check ಮಾಡಿ. ನಾನು ಒಂದೇ ಒಂದು ಹೇಳುತ್ತಿಲ್ಲ, ಇವತ್ತು ಮುಖ್ಯ ಮಂತ್ರಿಗಳು ತಹಶೀಲ್ದಾರ್‌ರವರ ಕಚೇರಿಗೆ ಅಡ್ಡಾಡಲಿ, ಹಿಂದೆ ಕೆಲವು ಮುಖ್ಯ ಮಂತ್ರಿಗಳು ಸ್ವತ: ಮಾಡುತ್ತಿದ್ದರು. ದೇಶಪಾಂಡೆಯವರೆ, ನೀವೇ ನಿಮ್ಮ ಕಾರವಾರ ಜಿಲ್ಲೆಯ ತಹಶೀಲ್ದಾರ್ ಕಚೇರಿಗೆ ಹೋಗಿಬಿಡಿ, ಮುಖ್ಯ ಮಂತ್ರಿಗಳೇ surprise ಆಗಿ ಹೋಗಿ ಬಿಡಲಿ.

(ಮುಂದು)

14-06-2017/12-30/13/HRV/SSD

ಶ್ರೀ ಜಗದೀಶ್ ಶೆಟ್ಟರ್ (ಮುಂ.ವ)



ತಿದ್ದುಪಡಿಯಾಗದ uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

14-06-2017

ಆಗ ಅಲ್ಲಿಯ ಜನರ ಭಾವನೆ ಮತ್ತು ಆ ಜನರ ಆತಂಕ ಏನಿದೆ ಮತ್ತು ಅಲ್ಲಿ ಭ್ರಷ್ಟಾಚಾರ ಏನು ನಡೆದಿದೆ ಎಂಬುದು ನಿಮ್ಮ ಗಮನಕ್ಕೆ ಬರುತ್ತದೆ. ನನಗೆ ದಾಖಲೆ ಕೊಡಿ ಎಂದರೆ ಕೆಲವರು ನಮಗೆ ದಾಖಲೆ ಕೊಡುವುದಿಲ್ಲ, ಏಕೆಂದರೆ ಅವರ ಕೆಲಸವಾಗಬೇಕಿರುತ್ತದೆ, ಕೆಲಸವಾಗಬೇಕೆಂದಿರುವಾಗ ದಾಖಲೆಯನ್ನು ಕೊಟ್ಟು fight ಮಾಡುತ್ತಾ ಹೋದರೆ last result ಏನು, ನಾವು ಕೇವಲ fight ಮಾಡುವುದೇ ಆಗುತ್ತದೆ ಹೊರತು ನಮಗೆ relief ಕೊಡಿಸುವವರು ಯಾರು ಎನ್ನುವಂಥ ಪ್ರಶ್ನೆ ಅವರಿಂದ ಬರುತ್ತದೆ. ಆದುದರಿಂದ ಅಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ನಮ್ಮ ಗಮನಕ್ಕೆ ತರುತ್ತಾರೆ. ಇದು ಒಂದು ವ್ಯವಸ್ಥೆಯಾಗಿದೆ. ಇದರ ಬಗ್ಗೆ ಸರ್ಕಾರ ಬಹಳಷ್ಟು ಗಮನ ತೆಗೆದುಕೊಳ್ಳಬೇಕು. ಇನ್ನು ಇವತ್ತು ಪೋಲಿಸ್ ಸ್ಟೇಷನ್‌ನಲ್ಲಿ F.I.R. ಹಾಕುವುದರಲ್ಲಿಯೂ ಕೂಡ ಬೇಗ ಕ್ರಮ ತೆಗೆದುಕೊಳ್ಳುತ್ತಿಲ್ಲ. ಯಾರೋ aggrieved party ಇರುತ್ತಾನೆ, ಅವನು ಒಂದು complaint file ಮಾಡಬೇಕೆಂದರೆ ನಮ್ಮಂಥವರು, ಶಾಸಕರಾಗಲಿ, leader of opposition ಆಗಲಿ, ಹೀಗೆ ಮತ್ತೊಬ್ಬರಾಗಲಿ, ನಮ್ಮಂಥವರು ಪೋಲಿಸ್ ಸ್ಟೇಷನ್‌ಗೆ ಫೋನ್ ಮಾಡಿ ಹೇಳಬೇಕು, ನೋಡಪ್ಪಾ ಅಲ್ಲೇನೋ ಅವರಿಗೆ problem ಆಗಿದೆಯಂತೆ ಎಂದು ಹೇಳಬೇಕು. ಇತ್ತೀಚೆಗೆ ಬೆಂಗಳೂರಿನಲ್ಲಿ ಒಬ್ಬ S. P. ಗೆ ನಾನು ಫೋನ್ ಮಾಡಿ ಹೇಳಿದೆ, ಏನೆಂದರೆ ಅಲ್ಲಿ ಅವನು complaint ತೆಗೆದುಕೊಂಡಿದ್ದಾನೆ, ಒಂದು ಕಡೆ party ಯಿಂದ influence ಆಗಿ ಅಲ್ಲಿ ಅವರು charge sheet ಹಾಕುವುದಕ್ಕೇ ತಯಾರಿರಲಿಲ್ಲ, ಕೊನೆಗೆ ನಾನು S P ಗೆ ಫೋನ್ ಮಾಡಿ ಹೇಳಿದೆ, ನಿಮ್ಮ CPI, ಇವತ್ತು ಎಲ್ಲಾ complaint ಆಗಿದೆ, criminal case ಆಗಿದೆ, ಆದರೆ charge sheet file ಮಾಡುವುದಕ್ಕೆ ತಯಾರಿಲ್ಲ, ನಾಳೆಯೇ file ಮಾಡಿಸಿ, ಎಂದೆ. ಆರಾರು ತಿಂಗಳಾಗಿದೆ, ಅವರು ಪಾಪ ಎಲ್ಲಾ ಕಡೆ ಅಡ್ಡಾಡಿ ಬಂದು ಕಡೆಗೆ ನನ್ನ ಕಡೆಗೆ ಬಂದಿದ್ದರು. ನಾನೇ ಸ್ವತ: ಫೋನ್ ಮಾಡಿದ್ದೇನೆ. ನಾನು ಫೋನ್ ಮಾಡಿ ನಾಳೆ ಅಸೆಂಬ್ಲಿಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ ಎಂದು ಹೇಳಿದ ಮೇಲೆ ಈಗ charge sheet ಹಾಕುವುದಕ್ಕೆ ವಿಚಾರ ಮಾಡುತ್ತಿದ್ದಾನೆ. ಅಂದರೆ ಯಾವ ರೀತಿ ಪರಿಸ್ಥಿತಿಯಿದೆ ನೋಡಿ, pressure ತರಬೇಕು, ಇವರಿಂದ usual course ನಲ್ಲಿ ನಡೆಯುವಂಥ process, ಅಂದರೆ ಆಡಳಿತ ವ್ಯವಸ್ಥೆ ಹೇಗಿರಬೇಕು ಎನ್ನುವುದರ ಬಗ್ಗೆ ಇವತ್ತು ಇಲ್ಲಿ ಹೇಳುತ್ತಿದ್ದೇನೆ. ಪೋಲಿಸ್

14-06-2017

ಸ್ಟೇಷನ್ ಬಗ್ಗೆ ಹೇಳಬೇಕೆಂದರೆ, ಹುಬ್ಬಳ್ಳಿಯಲ್ಲಿ ಒಂದು ಘಟನೆಯಾಯಿತು, ಅಲ್ಲಿ ಚಂದನ್ ಕಾಲೋನಿ ಎಂಬುದೊಂದು ಕಾಲೋನಿಯಿದೆ. ನೋಡಿ ಇವತ್ತು ನಾವು ಬಿಹಾರದಲ್ಲಿದ್ದೇವೋ ಅಥವಾ ಎಲ್ಲಿದ್ದೇವೋ ಎಂದು ವಿಚಾರ ಮಾಡಬೇಕಾಗಿದೆ. ಬಿಹಾರದಲ್ಲಿ ಹಿಂದೆ ಕೆಲವೊಂದು ಘಟನೆಗಳು ನಡೆಯುತ್ತಿದ್ದವು, ಯಾರೋ ಯಾರೋ ಬಂದು ಯಾರದ್ದೋ ಆಸ್ತಿಯನ್ನು ಲಪಟಾಯಿಸುವುದು, ಯಾರದ್ದೋ ಆಸ್ತಿಯನ್ನು demolish ಮಾಡಿಕೊಂಡು ಹೋಗುವುದು, ನಾವು ಹಿಂದೆ ಈ ರೀತಿಯ ಗೂಂಡಾಗಿರಿಯಿದೆಯೆಂದು ಕೇಳುತ್ತಿದ್ದೆವು. ಇತ್ತೀಚೆಗೆ ನಡೆದಿರುವ ಪ್ರಕರಣದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ದೇಶಪಾಂಡೆಯವರೆ, ನೀವು ಒಂದು ರಿಪೋರ್ಟ್‌ನ್ನು ಅಲ್ಲಿಯ ಪೋಲಿಸ್ ಕಮಿಷನರ್‌ರವರಿಂದ ತರಿಸಿಕೊಳ್ಳಿ. ಅಲ್ಲಿ ಚಂದನ್ ಕಾಲೋನಿಯೆಂದಿದೆ, ಅಲ್ಲಿ ಸುಮಾರು ನೂರಾರು ಬಡ ಕುಟುಂಬದವರು ಹದಿನ್ನೈದು ಇಪ್ಪತ್ತು ವರ್ಷದಿಂದ ಗುಡಿಸಲು ಹಾಕಿಕೊಂಡು ವಾಸವಿದ್ದಾರೆ. ಅದು ಅಕ್ರಮವೋ, ಸಕ್ರಮವೋ ಎಂಬ ಬಗ್ಗೆ ಕಾರ್ಪೊರೇಷನ್‌ನವರು ನೋಡಿಕೊಳ್ಳಲಿ. ಅದು ಅವರಿಗೆ ಬಿಟ್ಟದ್ದು. ಆದರೆ ಆ ಬಡ ಕುಟುಂಬದವರು ಅಲ್ಲಿ ಸುಮಾರು ಹದಿನ್ನೈದು ಇಪ್ಪತ್ತು ವರ್ಷದಿಂದ ಗುಡಿಸಲು ಹಾಕಿಕೊಂಡು ವಾಸವಿದ್ದಾರೆ. ಆದರೆ ಆ ಜಾಗಕ್ಕೆ ಇನ್ನೊಬ್ಬರು ಯಾರೋ power of attorney ತೆಗೆದುಕೊಂಡು ಬಂದು, ಕೋರ್ಟ್‌ನಲ್ಲಿ ಇದರ ಬಗ್ಗೆ case ಹಾಕಿಲ್ಲದಿದ್ದರೂ ಇದು ನಮ್ಮ ಜಾಗ ನಾವು power of attorney holder ಇದ್ದೇವೆ ಎಂದು ಹೇಳಿ ಅಲ್ಲಿರುವ ಬಡವರ ಕಡೆ ಬಂದು ಜಾಗ ಖಾಲಿ ಮಾಡಬೇಕು ಎಂದಿದ್ದಾರೆ. ಅಲ್ಲಿಯ ಬಡವರು ನಾವು ಹದಿನ್ನೈದು ಇಪ್ಪತ್ತು ವರ್ಷದಿಂದ ನಾವು ಇಲ್ಲೇ ವಾಸವಿದ್ದೇವೆಂದು ಹೇಳಿದರೂ ಕೇಳಿಲ್ಲ. ಜೆ.ಸಿ.ಬಿ. ಯಂತ್ರ ತಂದು ಅಲ್ಲಿದ್ದ ಆ ಮನೆಗಳನ್ನು demolish ಮಾಡಿ ಆ ಜನರನ್ನು ಬೀದಿಗೆ ತಳ್ಳುವಂಥ ಕೆಲಸವನ್ನು ಮಾಡುತ್ತಾರೆ. ಅಲ್ಲಿರುವ ಹಳೆ ಹುಬ್ಬಳ್ಳಿ ಪೋಲಿಸ್ ಸ್ಟೇಷನ್, ಇಂಡಿಪಂಪ್ ಪೋಲಿಸ್ ಸ್ಟೇಷನ್‌ನಲ್ಲಿ ಆ ಜನರು complaint ಕೊಡುವುದಕ್ಕೆ ಹೋದರೆ ಅಲ್ಲಿ complaint ತೆಗೆದುಕೊಂಡಿಲ್ಲ. ಕಡೆಗೆ ಆ ಬಡ ಜನಗಳು ನನ್ನ ಮನೆಗೆ ಬಂದು ಅಳುವುದಕ್ಕೆ ಪ್ರಾರಂಭಿಸಿದರು. ನಮಗೆ ಈ ರೀತಿ ತೊಂದರೆಯಾಗಿದೆ, ನಾವೆಲ್ಲರೂ ಈಗ ಬೀದಿಗೆ ಬಿದ್ದಿದ್ದೇವೆ, ಜೆ.ಸಿ.ಬಿ. ಯಂತ್ರ ತೆಗೆದುಕೊಂಡು ಬಂದು ಕೋರ್ಟ್ ಆರ್ಡರ್ ಇಲ್ಲದಿದ್ದರೂ ಕೂಡ ನಮ್ಮ ಎಲ್ಲಾ ಮನೆಗಳನ್ನು ಕೆಡವಿ ಹಾಕುವಂಥ ಕೆಲಸ ಮಾಡುತ್ತಿದ್ದಾರೆ, ದಯವಿಟ್ಟ ಬನ್ನಿ ಎಂದರು. ಆಗ ರಾತ್ರಿ 8.00 ಗಂಟೆಯಾಗಿತ್ತು.

ರಾತ್ರಿ 8.00 ಗಂಟೆಗೆ ನಾನು ಅಲ್ಲಿಗೆ ಹೋದೆ. ಅಷ್ಟು ಹೊತ್ತಿಗಾಗಲೇ ಬಹಳಷ್ಟು ಮನೆಗಳನ್ನು ಕೆಡವಿದ್ದರು, ನೂರರಲ್ಲಿ ಆಗಲೇ ಅರ್ಧ ಮನೆಗಳನ್ನು ಕೆಡವಿಬಿಟ್ಟಿದ್ದರು. ನಾನು ಅಲ್ಲಿಯ ಇನ್ಸ್‌ಪೆಕ್ಟರ್‌ರವರನ್ನು ಕೇಳಿದೆ, ನಾವೇನು ಬಿಹಾರದಲ್ಲಿದ್ದೇವೋ ಅಥವಾ ಕರ್ನಾಟಕದಲ್ಲಿದ್ದೇವೋ ಎಂದೆ. ಜೆ.ಸಿ.ಬಿ. ಯಂತ್ರವನ್ನು ತೆಗೆದುಕೊಂಡು ಬಂದು ಮನೆಗಳನ್ನು ಕೆಡವಿ ಹಾಕಿಸುವುದಕ್ಕೆ ಅವರಿಗೆ ಅಧಿಕಾರ ಕೊಟ್ಟವರ್ಯಾರು? ನೀವೇನು ಮಾಡುತ್ತಿದ್ದಿರಿ, complaint ಏಕೆ ತೆಗೆದುಕೊಳ್ಳಲಿಲ್ಲವೆಂದ ಮೇಲೆ ಅವತ್ತಿನಿಂದ ಯಥಾಸ್ಥಿತಿ ಕಾಯ್ದುಕೊಂಡು ಬಂದಿದ್ದಾರೆ. ಆಗ ಬಿದ್ದಂಥ ಮನೆಗಳು ಯಥಾಸ್ಥಿತಿ ಹಾಗೆಯೇ ಇದೆ.

ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ್:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಚಂದನ್ ನಗರದ ಬಗ್ಗೆ ಹೇಳಿದರಲ್ಲ ಆ ನಗರ ನನ್ನ ಕ್ಷೇತ್ರದಲ್ಲಿ ಬರುತ್ತದೆ. ನಾನು ಊರಿನಲ್ಲಿರದಿದ್ದಾಗ ಸಾಹೇಬರ ಹತ್ತಿರ ಅಲ್ಲಿಯ ಜನರು ಹೋದಾಗ ಸಾಹೇಬರು ರಾತ್ರೋ ರಾತ್ರಿ ಹೋಗಿ ಪೋಲಿಸರ ಹತ್ತಿರ ಮಾತನಾಡಿ ಆ ಕೆಲಸವನ್ನು ನಿಲ್ಲಿಸಿದರು. ಈಗಾಗಲೇ ಘಟನೆ ನಡೆದು ಒಂದು ತಿಂಗಳಾಗಿದ್ದರೂ ಕೂಡ ಇವತ್ತಿಗೂ ಆ ಬಡವರು ಕೊಟ್ಟಿರುವ ದೂರಿಗೆ ಸಂಬಂಧಿಸಿದಂತೆ F.I.R. ಕೊಟ್ಟಿಲ್ಲ. ನಾನು ಮೊನ್ನೆ ಪೋಲಿಸ್ ಇನ್ಸ್‌ಪೆಕ್ಟರ್‌ರವರನ್ನು ಕರೆದು ತಾಕೀತು ಮಾಡಿದ ಮೇಲೆ ಇದುವರೆಗೂ ಅವರು F.I.R. ಕೊಟ್ಟಿಲ್ಲ.

**( ಈ ಹಂತದಲ್ಲಿ ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿಯವರು ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದರು )**

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್(ಮಡಿಕೇರಿ):-ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯತಿಯ ಒಬ್ಬ ಸದಸ್ಯ ಹಗಲೊತ್ತೇ 5 ಸಾವಿರ ಕಲ್ಲುಗಳನ್ನು ಅಲ್ಲಿಯ ಕೆರೆಯಿಂದ ಒಡೆದು ತೆಗೆದುಕೊಂಡು ಹೋಗಿದ್ದಾನೆ. ಅವನ ಮೇಲೆ complaint ಕೊಟ್ಟರೆ case ಕೂಡ ದಾಖಲೆ ಮಾಡಲಿಲ್ಲ. ಇಲ್ಲಿಯವರೆವಿಗೂ ನಾನು ಪೋಲಿಸ್ ಸ್ಟೇಷನ್‌ಗೆ ಫೋನ್ ಮಾಡುತ್ತಿದ್ದೇನೆ. ಆದರೂ ಇದುವರೆಗೂ case ಮಾಡಿಲ್ಲ. ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸದನಕ್ಕೆ ಬಂದಿದ್ದಾರೆ. ಇದರ ಬಗ್ಗೆ ತಾವು ಗಮನ ಹರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಾಕೂರು, ಶಿರಂಗಾಣ ಎಂದು ಹೇಳುವಂಥ ಕೊಡಗಿನ ಪಂಚಾಯತಿಯೊಂದರಲ್ಲಿ ಕೆರೆಯ ಸುಮಾರು 5 ಸಾವಿರ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಕಲ್ಲನ್ನು ಒಬ್ಬ ಪಂಚಾಯತಿ ಸದಸ್ಯ ತೆಗೆದುಕೊಂಡು ಹೋಗಿದ್ದರು ಕೂಡ ಅಲ್ಲಿಯ ಗ್ರಾಮ ಪಂಚಾಯತಿಯವರು complaint ಕೊಡಲಿಲ್ಲ, complaint ಅನ್ನು ಒತ್ತಾಯದ ಮೇಲೆ ಕೊಟ್ಟ ನಂತರ ಪೋಲಿಸ್‌ನವರು ಇದುವರೆಗೂ case ದಾಖಲು ಮಾಡಲಿಲ್ಲ. T.V. ಯಲ್ಲಿ ಬಂದಿದೆ, ಪತ್ರಿಕೆಯಲ್ಲಿ ಇದರ ಬಗ್ಗೆ ಬಂದಿದೆ. ಇಲ್ಲೇಲ್ಲಾ ಬಂದಿದ್ದರೂ ಕೂಡ ಇದುವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲದಂಥ ಪರಿಸ್ಥಿತಿಯಿದೆ. ದಯವಿಟ್ಟು ತಾವು ಅದರ ಬಗ್ಗೆ ಗಮನ ಹರಿಸಬೇಕೆಂದು ತಮ್ಮನ್ನು ಒತ್ತಾಯ ಮಾಡುತ್ತೇನೆ. ನಾಕೂರು ಶಿರಂಗಾಣ, ಸೋಮವಾರಪೇಟೆ ತಾಲ್ಲೂಕು.

ಶ್ರೀ ಹೆಚ್.ಕೆ. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಯ):-ಮಾನ್ಯ ಸದಸ್ಯರೆ, ಈಗ ತಾವೇನು ಹೇಳಿದಿರೋ ಇದೇ ವಿವರಗಳನ್ನು ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕೇಳಿಸಿಕೊಳ್ಳುತ್ತಿದ್ದಾರೆ. ನೀವು ಮಾಡಿರತಕ್ಕಂಥ ಈ ವೇದಿಕೆ ಮೇಲಿನ ಹೇಳಿಕೆಯ ಹಿನ್ನಲೆಯೊಳಗೆ ಸೂಕ್ತ ಕ್ರಮಕ್ಕೆ ನಾವು ಸಂಬಂಧಿಸಿರತಕ್ಕಂಥ ಹಿರಿಯ ಅಧಿಕಾರಿಗೆ ಬರೆಯುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಉಪಧ್ಯಕ್ಷರೆ, ಈ ರೀತಿ ಇವತ್ತು ರೆವಿನ್ಯು ಇರಬಹುದು, ಇವತ್ತು ಪೋಲಿಸ್ ಸ್ಟೇಷನ್‌ನಲ್ಲಿ ನಮ್ಮ ಕಡೆಯಿಂದ ಒತ್ತಡ ಬಂದ ಮೇಲೆ complaint ತೆಗೆದುಕೊಳ್ಳುವುದು ಆಗುತ್ತಿದೆ. ಇವತ್ತು ಗೂಂಡಾಗಿರಿಯಿಂದ ಬಡವರ ಮನೆಗಳನ್ನು ಕೆಡುವಂಥದ್ದು ನಡೆಯುತ್ತಿದೆ. ಇದರ ಬಗ್ಗೆ ಯಾವುದೇ action ಸರ್ಕಾರದ ಕಡೆಯಿಂದ ಇಲ್ಲ. ಇದರ ಬಗ್ಗೆ ಸರ್ಕಾರದ ಅಧಿಕಾರಿಗಳ ಕಡೆಯಿಂದ ಯಾವುದೇ response ಇಲ್ಲ, DC ಮತ್ತು AC ಮತ್ತು ತಹಶೀಲ್ದಾರರು ಇದಕ್ಕೆ ಯಾವುದೇ ರೀತಿಯಲ್ಲಿಯೂ response ಮಾಡುತ್ತಿಲ್ಲ. ಬಹಿರಂಗವಾಗಿ ಇವತ್ತು ಯಾವ ರೀತಿಯಲ್ಲಿ ಗೂಂಡಾಗಿರಿ ನಡೆಯುತ್ತಿದೆಯೆಂದರೆ, ಹುಬ್ಬಳ್ಳಿಯಲ್ಲಿ ಶಿರೂಬಾಗ್ ಎಂದಿದೆ. ಅಲ್ಲಿ ಹತ್ತು ಗುಂಟೆ ಜಾಗವಿದೆ, ಅದು agriculture land ಎಂದಿದೆ, ಅಲ್ಲಿ ಒಬ್ಬ ವ್ಯಕ್ತಿ ಅದರ ಬಗ್ಗೆ NA ಮಾಡಿಸಿಲ್ಲ. ಅಲ್ಲಿ ಅಕ್ರಮವಾದಂಥ ಒಂದು ದೊಡ್ಡ ಕಾಂಪ್ಲೆಕ್ಸ್‌ನ್ನು ಕಟ್ಟುತ್ತಿದ್ದಾರೆ. ಇದಕ್ಕೆ permission ಕೊಟ್ಟಿಲ್ಲ. ಇದನ್ನು ಕಟ್ಟುತ್ತಿರುವುದು ಹುಬ್ಬಳ್ಳಿಯ ಶಿರೂಬಾಗ್‌ನಲ್ಲಿ. ನಾನು ಇದರ ಬಗ್ಗೆ DC ಯವರಿಗೆ ಮತ್ತು AC ಯವರಿಗೆ ಹೇಳಿ ಅಲ್ಲಿ ಅಕ್ರಮವಾಗಿ RCC ಯ Complex ಅನ್ನು ಕಟ್ಟುತ್ತಿದ್ದಾರೆ, ಇದರ ಬಗ್ಗೆ action ತೆಗೆದುಕೊಳ್ಳಿ ಎಂದು ಹೇಳಿದರೆ, ಆತ

14-06-2017

ಅವರಿಗೆ ಹೇಳುತ್ತಾನಂತೆ, ನಾನು ಒಂದು farm house ಕಟ್ಟುತ್ತಿದ್ದೇನೆಂದು. Farm house ಕಟ್ಟಲು permission ಬೇಕಾಗಿಲ್ಲ, ನಾನು ಕಟ್ಟುತ್ತೇನೆ, ಏನು ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ ಎಂದು ಹೇಳುತ್ತಾನಂತೆ, ಇದುವರೆಗೂ ಇದರ ಬಗ್ಗೆ DC ಯವರು ಕ್ರಮ ಕೈಗೊಂಡಿಲ್ಲ. ಅಲ್ಲಿರತಕ್ಕಂಥ HDMC ಕಮಿಷನರ್‌ರವರು ಕೂಡ ಕ್ರಮ ಕೈಗೊಂಡಿಲ್ಲ. ಈ ರೀತಿಯ ಒಂದು ವ್ಯವಸ್ಥೆಯಿದೆ. ಇಂದು ಭ್ರಷ್ಟಾಚಾರ ಎಲ್ಲ ಕಡೆಗೂ ಹೋಗಿಬಿಟ್ಟಿದೆ. ಈಗ Real Estate ಕಾನೂನನ್ನು ಕೇಂದ್ರ ಸರ್ಕಾರ ತೆಗೆದುಕೊಂಡು ಬಂದಿದೆ. ಈ ಕಾನೂನನ್ನು ತಂದು ಐದಾರು ತಿಂಗಳಾಗಿದೆ. Real Estate Regulation and Development Act, 2016 in short 'RERA' ಎನ್ನುತ್ತಾರೆ. ಇದು ಬಂದಿರುವುದರಿಂದ Real Estate lobby ಏನಿದೆಯಲ್ಲ ಇವತ್ತು ಗ್ರಾಹಕರಿಗೆ, plot ತೆಗೆದುಕೊಳ್ಳುವವರಿಗೆ, apartment ತೆಗೆದುಕೊಳ್ಳುವವರಿಗೆ ಏನೊಂದು ತೊಂದರೆಯನ್ನು ಕೊಡುತ್ತಿದ್ದರೋ ಅದೆಲ್ಲವನ್ನು regularize ಮಾಡುವುದಕ್ಕೆ ಇದರಲ್ಲಿ ಸಾಧ್ಯತೆಯಿದೆ. ಆದರೆ ಈ ರೀತಿಯ ಕಾನೂನು ಬಂದಮೇಲೆ ಮುಖ್ಯಮಂತ್ರಿಗಳೂ ಕೂಡ ಹೇಳಿದರು. ಇದನ್ನು welcome ಮಾಡುತ್ತೇವೆಂದು ಹೇಳಿ ಇದನ್ನು ಅನುಷ್ಠಾನ ಮಾಡುತ್ತೇವೆಂದರು. ಆದರೆ ನೋಡಿ ಏನು ಹೇಳಲಾಗಿದೆಯೆಂದು, the Karnataka Government had notified the draft rules in the month of October, 2016. Final rules on RERA should have been notified by end of November, 2016. ನವೆಂಬರ್ 2016 ರಲ್ಲಿ final notification ಆಗಬೇಕಾಗಿತ್ತು. Since then there is no development in implementing the Act. It is reported in many newspapers that some of the State Cabinet Ministers are pressurizing the Government of Karnataka to dilute the RERA Rules in Karnataka by keeping the on going projects outside the purview of RERA. ಈ on going project ಗಳಿವೆ, PAN India Movement for Real Estate

14-06-2017

Regulations ಅವರು ಒಂದು ಮನವಿಯನ್ನು ನನಗೆ ಕೊಟ್ಟಿದ್ದಾರೆ, ಅದರಲ್ಲಿ specifically ಹೇಳುತ್ತಾರೆ, ಕೆಲವು Cabinet Ministers ಈ ಒಂದು real estate ಕಾನೂನೇನಿದೆ ಇದನ್ನು ತಡೆಹಿಡಿಯುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಏಕೆ ತಡೆಹಿಡಿಯುವುದೆಂದರೆ ಇವತ್ತು on going project ಗಳೇನಿವೆಯಲ್ಲಾ ಅವೆಲ್ಲವೂ ಮುಗಿದು ಹೋಗಲೆಂದು. ಅದಕ್ಕಾಗಿ ನಾನು ಹೇಳುತ್ತಿದ್ದೇನೆ ಇಲ್ಲಿ vested interest ಇಲ್ಲಿ act ಮಾಡುತ್ತಿದೆ. ಇಲ್ಲಿಯೂ ಸಹಿತ ಇವತ್ತು ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಅದಕ್ಕಾಗಿ ಬಹುಶ: ಇತ್ತೀಚೆಗೆ ಪತ್ರಿಕೆಯಲ್ಲಿಯೂ ಕೂಡ ನೋಡಿದ್ದೇವೆ, ಇವತ್ತು ಕರ್ನಾಟಕದ ಭ್ರಷ್ಟಾಚಾರದ ಬಗ್ಗೆ ಒಂದು N.G.O. ಸಂಸ್ಥೆಯವರು ಸಮೀಕ್ಷೆ ಮಾಡಿರುವುದು Deccan Herald ನಲ್ಲಿ ಬಂದಿದೆ ಮತ್ತು Times of India ದಿನ ಪತ್ರಿಕೆಯಲ್ಲಿ ಬಂದಿದೆ. Deccan Heraldನಲ್ಲಿ 'Think Tank ranks Karnataka most corrupt State, Himachal least.' Times of Indiaದಲ್ಲಿ Karnataka most corrupt State for public services.' ಇದರಲ್ಲಿ ಏನು ಹೇಳಿದ್ದಾರೆಂದರೆ: - 'A survey conducted by a private think tank has ranked Karnataka India's most corrupt state. Its findings were announced on Thursday. The CMS-India Corruption Study said more than 33% of households in the state believe the state government is not at all committed to reducing graft. Among the households surveyed, 77% said they had to pay bribes for public services, signalling an increase of corruption in the state. Karnataka had emerged less corrupt, with 57% reporting

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

bribe-giving, in a similar study in 2005. Bihar was then dubbed the most corrupt state with a score of 74%. '

(Contd...)

14.06.2017/12.40/14/HBU-SSD

ಶ್ರೀ ಜಗದೀಶ್ ಶೆಟ್ಟರ್(ಮುಂದು) :

2005 ರಲ್ಲಿ ಬಿಹಾರದಲ್ಲಿ 74% corruption ಇತ್ತು. ಆದರೆ ಇವತ್ತು ಕರ್ನಾಟಕದಲ್ಲಿ 77% corruption ಇದೆ ಎಂದು rank ಕೊಟ್ಟಿದ್ದಾರೆ. ಇದು highest. ಹಿಂದೆ 2005 ರಲ್ಲಿ ಕರ್ನಾಟಕದಲ್ಲಿ 57% corruption ಇತ್ತು. ನಂತರ ಆಂಧ್ರಪ್ರದೇಶ 74% rank, ತಮಿಳುನಾಡು 68%, ಮಹಾರಾಷ್ಟ್ರ 57%, ಜಮ್ಮು ಮತ್ತು ಕಾಶ್ಮೀರ್ 44% ಇದೆ. Least corrupt states ಅಂದರೆ ಹಿಮಾಚಲ ಪ್ರದೇಶ 3%, ಕೇರಳ 4% ಛತ್ತೀಸ್‌ಗಡ್ 13% corruption ಇದ್ದೆ. ಈ ರೀತಿಯಾಗಿ ಒಂದು ಸಂಸ್ಥೆಯವರು ಸರ್ವೆ ಮಾಡಿದ್ದಾರೆ. ಇದು ಯಾವುದೋ ಒಂದು ಪೊಲಿಟಿಕಲ್ ಸಂಸ್ಥೆಯವರು ಅಥವಾ ಮತ್ತೊಂದು ಸಂಸ್ಥೆಯವರು ಮಾಡಿರುವುದಲ್ಲ. ಇವತ್ತು Karnataka most corrupt state ಎಂದು ರ್‍ಯಾಂಕ್ ಬಂದಿದೆ, ನಾವು ಬೇರೆಯದರಲ್ಲಿ ನಂಬರ್ ಒನ್ ರ್‍ಯಾಂಕ್ ತೆಗೆದುಕೊಳ್ಳಿ ಎಂದು insist ಮಾಡಿದರೆ corruption ನಲ್ಲಿ ನಾವು No.1 state ಎಂದು ತೆಗೆದುಕೊಳ್ಳುತ್ತೇವೆಂದು ಹೇಳಿ, ನಾವು ಯಾವುದರಲ್ಲಿ ನಂಬರ್ 1 ಇದ್ದೇವೆಂದರೆ ಭ್ರಷ್ಟಾಚಾರದಲ್ಲಿ ನಂಬರ್ 1 ಇದ್ದೇವೆಂದು ಹೇಳುತ್ತಾರೆ. ನಾಲ್ಕೈದು ಇಲಾಖೆಗಳಲ್ಲಿ ನಡೆಯುವ corruption ಬಗ್ಗೆ ನಾನು ಆಗಲೇ ಉದಾಹರಣೆ ಕೊಟ್ಟೆ. ಪ್ರತಿಯೊಂದು ಇಲಾಖೆಗಳು ಬಹಳ ದೊಡ್ಡದಿವೆ. ಅವೆಲ್ಲ ನೋಡಿ, ಇವತ್ತು NGO report



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ನೋಡಿದಾಗ ಇವತ್ತು ಕರ್ನಾಟಕ ಭ್ರಷ್ಟಾಚಾರದಲ್ಲಿ ನಂಬರ್ ಒನ್ ಆಗಿದೆ. ಇದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಈ ಭ್ರಷ್ಟಾಚಾರವನ್ನು ತೊಡೆದು ಹಾಕುವುದಕ್ಕೆ ಬಹಳ ಪ್ರಾಮಾಣಿಕವಾದ ಪ್ರಯತ್ನ ನಡೆಯಬೇಕಾಗಿದೆ. ಇಲ್ಲದಿದ್ದರೆ ಇನ್ನೂ worst situation ಆಗುತ್ತದೆ. ಹೀಗಾಗಿ ಈ ವಿಚಾರದ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ ಎನ್ನುವಂಥ ವಿಚಾರವನ್ನು ನಾನು ಹೇಳುತ್ತಿದ್ದೇನೆ. ನಾನು ಆಗಲೇ ಹೇಳಿದಂತೆ ಒಬ್ಬ ಕಾರ್ಮಿಕ ರಾಜಕಾಲುವೆಯಲ್ಲಿ ಮುಳುಗಿ ಹೋದ, ಅದಕ್ಕೆ ಇನ್ನು ಪರಿಹಾರ ಸಿಗಲಿಲ್ಲ. ಇನ್ನೊಂದು ಘಟನೆ ಏನೆಂದರೆ ಒಬ್ಬ ಲೆಫ್ಟಿನಂಟ್ ಕರ್ನಲ್ ನಿರಂಜನ್ ಎನ್ನುವವರು 2016ರಲ್ಲಿ ಪಠಾಣ್‌ಕೋಟ್ ವಾಯು ನೆಲೆಯಲ್ಲಿ ಉಗ್ರರ ದಾಳಿಯಲ್ಲಿ ಹುತಾತ್ಮನಾದ. ಇವರ ಹೆಸರನ್ನು ಇಡೀ ದೇಶದಲ್ಲಿ ಎಲ್ಲರೂ ಕೇಳಿದ್ದಾರೆ. ಆತನ ಬಗ್ಗೆ ಹೇಳುವುದಾದರೆ ಆತ ಬಾಂಬ್‌ಗಳನ್ನು ನಿಷ್ಕ್ರಿಯ ಮಾಡುವುದರಲ್ಲಿ expert. ಅಮೆರಿಕಾ ತನಿಖಾ ಸಂಸ್ಥೆಯಾದ ಎಫ್.ಬಿ.ಐ ನಲ್ಲಿ ತರಬೇತಿ ಪಡೆದವರು. ಅವರು ಎನ್.ಎಸ್.ಜಿ ಮುಖ್ಯ ಕಮಾಂಡ್ ಆಗಿ 600 ಕ್ಕೂ ಹೆಚ್ಚು ಬಾಂಬ್‌ಗಳನ್ನು ನಿಷ್ಕ್ರಿಯಗೊಳಿಸಿದವರು ಮತ್ತು ಈ ಮೂಲಕವಾಗಿ ಸಾವಿರಾರು ಮಂದಿಯ ಜೀವಗಳನ್ನು ಉಳಿಸಿದವರು. ಈ ಮಾಹಿತಿಯನ್ನು ಎನ್.ಎಸ್.ಜಿ ಸಂಸ್ಥೆಯವರು ಕೊಟ್ಟಿದ್ದಾರೆ. ಅವರು ಹುತಾತ್ಮರಾದ ಮೇಲೆ ಅವರ ಬಾಡಿಯನ್ನು ಇಲ್ಲಿಗೆ ತಂದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸ್ವತ: ಅವರ ಮನೆಗೆ ಹೋಗಿದ್ದರಲ್ಲದೆ, ಇಲ್ಲಿನ ಮೇಯರ್ ಮತ್ತು ಶಾಸಕರು ಎಲ್ಲರೂ ಹೋಗಿದ್ದರು. ಅಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಾರ್ಪೋರೇಷನ್ ಅಧಿಕಾರಿಗಳು ಅವರ ಕುಟುಂಬದವರಿಗೆ ಒಂದು ಪ್ರಾಮಿಸ್ ಮಾಡಿದ್ದರು. ನಮ್ಮ ಬೆಂಗಳೂರಿನ ವ್ಯಕ್ತಿ ನಿರಂಜನ್, ಲೆಫ್ಟಿನೆಂಟ್ ಕರ್ನಲ್ ಹುತಾತ್ಮರಾಗಿದ್ದಾರೆ, ಅವರ ನೆನಪು, ಸ್ಮರಣೆ ಯಾವಾಗಲೂ ಇರಬೇಕು. ಹಾಗಾಗಿ ನಾವು ಒಂದು ಪ್ರಮುಖವಾದ ರಸ್ತೆಗೆ ಅವರ ಹೆಸರನ್ನು ಇಡುತ್ತೇವೆಂದು ಹೇಳಿದರು. ಆ ಬಗ್ಗೆ ಬಿ.ಬಿ.ಎಂ.ಪಿ.ಯ ವಾರ್ಡ್ ನಂಬರ್ ಸಂಖ್ಯೆ ದೊಡ್ಡ ಬೊಮ್ಮಸಂದ್ರ ವ್ಯಾಪ್ತಿಯಲ್ಲಿ ಬರುವ ದೊಡ್ಡ ಬೊಮ್ಮಸಂದ್ರ ಹೆಬ್ಬಾಗಿಲಿನಿಂದ ನಂಜಪ್ಪ ವೃತ್ತದವರೆಗಿನ ರಸ್ತೆಗೆ ಲೆಫ್ಟಿನೆಂಟ್ ಕರ್ನಲ್ ಈ.ಕೆ.ನಿರಂಜನ್ ರಸ್ತೆ ಎಂದು ನಾಮಕರಣ ಮಾಡುವುದಕ್ಕೆ ಸರ್ವಾನುಮತದ ನಿರ್ಣಯ ಕೂಡ ದಿನಾಂಕ 18.09.2016ರಲ್ಲಿ ಆಯಿತು. ಆ ನಿರ್ಣಯವಾದ ಮೇಲೆ ಅಲ್ಲಿಂದ ಇಲ್ಲಿಯವರೆಗೆ ಸರ್ಕಾರಕ್ಕೆ ನೆನಪಿಲ್ಲ, ಮಾನ್ಯ ಮುಖ್ಯಮಂತ್ರಿಯವರಿಗೆ ನೆನಪಿಲ್ಲ,



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 14-06-2017

ಅವರೆಲ್ಲ ಮರೆತುಹೋಗಿದ್ದಾರೆ. ಇತ್ತೀಚೆಗೆ NGO ಸಂಸ್ಥೆಯ ಯುವಕರು ಇದರ ಬಗ್ಗೆ ಸದಾ ನೆನಪು ಮಾಡುವಂಥ ಕೆಲಸವನ್ನು ಮಾಡಿದಾಗಲೂ ಸಹ ನಿರಂಜನ್ ಅವರ ಹೆಸರನ್ನು ರಸ್ತೆಗೆ ಇಡುವುದಕ್ಕೆ ತಯಾರಾಗಿಲ್ಲ. ಆದರೆ ಅದರ ವ್ಯತಿರಿಕ್ತವಾಗಿ ಏನಾಗಿದೆ ಮತ್ತು ಬಹಳ ಬೇಜಾರಿನ ಸಂಗತಿ ಏನೆಂದರೆ ಮಾನ್ಯ ಸಚಿವರಾದಂಥ ಕೃಷ್ಣಬೈರೇಗೌಡರು ಮಹಾಪೌರರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಬಿ.ಎಸ್. ನಾಗರಾಜ್ ಅವರು, ಅವರ ಪತ್ರದ ಆಧಾರದ ಮೇಲೆ ದೊಡ್ಡ ಬೊಮ್ಮಸಂದ್ರದ ಮುಖ್ಯ ರಸ್ತೆ ತಿರುವಿಗೆ ಸ್ವಾತಂತ್ರ್ಯ ಹೋರಾಟಗಾರರಾದ ಪೇಟೆ ಸಿದ್ದಪ್ಪ ತಿರುವು ಎಂದಿದ್ದು, ಅವರ ಜೀವಿತಾದಿಯಲ್ಲಿ ಸದರಿ ರಸ್ತೆ ಅಗಲೀಕರಣಕ್ಕೆ ಸ್ವಂತ ಜಾಗವನ್ನು ಬಿಟ್ಟುಕೊಟ್ಟಿದ್ದ ಹಿನ್ನೆಲೆಯಲ್ಲಿ ಆ ಒಂದು ರಸ್ತೆಗೆ ಪೇಟೆ ಸಿದ್ದಪ್ಪ ತಿರುವು ಎಂಬ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕೋರಿರುತ್ತಾರೆ. ಬಿ.ಎಸ್. ನಾಗರಾಜ್ ಬಿನ್ ದಿವಾನ್ ಪೇಟೆ ಸಿದ್ದಪ್ಪ ಅವರ ಮನವಿಯನ್ನು ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅವರು ಪತ್ರ ಬರೆಯುತ್ತಾರೆ. ಮಾನ್ಯ ಕೃಷ್ಣಬೈರೇಗೌಡರ ಪತ್ರ ಹೋದಮೇಲೆ ಹುತಾತ್ಮರಾದ ನಿರಂಜನರವರ ಹೆಸರು ಇಡುವುದು ಹಾಗೆ ನೆನಗುದಿಗೆ ಬಿದ್ದಿದೆ. ಈ ರೀತಿಯಾದರೆ ಹೇಗೆ?

ಶ್ರೀ ಕೃಷ್ಣ ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮಾನ್ಯ ಸುರೇಶ್ ಕುಮಾರ್ ಹಾಗೂ ಅಶ್ವತ್ಥನಾರಾಯಣ್ ರವರು ಇದ್ದಹಾಗೆ ಇಲ್ಲಿ. ಮಾನ್ಯ ವಿರೋಧ ಪಕ್ಷದ ನಾಯಕರ್ಮ ಮಾಹಿತಿಗೆ ಹೇಳುವುದಾದರೆ ಒಂದು ದೊಡ್ಡ ಫ್ಲೈಓವರ್‌ಗೆ ಅವರ ಹೆಸರು ಇಟ್ಟಿದೆ. ಮಾನ್ಯ ನಿರಂಜನ್ ರವರ ಹೆಸರನ್ನು ಮಾನ್ಯ ಮುಖ್ಯಮಂತ್ರಿಗಳೇ ಹೋಗಿ ಮೇಲ್ಸೇತುವೆಗೆ ನಾಮಕರಣ ಮಾಡಿ, ಉದ್ಘಾಟನೆಯನ್ನು ಸಹ ಮಾಡಿದ್ದಾರೆ. ಬಹುಶ: ತಮಗೆ ಮಾಹಿತಿ ಬಂದಿಲ್ಲ ಎಂದು ಕಾಣುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೂಡ ಠರಾವು ಆಗಿದೆ. ಆದಾದಮೇಲೆ ಅಧಿಕೃತವಾಗಿ ಹೆಸರಿಟ್ಟಿದೆ.

ಉಪಾಧ್ಯಕ್ಷರು : ನೀವು alternate ಆಗಿ ಏನಾದರೂ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ನಿರಂಜನ್‌ರವರ ಹೆಸರಿಡಬೇಕೆಂದು ಬಿಬಿಎಂಪಿ ಯಲ್ಲಿ ಒಂದು ನಿರ್ಣಯವಾಗಿದೆ. ಅಲ್ಲಿ ಇನ್ನೊಬ್ಬ ಸ್ವಾತಂತ್ರ್ಯ ಯೋಧರ ಹೆಸರು ಇದ್ದು, ಅದು ಇನ್ನೊಂದು dispute ಆಗಿದ್ದು, ಅದರ ಬಗ್ಗೆ ನಾನು ಹೋಗುವುದಿಲ್ಲ, ಅವರ ಬಗ್ಗೆ ನಾನು ಏನೂ ಪ್ರಶ್ನೆ ಮಾಡುವುದಿಲ್ಲ. ಒಂದು ಸಲ ಬಿಬಿಎಂಪಿ ಯಲ್ಲಿ ಆದಂಥ ನಿರ್ಣಯವನ್ನು ಚೇಂಜ್ ಮಾಡಿ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಒಬ್ಬ ಹುತಾತ್ಮ ನಿರಂಜನ ಬಗ್ಗೆ ಈ ರೀತಿ ಅವಹೇಳನ ಮಾಡುವ ಕೆಲಸ ಸರಿಯಲ್ಲ. ಹರಿಯಾಣದಲ್ಲಿ ಅವರ ಸ್ಮರಣಾರ್ಥವಾಗಿ ಐದು ಎಕರೆ ಜಾಗದಲ್ಲಿ ಒಂದು ಸಭಾಂಗಣ ನಿರ್ಮಾಣ ಮಾಡಿ ನಿರಂಜನ್ ಆಡಿಟೋರಿಯಂ ಎಂದು ಕಟ್ಟುತ್ತಾರೆ.

ಉಪಾಧ್ಯಕ್ಷರು : ಮಾಡಬಹುದು, ತಪ್ಪೇನಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಕೇರಳದಲ್ಲಿ ರಸ್ತೆ, ಉದ್ಯಾನವನ, ಸರ್ಕಾರಿ ಶಾಲೆಗೆ ಅವರ ಹೆಸರನ್ನಿಟ್ಟಿದ್ದಾರೆ. ಆದರೆ ನಮ್ಮ ಬೆಂಗಳೂರಿನ ಬಿಬಿಎಂಪಿ ಯಲ್ಲಿ ಒಂದು ನಿರ್ಣಯವಾಗಿರುವುದಕ್ಕೆ ಗೌರವ ಕೊಡುವುದಿಲ್ಲವೆಂದರೆ ಆ ಹುತಾತ್ಮ ನಿರಂಜನ್‌ರವರಿಗೆ ಮಾಡಿದ ಅಪಮಾನ ಎಂದು ಹೇಳುತ್ತೇನೆ. ಮೇಲ್ಸೇತುವೆಗೆ ಇಟ್ಟಿದ್ದಾರೋ ಇಲ್ಲವೋ ನನಗೆ ಮಾಹಿತಿ ಇಲ್ಲ. ಏಕೆಂದರೆ ನಿನ್ನೆ ಮಧ್ಯಾಹ್ನ ಒಂದು ಯುವಕರ ಒಂದು ತಂಡ ಬಂದು, ನೋಡಿ ರಾಜ್ಯಸರ್ಕಾರ ಈ ರೀತಿ ನಿರ್ಲಕ್ಷ ಮಾಡುತ್ತಿದೆ, ಈ ವಿಚಾರದ ಬಗ್ಗೆ ನೀವು ಸದನದಲ್ಲಿ ಮಾತನಾಡಿ ಎಂದು ಹೇಳಿದರು. ಅದಕ್ಕೆ ನಾನು ಕೃಷ್ಣಬೈರೇಗೌಡರಿಗೆ ಲೀಡ್ ತೆಗೆದುಕೊಳ್ಳಿ, ಅದನ್ನು ವೆರಿಫೈ ಮಾಡಿ, ಆ ಸ್ವಾತಂತ್ರ್ಯ ಯೋಧರ ಹೆಸರನ್ನು ಮತ್ತೊಂದು ಕಡೆ ಬೇರೆ ಎಲ್ಲಾದರೂ ಹೆಸರು ಇಡಿ. ಆದರೆ ನಿರಂಜನ್ ರವರಿಗೆ ಈ ರೀತಿ ಅಪಮಾನ ಮಾಡುವುದು ಬೇಡ. ನೀವು ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೃಷ್ಣಬೈರೇಗೌಡ : ಅವರ ಹೆಸರನ್ನು ಸೂಕ್ತ ಜಾಗದಲ್ಲಿ ಇಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ರಸ್ತೆಗೆ ಈಗಾಗಲೇ ಹೆಸರು ಇಡಬೇಕೆಂದು ನಿರ್ಣಯವಾಗಿತ್ತು.

ಶ್ರೀ ಕೃಷ್ಣಬೈರೇಗೌಡ : ಅಲ್ಲಿ ಈಗಾಗಲೇ ಸ್ವಾತಂತ್ರ್ಯ ಹೋರಾಟಗಾರರ ಹೆಸರು ಇದೆ. ಅದನ್ನು ಉಳಿಸಿಕೊಳ್ಳಿ ಎಂದು ನಾವು ಈಗಾಗಲೇ ಹೇಳಿದ್ದೇವೆ. ನಿರಂಜನ್ ರವರ ಹೆಸರು ಇಡುವುದಕ್ಕೆ ಯಾರ ವಿರೋಧವಿಲ್ಲ. ತಪ್ಪು ಸಂದೇಶ ಹೋಗುವುದು ಬೇಡ.

ಶ್ರೀ ಜಗದೀಶ್ ಶೆಟ್ಟರ್ : ನಿರಂಜನ್‌ರವರು 2016 ರಲ್ಲಿ ಹುತಾತ್ಮರಾಗಿರುವುದು.

ಶ್ರೀ ಕೃಷ್ಣಬೈರೇಗೌಡ : ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದಿರಿ, ಅಲ್ಲಿ ಅವರ ಹೆಸರು ಇಟ್ಟಿಲ್ಲವೆಂದರೆ ಬೇರೆ ಕಡೆ ಹೆಸರು ಇಡಬೇಕು, ಅವರಿಗೆ ಗೌರವ ಕೊಡಬೇಕೆಂದು ಹೇಳಿದಿರಿ, ನಿಮ್ಮ ಸಲಹೆ ಸ್ವೀಕಾರ ಮಾಡುತ್ತೇವೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್ : ಅದು ತಕ್ಷಣ ಅನುಷ್ಠಾನ ಆಗಬೇಕು, ಡಿಲೇಯಾಗಬಾರದು. ಇನ್ನು ಸರ್ಕಾರದ ಬಜೆಟ್ ಮತ್ತು ಸರ್ಕಾರದ ಆರ್ಥಿಕ ವ್ಯವಸ್ಥೆ ಬಗ್ಗೆ ಹೇಳುವುದಾದರೆ ಹಿಂದೆ ಮಾನ್ಯ ಮುಖ್ಯಮಂತ್ರಿಗಳು 2013-14ರಲ್ಲಿ ಮೊದಲ ಬಜೆಟ್‌ನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ ಬಜೆಟ್‌ನ 4ನೇ ಪ್ಯಾರಾದಲ್ಲಿ ಏನು ಹೇಳಿದರೆಂದು ತಮ್ಮ ಗಮನಕ್ಕೆ ತರುತ್ತೇನೆ. 'ಮಾನ್ಯ ಸಭಾಧ್ಯಕ್ಷರೆ, ನಮ್ಮ ಸರ್ಕಾರಕ್ಕೆ ಹಿಂದಿನ ಸರ್ಕಾರದಿಂದ ಆರ್ಥಿಕ ಸಂಕಷ್ಟವೂ ಬಳುವಳಿಯಾಗಿ ಬಂದಿದೆ' ಎಂದು ಹೇಳಿದ್ದಾರೆ. ಇವತ್ತಿನ ಪರಿಸ್ಥಿತಿ ನೋಡಿದರೆ 2018ರ ನಂತರ ಬರುವಂಥ ನಮ್ಮ ಬಿಜೆಪಿ ಸರ್ಕಾರಕ್ಕೆ ಎಲ್ಲಾ ಬಳುವಳಿ ಕೊಡುತ್ತಿದ್ದಾರೆ. ಅವತ್ತು 'ನಮ್ಮ ಸರ್ಕಾರಕ್ಕೆ ಹಿಂದಿನ ಸರ್ಕಾರದಿಂದ ಆರ್ಥಿಕ ಸಂಕಷ್ಟವೂ ಬಳುವಳಿಯಾಗಿ ಬಂದಿದೆ. ಅಲ್ಲಿ ಆದಾಯ ಸ್ವೀಕೃತಿಗಳು ಕಡಿಮೆ ಇದ್ದವು, ರಾಜಸ್ವ ಹೆಚ್ಚಳ ಕಡಿಮೆಯಾಗುತ್ತಿತ್ತು. ಸಾಲದ ಎತ್ತುವಳಿ ಹೆಚ್ಚಾಗಿತ್ತು. ಬಾಕಿ ಪಾವತಿಯ ಬಿಲ್ಲುಗಳು ಅಧಿಕವಾಗಿದ್ದವು. ಒಟ್ಟಾರೆಯಾಗಿ ರಾಜ್ಯದ ಅಭಿವೃದ್ಧಿಯ ಫಲಿತಾಂಶದ ನೋಟವು ನಿರಾಶಾದಾಯವಾಗಿತ್ತು. ರಾಜ್ಯದ ಆರ್ಥಿಕ ಬೆಳವಣಿಗೆ ಕುಂಠಿತಗೊಂಡಿತ್ತು' ಈ ರೀತಿಯಲ್ಲಿ ಎಲ್ಲಾ ವಿಚಾರಗಳನ್ನು ಹೇಳುತ್ತಾರೆ. ಬಹುಶ: ಇವತ್ತು 4ನೇ ಬಜೆಟ್ ಮಂಡನೆಯಾದ ಮೇಲೆ ಇವತ್ತಿನ ಆರ್ಥಿಕ ಸ್ಥಿತಿ,ಇವತ್ತಿನ ವ್ಯವಸ್ಥೆಯನ್ನು ನೋಡಿದಾಗ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಬಜೆಟ್ ಬಗ್ಗೆ, ರಾಜ್ಯದ ಜನರ ಮೇಲೆ ಹೆಚ್ಚಿನ ರೀತಿಯಾದ ಸಾಲದ ಜವಾಬ್ದಾರಿಯನ್ನು ಹೇರಿಸಿರುವುದನ್ನು ನೋಡಿದರೆ ಬಹುಶ: ಮುಂದೆ ಬರುವಂಥ ಸರ್ಕಾರ, ನಾನು confident ಆಗಿ ಹೇಳುತ್ತೇನೆ, ಮುಂದೆ ಬರುವಂಥ ಸರ್ಕಾರ ಭಾರತೀಯ ಜನತಾ ಪಾರ್ಟಿ ನೇತೃತ್ವದ ಸರ್ಕಾರ, ಈ ಎಲ್ಲಾ ಬಳುವಳಿಯನ್ನು ಇವರು ನಮ್ಮ ಸರ್ಕಾರಕ್ಕೆ ಕೊಟ್ಟಿರುತ್ತಾರೆ. (ಮುಂದು)

14-06-17 - 12.50 - (15) - RD-VR

ಶ್ರೀ ಜಗದೀಶ್ ಶೆಟ್ಟರ್: ಮುಂದು.. ..

ಮತ್ತೆ ಇವರು ಈ ಎಲ್ಲಾ ಬಳುವಳಿಗಳನ್ನು ನಮ್ಮ ಸರ್ಕಾರಕ್ಕೆ ಕೊಟ್ಟು ಹೋಗುತ್ತಾರೆ.

ಶ್ರೀ ಡಿ.ಜಿ.ಶಾಂತನಗೌಡ: ತಾವು ಆ ರೀತಿ ಅಂದು ಕೊಳ್ಳಬೇಡಿ, ಕಾಂಗ್ರೆಸ್ ಸರ್ಕಾರ ಬರುತ್ತದೆ.

(ಗೊಂದಲ)

14-06-2017

ಶ್ರೀ ಜಗದೀಶ್ ಶೆಟ್ಟರ್: ನಿಮ್ಮ ಮುಖ್ಯಮಂತ್ರಿಯವರು ಏನೇ ಹೇಳಲಿ, ಮುಂದೆ ನಮ್ಮ ಸರ್ಕಾರ, ನಾನೇ ರಾಜ್ಯದ ಮುಖ್ಯಮಂತ್ರಿ ಎಂದು ಬೇಕಾದ್ದು ಹೇಳಲಿ. ಆದರೆ ಮುಂದೆ ನಮ್ಮ ಸರ್ಕಾರ ಬರುವಂಥದ್ದು. ಆಗ ಇದೇ ಸಂಕಷ್ಟಗಳನ್ನು ನಾವು ಅನುಭವಿಸಬೇಕಾಗುತ್ತದೆ. ತಾವು ವ್ಯವಸ್ಥೆಯನ್ನು ಏನು ಕೆಡಿಸಿ ಹೋಗುತ್ತಿರಲ್ಲಾ, ಆ ವ್ಯವಸ್ಥೆಯನ್ನು ಸರಿ ಮಾಡುವಂಥ ಕೆಲಸವನ್ನು ನಾವು ಮೊಟ್ಟಮೊದಲು ಮಾಡಬೇಕಾಗುತ್ತದೆ. ಇವತ್ತು ಏನಾಗಿದೆಯೆಂದರೆ, ಇವರು ಸಾಲ ಎಷ್ಟು ಮಾಡಿದ್ದಾರೆಂದರೆ, 2013-14ರ ಹಣಕಾಸು ವರ್ಷದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಮಾಡಿದಂಥ ಸಾಲ 18,590 ಕೋಟಿ ರೂ.ಗಳು, ಮಾನ್ಯ ಎಸ್.ಎಂ.ಕೃಷ್ಣರವರು 5 ವರ್ಷಗಳಲ್ಲಿ ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ, ಅವರ ಸರ್ಕಾರ 35,902 ಕೋಟಿ ರೂ.ಗಳನ್ನು ಸಾಲ ಮಾಡಿರುವಂಥದ್ದು. ಮಾನ್ಯ ಧರ್ಮಸಿಂಗ್‌ರವರು 20 ತಿಂಗಳುಗಳ ಅವಧಿಯಲ್ಲಿ, ಅವರ ಸರ್ಕಾರ 15,635 ಕೋಟಿ ರೂ.ಗಳನ್ನು ಸಾಲ ಮಾಡಿರುವಂಥದ್ದು, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು 20 ತಿಂಗಳ ಅವಧಿಯಲ್ಲಿ ಅವರ ಸರ್ಕಾರ 3,545 ಕೋಟಿ ರೂ.ಗಳನ್ನು ಸಾಲ ಮಾಡಿರುವಂಥದ್ದು, ಮಾನ್ಯ ಬಿ.ಎಸ್.ಯಡಿಯೂರಪ್ಪನವರು 40 ತಿಂಗಳ ಅವಧಿಗೆ ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅವರ ಸರ್ಕಾರ ಮಾಡಿದಂತಹ ಸಾಲ 25,653 ಕೋಟಿ ರೂ.ಗಳು, ಮಾನ್ಯ ಸದಾನಂದ ಗೌಡರ 11 ತಿಂಗಳ ಅವಧಿಯಲ್ಲಿ ಅವರ ಸರ್ಕಾರ ಮಾಡಿದಂತಹ ಸಾಲ 9,357 ಕೋಟಿ ರೂ.ಗಳು, ನಾನು 10 ತಿಂಗಳು ಮುಖ್ಯಮಂತ್ರಿಯಾಗಿದ್ದೆ, ಆರ್ಥಿಕ ಸಚಿವನಾಗಿದ್ದೆ, ಆಗ ನಮ್ಮ ಸರ್ಕಾರದ ಅವಧಿಯಲ್ಲಿ 13,464 ಕೋಟಿ ರೂ.ಗಳ ಸಾಲ ಮಾಡಿರುವಂಥದ್ದು. ಅಂದರೆ, ಇವತ್ತು ಕೇವಲ ಒಂದು ವರ್ಷದಲ್ಲಿ ಮಾನ್ಯ ಸಿದ್ಧರಾಮಯ್ಯನವರು 18,590 ಕೋಟಿ ರೂ.ಗಳ ಸಾಲ ಮಾಡಿರುವಂಥದ್ದು. ನಾನು ಆಮೇಲೆ overall total ಎಷ್ಟೆಂಬುದನ್ನು ಹೇಳುತ್ತೇನೆ. ಇದರ ಜೊತೆಗೆ 2013ರಲ್ಲಿ ನಮ್ಮ ರಾಜ್ಯಸರ್ಕಾರದ ಒಟ್ಟು ಸಾಲ 1,12,600 ಕೋಟಿ ರೂ.ಗಳು, 2014ರಲ್ಲಿ 1,36,700 ಕೋಟಿ ರೂ.ಗಳಾಯಿತು. 2015ರಲ್ಲಿ 1,57,000 ಕೋಟಿ ರೂ.ಗಳು, 2016ರಲ್ಲಿ ಒಟ್ಟು ಏರಿಕೆಯಾಗಿದ್ದು 1,80,000 ಕೋಟಿ ರೂ.ಗಳು, ಈಗ 2017ರಲ್ಲಿ ಇವರು ಸಾಲ ತೆಗೆದುಕೊಂಡಿರುವುದನ್ನೆಲ್ಲಾ ಲೆಕ್ಕ ಹಾಕಿದರೆ financial year endಗೆ ರಾಜ್ಯ ಸರ್ಕಾರದ ಮೇಲೆ total burden 2,42,420 ಕೋಟಿ ರೂ.ಗಳು ಇದೆ. ಬಹುಶ: ನನಗೆ ಅನಿಸಿದ ಮಟ್ಟಿಗೆ

14-06-2017

ಇಷ್ಟು ದೊಡ್ಡ ಸಾಲ ಇದೆ. ಮಾನ್ಯ ಮುಖ್ಯಮಂತ್ರಿಯವರು ಯಾವಾಗಲೂ ಸಾಲ ಸಿಗುತ್ತದೆಂದು ಸಾಲ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳುತ್ತಿದ್ದರು. ನಾವು ಏನು ನಿರೀಕ್ಷೆ ಮಾಡಿದ್ದೆವೆಂದರೆ, ಇವರು 10-12 ಬಜೆಟ್‌ಗಳನ್ನು ಮಂಡನೆ ಮಾಡಿದ್ದಾರೆ, ಬಹಳ ಅನುಭವವಿದೆ, ಇವರು ಬಹಳ ಅನುಭವಿ ಇದ್ದಾರೆ. ಇವರು ಸಾಲ ಮಾಡದೇ, ಇದ್ದಂಥ ವ್ಯವಸ್ಥೆಯಲ್ಲೆ ಏನೋ ಮಾಡಿಕೊಂಡು ಹೋಗುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ನಮಗೆ ಅವರು ಇಲ್ಲಿ ಕುಳಿತಾಗ ಬುದ್ಧಿ ಹೇಳುತ್ತಿದ್ದರು. ಸರ್ಕಾರ ಹೇಗೆ ನಡೆಸುತ್ತೀರಿ, ಎಷ್ಟು ಸಾಲ ಮಾಡುತ್ತೀರೆಂದು ಹೇಳುತ್ತಿದ್ದರು. ಆದರೆ ಇವತ್ತು ಯಾವುದೇ ಸಂದರ್ಭದಲ್ಲಿ ಯಾರೇ ಮುಖ್ಯಮಂತ್ರಿಯಾಗಿದ್ದಾಗ, ಅದು ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ, ಅತೀ ಹೆಚ್ಚು ಸಾಲ 2,47,420 ಕೋಟಿ ರೂ.ಗಳಿಗೆ ಬಂದಿದೆ. ಇದರಿಂದ ಏನಾಗುತ್ತದೆಂದರೆ, ಇದಕ್ಕೆ ಒಂದು ಮಾನದಂಡದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿದರೆ, ಏನು ಹೇಳುತ್ತಾರೆಂದರೆ, ನಾವು GST, GDP limitationನಲ್ಲಿ ಏನು ಇರಬೇಕೆಂದು ಇದೆ, ಆ limitation ಒಳಗೆ ಇದ್ದೇವೆಂಬ ಮಾತನ್ನು ಹೇಳುತ್ತಾರೆ. ಇವತ್ತು ಜಿ.ಎಸ್.ಟಿ. 11 ಲಕ್ಷ ರೂ.ಗಳ calculation ಇದೆ. ಅದರದು 1/4$^{th}$ ಎಂದರೆ 2.75 ಲಕ್ಷ ಕೋಟಿ ರೂ.ಗಳ limit ಒಳಗೆ ನಾವಿದ್ದೇವೆಂದು ಹೇಳುತ್ತಾರೆ. ಇವರು 2,47,000 ಕೋಟಿ ರೂ.ಗಳೆಂದರೂ, ನಾವು 2.75 ಲಕ್ಷ ಕೋಟಿ ರೂ.ಗಳ ಏನು limit ಇದೆ, ಆ ಲಿಮಿಟ್ ಒಳಗೆ ಇದ್ದೇವೆಂದು argument ಮಾಡುತ್ತಾರೆ. ಆದರೆ ಇದು argument ಆಯಿತು, ಇಷ್ಟು ಸಾಲ ಮಾಡುವಂಥ ಅವಶ್ಯಕತೆ ಇಲ್ಲವೆಂದು ನನ್ನ ತರ್ಕವಾಗಿದೆ. ತಾವು ಸರಿಯಾದಂಥ ರೀತಿಯಲ್ಲಿ management ಮಾಡಿದ್ದರೆ, ಆರ್ಥಿಕ ನಿರ್ವಹಣೆ ಮಾಡಿದ್ದರೆ, ಬಹುಶ: ಇಷ್ಟು ಸಾಲ ಮಾಡುವಂಥ ಅವಶ್ಯಕತೆ ಇರಲಿಲ್ಲ. ಆ ನಿರ್ವಹಣೆಯಲ್ಲಿ ನೀವು ವಿಫಲರಾಗಿದ್ದೀರೆಂದು ನಾನು ಇವತ್ತು ಹೇಳಬೇಕಾಗುತ್ತದೆ. ಇವತ್ತು ರಾಜ್ಯದ ಪ್ರತಿಯೊಬ್ಬ ಪ್ರಜೆ ಮೇಲೆ 32,000 ರೂ.ಗಳಿಂದ 35,000 ರೂ.ಗಳವರೆಗೆ burden ಇದೆ. ಪ್ರತಿಯೊಬ್ಬ ಕರ್ನಾಟಕ ಪ್ರಜೆಯ ಮೇಲೆ ಸಾಲದ ಭಾರವಿದೆ. ಅಷ್ಟೊಂದು ಸಾಲದ burden ಮಾಡಿಕೊಂಡು, ಇವತ್ತು ಸರ್ಕಾರ ಕೊನೆಯ ಹಂತಕ್ಕೆ ಬಂದಿದೆ. ಇನ್ನು ಒಂದು ವರ್ಷದಲ್ಲಿ ಏನು ಸುಧಾರಣೆ ಮಾಡುವುದಕ್ಕೆ ಆಗುವುದಿಲ್ಲ. ಒಂದು ಕಡೆ ಭ್ರಷ್ಟಾಚಾರವಿದೆ, ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಬಹುಶ: ಈಗ election year ಆಗಿದ್ದು, ಇನ್ನು ಹೊಸ ಹೊಸ ಜನಪ್ರಿಯ

## 14-06-2017

ಘೋಷಣೆಗಳನ್ನು ಮಾಡುವುದಕ್ಕೆ ಹೋಗುತ್ತಾರೆ. ಇನ್ನೂ ಹೆಚ್ಚು ಸಬ್ಸಿಡಿಗಳನ್ನು, ಮತ್ತೊಂದನ್ನು ಕೊಡುವುದಕ್ಕೆ ಚಾಲೂ ಮಾಡುತ್ತಾರೆ. ಆದರೆ ಈ ಸಾಲದ burden ದೊಡ್ಡ ಹೊರೆಯಾಗುತ್ತದೆ, ಆರ್ಥಿಕ ಅಸ್ತವ್ಯಸ್ತಕ್ಕೆ ಕಾರಣವಾಗುತ್ತದೆಂಬ ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಏಕೆ ಈ ರೀತಿ ಆಯಿತೆಂದರೆ, 2007-08ರಲ್ಲಿ ಆಹಾರ, ಸಾರಿಗೆ ಮತ್ತು ವಸತಿ ಕ್ಷೇತ್ರದಲ್ಲಿ ಅವತ್ತಿನ ಸಬ್ಸಿಡಿ 1,180 ಕೋಟಿ ರೂ.ಗಳ ಸಬ್ಸಿಡಿಯನ್ನು ಕೊಡುತ್ತಿದ್ದರು. 2016-17ನೇ ಸಾಲಿನಲ್ಲಿ ಇದು ಎಷ್ಟು ಏರಿಕೆಯಾಯಿತೆಂದರೆ, 6,482 ಕೋಟಿ ರೂ.ಗಳಿಗೆ ಏರಿಕೆಯಾಯಿತು. ಮತ್ತೆ ವಿದ್ಯುತ್ ಸಬ್ಸಿಡಿ 2007-08ರಲ್ಲಿ 1,926 ಕೋಟಿ ರೂ.ಗಳಿತ್ತು, 2016-17ನೇ ಸಾಲಿನಲ್ಲಿ ಶೇ.6ರಷ್ಟು ಹೆಚ್ಚಿಗೆ ಆಗಿದೆ. ಶಿಕ್ಷಣ, ಆರೋಗ್ಯ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ, ಇಲ್ಲಿ ಸಬ್ಸಿಡಿ ಏನು ಕೊಡುತ್ತಾರೆ 2007-08ರಲ್ಲಿ 4,130 ಕೋಟಿ ರೂ.ಗಳಿತ್ತು, 2012-13ನೇ ಸಾಲಿನಲ್ಲಿ 10,062 ಕೋಟಿ ರೂ.ಗಳಾಯಿತು. 2016-17ನೇ ಸಾಲಿನಲ್ಲಿ 29,212 ಕೋಟಿ ರೂ.ಗಳಾಗಿದೆ. ಅಂದರೆ ಈ ರೀತಿಯಾದಂಥ ಸಬ್ಸಿಡಿಯನ್ನು ಕೊಟ್ಟರಲ್ಲಾ, ಅದರಿಂದ ಈ ರೀತಿ ಹಣದುಬ್ಬರವಾಗಲಿ ಅಥವಾ ಹೆಚ್ಚಿಗೆ ಸಾಲ ಮಾಡುವಂಥದ್ದಾಗಲಿ, ಆ ಪರಿಸ್ಥಿತಿ ಇವತ್ತು ನಿರ್ಮಾಣವಾಯಿತೆನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಇದರಿಂದ ಏನಾಗಿದೆಯೆಂದರೆ, 2013-14ನೇ ಸಾಲಿನಲ್ಲಿ ಕೃಷಿ ವಲಯದ ಬೆಳವಣಿಗೆ ಶೇ.7ರಷ್ಟು ಇತ್ತು. 2014-15ನೇ ಸಾಲಿನಲ್ಲಿ ಶೇ.3.9ಗೆ reduce ಆಯಿತು, 2015-16ನೇ ಸಾಲಿನಲ್ಲಿ ಶೇ.-8.7, ಈಗ ಕೃಷಿ ವಲಯವನ್ನು ಮೇಲೆತ್ತುವ ಪ್ರಯತ್ನ ಏನು ನಡೆದಿದೆ, ಆ ಎಲ್ಲಾ ಬೆಳವಣಿಗೆಯಾದರೂ ಶೇ.1.5 ಮಾತ್ರ ಆಗುವುದಕ್ಕೆ ಸಾಧ್ಯವಿದೆ. ಒಂದು ಹಂತದಲ್ಲಿ 2013-14ರಲ್ಲಿ ಶೇ.7.0 ಇತ್ತು, ಈಗ ಕೃಷಿ ಬೆಳವಣಿಗೆ ಶೇ.1.5 ವರೆಗೆ ಏರುವುದಕ್ಕೆ ಪ್ರಯತ್ನ ನಡೆದಿದೆಯೇ ಹೊರತು, ಅದು ಇನ್ನೂ ಆಗಿಲ್ಲ. ಇವತ್ತು ಆ ಪರಿಸ್ಥಿತಿ ಕೃಷಿಯದ್ದು ಇದೆ. ಇನ್ನು ಕೈಗಾರಿಕೆಯ ಬಗ್ಗೆ ಹೇಳುವುದಾದರೆ, ಮಾನ್ಯ ಆರ್.ವಿ.ದೇಶಪಾಂಡೆಯವರು ಕೈಗಾರಿಕೆಯ ಮಂತ್ರಿಯಾಗಿದ್ದಾರೆ. ಕೈಗಾರಿಕೆ ಕ್ಷೇತ್ರದಲ್ಲಿ 2013-14ನೇ ಸಾಲಿನಲ್ಲಿ ಶೇ.8.2 ಬೆಳವಣಿಗೆ ಇತ್ತು, 2014-15ನೇ ಸಾಲಿನಲ್ಲಿ ಶೇ.6.1 ಇತ್ತು, 2015-16ನೇ ಸಾಲಿನಲ್ಲಿ ಶೇ.4.9 ಇತ್ತು, ಅದು ಇನ್ನೂ ಕೆಳಗೆ ಇಳಿದು ಶೇ.2.2 ಆಗಬಹುದೆಂಬ ವಿಶ್ಲೇಷಣೆ ಇದೆ. ಅಂದರೆ 2013-14ರಲ್ಲಿ ಶೇ.8.2 ಇದ್ದದ್ದು, ಇವತ್ತು ಶೇ.4.9ಗೆ ಬಂದಿದೆ, ಅದು ಇನ್ನು ಕೈಗಾರಿಕೆ ಅಭಿವೃದ್ಧಿ ಕುಂಠಿತವಾಗಬಹುದೆಂದು ವಿಶ್ಲೇಷಣೆ ಇದೆ.

14-06-2017

ಉಪಾಧ್ಯಕ್ಷರು: Demonetization effect ಆಗಿದೆ.

ಶ್ರೀ ಜಗದೀಶ್ ಶೆಟ್ಟರ್: Demonetization effect ಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ: Demonetization ಅಥವಾ ಮತ್ತೊಂದು ಏನು ಎಂದು ಉತ್ತರ ಕೊಡುತ್ತೇನೆ. ಅಷ್ಟು ಇಳುವರಿಯಾಗಿಲ್ಲ. ನಾನು ಅದನ್ನು ಉತ್ತರ ಕೊಡುವಾಗ ಹೇಳುತ್ತೇನೆ, ಈಗ ನಾನು ನಿಮಗೆ disturb ಮಾಡುವುದಿಲ್ಲ. ಈಗ ನಾನು ತಮಗೆ ಮತ್ತೊಂದು ವಿಷಯ ಏನು ಹೇಳುತ್ತೇನೆಂದರೆ, ನಾನು ಟೀಕೆ ಮಾಡುತ್ತಿಲ್ಲ. ಇದು ನಮ್ಮೆಲ್ಲರ concern. job creation ದೇಶದಲ್ಲಿ ಯಾವ ಪ್ರಮಾಣದಲ್ಲಿ ಕುಸಿದು ಬಿದ್ದಿದೆ ಗೊತ್ತೆ? ನಾನು ಇಲ್ಲಿ politics ಮಾಡುವುದಕ್ಕೆ ಹೋಗುತ್ತಿಲ್ಲ. UPA regimeನಲ್ಲಿ ನಲ್ಲಿ 6 ಕೋಟಿಗಿಂತ ಹೆಚ್ಚು jobs create ಆಯಿತು. ಮುಂದು.. ..

14-06-2017/1.00/16/GG/VR

ಶ್ರೀ ಆರ್.ವಿ.ದೇಶಪಾಂಡೆ (ಮುಂದುವರೆದುದು): NDA ಸರ್ಕಾರ ಬಂದ ನಂತರ two crore jobs will be created per year ಎಂದು ಹೇಳಿದರು. ಆದರೆ ಅದನ್ನು ಸಾಧನೆ ಮಾಡಲು ಆಗಲಿಲ್ಲ. ಕಳೆದ ಐದಾರು ದಿನಗಳಿಂದ Economic Times ಪತ್ರಿಕೆಯಲ್ಲಿ, On Sunday Prime Minister has conveyed a meeting ಎಂದು ಬಂದಿದೆ. Automation, digitization ಇವುಗಳನ್ನು ಇವತ್ತಿನ ಯುಗದಲ್ಲಿ ನಾವು ಬೇಡ ಎಂದು ಹೇಳಲು ಬರುವುದಿಲ್ಲ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರ ದುಷ್ಪರಿಣಾಮಗಳೆಂದರೆ ಯುವಕರಿಗೆ jobs ಸಿಗುತ್ತಿಲ್ಲ. Manufacturing sector ನಲ್ಲಿ ಇಡೀ ದೇಶದಲ್ಲಿ ಇವತ್ತಿಗೂ ಕರ್ನಾಟಕ interests of proposals received ವಿಚಾರದಲ್ಲಿ ಮೊದಲನೇ ಸ್ಥಾನದಲ್ಲಿದೆ. ಹಿಂದೆಯೂ ನಾನು ಕೈಗಾರಿಕಾ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ, ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ, ಇವತ್ತು ಎಲ್ಲಿ jobs create ಆಗಬೇಕೋ ಅಲ್ಲಿ investment ಬರುತ್ತಿಲ್ಲ. Textiles, toys making ಮುಂತಾದವುಗಳಿಗೆ investment ಬರುತ್ತಿಲ್ಲ. Luckily, Apple Mobile manufacturing

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

unit ನಮ್ಮ ರಾಜ್ಯಕ್ಕೆ ಬಂದಿದೆ. ಹಾಗಾಗಿ, ಈ concern ಇದೆಯಲ್ಲ, it is a very serious concern. ಇದನ್ನು ನಾವೆಲ್ಲರೂ above political lines ponder ಮಾಡಬೇಕು. ಯುವಕರಿಗೆ job ಇಲ್ಲ ಎಂದರೆ ಅವರು ಎಲ್ಲಿಗೆ ಹೋಗುತ್ತಾರೆ? ಒಂದು ತಿಂಗಳ ಹಿಂದೆ ಮತ್ತೊಂದು ವಿಚಾರವನ್ನು ನಾನು ನೋಡಿದೆ, ಕೇವಲ ಕರ್ನಾಟಕದಲ್ಲಿ ಅಲ್ಲ, ಇಡೀ ದೇಶದಲ್ಲಿ more than 50-55% engineers are unemployed. ಇವುಗಳಿಗೆಲ್ಲ ನಾವು serious thought ಕೊಡಬೇಕು. ನಾನು ನಿಮ್ಮ ಮೇಲೆ ಆಪಾದನೆ ಮಾಡಿ I am not running away. ಇದಕ್ಕೆ ನಾನೂ responsible ಇದ್ದೇನೆ. ಹಾಗಾಗಿ, ಇಡೀ ದೇಶದಲ್ಲಿಯೇ, inspite of good intention of Make in India programme and all ಯಾವ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗಬೇಕಾಗಿತ್ತೋ ಅಷ್ಟು ಆಗಿಲ್ಲ. For example, Steel sector is in doldrums, Cement sector is in doldrums. Cement price ಅನ್ನು ಅವರು curtail ಮಾಡಿ ಮಾಡುತ್ತಿರಬಹುದು. ಆದರೆ 50-60% capacity cement sector ನಲ್ಲಿ ಆಗುತ್ತಿಲ್ಲ, ಏಕೆಂದರೆ infrastructure spending ಇಲ್ಲ. ನಾನು ಅವರ ಪ್ರಶ್ನೆಗೆ ಉತ್ತರ ಕೊಡುವಾಗ growth ಬಗ್ಗೆ ಮಾತನಾಡುತ್ತೇನೆ. ಆದರೆ ಇದರ ಬಗ್ಗೆ ಎಲ್ಲರೂ ponder ಮಾಡಬೇಕು. ಏಕೆಂದರೆ Prime Minister ಭಾನುವಾರ ಏಕೆ jobs fall ಆಗುತ್ತಿವೆ ಎನ್ನುವ ವಿಚಾರದ ಬಗ್ಗೆ specific meeting ಕರೆದಿದ್ದಾರೆ, ಇಷ್ಟನ್ನು ನಾನು ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ: ಎರಡು ಕೋಟಿ ಉದ್ಯೋಗಗಳ ಸೃಷ್ಟಿ ಎಂದು ಹೇಳಿದರು. ಅದು ಖಂಡಿತಾ ನಿಜ. ಆರು ಕೋಟಿ ಉದ್ಯೋಗಳ ಸೃಷ್ಟಿಯಾಗಬೇಕಾಗಿತ್ತು. ಆರು ಕೋಟಿ ಉದ್ಯೋಗ ಸೃಷ್ಟಿ ಆಗಿದೆಯೋ, ಇಲ್ಲವೋ ಗೊತ್ತಿಲ್ಲ? ಆದರೆ ಏಳೂವರೆ ಕೋಟಿ ಯುವಕರಿಗೆ ಸಾಲ ಕೊಟ್ಟು ಅವರು ಸ್ವಂತ ಉದ್ಯೋಗ ಪ್ರಾರಂಭ ಮಾಡಲು ಅನುಕೂಲ ಮಾಡಿಕೊಟ್ಟಿದ್ದಾರೆ ಎನ್ನುವುದನ್ನೂ considerationಗೆ ತೆಗೆದುಕೊಳ್ಳುವುದು ಒಳ್ಳೆಯದು.

14-06-2017

ಶ್ರೀ ಆರ್.ವಿ. ದೇಶಪಾಂಡೆ: ನಾನು ಮಾತನಾಡುವಾಗ ಯಾರ ಮೇಲೆಯೂ ಟೀಕೆ ಮಾಡಿಲ್ಲ. ಇದಕ್ಕೆ ನಾನೂ ಜವಾಬ್ದಾರನಿದ್ದೇನೆ ಎಂದು ಹೇಳಿದೆ. ಇದರಲ್ಲಿ ರಾಜ್ಯ ಸರ್ಕಾರದವರಾದ ನಮ್ಮ ಜವಾಬ್ದಾರಿಯೂ ಇದೆ. ಹಾಗಾಗಿ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ, under his nose Skill Ministry ಪ್ರಾರಂಭ ಮಾಡಿದ್ದೇವೆ. ಇವತ್ತು skills ಬೇಕು. ಕೈಗಾರಿಕೆ, ಕೃಷಿ, ತೋಟಗಾರಿಕೆ ಇವುಗಳಿಗೆ ಅನುಕೂಲವಾಗುವ skill develop ಮಾಡುವ ಬಗ್ಗೆ ಒಂದು ಹೊಸ Skill Ministry ಮಾಡಿದ್ದೇವೆ. ಮೈಸೂರು, ಕಲಬುರಗಿ, ದಾಂಡೇಲಿ ಮತ್ತು ಬೆಳಗಾವಿ ಈ ನಾಲ್ಕು ಕಡೆಗಳಲ್ಲಿ GTTC ಮುಖಾಂತರ with the help of Siemens we are spending 2,000 crores of rupees. 90% grant Siemens ಕೊಡುತ್ತಿದ್ದಾರೆ, four Centres of Excellence ಮಾಡುತ್ತಿದ್ದೇವೆ. About more than 2,000 crores of Rupees, ಪ್ರತಿಯೊಂದು GTTC ಯಲ್ಲಿ 500 crores ಖರ್ಚು ಮಾಡುತ್ತಿದ್ದೇವೆ. Engineersಗೆ, ಮತ್ತೊಬ್ಬರಿಗೆ skill ಕೊಡಲು 25,000 ದಿಂದ 30,000 ಯುವಕರಿಗೆ ಉದ್ಯೋಗ ಕೊಡಲು training ಕೊಡುತ್ತಿದ್ದೇವೆ. ಹಾಗಾಗಿ, ಈ ದಿಸೆಯಲ್ಲಿ ಅದು concern. ಸಾಲ ಕೊಟ್ಟಿದ್ದೇವೆ ಎಂದು ಹೇಳಿದರು. ಸಾಲವನ್ನು ನಾವೂ ದಿನಾ ಕೊಡುತ್ತಿರುತ್ತೇವೆ. ತಾವೂ ಸಹ ಶಾಸಕರಾಗಿ ತಮ್ಮತಮ್ಮ ಕ್ಷೇತ್ರಗಳಲ್ಲಿ ಸಾಲ ಹಂಚುತ್ತಿರಬಹುದು. ಸಾಲ ಹಂಚಿರಿ, ಅದರಿಂದ ಉದ್ಯೋಗ ಸೃಷ್ಟಿಯಾಗಲಿ. ಆದರೆ jobs create ಆಗಬೇಕಲ್ಲವೇ? Job creation ಆಗುವುದು ಬೇರೆ sector, ಸಾಲ ಕೊಡುವುದು ಬೇರೆಯದು. ಸಾಲದಿಂದ ಕೆಲವು ಜನ ಸ್ವಾವಲಂಬಿಯಾಗಿದ್ದಾರೆ. ಸ್ವಾವಲಂಬಿಗಳಾಗಿ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಂಡಿದ್ದಾರೆ. ಇದು ಸಂತೋಷದ ಸಂಗತಿ. ಆದರೆ ಅದರ evaluation ಆಗಿದೆಯೇನು? ಏಳು ಕೋಟಿ ಜನರಿಗೆ ಸಾಲ ಕೊಟ್ಟಿದ್ದನ್ನು evaluation ಮಾಡಿ ಎಷ್ಟು ಜನರಿಗೆ ಇದರಿಂದ ಲಾಭವಾಗಿದೆ, ಎಷ್ಟು ಜನರು ಸ್ವಾವಲಂಬಿಗಳಾಗಿದ್ದಾರೆ ಎನ್ನುವುದು more important. ಸಾಲ ಕೊಡುವುದು important ಎನ್ನುವುದಕ್ಕಿಂತ ಅದರ ಬಗ್ಗೆ monitoringಆಗಿ ಎಷ್ಟು ಜನ ಅದರ benefit ತೆಗೆದುಕೊಂಡು ಸ್ವಾವಲಂಬಿಯಾಗಿದ್ದಾರೆ ಎನ್ನುವುದು ಕೂಡ ಬಹಳ ಮುಖ್ಯವಾದುದು.

14-06-2017

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದರ ಬಗ್ಗೆ ಚಿಂತನೆ ಮಾಡಬೇಕು. ಕೇಂದ್ರ ಸರ್ಕಾರದ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನ ಮಾಡುವಂಥ ಕೆಲಸ ರಾಜ್ಯ ಸರ್ಕಾರದಿಂದ ಆಗಬೇಕಾಗಿದೆ. ಕರ್ನಾಟಕದ ಬೆಳವಣಿಗೆಯಾದರೆ ಒಂದು ರೀತಿಯಲ್ಲಿ ಅದು ದೇಶದ ಬೆಳವಣಿಗೆಯೇ. ಕರ್ನಾಟಕ ಮತ್ತು ದೇಶ ಬೇರೆಬೇರೆಯಲ್ಲ. ಅಲ್ಲಿ ಒಂದು ಸರ್ಕಾರವಿದೆ, ಇಲ್ಲಿ ಒಂದು ಸರ್ಕಾರವಿದೆ ಎಂದು differentiate ಮಾಡುವುದಕ್ಕೂ ಆಗುವುದಿಲ್ಲ. ಹೀಗಾಗಿ, ಆ ಒಂದು ಅಭಿವೃದ್ಧಿಯ ವೇಗದಲ್ಲಿ ಸರ್ಕಾರವೂ ಹೋಗಬೇಕು, ನಮ್ಮ ನಾಡೂ ಬೆಳೆಯಬೇಕು ಎನ್ನುವುದು ನಮ್ಮೆಲ್ಲರ ಕಳಕಳಿ. ಆ ಹಿನ್ನೆಲೆಯಲ್ಲಿ administration ಸುಧಾರಣೆಯಾಗಬೇಕು ಎನ್ನುವುದು ನನ್ನ ಕಳಕಳಿ. ಇವತ್ತು ಮೂಲಭೂತವಾಗಿ ಸರ್ಕಾರ ಯಾವುದಕ್ಕೆ ಆದ್ಯತೆ ಕೊಡಬೇಕಾಗಿತ್ತೋ ಆ ಆದ್ಯತೆಯನ್ನು ಕೊಡುವುದಾಗುತ್ತಿಲ್ಲ. ಮೊನ್ನೆ ಮುಖ್ಯಮಂತ್ರಿಗಳು ಇಲ್ಲಿ ಇದ್ದಾಗಲೇ ಒಂದು ವಿಷಯ ಚರ್ಚೆಗೆ ಬಂತು. 10,000 ಸರ್ಕಾರಿ ಶಾಲೆಗಳು ಮುಚ್ಚಿ ಹೋಗಿವೆ ಎನ್ನುವ ವಿಚಾರ ಬಂತು. ನಾನು ಹೇಳುವುದೇನೆಂದರೆ, ಅಲ್ಲಿಗೆ ವಿದ್ಯಾರ್ಥಿಗಳಿಗೆ ಮತ್ತು ಪಾಲಕರಿಗೆ ಮೂಲಭೂತ ಸೌಕರ್ಯಗಳನ್ನು ಕೊಡಿ. ಉತ್ತಮವಾದಂಥ ಶಾಲಾ ಕಟ್ಟಡಗಳನ್ನು ಕೊಡಿ, ಹೊಸಹೊಸ ಕಟ್ಟಡಗಳನ್ನು ಕಟ್ಟಿಸಿಕೊಡಿ, ಶಿಕ್ಷಕರನ್ನು ನೇಮಕ ಮಾಡಿ. ಈ ಎಲ್ಲ ಮೂಲಭೂತ ಸೌಕರ್ಯಗಳನ್ನು ಕೊಟ್ಟರೆ ಶೈಕ್ಷಣಿಕವಾಗಿ ನಾವು ಬೆಳವಣಿಗೆಯನ್ನು ಮಾಡಲು ಸಾಧ್ಯವಿದೆ. Poor class people ಎಲ್ಲಿಗೆ ಹೋಗಬೇಕು? ಖಾಸಗಿ ಶಾಲೆಗಳ ಹಾವಳಿ ಒಂದು ಕಡೆಯಾಗಿದೆ. ಸರ್ಕಾರಿ ಶಾಲೆಗಳು ಉತ್ತಮವಾದ ಗುಣಮಟ್ಟದ ಶಿಕ್ಷಣ ಇಲ್ಲದಂಥ ರೀತಿಯಲ್ಲಿ ಅವು ಮುಚ್ಚಿಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಇವತ್ತು ನಾವು ಆದ್ಯತೆಯನ್ನು ಕೊಡಬೇಕಾಗಿದೆ.

ಇನ್ನು, ಆರೋಗ್ಯ ದೃಷ್ಟಿಕೋನದಿಂದ ಪ್ರತಿಯೊಬ್ಬರಿಗೂ ಸರಿಯಾದಂಥ ಆರೋಗ್ಯದ ವ್ಯವಸ್ಥೆಯನ್ನು ಮಾಡುವುದು ಸರ್ಕಾರದ ಕರ್ತವ್ಯ. ಅದಕ್ಕೆ ನಾವು ಏನು ಆದ್ಯತೆಯನ್ನು ಕೊಟ್ಟಿದ್ದೇವೆ? ಇವತ್ತು ಮಧ್ಯಾಹ್ನ ಖಾಸಗಿ ಆಸ್ಪತ್ರೆಗಳ ನಿಯಂತ್ರಣದ ಬಗ್ಗೆ ರಮೇಶ್ ಕುಮಾರ್‌ರವರ ಬಿಲ್ ಬರುತ್ತಿದೆ. ಅದೂ ಬರಲಿ. ಆದರೆ ಸರ್ಕಾರದ ವ್ಯವಸ್ಥೆಯಾದ ಆರೋಗ್ಯ ಇಲಾಖೆಯ ಬಗ್ಗೆ, ಅದರ ಆಸ್ಪತ್ರೆಗಳ ಸುಧಾರಣೆಯ ಬಗ್ಗೆ ಏನು ಪ್ರಯತ್ನವಾಗಿದೆ ಎನ್ನುವ ಪ್ರಶ್ನೆಯನ್ನು ನಾವು ಇವತ್ತು ಸರ್ಕಾರಕ್ಕೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೇಳಬೇಕಾಗುತ್ತದೆ? ನಿಮ್ಮ ಆದ್ಯತೆ ಏನು? ಅದಕ್ಕೆ ಎಷ್ಟು budget allocation ಮಾಡಿದಿರಿ? ಯಾವುದಕ್ಕೆ ನಮ್ಮ ಆದ್ಯತೆ ಇರಬೇಕು? ಎನ್ನುವ ಪ್ರಶ್ನೆಗಳು ಬರುತ್ತವೆ.

ಸಾಲ ಮನ್ನಾ ಮಾಡಿ ಎಂದು ರೈತರು ಹೋರಾಟ ಮಾಡುತ್ತಿದ್ದಾರೆ. ಇವತ್ತು ಇಡೀ ರಾಜ್ಯದಲ್ಲಿ ನಾವು ಎಲ್ಲಿ ಹೋದರೂ ರೈತರು ಸಾಲ ಮನ್ನಾ ಮಾಡಿ ಎಂದು ಕೇಳುತ್ತಿದ್ದಾರೆ. ಕಳೆದ 3-4 ವರ್ಷಗಳಲ್ಲಿ ಅತಿ ಹೆಚ್ಚು ರೈತರು ಕರ್ನಾಟಕದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2,600ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರತಿಹಂತದಲ್ಲೂ ನಾವು ಸಾಲ ಮನ್ನಾ ಮಾಡಬೇಕೆಂದು ಹೇಳುತ್ತಿದ್ದೇವೆ. ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಅಲ್ಲಿ ಸಾಲ ಮನ್ನಾ ಮಾಡುತ್ತಾರೆ, ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಸಾಲ ಮನ್ನಾವನ್ನು ಘೋಷಣೆ ಮಾಡುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ಸಾಲ ಮನ್ನಾ ಮಾಡಲು ಇನ್ನೂ ಏಕೆ ಹಿಂದೇಟು ಹಾಕುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ರೈತರ ವಿಶ್ವಾಸವನ್ನು ಪಡೆದುಕೊಳ್ಳುವಂಥ ಕೆಲಸ ಆಗಬೇಕಾಗಿದೆ. ಅವರಲ್ಲಿ ಆತ್ಮ ವಿಶ್ವಾಸ ತುಂಬುವಂಥ ಕೆಲಸ ಆಗಬೇಕಾಗಿದೆ. ಸಾಲದ ಬಾಧೆಯಿಂದ ರೈತರು ತೊಂದರೆಗೆ ಒಳಗಾಗಿದ್ದಾರೆ. ಒಂದು ಕಡೆ ಬರಗಾಲದ ಬಾಧೆಯಾದರೆ ಇನ್ನೊಂದು ಕಡೆ ಸಾಲದ ಬಾಧೆ. ಆ ರೈತರ ಸಾಲ ಮನ್ನಾ ಮಾಡಲು ಸರ್ಕಾರ ಏಕೋ ಮನಸ್ಸು ಮಾಡುತ್ತಿಲ್ಲ. ಕಾಂಗ್ರೆಸ್ಸಿನ ನಾಯಕರಾದ ರಾಹುಲ್ ಗಾಂಧಿಯವರು ರಾಜ್ಯಕ್ಕೆ ಬಂದು ಹೋದರು. ಅವರು ಮಧ್ಯ ಪ್ರದೇಶಕ್ಕೆ ಹೋಗಿ ಸಾಲ ಮನ್ನಾ ಮಾಡಿ ಎಂದು ಅವರು ಒತ್ತಾಯ ಮಾಡುತ್ತಾರೆ. ಅದೇ ರೀತಿ, ಕರ್ನಾಟಕಕ್ಕೆ ಬಂದಾಗಲೂ ಆ ಬಗ್ಗೆ ಒತ್ತಾಯ ಮಾಡುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು. ಮುಖ್ಯಮಂತ್ರಿಗಳು ಏನು ಹೇಳಿದ್ದಾರೋ ನನಗೆ ಗೊತ್ತಿಲ್ಲ. ಆದರೆ ನವೆಂಬರ್, ಡಿಸೆಂಬರ್‌ನಲ್ಲಿ ಸಾಲ ಮನ್ನಾ ಮಾಡುತ್ತಾರೆ, ರಾಹುಲ್ ಗಾಂಧಿಯವರು ಹೇಳಿ ಹೋಗಿದ್ದಾರೆ ಎಂದು ಪತ್ರಿಕೆಗಳಲ್ಲಿ ಬರುತ್ತದೆ. ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ, ಕರ್ನಾಟಕದ ರೈತರ ಬಗ್ಗೆ ಒಂದಿಷ್ಟು ಕಾಳಜಿಯನ್ನು ವಹಿಸಿ. ಮೋದಿಯವರು ಮಾಡಿದರೆ ನಾವೂ ಮಾಡುತ್ತೇವೆ ಎನ್ನುವ ವಿತಂಡ ವಾದ ಬೇಡ. ನೀವು ಅದನ್ನು ಮಾಡಿ ತೋರಿಸಿ. ಆದ ನಿಮಗೊಂದು morality ಬರುತ್ತದೆ, ನೈತಿಕತೆ ಬರುತ್ತದೆ, ನಾಳೆ ದೆಹಲಿಯಲ್ಲಿ ಕೇಳಲು ನಿಮಗೆ ಒಂದು ಹಕ್ಕು ಬರುತ್ತದೆ. ಆ ಕೆಲಸವನ್ನು ನೀವು ಮಾಡಿ ಎನ್ನುವ ಒತ್ತಾಯವನ್ನು ನಾನು ಮತ್ತೊಮ್ಮೆ ಮಾಡುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ
ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ರೈತರ ಸಾಲ ಮನ್ನಾ ಮಾಡಬೇಕೆಂದು ಹೇಳಿ ನಾನು ಮೊನ್ನೆಯೂ ಒತ್ತಾಯ ಮಾಡಿದ್ದೇನೆ, ಇವತ್ತೂ ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ ರೈತರು ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಮಾನ್ಯ ವಿರೋಧ ಪಕ್ಷದ ನಾಯಕರೆ ಒಂದು ನಿಮಿಷ. ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ಗ್ಯಾಲರಿಯಲ್ಲಿ senior officers ಕಾಣುವುದಿಲ್ಲ, ಜೊತೆಗೆ, ಕೇವಲ ನಾಲ್ಕು ಜನ ಮಂತ್ರಿಗಳು ಮಾತ್ರ ಇದ್ದಾರೆ. ಅವರನ್ನು ಕರೆಸುವಂಥ ವ್ಯವಸ್ಥೆಯನ್ನು ಮಾಡಿ. ನಾವು ಮಾತನಾಡುವಾಗಲಂತೂ ಯಾರೂ ಇರುವುದೇ ಇಲ್ಲ. ಆದರೆ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಂತ್ರಿಗಳಿರುವುದಿಲ್ಲ, ಅಧಿಕಾರಿಗಳಿರುವುದಿಲ್ಲ ಎಂದರೆ ಅದಕ್ಕೆ ಅರ್ಥವಿದೆಯೇ? ವಿರೋಧ ಪಕ್ಷದ ನಾಯಕರು ಯಾರಿಗೆ ಮಾತನಾಡುತ್ತಿದ್ದಾರೆ?

ಉಪಾಧ್ಯಕ್ಷರು: ಅವರನ್ನು ಕರೆಸಿ.

ಶ್ರೀ ಆರ್.ವಿ. ದೇಶಪಾಂಡೆ: ಅವರೇನು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಫೀಸರ್ಸ್ ಗ್ಯಾಲರಿಯಲ್ಲಿ ಇರಬೇಕಾಗಿದೆ. ಯಾರು ಬಂದಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳಲೂ ನಾನು Chief Secretary ಯವರೊಂದಿಗೆ ಮಾತನಾಡುತ್ತೇನೆ, I am sorry.

ಶ್ರೀ ಜಗದೀಶ್ ಶೆಟ್ಟರ್: ಪರಿಸ್ಥಿತಿ ಹೇಗಿದೆ ಎಂದು ನೋಡಿ. ಸರ್ಕಾರದ ವ್ಯವಸ್ಥೆ ಹೇಗಿದೆ ಎಂದು ನಾನು ಆಗಲೇ ಹೇಳಿದ್ದೆನಲ್ಲ, ಈಗ ಹಾಗೆಯೇ ಇದೆ. ನಾನು ಮುಂದುವರೆಸಬೇಕೋ, ಬೇಡವೋ ನೀವೇ ಹೇಳಿಬಿಡಿ.

ಉಪಾಧ್ಯಕ್ಷರು: ಇಷ್ಟು ಹೊತ್ತೂ ಇದ್ದರು. ಅವರನ್ನು ಕರೆಸೋಣ ಬಿಡಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ಎಂದರೆ ಮುಖ್ಯಮಂತ್ರಿಗಳೇ ಕುಳಿತಿರುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ: ಮುಖ್ಯಮಂತ್ರಿಗಳು ಅನುಮತಿ ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಉಳಿದ ಮಂತ್ರಿಗಳು ಇರಬೇಕಲ್ಲವೇ?

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಆರ್.ವಿ. ದೇಶಪಾಂಡೆ: ಎಲ್ಲರೂ ಇದ್ದರಲ್ಲ, ಹೆಚ್.ಕೆ.ಪಾಟೀಲರು just ಈಗ ಎದ್ದುಹೋದರು. ಅಪ್ಪಚ್ಚುರಂಜನ್‌ರವರು ಏನಾದರೂ ಮಾಡಿ ನಿಮಗೆ brake ಹಾಕಬೇಕೆಂದು ಮಾಡಿದ್ದಾರೆ. ನೀವು ಮಾತನಾಡಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಸಿದ್ದರಾಮಯ್ಯನವರು ವಿರೋಧ ಪಕ್ಷದ ನಾಯಕರಾಗಿರಬೇಕಾದರೆ ಈ ರೀತಿಯದನ್ನು ಒಪ್ಪುತ್ತಿದ್ದರೇ?

ಶ್ರೀ ಆರ್.ವಿ. ದೇಶಪಾಂಡೆ: ಇಲ್ಲಿ ಹಲವಾರು ಬಾರಿ ಇಂಥ ಘಟನೆಗಳಾಗಿವೆ. But, gentlemanly I agreed. ಅದೇ ಪ್ರಕಾರ ನೀವು ಇಲ್ಲಿದ್ದಾಗ ಒಪ್ಪಿಕೊಳ್ಳುತ್ತಿದ್ದಿರೇ? ಹಾಗಾಯಿತು, ಹೀಗಾಯಿತು ಎಂದು ವಾದ ಮಾಡುತ್ತಿದ್ದಿರಿ. ಆದರೆ ನಾನು ಬಹಳ ವಿನಯದಿಂದ ಒಪ್ಪಿಕೊಂಡಿದ್ದೇನೆ. ನೀವು ಇಲ್ಲಿದ್ದಾಗ ಆ ಕೆಲಸವನ್ನು ಮಾಡಿಲ್ಲ. ನೀವು ಅದನ್ನು ಯಾವಾಗಲೂ ಒಪ್ಪಿಕೊಂಡಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಹಿರಿಯ ಅಧಿಕಾರಿಗಳನ್ನು ಕರೆಸಿ. ಸರ್ಕಾರ ಯಾವ ರೀತಿಯಿಂದ ಬೇಜವಾಬ್ದಾರಿಯಾಗಿ ನಡೆದುಕೊಳ್ಳುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ. Chief Whip ರವರೂ ಇಲ್ಲ, ಬೇಸರವಾಗಿ ಅಶೋಕ್ ಪಟ್ಟಣರವರು ಎಲ್ಲೋ ಹೋಗಿಬಿಟ್ಟರು. ಹೇಳಿಹೇಳಿ ಸಾಕಾಗಿ ಹೋಯಿತು ಅವರಿಗೆ. ಇಲ್ಲಿರುವುದೇ ಬೇಡ ಎಂದು ಹೇಳಿ ಅವರು ಹೋಗಿಬಿಟ್ಟರು. ರಾಮದುರ್ಗಕ್ಕೆ ಹೋದರೇನೋ ನನಗೆ ಗೊತ್ತಿಲ್ಲ. ಅವರು ದಿನಾಲೂ ಇಲ್ಲಿ ಕಾಣುತ್ತಿದ್ದರು, ಈಗ ಕಾಣುತ್ತಿಲ್ಲ.

(ಮುಂದುವರೆಯುವುದು)

14-06-2017 : 1-10 [17] kkd : ps 1

ಶ್ರೀ ಜಗದೀಶ್ ಶೆಟ್ಟರ್ (ಮುಂದು)

ಅಶೋಕ್ ಪಟ್ಟಣ್‌ರವರು ಹೇಳಿ ಹೇಳಿ ಸಾಕಾಗಿ ಹೋಯಿತು. ಬೇಡವೇ ಬೇಡ, ಇಲ್ಲಿರುವುದೇ ಬೇಡ ಎಂದು ಅವರು ಹೋಗಿಬಿಟ್ಟರು. ಏನೋ ರಾಮದುರ್ಗಕ್ಕೆ ಹೋಗಿಬಿಟ್ಟರೋ ಏನೋ ನನಗೆ ಗೊತ್ತಿಲ್ಲ. ಅವರು ಇಲ್ಲಿದ್ದಿದ್ದರೆ ದಿನಾಲೂ ಕಾಣುತ್ತಿದ್ದರು. ಈಗ ಅವರು ಕಾಣುತ್ತಿಲ್ಲ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

14-06-2017

ಶ್ರೀ ಎಸ್. ಸುರೇಶ್ ಕುಮಾರ್: ಇಲ್ಲ, ಅಶೋಕ್ ಪಟ್ಟಣರವರಿಗೆ ನಿಮ್ಮ ಆಡಳಿತ ಪಕ್ಷದ ಸದಸ್ಯರಲ್ಲಿ ಯಾರು ಬರುವುದಿಲ್ಲವಲ್ಲ ಅವರೆಲ್ಲ ಸೇರಿಸಿ ಟೋಪಿ ಹಾಕಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ರೈತರಿಗೆ ಒಂದು ಕಡೆ ಸಾಲ ಮನ್ನಾ ಮಾಡತಕ್ಕಂಥದ್ದು ಮತ್ತು ರೈತರು ಬೆಳೆದ ಬೆಳೆಗೆ ವೈಜ್ಞಾನಿಕವಾದ ಬೆಲೆ ಕೊಡುವಂಥ ವ್ಯವಸ್ಥೆಯಾಗಬೇಕು ಹಾಗೂ subsidy ದರದಲ್ಲಿ ಬೀಜ ವಿತರಣೆ ಮಾಡುವಂಥದ್ದಾಗಬೇಕು, ಸರಿಯಾದ ವಿದ್ಯುತ್ ಕೊಡುವಂಥದ್ದಾಗಬೇಕು. ಇವತ್ತು ವಿದ್ಯುತ್ ಕೊರತೆ ಎಷ್ಟು ಆಗಿದೆ ಎಂದರೆ, ಗ್ರಾಮೀಣ ಭಾಗದಲ್ಲಿ ವಿದ್ಯುತ್ 2 ತಾಸು, 3 ತಾಸು ಕೊಡುತ್ತಾರೆ. 4-5 ತಾಸು ಕೊಡುತ್ತೇವೆಂದು ಹೇಳುತ್ತಾರೆ, ಆದರೆ continue ಆಗಿ ವಿದ್ಯುತ್ ಕೊಡುವುದಿಲ್ಲ. ಒಂದು ಕಡೆ ವಿದ್ಯುತ್ ತೊಂದರೆ ಸಹ ರೈತರಿಗೆ ಇದೆ ಮತ್ತು subsidy ದರದಲ್ಲಿ ಅವರಿಗೆ ಯಾವುದೇ ಬಿತ್ತನೆ ಬೀಜ ಸಿಗುವುದಿಲ್ಲ ಮತ್ತು ವೈಜ್ಞಾನಿಕವಾದ ಬೆಲೆ ಸಿಗುವುದಿಲ್ಲ. ಹೀಗಾಗಿ, ಆ ಸಾಲದ ಬಾಧೆ, ಇವೆಲ್ಲದರ ಬಗ್ಗೆ ಕೃಷಿ ಇಲಾಖೆಯದು ಬಂದಾಗ ಇನ್ನೂ detail ಆಗಿ ಮಾತನಾಡುತ್ತೇನೆ. ಆದರೆ, ಈ ರೀತಿಯ ಪರಿಸ್ಥಿತಿ ರೈತರದು ಇದೆ. ಅದಕ್ಕೂ ಸಹ ಸರ್ಕಾರದಿಂದ ಯಾವುದೇ ರೀತಿಯ ಸ್ಪಂದನೆ ಇಲ್ಲವೆಂದು ಹೇಳುತ್ತೇನೆ. ಇನ್ನು ನೀರಾವರಿ ಬಗ್ಗೆ ಈಗಲೇ ಸ್ವಲ್ಪ ಮಾತನಾಡುತ್ತೇನೆ. ನೀರಾವರಿ ಪರಿಸ್ಥಿತಿ ಯಾವ ರೀತಿ ಆಗಿದೆ ಎಂಬುದನ್ನು ನೋಡಿದರೆ, ಐದೈದು ಆರಾರು page advertisement ಕೊಡುತ್ತಾರೆ ಹೊರತು ಕೆಲಸ ಮಾತ್ರ ಏನೂ ಇಲ್ಲ. ಯಾವುದೇ ಒಂದು ವಿಚಾರವನ್ನೂ ತೆಗೆದುಕೊಳ್ಳಿ. ಪಟ್ಟಿ ತೆಗೆದು ನೋಡಿದರೆ ಗಾಬರಿ ಆಗಿಬಿಡುತ್ತದೆ. ಆ ರೀತಿಯ ಪರಿಸ್ಥಿತಿ ಇದೆ. ಇನ್ನು ಕೈಗಾರಿಕೆ ವಿಚಾರ ಹೇಳುವುದಾದರೆ, ಮಾನ್ಯ ದೇಶಪಾಂಡೆಯವರೆ, ತಾವು ಅನುಭವವಿದ್ದಂಥವರು, ಕೈಗಾರಿಕೆಯಲ್ಲಿ ಬಹುಶ: ನಿಮ್ಮ time ನಲ್ಲಿ ಇಷ್ಟು ಕೆಳಮಟ್ಟಕ್ಕೆ ನನ್ನ ಪ್ರಕಾರ ಹೋಗಬಾರದಾಗಿತ್ತು. ಹಿಂದೆ ನೀವು Global Investors Meet ಮಾಡಿದ್ದಿರಿ. 3 ಲಕ್ಷ ಕೋಟಿ ಪ್ರಸ್ತಾವನೆಗಳು ಬಂದವು ಎನ್ನುವಂಥದ್ದನ್ನು ಹೇಳಿದ್ದಿರಿ. Gujarath number one ಇತ್ತು. ಗುಜಾರಾತ್ ಅನ್ನು ಮೀರಿ ನಮ್ಮಲ್ಲಿ 3 ಲಕ್ಷ ಕೋಟಿಯಷ್ಟು invest ಮಾಡುವ ರಿಂದ proposals ಬಂದಿವೆ ಎಂದು ಹೇಳಿದರು. ಆದರೆ, ಮಾನ್ಯ ಕೈಗಾರಿಕಾ ಮಂತ್ರಿಯವರು ಉತ್ತರ ಕೊಡುವಾಗ ಹೇಳಿ. ಆ Global Investors Meet ಆದಮೇಲೆ ಎಷ್ಟು proposals ಬಂದವು, ಅದರಲ್ಲಿ ಎಷ್ಟು

ಅನುಷ್ಠಾನವಾಗಿವೆ, ಎಷ್ಟು actually ಬಂದಿವೆ ಎನ್ನುವ ಬಗ್ಗೆ ನೀವು ಸ್ಪಷ್ಟವಾದ ಉತ್ತರ ಕೊಟ್ಟರೆ ನಿಜ ಚಿತ್ರ ಗೊತ್ತಾಗಲಿಕ್ಕೆ ಸಾಧ್ಯವಾಗುತ್ತದೆ. ಆದರೆ, ನಾವೇನು ನಿರೀಕ್ಷೆ ಮಾಡಿದ್ದೆವು ಆ ರೀತಿಯಲ್ಲಿ ಆಗಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಕೈಗಾರಿಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ ಹೇಳಿಬಿಡುತ್ತೇನೆ. ನಿಮಗೆ disturb ಮಾಡುವುದಿಲ್ಲ. 3 ಲಕ್ಷ orders ಪೈಕಿ 1 ಲಕ್ಷ 77 ಸಾವಿರ ಕೋಟಿ ರೂ.ಗಳ proposals, ತಮ್ಮ ಕಾಲದಲ್ಲಿ Global Investors Meet ಆಗಲಿಲ್ಲ. ಸದಾನಂದಗೌಡರ ಮುಖ್ಯಮಂತ್ರಿಯಾಗಿದ್ದಾಗ Global Investors Meet ಆಗಿದೆ. ನಿಮ್ಮ ಸರ್ಕಾರವಿದ್ದ ಕಾಲದಲ್ಲಿ Investors Meet ಎರಡು ಸಲ ಆಯಿತು. ನಾನು ಇನ್ನೂ ಕೂಡ ಅದರ ಬಗ್ಗೆ ಏನೂ ಮಾತನಾಡಲಿಲ್ಲ. ಏಕೆ? ಏಕೆಂದರೆ, ನಾನು ಆ ಬಗ್ಗೆ ಮಾತನಾಡಿದರೆ ನಿಮಗೆ ಬೇಜಾರು ಆಗುತ್ತದೆ. ನಮ್ಮ ಕಾಲದಲ್ಲಿ ನಾನು ಕೆಲವು MoU ಅಷ್ಟೇ ಸಹಿ ಮಾಡಿಲ್ಲ, 1,77,000 crores proposals have been cleared. ಅದರಲ್ಲಿ ಎಷ್ಟು take off ಆಗುತ್ತದೆ ಅದನ್ನೂ ಹೇಳುತ್ತೇನೆ. ಕೆಲವು MoU ಗಳಿಗೆ ಸಹಿ ಮಾಡಿದ್ದೇವೆ. ಅದರಲ್ಲಿಷ್ಟು take off ಮಾಡಿ ತೋರಿಸುತ್ತೇವೆ. ನಿಮ್ಮವು permission ಕೊಟ್ಟರೆ in anticipation of permission ನೀವು globalization ಮಾಡಿದಾಗ ಏನೇನು ಆಯಿತು ಅದನ್ನು ಇನ್ನೂ ಕೂಡ 2 ವರ್ಷಗಳಿಂದ ಹೇಳಲಿಲ್ಲ. Ultimately governments continuing governments ಟೀಕೆ ಟಿಪ್ಪಣಿ ಮಾಡುವುದಕ್ಕಿಂತ investment ತಂದು job create ಮಾಡಿ ಸರ್ಕಾರದ ಬೊಕ್ಕಸಕ್ಕೆ ಹಣ ತರುವುದು ಒಳ್ಳೆಯದು ಎನ್ನುವುದು ನನ್ನ ವಿಚಾರ. ಹಾಗಾಗಿ ಆ ಮಾಹಿತಿ ನಾನು ಅವರಿಗೆ reply ಕೊಡುವಾಗ ಕೊಡುತ್ತೇನೆ. ಆದರೂ ನಾನು ಒಪ್ಪಿಕೊಳ್ಳುತ್ತೇನೆ. ಯಾವ ಪ್ರಮಾಣದಲ್ಲಿ ಈ ದೇಶದಲ್ಲಿ investment ಬರಬೇಕಾಗಿತ್ತೋ ಅದು ಬಂದಿಲ್ಲ. ಅದರ ದುಷ್ಪರಿಣಾಮಗಳು, ಪರಿಣಾಮಗಳು ಎಲ್ಲ ರಾಜ್ಯಗಳ ಮೇಲೆ ಆಗಿವೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. But, still we are better.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್: ಅದಕ್ಕಾಗಿ ಕೈಗಾರಿಕಾ ಬೆಳವಣಿಗೆ ಸಹಿತ ಬಹಳಷ್ಟು ಕಡಿಮೆಯಾಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಅದೂ ಕೂಡ ದೇಶಪಾಂಡೆಯವರು ಜವಾಬ್ದಾರಿ ತೆಗೆದುಕೊಂಡಾಗ ನಾವು ಹೆಚ್ಚು ನಿರೀಕ್ಷೆ ಇಟ್ಟುಕೊಂಡಿದ್ದೆವು. ಅದು ಏಕೋ ಆ ಕೈಗಾರಿಕಾ ಬೆಳವಣಿಗೆ ಆಗುತ್ತಿಲ್ಲ ಎನ್ನುವಂಥ ಕೊರಗು ನಮಗಿದೆ. ಅದಕ್ಕೆ ಅವರು ಸ್ಪಷ್ಟವಾದ ಉತ್ತರ ಕೊಡಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಂದೆ ಏನಾಗಿದೆ, ನಮ್ಮ ಸರ್ಕಾರ ಇದ್ದಾಗ investors investment ಮಾಡಿರುವುದು ಕಡಿಮೆಯಾಗಿದೆ, ಮತ್ತೊಂದು ಆಗಿದೆ ಎಂದು ಹೇಳಿದರು. O.K. ಅದನ್ನು ನಾವು ತಪ್ಪು ಮಾಡಿದ್ದೇವೆಂದು ತಿಳಿದುಕೊಳ್ಳಿ. ಅದಕ್ಕೋಸ್ಕರ ನಾವು ಇಲ್ಲಿ (ವಿರೋಧಪಕ್ಷದ ಸಾಲಿನಲ್ಲಿ) ಬಂದು ಕುಳಿತ್ತಿದ್ದೇವೆ. ನಿಮ್ಮ time ನಲ್ಲಿ ಅಗಬಾರದು.

ಶ್ರೀ ಆರ್.ವಿ.ದೇಶಪಾಂಡೆ: ನಿಮ್ಮಿಂದ ತಪ್ಪಾಗಿದೆ ಎಂದು ನಾನು ಹೇಳಲಿಲ್ಲ. ನಾನು ಏಕೆ ನಿಮಗೆ ಹೇಳುತ್ತೇನೆ? ನೀವು ಒಳ್ಳೆಯ interest ನಿಂದ genuine interest ನಿಂದ ತಂದಿರಬಹುದು. ಅದು ಯಾವ proposal ನೀವು clear ಮಾಡುವುದಕ್ಕೆ ಅವನು investment ಮಾಡಲಿಕ್ಕೆ ಬರಬೇಕಲ್ಲ. Environment ಆ ಪ್ರಕಾರ ಇಲ್ಲ. ಈಗ steel industries, ತಮ್ಮ ಕಾಲದಲ್ಲಿ ನೀವು ಹಾವೇರಿಯಲ್ಲಿ Tata Birla company ಯನ್ನು ತರಲಿಕ್ಕೆ ಪ್ರಯತ್ನ ಮಾಡಿದಿರಿ. ಇವತ್ತು ಅವರು ಹಾಕುವುದಿಲ್ಲವೆಂದು ಹೇಳುತ್ತಾರೆ. ಏಕೆಂದರೆ, ಅವರ ತಪ್ಪಲ್ಲ. Situation is steel industries ಗೆ Supreme court decision ಪ್ರಕಾರ mining lease ಕೊಡಲಿಕ್ಕೆ ಬರುವುದಿಲ್ಲ. There are so many issues. ಆದ್ದರಿಂದ ನಿಮಗೆ ನಾನು blame ಮಾಡಲಿಕ್ಕೆ ಬರುವುದಿಲ್ಲ, situation.

(ಮುಂದು)

ವಿಸಿ:14-06-2017 1-20 (18) ಎಂಕೆಕೆ:ಪಿಎಸ್

ಶ್ರೀ ಜಗದೀಶ್ ಶೆಟ್ಟರ್: ಏನಾಗಿದೆ ಎಂದರೆ, ಉತ್ತರ ಕರ್ನಾಟಕದ ಭಾಗ ಇವತ್ತು urbanization ಆಗುತ್ತಿದೆ. Urbanization ಆಗುವಂಥ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ನಾವು ಮೊದಲಿನಿಂದಲೂ ನೋಡುತ್ತಿದ್ದೇವೆ, concentration Bangalore

ಇದೆ. Development ಸಹ Bangalore ಆಗುತ್ತಿದೆ. ಬೇರೆ ನಗರ ಪ್ರದೇಶಗಳು ಯಾವ ರೀತಿಯಲ್ಲಿ ಬೇರೆ ರಾಜ್ಯಗಳ ನಗರಗಳು ಬೆಳೆದವು, ಯಾವ ರೀತಿ ನಗರೀಕರಣವಾದವು, ಆ ವೇಗದಲ್ಲಿ ಇವು ಆಗುತ್ತಿಲ್ಲ. ಅದರಲ್ಲಿ ರಾಜ್ಯ ಸರ್ಕಾರದ ನಿರ್ಲಕ್ಷ್ಯವೂ ಇದೆ. ಕಲಬುರಗಿ, ವಿಜಯಪುರ, ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಇರಬಹುದು, ಇವು ಇವತ್ತು ಯಾವ ರೀತಿ ಬೆಳವಣಿಗೆಯಾಗಬೇಕಾಗಿತ್ತು, ಆ ರೀತಿ ಬೆಳವಣಿಗೆಯಾಗಲಿಲ್ಲ. ಏನೇ ಇದ್ದರೂ ಸಹ ನಮ್ಮ concentration Bangalore ಆಗಿದೆ. ಆದರೆ, ಇವತ್ತು ತಮಿಳುನಾಡಿನಲ್ಲಿ ನೋಡಿ. ಚೆನ್ನೈ development ಆಯಿತು. ಚೆನ್ನೈ ಆದಮೇಲೆ ಕೊಯಮತ್ತೂರು, ಸೇಲಂ, ಮಧುರೈ, ತಿರುಚ್ಚಿ, ತಿರುಪೂರ್ ಇವೆಲ್ಲ ದೊಡ್ಡ ದೊಡ್ಡ ನಗರಗಳಾಗಿ ಬೆಳೆದವು. ಎಲ್ಲಾ infrastructure ಸಿಕ್ಕಿತು. ಆದರೆ, ಅದೇರೀತಿ, ಕರ್ನಾಟಕದಲ್ಲಾಗಲಿಲ್ಲ. ಏನಿದ್ದರೂ ಮತ್ತೂ burden Bangalore ಮೇಲೇ ಆಗಿದೆ. ಆದರೆ, ಬೆಂಗಳೂರು ಎಷ್ಟು ನಿರೀಕ್ಷಿತವಾಗಿ development ಆಗಬೇಕಾಗಿತ್ತು, ಅದೂ ಆಗಿಲ್ಲ. ಬೇರೆ ನಗರಗಳೂ ಆಗಲಿಲ್ಲ. ಹೀಗಾಗಿ, ಇಲ್ಲಿ ಸರ್ಕಾರ ಎಲ್ಲಿ ತಪ್ಪು ಹೆಜ್ಜೆ ಇಟ್ಟಿದೆ ಎಂದು ವಿಚಾರ ಮಾಡಬೇಕಾಗಿದೆ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ನಾವು ಇವತ್ತು ಚಿಂತನೆ ಮಾಡುತ್ತೇವೆ. ಹೈದರಾಬಾದ್-ಕರ್ನಾಟಕಕ್ಕೆ Article 371(j) ಜಾರಿಗೆ ಬಂತು. ಅದರಿಂದ ಎಷ್ಟು ಲಾಭವಾಯಿತು? ಶೈಕ್ಷಣಿಕವಾಗಿ ಎಷ್ಟು ಮೀಸಲಾತಿ ಸಿಕ್ಕಿತು? ಎಷ್ಟು ಉದ್ಯೋಗಾವಕಾಶ ಸಿಕ್ಕಿದವು? ಅಲ್ಲಿ 3 ರಿಂದ 4 ಸಾವಿರ ಕೋಟಿ ರೂಪಾಯಿ allocation ಮಾಡಿದರೆ, 1200 ಕೋಟಿ ರೂಪಾಯಿಗಳನ್ನೂ ಇವತ್ತು ಖರ್ಚು ಮಾಡಲಾರದ ಪರಿಸ್ಥಿತಿ ಇದೆ. ಅದಕ್ಕೆ ಕೆಲವರು ಅಲ್ಲಿ ಹೇಳುತ್ತಾರೆ. ಅಲ್ಲಿ Divisional Commissioner ಯಾರಿದ್ದಾರೆ, ಅವರಿಗೆ ಇಲ್ಲಿನ ಹೆಚ್ಚಿನ ಜವಾಬ್ದಾರಿ ಇದೆ. ನನಗೆ ಅನಿಸುವಮಟ್ಟಿಗೆ, ಇವತ್ತು Food Department ಗೆ IAS ಅಧಿಕಾರಿ ಹರ್ಷಗುಪ್ತ ಯಾರಿದ್ದಾರೆ, ಅಲ್ಲಿ regular ಆಗಿ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಎಲ್ಲದಕ್ಕೂ incharge posting. ನನಗಿರುವ information ಪ್ರಕಾರ, ಅವರು ಇಲ್ಲಿ incharge Secretary. You have to correct it. ಆದರೆ, ಇಲ್ಲಿ ಈ ರೀತಿ ಎರಡೂ ಜವಾಬ್ದಾರಿ ತೆಗೆದುಕೊಂಡಂಥವರು ಏನು ಮಾಡಲಿಕ್ಕೆ ಸಾಧ್ಯವಿದೆ? ಹೀಗಾಗಿ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಏನು ನಿರೀಕ್ಷಿತ ಪ್ರಮಾಣದಲ್ಲಿ

14-06-2017

ಅಭಿವೃದ್ಧಿಯಾಗಬೇಕಾಗಿತ್ತು, ಅದಾಗಿಲ್ಲ ಎನ್ನುವಂಥ ಕೊರಗು ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇರೀತಿ, coastal belt ನಲ್ಲಿ ಏನು ನಿರೀಕ್ಷಿತ development ಆಗಬೇಕಾಗಿತ್ತು, roads development or railway transportation ಇವೆಲ್ಲ ಏನು ಆಗಬೇಕಾಗಿತ್ತು, ಅದೂ ಆಗಲಿಲ್ಲವೆನ್ನುವಂಥ ಮಾತನ್ನು ಇವತ್ತು ನಾನು ಹೇಳಬೇಕಾಗುತ್ತದೆ. ಬಹಳ ಮುಖ್ಯವಾಗಿ, decentralization ಬಗ್ಗೆ ಹೇಳುತ್ತೇನೆ. ಕೇಂದ್ರಸರ್ಕಾರಕ್ಕೆ ನಾವು, ರಾಜ್ಯಗಳಿಗೆ ಹೆಚ್ಚು ಅಧಿಕಾರ ಬೇಕೆಂದು ಹೇಳುತ್ತೇವೆ. ಅದೇರೀತಿ, ರಾಜ್ಯಗಳಿಂದ ಅಲ್ಲಿನ ಜಿಲ್ಲಾಪಂಚಾಯತ್ ವ್ಯವಸ್ಥೆ ಇರಬಹುದು, ನಗರಸಭೆ ಇರಬಹುದು, ಪುರಸಭೆ ಇರಬಹುದು, local bodies ಗೆ ನಾವು ಎಷ್ಟು ಅಧಿಕಾರವನ್ನು ಕೊಟ್ಟಿದ್ದೇವೆಂದು ನಾವು ಆತ್ಮಾವಲೋಕನ ಮಾಡಬೇಕಾಗುತ್ತದೆ. ನಗರಸಭೆ, ಪುರಸಭೆ, ಮಹಾನಗರಗಳಲ್ಲಿ independent ಆಗಿ ಯಾವುದೇ ಕೆಲಸ ಮಾಡುವಂಥ ಪರಿಸ್ಥಿತಿ ಉಳಿದಿಲ್ಲ. ಇವತ್ತೇನಾದರೂ ಒಂದು special grant ಕೊಟ್ಟರೆ ಮಾತ್ರ ಅಲ್ಲಿ ಕೆಲಸವಾಗಲಿಕ್ಕೆ ಸಾಧ್ಯವಿದೆ. ಇಷ್ಟಿದ್ದಾಗ್ಯೂ, ನಾನು ಹುಬ್ಬಳ್ಳಿ-ಧಾರವಾಡದ ಉದಾಹರಣೆ ಕೊಡುತ್ತೇನೆ. ಅಲ್ಲಿ ನಿವೃತ್ತ ನೌಕರರಿದ್ದಾರೆ. ಅವರಿಗೆ ಪಿಂಚಣಿ ಕೊಡುವುದು ಇದೆ. ನೇರವಾಗಿ ಸರ್ಕಾರವೇ ಕೊಡಬೇಕು. ಆದರೆ, ಇವತ್ತು SFC amount ನಿಂದ ಕೊಟ್ಟಿದ್ದರಿಂದ, ಕಳೆದ 3 ವರ್ಷಗಳಲ್ಲಿ ಸುಮಾರು 105 ಕೋಟಿ ರೂಪಾಯಿ ಮಹನಗರಪಾಲಿಕೆಯವರು ತಮ್ಮ ಬಜೆಟ್‌ನಿಂದ ಕೊಟ್ಟರು. ಅದರ reimbursement ಅನ್ನು ಇವತ್ತಿಗೂ ಮಾಡಲಿಲ್ಲ. ಅದರಿಂದ ಬಹಳಷ್ಟು development ಕೆಲಸವೂ ನಿಂತುಹೋಗಿದ್ದನ್ನು ನಾವು ನೋಡುತ್ತಿದ್ದೇವೆ. ಹಿಂದೆ ರೋಷನ್‌ಬೇಗ್‌ರವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಅದನ್ನು admit ಮಾಡಿದರು. ಹೌದು, ತಪ್ಪಾಗಿದೆ, ಅದನ್ನು ಸರಿಪಡಿಸುತ್ತೇವೆಂದರು. ಇವತ್ತು 105 ಕೋಟಿ ರೂಪಾಯಿ ಬರಲಿಲ್ಲ. ಈ ರೀತಿ ನಗರಸಭೆ, ಪುರಸಭೆ ಆರ್ಥಿಕವಾಗಿ ಸಂಕಷ್ಟದಲ್ಲಿವೆ. ಅವುಗಳನ್ನು ವಿಸ್ತರಕ್ಕೆ ಬೆಳೆಸುವಂಥ ಕೆಲಸ, ಆರ್ಥಿಕವಾಗಿ ಸದೃಢ ಮಾಡುವಂಥ ಕೆಲಸ ಸರ್ಕಾರದಿಂದಾಗಲಿಲ್ಲ. ಇವತ್ತು ಇಡೀ ಕರ್ನಾಟಕದ ಅಭಿವೃದ್ಧಿಗೆ ತೊಂದರೆಯಾಗುತ್ತದೆಂಬ ಮಾತು ಹೇಳುತ್ತೇನೆ. ಇದರ ಜೊತೆಗೆ, ನೀರಾವರಿ ಇಲಾಖೆ ಬಗ್ಗೆ ಹೇಳುವುದಾದರೆ, ಎಂ.ಬಿ.ಪಾಟೀಲರು ಬಹಳಷ್ಟು ಮಾತನಾಡುತ್ತಾರೆ. ಅಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ 4 ವರ್ಷಗಳಲ್ಲಿ ಒಂದು ಹಂತಕ್ಕೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಕಾರ್ಯಗತವಾಗಬೇಕಾಗಿತ್ತು, ಆ ಬಗ್ಗೆ ಬಹಳಷ್ಟು ಮಾತನಾಡಿದರು. Upper Krishna Project ಬಗ್ಗೆ ನಾವು, ಕಾರಜೋಳರವರು ಇಲ್ಲಿ ಪದೇ ಪದೇ ಹೇಳುತ್ತಿದ್ದೇವೆ. ಕಾಂಗ್ರೆಸ್‌ನ ನಡಿಗೆ ಕೃಷ್ಣೆಯ ಕಡೆಗೆ ಎಂದು ಹೇಳಿದಾಗ Upper Krishna Project ಗೆ ಪ್ರತಿವರ್ಷ 10 ಸಾವಿರ ಕೋಟಿ ರೂಪಾಯಿ ಕೊಡುತ್ತೇವೆಂದವರು, ಕೊಡಲಿಲ್ಲ. ಇಲ್ಲಿಯವರೆಗೆ ಸುಮಾರು 4 ವರ್ಷಗಳಲ್ಲಿ 50 ಸಾವಿರ ಕೋಟಿ ರೂಪಾಯಿಗಳನ್ನೇನು ನೀರಾವರಿಗೆ ಕೊಟ್ಟಿದ್ದೀರಿ, ಅದರಲ್ಲಿ ಈ Upper Krishna Project ಗೆ ಖರ್ಚು ಮಾಡಿದ್ದು ಕೇವಲ 13-14 ಸಾವಿರ ಕೋಟಿ ರೂಪಾಯಿಗಳಷ್ಟೇ. ಹಾಗಾದರೆ, ಯಾವ ರೀತಿ ಆ ಕೃಷ್ಣಾ ಮೇಲ್ದಂಡೆ ಯೋಜನೆಗಳು ಕಾರ್ಯಗತವಾಗಲಿಕ್ಕೆ ಸಾಧ್ಯ? ಎಂಬ ವಿಚಾರವನ್ನು ನಾವು ಮಾಡಬೇಕಾಗುತ್ತದೆ. ಆದಾಗಲಿಲ್ಲ. ಆದರೆ, ಬೆಳಗ್ಗೆಯಿಂದ ಸಾಯಂಕಾಲ ಜಾಹೀರಾತು ಕೊಟ್ಟಿದ್ದೇ ಕೊಟ್ಟಿದ್ದು. ನೀರಾವರಿ ಇಲಾಖೆಯ ಬಗ್ಗೆ 4 ಪುಟಗಳ ಜಾಹೀರಾತು ಕೊಟ್ಟಿದ್ದಾರೆ. ಪ್ರತಿ ಇಲಾಖೆಯದ್ದೂ ಹೀಗೇ ನಡೆದಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯಯದ್ದೂ ಹೀಗೇ ಬರುತ್ತದೆ. Social Welfare Department ನದ್ದೂ ಹೀಗೇ ಬರುತ್ತದೆ. ಮಾನ್ಯ ಮುಖ್ಯಮಂತ್ರಿಯವರಿಗೆ, ಎಲ್ಲಾ ಮಂತ್ರಿಗಳಿಗೆ ನಾನು ಹೇಳುವುದೇನೆಂದರೆ, ನೀವೇನು ಕೆಲಸ ಮಾಡಿದ್ದೀರಿ, ಅದರ ಜಾಹೀರಾತನ್ನು ಕೊಡಿ. ನಾವು ಮುಂದೆ ಮಾಡುತ್ತೇವೆ ಎನ್ನುತ್ತೀರಿ. ಈಗಾಗಲೇ 4 ವರ್ಷಗಳಾಯಿತು. ಆ ಕೆಲಸ ಪ್ರಾರಂಭ ಮಾಡಿದ್ದೇವೆ, ಮುಕ್ತಾಯ ಹಂತದಲ್ಲಿದೆ ಎನ್ನುವುದು, ಇದು ಬೇಡ. 4 ವರ್ಷಗಳಲ್ಲಿ ಯಾವುದು complete ಆಗಿದೆ ಆ ಜಾಹೀರಾತು ಕೊಡಿ. ಇದರಲ್ಲೇನಿದೆ? 2016-17ನೇ ಸಾಲಿನಲ್ಲಿ ಜೇವರ್ಗಿ ಶಾಖಾ ಕಾಲುವೆ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿವೆ. ಪೂರ್ಣವಾಗಿಲ್ಲ. NLBC, ERM ಯೋಜನೆ ಕಾಮಗಾರಿ ಅನುಷ್ಠಾನ, 112 ಕೋಟಿ ರೂಪಾಯಿಗಳ ಗೋಂಧಿ ನಾಲೆಗಳ ಆಧುನೀಕರಣ, 2017-18ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. (ಕೊಳಚಿ) ಬಿಲದಂಡೆ ಕಾಲುವೆ ಆಧುನೀಕರಣ ಪೂರ್ಣಗೊಳಿಸಲು ಯೋಜಿಸಲಾಗಿದೆ. ಬೆಣ್ಣೆತೊರ ಯೋಜನೆ ಕಾಮಗಾರಿಗಳು ಪ್ರಗತಿಯಲ್ಲಿವೆ. ಆಮೇಲೆ, ಹಳೆಯದಾದ ಆಣೆಕಟ್ಟು, ನಾಲೆಗಳ ಆಧುನೀಕರಣ, ಚಾಮರಾಜ ಮಿರ್ಲೆ, ರಾಮಸಮುದ್ರ, ಮಾಧವಮಂತ್ರಿ, ದೇವರಾಯ, 151 ಕಿ.ಮೀ. ಉದ್ದದ ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯಕ್ರಮ ರೂಪಿಸಲಾಗಿದೆ. ಚಾಲೂ ಆಗಿಲ್ಲ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಆಮೇಲೆ, ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಜಲಾಶಯಗಳ ಅಡಿಯಲ್ಲಿ ಉದ್ದದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಮತ್ತು 2017-18ನೇ ಸಾಲಿನಲ್ಲಿ 417 ಕಿ.ಮೀ. ಉದ್ದದ lining ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯಕ್ರಮ ರೂಪಿಸಲಾಗಿದೆ. ಹಾಗೇ ಎಲ್ಲವೂ ಸಹ. ಕಾರ್ಯಕ್ರಮ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಬೂದಿಹಾಳ್ ಪೀರಾಪುರ್ ಯೋಜನೆ ಟೆಂಡರ್ ಪ್ರಕ್ರಿಯೆ, ಮಲಪ್ರಭಾ ಯೋಜನೆ - ಕಾಲುವೆಗಳ ಆಧುನೀಕರಣ, ಅನುಷ್ಠಾನಕ್ಕೆ ಯೋಜನೆ ಹಾಕುತ್ತಿದ್ದೇವೆ. ಪಿರಿಯಾಪಟ್ಟಣದ ಕೆರೆಗಳಿಗೆ ನೀರು ಕೊಡುವ ಸಂಬಂಧ ಟೆಂಡರ್ ಪ್ರಕ್ರಿಯಲ್ಲಿದೆ. ಎಲ್ಲವೂ ಟೆಂಡರ್ ಪ್ರಕ್ರಿಯೆಯಲ್ಲಿವೆ. ಮತ್ತೊಂದು ಇದೆ ಎನ್ನುವುದು. ಎಂ.ಬಿ. ಪಾಟೀಲರಿಗಾಗಲಿ, ಇನ್ನಿತರ ಸಚಿವರಿಗಾಗಲಿ ನಾನು ಹೇಳುವುದೇನೆಂದರೆ, ಒಂದು ದಿವಸ ಎಲ್ಲಾ ಇಲಾಖೆಗಳ ಜಾಹೀರಾತು ಕೊಡಿ. ನಿಮಗೆ ಜಾಹೀರಾತು ಕೊಡುವ ಹುಚ್ಚು ಬಹಳ ಇದೆ. ಅದಕ್ಕೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತೀರಿ. ಬಹುಶ: 1 ಸಾವಿರ ಕೋಟಿ ರೂಪಾಯಿಗಳಾಗಿರಬಹುದು, ನನಗೆ ಗೊತ್ತಿಲ್ಲ. ಕಳೆದ 5-6 ತಿಂಗಳಿನಿಂದ ಜಾಹೀರಾತು ನೋಡುತ್ತಿದ್ದೇನೆ. ಸಾವಿರಾರು ಕೋಟಿ ರೂಪಾಯಿ. . . .

ಶ್ರೀ ಆರ್.ವಿ. ದೇಶಪಾಂಡೆ(ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು): ಪ್ರತಿ ದಿನ ಪತ್ರಿಕೆ ಓದಿದಾಗ ತಾವು ನಮ್ಮ advertisement ನೋಡುತ್ತಿರಬಹುದು. ಅದರ ಜೊತೆಗೆ ಬೇರೆ advertisements ನೋಡುತ್ತಿರಬಹುದಲ್ಲವೇ? ಪ್ರತಿದಿನ ಕೇಂದ್ರಸರ್ಕಾರದ್ದು NDA ಸರ್ಕಾರದ್ದು ಎಷ್ಟು advertisement ಇರುತ್ತವೆ?

ಶ್ರೀ ಜಗದೀಶ್ ಶೆಟ್ಟರ್: ನುಡಿದಂತೆ ನಡೆಯುವಂಥ ಕೆಲಸವನ್ನು ಕೇಂದ್ರದಲ್ಲಿ ಮಾಡಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ: ನಾವೂ ನುಡಿದಂತೆ ನಡೆದಿದ್ದೇವೆಂದು ಮಾಡಿದ್ದೇವೆ. ನೀವೂ ನುಡಿದಂತೆ ನಡೆದಿದ್ದೇವೆಂದು advertisement ಮಾಡಿ. ಏನಿದು? ಈ ನ್ಯಾಯ ಸರಿಯಲ್ಲ. ನೀವು advertisement criticize ಮಾಡುವುದಾದರೆ, ಕೇಂದ್ರಸರ್ಕಾರದ್ದು, NDA ಸರ್ಕಾರದ್ದು ಮಾಡಿ. ಮೊದಲು ಅವರದ್ದು ಮಾಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಪ್ರತಿಯೊಂದು ಸರ್ಕಾರ ತಮ್ಮ achievements highlight ಮಾಡುತ್ತದೆ. ನಿಮ್ಮ NDA ಸರ್ಕಾರ . . .



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್: Achievement highlight ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ: ನಮ್ಮ achievement ಅನ್ನು ನಾವು highlight ಮಾಡುತ್ತಿದ್ದೇವೆ. ಬೇಸರದ ಪ್ರಶ್ನೆ ಎಲ್ಲಿ?

ಶ್ರೀ ಜಗದೀಶ್ ಶೆಟ್ಟರ್: ದೇಶಪಾಂಡೆಯವರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಹೇಳಿ, ಇದನ್ನು parliament ನಲ್ಲಿ ಪ್ರಸ್ತಾಪ ಮಾಡಲಿಕ್ಕೆ ಹೇಳಿ. Advertise ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ: ಅದು ಬರುವುದಿಲ್ಲ. Advertisement ವಿಚಾರದಲ್ಲಿ ನಮ್ಮ ಸರ್ಕಾರವನ್ನು ಟೀಕೆ ಮಾಡಿದಾಗ, ನಿಮ್ಮ NDA ಸರ್ಕಾರವನ್ನೂ ನೀವೇಕೆ ಹೀಗೆ ಮಾಡುತ್ತೀರಿ ಎಂದು ನೀವು ಟೀಕೆ ಮಾಡಬೇಕು. ಮಾಡುವುದಿಲ್ಲ. ಅವರು ತಮ್ಮ achievements highlight ಮಾಡುತ್ತಿರಬಹುದು. ನಾವೂ ನಮ್ಮ achievements highlight ಮಾಡುತ್ತಿದ್ದೇವೆ. ಬೇಜಾರಾಗುವ ಪ್ರಶ್ನೆ ಏನಿದೆ?

ಶ್ರೀ ಜಗದೀಶ್ ಶೆಟ್ಟರ್: ಆಯಿತು. ಪ್ರಚಾರ ಮಾಡಿ. ಆಗಿರುವ ಕೆಲಸದ ಬಗ್ಗೆ ಹೇಳಿ. ಆಗದೇ ಇದ್ದ ಕೆಲಸದ ಬಗ್ಗೆ ಏಕೆ ಪ್ರಚಾರ ಮಾಡುತ್ತೀರಿ? ಹೀಗಾದರೆ, ಜನರು ನಂಬುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಶೆಟ್ಟರ್‌ರವರೆ, as opposition leader ನೀವು ನಿಮ್ಮ ಕರ್ತವ್ಯ ಮಾಡುತ್ತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್: ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಆದರೆ, ನಿಮ್ಮ conscious ಏನು ಹೇಳುತ್ತದೆಂದರೆ, ಇಲ್ಲ ಸಿದ್ದರಾಮಯ್ಯ ಸರ್ಕಾರದಲ್ಲಿ ಸಾಕಷ್ಟು ಒಳ್ಳೆಯ ಕೆಲಸಗಳಾಗಿವೆ. (ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಯಾವ conscious ಇಲ್ಲ. ನಾನು open ಆಗಿ ಹೇಳುತ್ತೇನೆ. ಏನೂ ಆಗುತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಬಡವರ ಕಾರ್ಯಕ್ರಮಗಳು, ವಿದ್ಯಾರ್ಥಿಗಳಿಗೆ, ಹೆಣ್ಣುಮಕ್ಕಳಿಗೆ, ಯುವಕರಿಗೆ. . . .

ಶ್ರೀ ಜಗದೀಶ್ ಶೆಟ್ಟರ್: ಯಾವ ಕೆಲಸವೂ ಆಗುತ್ತಿಲ್ಲ. ನಾವು ಅಭಿವೃದ್ಧಿಯಲ್ಲಿ ಬಹಳ ಹಿನ್ನೆಡೆಗೆ ಹೋಗಿದ್ದೇವೆ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಕೆ.ಜಿ. ಬೋಪಯ್ಯ: ನೀವು ತೃಪ್ತಿ ಎಂದೆಲ್ಲ ಹೇಳುತ್ತಿದ್ದೀರಲ್ಲ, ಹಿಂದೆ parliament ಸದಸ್ಯರಾಗಿದ್ದರು, ಈಗಲೂ ನಮ್ಮ ಪಕ್ಷದ ನಾಯಕರು ಎಂದು ಈಗಲೂ ಹೇಳುತ್ತೀರಿ. ಮೊನ್ನೆ ಮೈಸೂರಿನಲ್ಲಾದ ಸಮಾವೇಶದ ಬಗ್ಗೆ ಏನು ಹೇಳಿದ್ದಾರೆ? 75% ಸುಳ್ಳು, 25% ಸತ್ಯ ಎಂದು ಹೇಳಿದ್ದಾರೆ. ಅದೂ ಈಗ. ನೀವೇನೂ ಅವರನ್ನು ಪಕ್ಷದಿಂದ ಹೊರಗೆ ಹಾಕಿಲ್ಲವಲ್ಲ. ನಮ್ಮ ಸ್ನೇಹಿತರಾದ ಮಹದೇವಪ್ಪನವರು, ಇಲ್ಲ, ಅವರು ಪಕ್ಷದಲ್ಲೇ ಇರುತ್ತಾರೆ, ಅವರ ಮನವೊಲಿಸಿದ್ದೇವೆ ಎನ್ನುತ್ತಾರೆ. ಅಂದರೆ, ಅವರು ಹೇಳಿದ್ದೆಲ್ಲ ಸತ್ಯ. ನಮ್ಮಲ್ಲೇನೂ ಇಲ್ಲ. ನಿಮ್ಮ ಜನಾರ್ಧನ ಪೂಜಾರಿಯವರು ಇವತ್ತೇನು ಹೇಳಿದ್ದಾರೆ? ಸಾಲ ಮನ್ನಾ ಮಾಡಿ ಇಲ್ಲದಿದ್ದರೆ ಅಧಿಕಾರ ಬಿಟ್ಟು ತೊಲಗಿ ಎಂದು ಹೇಳಿದ್ದಾರೆ. ನೀವು ಅದನ್ನು accept ಮಾಡುತ್ತಿದ್ದೀರಿ. ಹಾಗಾಗಿ, ಇದು ವಾಸ್ತವಾಂಶ. ಇನ್ನು, ನಾವು ಟೀಕೆ ಮಾಡಲಿಕ್ಕೇನಿದೆ? ನಿಮ್ಮ ಪಕ್ಷದವರೇ ಟೀಕೆ ಮಾಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಆರ್.ವಿ. ದೇಶಪಾಂಡೆಯವರು ಏನು argument ಮಾಡಿದರು, ನಮ್ಮ achievements ಬಗ್ಗೆ ನಾವು ಜಾಹೀರಾತು ಕೊಡುತ್ತೇವೆಂದರು, ಆಯಿತು, ನಾನು ಒಪ್ಪಿಕೊಳ್ಳುತ್ತೇನೆ. ಇದನ್ನು ತೆಗೆದು ನೋಡಿ. 90%, ಇದು achievements ಅಲ್ಲ. ಮಾಡುತ್ತೇವೆ, ಅನುಷ್ಠಾನ ಮಾಡುತ್ತೇವೆ, tender process, ಎಲ್ಲವೂ, ಕುಡಿಯುವ ನೀರಿನ ಯೋಜನೆ, ಎಲ್ಲವನ್ನೂ ತೆಗೆದು ನೋಡಿ.

ಶ್ರೀ ಆರ್.ವಿ. ದೇಶಪಾಂಡೆ: ಕೆಲವು sanctioned projects ಇವೆ. These are also achievements.

ಶ್ರೀ ಜಗದೀಶ್ ಶೆಟ್ಟರ್: ಮಲಪ್ರಭಾ ಯೋಜನೆ, ವೀರಭದ್ರೇಶ್ವರ ಏತ ನೀರಾವರಿ ಯೋಜನೆ, ಅಳವಂಡಿ ಬೆಟಗೇರಿ, ಇಂಡಿ ತಾಲ್ಲೂಕು ಕೆರೆ ತುಂಬಿಸುವುದು, ಚಡಚಣ ಏತ ನೀರಾವರಿ. ಈ advertise ನೋಡಿ ಜನರು ಎಷ್ಟು ಸಾಧನೆ ಮಾಡಿದ್ದಾರೆಂದು ನೋಡಿದರೆ ಇಲ್ಲಿ ಏನೂ ಇಲ್ಲ. Actually ಏನೂ ಇಲ್ಲ. ಇದರಲ್ಲಿ achievements 10% ಇಲ್ಲ. ಆದರೆ, 90% ಮುಂದೆ ಮಾಡುತ್ತೇವೆ ಎನ್ನುವುದು. 4 ವರ್ಷಗಳಾಯಿತು. ನೀವು ಇನ್ನೇನು ಮಾಡುತ್ತೀರಿ? ನೀವು ಅಧಿಕಾರ ಬಿಟ್ಟು ಮನೆಗೆ ಹೋಗುವ time ಬಂತು. ಇವು ಯಾವುವನ್ನೂ ಸಾಧನೆ ಮಾಡಲಿಕ್ಕಾಗುವುದಿಲ್ಲ. ವಿಜಯಪುರದಲ್ಲಿ ನೂರಾರು ಕೆರೆಗಳನ್ನು ತುಂಬಿಸುತ್ತೇನೆಂದು ಹೇಳಿದಿರಿ.

14-06-2017

ನಾನು 3-4 ತಿಂಗಳ ಹಿಂದೆ ಅಲ್ಲಿಗೆ ಹೋಗಿದ್ದೆ. ಒಂದು ಕೆರೆ ತುಂಬಿದೆ. ನಾನು ಹೋದಾಗ, ನಾನು ಬರುತ್ತೇನೆಂದು, ಇನ್ನೊಂದು ಕೆರೆಗೆ pipeline ಹಾಕಿ ನೀರು ಬಿಡುತ್ತಿದ್ದರು. ಎರಡು ಅಥವಾ ಮೂರು ಕೆರೆಗಳಿರಬಹುದು. ನೂರಾರು ಕೆರೆಗಳನ್ನು ತುಂಬಿಸುತ್ತೇವೆಂದು ಹೇಳಿದ್ದರು. ಇಲ್ಲಿ ಕೆರೆಗಳನ್ನು ತುಂಬಿಸುವಂಥ ಕೆಲಸ ಎಂದು ಹೇಳಿದ್ದಾರೆ. ಇವು ಎಲ್ಲಿವೆ? ಅಂದರೆ, ಈ ರೀತಿ ಜನರನ್ನು ಮರಳು ಮಾಡುವಂಥ ಕೆಲಸವನ್ನು ನೀವು ಮಾಡುವುದಕ್ಕೆ ಹೋಗಬೇಡಿ. ನಿಜವಾಗಿ ವಸ್ತುಸ್ಥಿತಿ ಏನಿದೆ ಹೇಳಿ.

ಶ್ರೀ ದೊಡ್ಡನಗೌಡ ಹನುಮಗೌಡ ಪಾಟೀಲ: ಸಾರ್, ಕೊಪ್ಪಳ ಏತನೀರಾವರಿ, ಅದರ ಬಗ್ಗೆಯೂ ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಕೊಪ್ಪಳ ಏತ ನೀರಾವರಿ. ಇತ್ತೀಚೆಗೆ ನಾನು ಕೊಪ್ಪಳಕ್ಕೆ ಹೋಗಿದ್ದೆ. ಯಾವ ಸ್ಥಾನದಲ್ಲಿ ನಾನು ಮುಖ್ಯಮಂತ್ರಿಯಾಗಿ ಕೊಪ್ಪಳ ಏತ ನೀರಾವರಿ ಯೋಜನೆಗೆ ಭೂಮಿ ಪೂಜೆ ಮಾಡಿದ್ದೆ, ಅಂದು ನಾನು 1200 ಕೋಟಿ ರೂಪಾಯಿ ಮಂಜೂರು ಮಾಡಿ ಕೆಲಸ ಚಾಲೂ ಮಾಡಿದ್ದೆ, ಅದಾದಮೇಲೆ, ಈ ಸರ್ಕಾರದ ಬಂದಮೇಲೆ 4 ವರ್ಷಗಳಲ್ಲಿ 2ನೇ, 3ನೇ ಹಂತಕ್ಕೆ ಒಂದು ಪೈಸೆ ಹಣ ಸಹ ಬಿಡುಗಡೆಯಾಗಲಿಲ್ಲ. ನೀವೇನು ಕೆಲಸ ಮಾಡುತ್ತೀರಿ? ಯಾವುದೇ ಯೋಜನೆ ತೆಗೆದುಕೊಳ್ಳಿ, ಎಲ್ಲವೂ ಹಾಗೆಯೇ ನೆನೆಗುದಿಗೆ ಬಿದ್ದಿವೆ. ಹೀಗಾಗಿ, ನೀರಾವರಿ ಯೋಜನೆ ಮುಖಾಂತರ ಏನು ರೈತರ ಉದ್ಧಾರ ಮಾಡಬೇಕಾಗಿತ್ತು, ರೈತರ ಹೊಲಕ್ಕೆ ನೀರು ಕೊಡಬೇಕಾಗಿತ್ತು, ನೀರಾವರಿ ಕ್ಷೇತ್ರವನ್ನೇನು ಹೆಚ್ಚು ಮಾಡಬೇಕಾಗಿತ್ತು ಎನ್ನುವ ಬಗ್ಗೆ ಒಂದು ಶ್ವೇತಪತ್ರ ಹೊರಡಿಸಿ. ಈ 4 ವರ್ಷಗಳಲ್ಲಿ ಯಾವುವನ್ನು complete ಮಾಡಿದ್ದೇವೆ, ಮುಂದೆ ಮಾಡುವುದು ಯಾವುವು? ಇಲ್ಲಿಯವರೆಗೆ ಏನು ಖರ್ಚು ಮಾಡಿದ್ದೀರಿ? ಅದರಿಂದ ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಬಂತು? ಈ ಬಗ್ಗೆ ಶ್ವೇತ ಪತ್ರ ಹೊರಡಿಸಿ. ಇಲ್ಲವೆಂದರೆ, ಸುಮ್ಮನೆ ಈ ರೀತಿ bogus ಜಾಹೀರಾತು ಕೊಡುವುದರ ಮುಖಾಂತರ ಜನರನ್ನು ಮರಳು ಮಾಡುವಂಥ ಕೆಲಸವನ್ನು ನೀವು ಮಾಡುವುದಕ್ಕೆ ಹೋಗಬೇಡಿ ಎನ್ನುವ ಮಾತು ಹೇಳುತ್ತೇನೆ. ಎಲ್ಲ ಇಲಾಖೆಯದ್ದೂ ಹೀಗೇ ಆಗಿದೆ. ಕೃಷ್ಣಾ ಮೇಲ್ದಂಡೆ ಸಂತ್ರಸ್ತರ ಹಿತ ರಕ್ಷಣಾ ಸಮಿತಿಯವರು ನಿನ್ನೆ ನನ್ನನ್ನು ಭೇಟಿಯಾಗಿದ್ದರು. ಕೃಷ್ಣ ಮೇಲ್ದಂಡೆ, ಆಲಮಟ್ಟಿ dam 524.256 ಮೀಟರ್‌ಗೆ ಇವತ್ತೇನು ಹೆಚ್ಚಳ ಮಾಡಬೇಕಾಗಿದೆ, ಅದರ ಬಗ್ಗೆ ಸಂತ್ರಸ್ತರೇನು ಭೂಮಿ ಕಳೆದುಕೊಳ್ಳುತ್ತಾರೆ, ಆ process ನಡೆದಿಲ್ಲ. ಆದರೆ, ಇವತ್ತು ಅಧಿಕಾರಿಗಳನ್ನು ಹೆದರಿಸಿ, ಬೆದರಿಸಿ,

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಒಂದು ಎಕರೆಗೆ ಇಷ್ಟು ಹಣ ಕೊಡುತ್ತೇವೆಂದು ಏನೂ ಹೇಳಲಾರದೆ, ಇವತ್ತು acquisition process ನಡೆಸಿದ್ದಾರೆ. ಅದರ ಬಗ್ಗೆ ಇವತ್ತು ಸಂತ್ರಸ್ತ ಸಮಿತಿಯವರು ಅಲ್ಲಿ ಹೋರಾಟ ಮಾಡುತ್ತಿದ್ದಾರೆ. ಹೊಸಣ್ಣ ದೇಸಾಯಿ ಎನ್ನುವವರು ಹೋರಾಟ ಮಾಡಿದ್ದರು. ಈಗ ಅವರ ಸುಪತ್ರರ ನೇತೃತ್ವದಲ್ಲಿ ಹೋರಾಟವನ್ನು ಚಾಲೂ ಮಾಡಿದ್ದಾರೆ. ಆದರೆ, ಅವರ ಬೇಡಿಕೆಗಳ ಬಗ್ಗೆ ಇನ್ನೂವರೆಗೆ ಸರ್ಕಾರದ ಯಾವ ಅಧಿಕಾರಿಗಳಾಗಲಿ, ಮಂತ್ರಿಗಳಾಗಲಿ, district Minister ಆಗಲಿ, ಯಾರೂ ಸ್ಪಂದನೆ ಮಾಡಿಲ್ಲ.

(ಮುಂದು)

ವಿಸ-14-06-2017-(19)-1-30-ಎಸ್ಕೆ-ವಿಜಿ

ಶ್ರೀ ಜಗದೀಶ್ ಶೆಟ್ಟರ್ : ಮುಂದು.,

ಸಂತ್ರಸ್ಥರಿಗೆ ಅವರ ಬೇಡಿಕೆಯ ಪ್ರಕಾರ ಏನು ಕೊಡುತ್ತೀರಿ ಎನ್ನುವ ಪ್ರಶ್ನೆಯನ್ನು ಅವರು ಕೇಳುತ್ತಿದ್ದಾರೆ. 2013 ರ Land Acquisition Act ಪ್ರಕಾರ ಭೂ ಸ್ವಾಧೀನಕ್ಕಾಗಿ ನೀವು ಎಷ್ಟು ಹಣ ಕೊಡಬೇಕೆಂದು ನಿಗದಿ ಮಾಡಿದಿರಿ ಎನ್ನುವ ಪ್ರಶ್ನೆ ನಾನು ಇಂದು ಕೇಳುತ್ತಿದ್ದೇನೆ. ಅವರೇನು ಬೇಡಿಕೆಗಳನ್ನು ಕೊಟ್ಟಿದ್ದಾರೆ ಆ ಬಗ್ಗೆ ನಾನು ವಿವರವಾಗಿ ಚರ್ಚಿಸುವುದಕ್ಕೆ ಹೋಗುವುದಿಲ್ಲ. ಆ ಬೇಡಿಕೆಗಳ ಪ್ರಕಾರ ಸ್ಪಂದಿಸಿ. ಹಿಂದೆ ಯಾರು ಸಂತ್ರಸ್ಥರು ಇದ್ದಾರೆ ಅವರ ಕೆಲವು ಬೇಡಿಕೆಗಳನ್ನು ಈಡೇರಿಸಿಲ್ಲ. ಈಗ 524 ಅಡಿ ಎತ್ತರ ಹೆಚ್ಚಳ ಮಾಡಿರುವುದರಿಂದ ಹೊಸದಾಗಿ ಯಾರು ಸಂತ್ರಸ್ಥರಾಗುತ್ತಾರೆ, ಎಷ್ಟು ಭೂಮಿ acquire ಮಾಡುತ್ತೀರಿ, ಆ ಭೂ ಮಾಲೀಕರಿಗೆ ಪರಿಹಾರ ಏನು ಕೊಡುತ್ತೀರಿ ಎನ್ನುವ ಬಗ್ಗೆ ರಾಜ್ಯ ಸರ್ಕಾರ ಸ್ಪಷ್ಟಪಡಿಸಬೇಕಾಗಿದೆ. ಮಾನ್ಯ ಆರ್.ವಿ.ದೇಶಪಾಂಡೆಯವರು ಇಲ್ಲಿ ಇದ್ದಾರೆ ನಾನು ಅವರಿಗೆ ಒಂದು ವಿಷಯ ಕೇಳಲಿಚ್ಚಿಸುತ್ತೇನೆ. Land Acquisition Act ನ್ನು UPA ಸರ್ಕಾರ 2013 ರಲ್ಲಿ ತಂದರು. ಆಮೇಲೆ BJP ಯ NDA ಸರ್ಕಾರ, ನರೇಂದ್ರ ಮೋದಿಯವರ ಸರ್ಕಾರ ಬಂದ ಮೇಲೆ 2015 ರಲ್ಲಿ ಹೊಸದಾಗಿ ಭೂ ಸ್ವಾಧೀನ ಮಸೂದೆ ತರಬೇಕೆಂದಾಗ ಕಾಂಗ್ರೆಸ್ ಪಾರ್ಟಿ ಮತ್ತು ನಮ್ಮ ರಾಜ್ಯ ಸರ್ಕಾರವು ಸಹಿತ ಅದನ್ನು oppose ಮಾಡಿ 2013 ರಲ್ಲಿರುವುದನ್ನೇ implement ಮಾಡಬೇಕೆಂದರು. ಆದರೆ ಏನಾಗಿದೆ, ಇವರು ಹೊರಗಡೆ ರಾಜಕೀಯ ಕಾರಣಕೋಸ್ಕರ oppose ಮಾಡುವುದು, ಒಳಗಡೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

2013 ರಲ್ಲಿನ clauses ಸರಿಯಿಲ್ಲ, ಸ್ವಲ್ಪ ಸರಿಯಾಗಬೇಕು ಎನ್ನುವಂಥ ವಾದ ಮಾಡುವುದು. ಬಹುಶ: ಇದು ಯಾರ ಗಮನಕ್ಕೂ ಬಂದಿಲ್ಲ. ನಾನು ಇತ್ತೀಚೆಗೆ ದೆಹಲಿಗೆ ಹೋದಾಗ ಅಲ್ಲಿ Indian Express newspaper ಸಿಕ್ಕಿತು. ಅದರಲ್ಲಿ ಒಂದು ವಿಷಯ ನನಗೆ ಕಂಡು ಬಂದಿದ್ದು ಏನೆಂದರೆ, May 23 ನೇ ತಾರೀಖಿನ Delhi Editionನ Indian Express ಪತ್ರಿಕೆಯಲ್ಲಿ ಏನು ಹೇಳುತ್ತಾರೆ ಎಂದರೆ "Land bill, Congress Government in Karnataka disagrees with the Congress party. In a marked departure from the Congress aggressive stance on the land Bill, its Government in Karnataka has sought lowering of the percentage of land owners whose consent is needed for land acquisition for public-private partnership (PPP) projects from 70 percent to 50 percent. It has also asked for exemption of Social Impact Assessment (SIA) for projects for public purposes for a limited scale of acquisition. The Social Impact Assessment requirement may be exempted for land required for public purpose like water supply, road works, housing, rural infrastructure, including electrification etc., to an extent of 100 acres, to expedite acquisition for such purposes. The Karnataka Government has said in its submission to the Joint Committee on the Right to Fair Compensation and Transparency in Land Acquisition, Rehabilitation and Resettlement (Second Amendment) Bill, 2015." Joint

14-06-2017

Committee ಏನು ಮಾಡಿದ್ದಾರೆ, ಅವರ ಮುಂದೆ ಇವರು submit ಮಾಡುತ್ತಾರೆ. Land Acquisition Act 2013 ನಲ್ಲಿ ಬದಲಾವಣೆ ಮಾಡಬೇಕೆಂದು ಕರ್ನಾಟಕ ಸರ್ಕಾರದವರು proposals ಕೊಡುತ್ತಾರೆ. ನಾನು ಇವತ್ತು ಏನು ಕೇಳುತ್ತೇನೆಂದರೆ..,

ಶ್ರೀ ಆರ್.ವಿ.ದೇಶಪಾಂಡೆ : ನೀವು ಹೇಳುವುದು correct ಇದೆ. To the limited extent 100 acres.., ಏನಾಗುತ್ತದೆ ಎಂದರೆ, ಕೆಲವು water supply schemes, ಕೆಲವು ನಿಮ್ಮ ನೀರಾವರಿಯ schemes, ಬಹಳ pending ಆಗುತ್ತದೆ, ಹೀಗಾಗಿ up to 100 acres, social impact study ಯಿಂದ exemption ತೆಗೆದುಕೊಂಡು ಇದನ್ನು consent award ಮಾಡಿ ಬೇಗನೆ ಕೆಲಸ ಮಾಡಲಿಕ್ಕೆ ಈ ಕ್ರಮ ಸರ್ಕಾರದಿಂದ ತೆಗೆದುಕೊಂಡಿದ್ದೇವೆ, ಇದನ್ನು ನೀವು ಮೆಚ್ಚಬೇಕು. ಎಲ್ಲರೂ ಮೆಚ್ಚುತ್ತಿದ್ದಾರೆ, ಎಲ್ಲಾ ಕಡೆ it is a good step ಎಂದು ಕೆಲವು ಸ್ನೇಹಿತರುಗಳು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : Irrigations projects ಗೆ ಅನುಕೂಲವಾಗುತ್ತದೆ.

ಶ್ರೀ ಶಿವಾನಂದ ಎಸ್.ಪಾಟೀಲ್ : ಮಾನ್ಯ ಶೆಟ್ಟರ್‌ರವರೇ ಒಂದು ನಿಮಿಷ. ಮಾನ್ಯ ಸಚಿವರೇ, housing ನಲ್ಲಿ ಇದಾಗುತ್ತಿಲ್ಲ. ನೀವು ಹೇಳಿದಿರಿ, ನಾವು repeatedly DC, revenue minister ಗೆ ಬರೆದಿದ್ದೇವೆ. Even ಇಲ್ಲಿಯೇ transport minister ಕುಳಿತಿದ್ದಾರೆ. ಅವರು ಒಂದು depot ಗೆ ಒಂದು ಜಾಗ acquisition ಮಾಡಬೇಕಾದರೆ ಆಗುತ್ತಿಲ್ಲ. ಇದಕ್ಕೆ ನೀವೇ cabinet ನಲ್ಲಿ discussion ಮಾಡಬೇಕು. Social impact study ಗೆ exemption ಕೊಟ್ಟಿದ್ದನ್ನಾದರೂ ಹೇಳಬೇಕು. Social impact assessment ಆಗದೇ acquisition ಮಾಡುವುದಿಲ್ಲ ಎಂದು DC ಗಳೇ refuse ಮಾಡುತ್ತಿದ್ದಾರೆ. Example ಆಗಿ ಇಲ್ಲಿಯೇ transport minister ಇದ್ದಾರೆ, ನಾನು ಅವರಿಗೆ ಮೂರು ವರ್ಷಗಳಿಂದ ಬೆನ್ನು ಹತ್ತಿದ್ದೇನೆ. ಅವರೇ ಬೇಕಾದರೆ ಇದಾಗಿದೆ ಎಂದು ಹೇಳಲಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್ : ಇದರ ಜೊತೆಗೆ ಅವರು ಬರಿ 100 acres ಗಷ್ಟೇ ಹೇಳಿದರು. ಆ ರೀತಿ ಅಲ್ಲ. "In another submission, the Karnataka Government said that the legal requirement for obtaining 70 percent consent of land owners and interested persons for PPP projects in the infrastructure sector is practically difficult to implement and is likely to delay acquisition of the land for the projects. This may be reduced to 50 percent the state Government has said." ಆ ನಂತರ ಮತ್ತೊಂದನ್ನು ಹೇಳುತ್ತಾರೆ. "When the Bill was brought by Modi Government in 2015, Congress had launched a massive protest, backed by all opposition parties, against the Centre bringing changes in the consent and SIA clauses of 2013 land Bill enacted by the UPA Government. According to the 2013 Act, consent of 80 percent of land owners had to be obtained when land was acquired for private projects and 70 percent for public-private partnership projects. The NDA Bill exempted five categories of projects from this consent". ಅಂದರೆ, ಈ ರೀತಿ ಬದಲಾವಣೆ ತರತಕ್ಕಂಥದ್ದಕ್ಕೆ ಅಲ್ಲಿ Committee ಯ ಮುಂದೆ ಇಡುತ್ತಾರೆ. ಹೊರಗಡೆ ರಾಜಕೀಯವಾಗಿ ಇದನ್ನು oppose ಮಾಡುವುದು. ಅದಕ್ಕೆ ನಾನು ಮಾನ್ಯ ಎಂ.ಬಿ.ಪಾಟೀಲ್‌ರವರಿಗೆ ಕೇಳುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸಂತ್ರಸ್ತರಾಗುವಂಥವರಿಗೆ 2013 Act ಪ್ರಕಾರ ನೀವು ನಡೆದುಕೊಳ್ಳುತ್ತೀರೋ ಇಲ್ಲವೋ? ಮತ್ತು ಅವರಿಗೆ ಪರಿಹಾರ ಕೊಡುವುದಕ್ಕೆ consent agreement ಮಾಡಿ ಕೊಡುತ್ತೀರೋ? ಅವರು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

reasonable ಆಗಿ ಕೇಳಿದ್ದಾರೆ ಅದರ ಪ್ರಕಾರ ಕೊಡುತ್ತೀರೋ? ನಿಮ್ಮ guidelines ಏನು? 2013 ರಲ್ಲಿರುವಂಥದ್ದನ್ನು ಮಾಡುತ್ತೀರೋ ಅಥವಾ ನಿಮ್ಮದೇ ರಾಜ್ಯ ಸರ್ಕಾರ independent ಆಗಿ ಯಾವುದೋ ಒಂದು land acquisition ಕಾನೂನು ತರುತ್ತೀರೋ? ಇದರ ಬಗ್ಗೆ ಮಾನ್ಯ ಸಚಿವರಾದ ಎಂ.ಟಿ.ಪಾಟೀಲ್‌ರವರು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಆ ಸಂತ್ರಸ್ತರಿಗೆ ಏನು benefits ಸಿಗಬೇಕು ಆ benefits ಸಿಗಲಾರದೆ ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಾರೆ. ಅಷ್ಟೇ ಅಲ್ಲ ಕೃಷ್ಣಾ ಮೇಲ್ದಂಡೆ ಯೋಜನೆಗಳೇನಿವೆ ಅವೆಲ್ಲಾ ಸಹಿತ standstill ಆಗುತ್ತವೆ. ಮುಂದಿನ further B scheme ಪ್ರಕಾರ ಏನು ಕೆಲಸ-ಕಾರ್ಯಗಳು implement ಆಗಬೇಕೋ ಅದು ಆಗುವುದಿಲ್ಲ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಅದಕ್ಕಾಗಿ ಇದರ ಬಗ್ಗೆ ಎಂ.ಬಿ.ಪಾಟೀಲ್‌ರವರು ಸ್ಪಷ್ಟವಾದ ಉತ್ತರವನ್ನು ಕೊಡಬೇಕು ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಇದರ ಜೊತೆಗೆ ಇತ್ತೀಚೆಗೆ ಆಲಮಟ್ಟಿಯಲ್ಲಿ ಇಂದು ನೀರಿನ ಮಟ್ಟ dead storage ಗೆ ಬಂದಿದೆ. ಬಿಜಾಪುರ ನಗರ ಮತ್ತು ಹಲವಾರು ಗ್ರಾಮಗಳೂ ಸಹಿತ ಕುಡಿಯುವ ನೀರಿನ ತೊಂದರೆಯನ್ನು ಅನುಭವಿಸುತ್ತಿವೆ. Mis-management ಆಗುತ್ತಿದೆ. ಆಲಮಟ್ಟಿಯಲ್ಲಿ dead storage ಯಾವ ಮಟ್ಟಕ್ಕೆ ಬಂದಿದೆ ಎನ್ನುವುದನ್ನು ಅವರೇ ಸ್ಪಷ್ಟಪಡಿಸಬೇಕಾಗುತ್ತದೆ. ಬೇರೆ ಬೇರೆ ಪತ್ರಿಕೆಯಲ್ಲಿ ಬೇರೆ ಬೇರೆ report ಗಳು ಬರುತ್ತವೆ. ನೀರಾವರಿ ಇಲಾಖೆಯ ಅಧಿಕಾರಿಗಳು ಇಷ್ಟು ನೀರು ಇದೆ, ಅಷ್ಟು ನೀರು ಇದೆ ಎಂದು ಬೇರೆ ಬೇರೆ ರೀತಿಯಾದಂಥ ವರದಿಗಳನ್ನು ಹೇಳುತ್ತಾರೆ. ಆದರೆ, ಈ ಎಲ್ಲಾ ಮಾಹಿತಿ ತೆಗೆದು ನೋಡಿದರೆ ಪ್ರಾಣಿಗಳು, ಪಕ್ಷಿಗಳು, ಮೊಸಳೆ, ಎಲ್ಲದಕ್ಕೂ ಸಹಿತ ಆ ಜೀವಕ್ಕೆ ಗಂಡಾಂತರ ಬಂದಿರುವಂಥ ಪರಿಸ್ಥಿತಿಯನ್ನು ನಾವು ಇಂದು ನೋಡುತ್ತಿದ್ದೇವೆ. ಇಲ್ಲಿ ಕೆಲವು photo ಗಳನ್ನು ನೋಡಿ ಬಿಟ್ಟರೆ ಯಾವ ಹಂತಕ್ಕೆ ಆಲಮಟ್ಟಿ ನೀರಿನ ಸಂಗ್ರಹ ಬಂದಿದೆ ಎಂಬುದು ಗೊತ್ತಾಗುತ್ತದೆ. ಎಲ್ಲಾ ಬರ ಬಂದಂಗೆ ಆಗಿ ಇಷ್ಟು ಖಾಲಿಯಾಗಿದೆ. ಉಪಾಧ್ಯಕ್ಷರೆ, ತಾವು ಇದನ್ನು ನೋಡಬೇಕು. ಎಲ್ಲಾ ಖಾಲಿಯಾಗಿದೆ.

ಉಪಾಧ್ಯಕ್ಷರು : ಆ ಭಾಗದಲ್ಲಿ ಮಳೆ ಬಿದ್ದಿಲ್ಲವೇ?

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್ : ಇಲ್ಲ ಮಳೆ ಇಲ್ಲ. ಅಲ್ಲಿಗೆ ನೀರು ಬರಬೇಕು. ಆಮೇಲೆ ಇದ್ದ ನೀರನ್ನು ಸದ್ಯಕ್ಕೆ ನಿರ್ವಹಣೆ ಮಾಡಬೇಕಲ್ಲವೇ? ಎಷ್ಟು ಕೊಡಬೇಕು, ಎಷ್ಟು ಬಿಡಬೇಕು ಎಂದು management ಮಾಡಬೇಕಲ್ಲವೇ? ಅದು ಇಲ್ಲ. ಹೀಗಾಗಿ ಅಲ್ಲಿ ಏನಾಗಿದೆ ಎಂದರೆ complete collapse ಎನ್ನುವ ಪರಿಸ್ಥಿತಿಗೆ ಬಂದಿದೆ. ಈ ಹಿಂದೆ ಈ ರೀತಿಯ ಗಂಭೀರ ಪರಿಸ್ಥಿತಿ ಯಾವಾಗಲೂ ಬಂದಿರಲಿಲ್ಲ. ಹೀಗಾಗಿ ಪ್ರಾಣಿ ಪಕ್ಷಿಗಳಿಗೆ, ಜನಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ. ನೀರಾವರಿಗಂತೂ ಇಲ್ಲವೇ ಇಲ್ಲ. ಆಲಮಟ್ಟಿಯಲ್ಲಿ dead storage water ಇರಬೇಕು ಅದೂ ಇಲ್ಲ. ಅಷ್ಟು ಕೆಳಹಂತಕ್ಕೆ ಹೋಗಿ ಬಿಟ್ಟಿದೆ. Mis-management ಆಗಿದೆ. ಒಬ್ಬ ನೀರಾವರಿ ಮಂತ್ರಿಗಳು ಇರುವ ಸ್ಥಳದಲ್ಲಿ ಈ ರೀತಿ ನೀರಾವರಿ ಇಲಾಖೆಯಿಂದ mis-management ಆಗುತ್ತದೆ ಎಂದರೆ ಅದಕ್ಕೆ ಜವಾಬ್ದಾರಿ ಯಾರು?

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಆ ಆಲಮಟ್ಟಿಯಲ್ಲಿ ಬಹುಶ: ಇಷ್ಟು ವರ್ಷಗಳಲ್ಲಿ dead storage ನೀರನ್ನು ಕೈಗಾರಿಕೆಗಳಿಗೆ, ಜಿಂದಾಲ್ ಅಂಥವರಿಗೆ ಕೊಟ್ಟಿರಲಿಲ್ಲ. ಅದರ ಬಗ್ಗೆ ಒಂದು ತನಿಖೆ ಆಗಬೇಕು. ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿಸುತ್ತೇನೆ. ಅಲ್ಲಿ dead storage ನಲ್ಲಿರತಕ್ಕಂಥ ನೀರನ್ನು ಕಾರ್ಖಾನೆಗೆ ಕೊಡುತ್ತಾರೆಂದರೆ ಅದರ ಹಿಂದೆ ಏನಾದರೂ ಉದ್ದೇಶ ಇರಬೇಕಲ್ಲವೇ? ಬಹುಶ: ಯಾವತ್ತೂ ಕೂಡ ಖಾಲಿಯಾಗಿರಲಿಲ್ಲ. ಅಲ್ಲಿ ಪ್ರಾಣಿ ಪಕ್ಷಿಗಳಿಗೂ ಕೂಡ ಒಂದು ಹನಿ ನೀರು ಕುಡಿಯುವುದಕ್ಕೆ ಬಿಡದೇ dead storage ನಲ್ಲಿದ್ದಂಥ ನೀರನ್ನು ಸಹಿತ ಜಿಂದಾಲ್‌ಗೆ ಬಿಡುತ್ತಾರೆಂದರೆ ಅದರ ಹಿಂದೆ ಏನಾದರೂ ಕಾರಣ ಇರುತ್ತದೆ. ಅದಕ್ಕೆ ಅದರ ಬಗ್ಗೆ ಒಂದು ತನಿಖೆಯಾಗಬೇಕೆಂದು ನಾನು ಆಗ್ರಹ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ನನ್ನ ಕಡೆ ದಾಖಲೆ ಇಲ್ಲ. ಆದರೆ, ಆ ಜಿಂದಾಲ್ ಕಂಪನಿಗೆ ನೀರನ್ನು ಬಿಟ್ಟಿದ್ದಾರೆಂದು ಪತ್ರಿಕೆಗಳಲ್ಲಿ ಮತ್ತು ಹೊರಗಡೆಯೂ ಬಂತು. ನಮಗೆ ಕುಡಿಯುವ ನೀರಿನ ತೊಂದರೆ ಇದೆ. ಆಲಮಟ್ಟಿ ಡ್ಯಾಂನಿಂದ ಜಿಂದಾಲ್ ಕಂಪನಿಗೆ ಅನುಕೂಲ ಮಾಡುವ ಸಲುವಾಗಿ ನೀರು ಬಿಟ್ಟಿದ್ದಾರೆನ್ನುವುದು ಇದೆ. ಅದರ ಬಗ್ಗೆ ಅವರೇ ಸ್ಪಷ್ಟೀಕರಣ ಕೊಡಬೇಕಾಗಿದೆ. ಅದು ನಿಜವಾಗಿ ಇತ್ತೆಂದರೆ ಬಹಳ ಒಂದು ದೊಡ್ಡ ದುರಂತ ಎಂದು ನಾನು ಹೇಳುತ್ತೇನೆ. ಇಲ್ಲಿ

14-06-2017

ಕುಡಿಯುವ ನೀರಿಗೆ ತೊಂದರೆ ಇದೆ. ಹೀಗಿರುವಾಗ, ಜಿಂದಾಲ್ ಕಂಪನಿಗೆ ಆಲಮಟ್ಟಿಯಿಂದ ನೀರು ಬಿಟ್ಟಿದ್ದರೆ ಅದೊಂದು ಬಹಳ ದೊಡ್ಡ ದುರಂತ. ಇದರ ಬಗ್ಗೆ ನೀರಾವರಿ ಮಂತ್ರಿಗಳು ಈ ಸದನಕ್ಕೆ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ನಮಗೆ ಕುಡಿಯುವುದಕ್ಕೆ ನೀರು ಇಲ್ಲ ಪ್ರಾಣಿ-ಪಕ್ಷಿಗಳು ಮೊಸಳೆಗಳು ಇಂದು ಹೊರಗಡೆ ಬಂದು ಸಾಯುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ಅವರಿಗೆ ನೀರು ಬಿಟ್ಟಿದ್ದಾರೆ ಎಂದು ಜನರಲ್ಲಿ ಆ ರೀತಿಯ ಭಾವನೆಗಳು ಹುಟ್ಟಿವೆ.

(ಮುಂದು)

14.06.2017 1.40(20)KS:VG

ಶ್ರೀ ಜಗದೀಶ್ ಶೆಟ್ಟರ್:- (ಮುಂದು)

ನೀರು ಬಿಟ್ಟಿದ್ದು ನಿಜವಾಗಿದ್ದರೆ ಅದರ ಬಗ್ಗೆ ತನಿಖೆ ಆಗಲೇಬೇಕಾಗುತ್ತದೆ. ಇದಕ್ಕೆ ಯಾರು ಜವಾಬ್ದಾರರು? ಮಾನ್ಯ ನೀರಾವರಿ ಮಂತ್ರಿಗಳು ಅಥವಾ ಅಧಿಕಾರಿಗಳು ಇದಕ್ಕೆ ಜವಾಬ್ದಾರಿ ಆಗುತ್ತಾರಾ? ಯಾರ direction ಮೇಲೆ ನೀರು ಕೊಡಲಾಗಿದೆ ಎಂಬ ಬಗ್ಗೆ ಕೂಲಂಕಷವಾಗಿ ತನಿಖೆ ಆಗಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ದೇಶಪಾಂಡೆಯವರೆ, ಈ ಫೋಟೋಗಳನ್ನು ನೋಡಿದರೆ ಇವತ್ತಿನ ದಿವಸ ಆಲಮಟ್ಟಿಯಲ್ಲಿ ನೀರಿನ ಪರಿಸ್ಥಿತಿ ಯಾವ ರೀತಿ ಇದೆ ಎಂದು ಗೊತ್ತಾಗುತ್ತದೆ.

ಉಪಾಧ್ಯಕ್ಷರು:- ಆ ಫೋಟೋಗಳನ್ನು ಕಳುಹಿಸಿಕೊಡಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಈ ಫೋಟೋಗಳನ್ನು ಕಳುಹಿಸಿಕೊಡುತ್ತೇನೆ. ಆಲಮಟ್ಟಿ ಬಗ್ಗೆ ಮಾತನಾಡುವುದಕ್ಕೆ ಇನ್ನೂ ಬಹಳಷ್ಟು ವಿಚಾರಗಳಿವೆ. ಆದರೆ, ಸಮಯ ಕಡಿಮೆ ಇರುವುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಹೇಳಿಕೆಗಳು ಮತ್ತು ಜಾಹೀರಾತುಗಳ ಮೇಲೆ ಇವತ್ತು ನೀರಾವರಿ ಯೋಜನೆಗಳು ಆಗುವುದಿಲ್ಲ. ಹಾಗೆಯೇ ಅಲ್ಲಿರುವ ಸಂತ್ರಸ್ತರಿಗೆ ಇದರಿಂದ ಪರಿಹಾರವೇನೂ ಸಿಗುವುದಿಲ್ಲ. ಪ್ರಾಮಾಣಿಕವಾಗಿ ಏನು ಕೆಲಸ ಮಾಡಬೇಕಾಗಿತ್ತೋ ಅದನ್ನು ಮೊದಲು ಮಾಡಬೇಕಾಗಿತ್ತು. ಕೇವಲ ಪೂಜೆ ಮಾಡುವುದರಿಂದ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನೀರವಾರಿ ಕೆಲಸಗಳು ಆಗುವುದಿಲ್ಲ. ಇನ್ನು ಮೇಲೆ ಮಳೆ ಬಾರದೆ ಇದ್ದರೆ ಮಾನ್ಯ ಸಚಿವರನ್ನು brand ambassador ಮಾಡಿ ಅಲ್ಲಿಗೆ ಕಳುಹಿಸಿಕೊಡಿ ಎಂದು ನಾನು ಈಗಾಗಲೇ ಹೇಳಿದ್ದೇನೆ. ಎಲ್ಲಿಯಾದರು ಮಳೆ ಬಾರದೆ ಇದ್ದಲ್ಲಿ ಅಲ್ಲಿ ಹೋಗಿ ಪೂಜೆ ಮಾಡಿ ಎಂದು ಮಾನ್ಯ ಎಂ.ಬಿ.ಪಾಟೀಲ್‌ರವರನ್ನು ಕಳುಹಿಸಿಕೊಡಬಹುದು. ಅದು ಹೋಮ, ಹವನ ಅಲ್ಲವೆಂದು ಹೇಳುತ್ತಾರೆ. ಆದ್ದರಿಂದ, ಅಲ್ಲಿಗೆ ಹೋಗಿ ಪೂಜೆ ಮಾಡಿ ಎಂದು ಹೇಳಬಹುದು. ಪೂಜೆ ಮಾಡಿದರೆ ನೀರು ಬರುತ್ತದೆ. ಆಗ ನೀವು ನೀರಾವರಿ ಯೋಜನೆಗಳನ್ನೂ ಸಹ ಮಾಡುವುದು ಬೇಡ. ತಾವು ಆರಾಮಾಗಿ ಇದ್ದುಬಿಡಿ. ಮತ್ತೊಂದು ವಿಚಾರ ಏನೆಂದರೆ, ಕಳಸಾಬಂಡೂರಿ ವಿಚಾರದಲ್ಲಿ ಕಾನೂನು ಹೋರಾಟ ಮಾಡತಕ್ಕಂಥದರಲ್ಲಿಯೂ ಕೂಡ ವಿಫಲವಾಯಿತು. ಹಾಗೆಯೇ ಎತ್ತಿನಹೊಳೆ ವಿಚಾರದ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆ ಆಗಿದೆ. ಆದರೆ, ಎತ್ತಿನಹೊಳೆ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆಂದು ಮತ್ತು ಇಲ್ಲಿಯವರೆಗೆ ಯಾವುದಕ್ಕೆ ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ಯಾವುದೇ ಮಾಹಿತಿಯನ್ನು ಕೊಟ್ಟಿಲ್ಲ. ಆ ಯೋಜನೆಯಿಂದ ಎಷ್ಟು ನೀರು ಬರುತ್ತದೆ ಎಂಬ ಬಗ್ಗೆ ಒಂದು ವರದಿಯನ್ನು ಸದನದಲ್ಲಿ ಮಂಡನೆ ಮಾಡಬೇಕಾಗಿತ್ತು. ಆದರೆ, ಆ ಕೆಲಸವನ್ನು ಕೂಡ ಮಾಡಿಲ್ಲ. ನೀರಾವರಿ ಬಗ್ಗೆ ನಾವು ಏನೋ ಮಾಡುತ್ತಿದ್ದೇವೆ ಎಂದು ಜನರನ್ನು ತಪ್ಪು ಕಲ್ಪನೆಗೆ ಎಳೆಯುವಂಥ ಕೆಲಸವನ್ನು ಮಾಡುತ್ತಿದ್ದಾರೆಯೇ ಹೊರತು ಅದನ್ನು ಅನುಷ್ಠಾನ ಮಾಡುವುದರ ಬಗ್ಗೆ ನಿಜವಾದಂಥ ಒಂದು ಕಳಕಳಿ ಇವತ್ತು ಸರ್ಕಾರದ ಕಡೆಯಿಂದ ಬರುತ್ತಿಲ್ಲ. ಹೀಗಾಗಿ ಎಲ್ಲಾ ಯೋಜನೆಗಳು ಇದರಿಂದ ವಿಫಲವಾಗುತ್ತಿವೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ:- ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಒಂದು ನಿಮಿಷ. ತಾವು ಕಳಸಾಬಂಡೂರಿ ನಾಲಾ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೀರಿ. ಇದಕ್ಕೆ ಯಾರು ಜವಾಬ್ದಾರಿ ಏನೆಂಬುದರ ಬಗ್ಗೆ ತಮ್ಮ ಬಾಯಿಯಿಂದ ಕೂಡ ಬಂದಿದೆ. ಆದ್ದರಿಂದ, ಈ ಬಗ್ಗೆ ಸದನದಲ್ಲಿ ಚರ್ಚೆ ಮಾಡಿ ಇದನ್ನು ಬೇಗ end ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಈ ಬಗ್ಗೆ ಹಿಂದೆ ಕೂಡ ಸಾಕಷ್ಟು ಚರ್ಚೆ ಆಗಿದೆ. ಈ ಬಗ್ಗೆ ಮತ್ತೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ. Legal battle ಬಗ್ಗೆ ಮಾನ್ಯ ಕೋನರೆಡ್ಡಿರವರು ಹೆಚ್ಚು ಪ್ರಯತ್ನ ಮಾಡಿದರೆ ಒಳ್ಳೆಯದಾಗತ್ತದೆ. ಅಂದರೆ, ರಾಜ್ಯ ಸರ್ಕಾರ ಎಲ್ಲಿ

14-06-2017

ವಿಫಲವಾಗಿದೆ ಎಂಬ ಬಗ್ಗೆ ಮಾನ್ಯ ಕೋನರೆಡ್ಡಿರವರು ಬಹಳ ಗಂಭೀರವಾಗಿ ಚರ್ಚೆ ಮಾಡಿದರೆ ಒಳ್ಳೆಯದಾಗುತ್ತದೆ. ಅದು ಬಿಟ್ಟು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಇದನ್ನೇ ಹೇಳುವುದು ಬೇಡ. ಕಾಂಗ್ರೆಸ್‌ನವರಿಗೆ ಸ್ವಲ್ಪ ಬುದ್ಧಿ ಹೇಳತಕ್ಕಂಥ ಕೆಲಸವನ್ನು ಮಾನ್ಯ ಕೋನರೆಡ್ಡಿರವರು ಮಾಡಲಿ. ಆಗ ಸರಿಯಾಗುತ್ತದೆ. ಕೇವಲ ಬಿಜೆಪಿರವರಿಗೆ ಹೇಳುವುದು ಅಷ್ಟೇ ಅಲ್ಲ. ಇವತ್ತು ನಾವು ಅಧಿಕಾರಕ್ಕೆ ಬಂದಿದ್ದೇವೆ. 10-15 ವರ್ಷಗಳ ಹಿಂದೆ ಅಧಿಕಾರದಲ್ಲಿ ಯಾರಿದ್ದರು ಎಂಬ ಬಗ್ಗೆ ಕೂಡ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎನ್.ಹೆಚ್.ಕೋನರೆಡ್ಡಿ:- ನಾವು ಯಾರಿಗೂ ಬುದ್ಧಿ ಹೇಳುವುದಿಲ್ಲ. ಅಲ್ಲಿ ನೀರು ಕೊಡಿಸುವುದು ನಮ್ಮೆಲ್ಲರ ಹಕ್ಕು.

ಶ್ರೀ ವಿನಯ್ ಕುಲಕರ್ಣಿ (ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿರತಕ್ಕಂಥ ವಿಚಾರ ಎಲ್ಲರಿಗೂ ಸಹ ಗೊತ್ತಿದೆ. ಅದು ನಮಗಷ್ಟೆ ಅಲ್ಲದೆ ಈ ಬಗ್ಗೆ ಯಾರು ಕದ್ದು ಮುಚ್ಚಿ ಏನನ್ನೂ ಮಾಡುತ್ತಿಲ್ಲ. ಈ ವಿಚಾರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು intervene ಆದರೆ, ಈ ಸಮಸ್ಯೆ ಮುಗಿದು ಹೋಗುತ್ತದೆ. ಆದ್ದರಿಂದ, ಅವರು ಕಾಂಗ್ರೆಸ್‌ನವರಿಗೆ ಬುದ್ಧಿ ಹೇಳುವುದು ಬೇಡ. ಕಾಂಗ್ರೆಸ್‌ನವರ ಹತ್ತಿರ ಬುದ್ಧಿ ಇದೆ. ಇವತ್ತಿನದಿವಸ ನಮ್ಮ ಕೈಯಲ್ಲಿ ಏನಿದೆ? ಗೋವಾ ಮತ್ತು ಮಹಾರಾಷ್ಟ್ರ ಸರ್ಕಾರದವರ ಕೈಯಲ್ಲಿದೆ. ಮಾನ್ಯ ಪ್ರಧಾನ ಮಂತ್ರಿಗಳು ಈ ಬಗ್ಗೆ ಮಾತುಕತೆ ನಡೆಸಿದರೆ ಅಗುತ್ತದೆ. ಮಾತುಕತೆ ಮಾಡಿ ಎಂದು ಕೋರ್ಟ್ ಕೂಡ ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್:- ಹಿಂದೆ ಯು.ಪಿ.ಎ. ಸರ್ಕಾರ ಇದ್ದಾಗ ಇದೇ ರೀತಿ ಇತ್ತು. ಈ ವಿಷಯದಲ್ಲಿ ಸುಮ್ಮನೆ ರಾಜಕಾರಣ ಮಾಡುವುದು ಬೇಡ.

ಶ್ರೀ ವಿನಯ್ ಕುಲಕರ್ಣಿ:- ರಾಜಕಾರಣವನ್ನು ಯಾರೂ ಕೂಡ ಮಾಡುವುದು ಬೇಡ.

ಶ್ರೀ ಜಗದೀಶ್ ಶೆಟ್ಟರ್:- ಎಲ್ಲರೂ ಕೂಡಿ ಪ್ರಾಮಾಣಿಕವಾದಂಥ ಪ್ರಯತ್ನ ಮಾಡೋಣ.

ಶ್ರೀ ವಿನಯ್ ಕುಲಕರ್ಣಿ:- ನೀವು ರಾಜಕಾರಣ ಮಾಡುವುದು ಬೇಡ. ಈ ಸಮಸ್ಯೆ ಬಗೆಹರಿಸಲು ನೀವು ಕೇವಲ ಮನಸ್ಸು ಮಾಡಿದರೆ ಸಾಕು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ವಿನಯ್ ಕುಲಕರ್ಣಿರವರೆ, ನೀವು ಆ ಭಾಗದವರಾಗಿರುವುದಲ್ಲದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದು, ಈ ಬಗ್ಗೆ ಸುಮ್ಮನೆ ರಾಜಕಾರಣ ಮಾಡುವುದಕ್ಕೆ ಹೋಗಬೇಡಿ. ಈ ಬಗ್ಗೆ ನಾನು ಸಾಕಷ್ಟು ಸಲ ಹೇಳಿದ್ದೇನೆ. ನಮಗೆ ನಮಸ್ಕಾರ ಮಾಡಿದರೆ ಏನೂ ಉಪಯೋಗ ಇಲ್ಲ. ಕಾನೂನು ಹೋರಾಟ ಮಾಡಿ, ಸರಿಯಾಗಿ ಕೇಸ್ ನಡೆಸುವುದಕ್ಕೆ ನಿಮ್ಮ ವಕೀಲರಿಗೆ ಹೇಳಿ. ಸುಮ್ಮನೆ ಖಾಲಿಪುಕ್ಕಟೆ ರಾಜಕಾರಣ ಮಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ಮಾನ್ಯ ಬೋಪಯ್ಯನವರೆ, ನಿಮ್ಮ ಎಲ್ಲಾ ಪಾರ್ಲಿಮೆಂಟ್ ಸದಸ್ಯರೆಲ್ಲರನ್ನೂ ಒಂದು ಸಾರಿ ಕರೆದು ಒಂದು ಸಭೆಯನ್ನು ಮಾಡಿ. ಪಾರ್ಲಿಮೆಂಟ್‌ನಲ್ಲಿ ನಿಮ್ಮ ಕಡೆಯವರು ಹೆಚ್ಚಿನ ಸದಸ್ಯರಿದ್ದಾರೆ. ಅವರೆಲ್ಲರನ್ನು ಕರೆದು ಒಂದು ಸಭೆ ಮಾಡಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- The mater is pending before the tribunal. ಅಲ್ಲಿ ಸರಿಯಾದ ವಕೀಲರನ್ನು ಇಟ್ಟು ವಾದ ಮಾಡಿಸಿ. ಅದನ್ನು ಬಿಟ್ಟು ಪಾರ್ಲಿಮೆಂಟ್ ಸದಸ್ಯರು ಎಂದು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ಅವರೆಲ್ಲರನ್ನೂ ಕರೆದು ಒಂದು ಸಭೆ ಮಾಡಿ ಅವರ ಜೊತೆ ಮಾತನಾಡಿ. ಯಾರದ್ದೋ ಮೇಲೆ ಸುಮ್ಮನೆ ಟೀಕೆ ಮಾಡುವ ಬದಲು ಅವರೆಲ್ಲರನ್ನು ಕರೆದು ಇಲ್ಲಿ ಮಾತನಾಡಿ. ಮಾತನಾಡುವುದಕ್ಕೆ ನಿಮಗೇನು ಆಗಿದೆ? ನಿಮಗೆ ರೈತರ ಬಗ್ಗೆ ಸಂಬಂಧ ಇಲ್ಲವೇ? ನಿಮಗ್ಯಾರಿಗೂ ರೈತರ ಬಗ್ಗೆ ಕಾಳಜಿ ಇಲ್ಲವೇ?

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:-ಟ್ರಿಬ್ಯುನಲ್ ಮುಂದೆ ಯಾವ ರೀತಿಯಾಗಿ ಕೇಸ್ ನಡೆಸುತ್ತಿದ್ದೀರಿ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ಆ ವಿಷಯ ಬಿಡಿ. ಈಗ ರಾಜಕಾರಣ ಮಾಡುವುದಕ್ಕೆ ಹೋಗಬೇಡಿ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನೀವು ಏನು ಮಾಡಿದ್ದೀರಿ? ಗೋವಾ ರಾಜ್ಯದ ಕಾಂಗ್ರೆಸ್‌ನವರಿಗೆ ನೀವು convince ಮಾಡಿ? ನಿಮ್ಮ ಕಾಂಗ್ರೆಸ್ ಲೀಡರ್‌ಗೆ ಹೇಳುತ್ತೀರಾ? ಸುಮ್ಮನೆ ಕಳಸಾ ಬಂಡೂರಿ ವಿಷಯ ಬಂದ ತಕ್ಷಣ ಆ ರೀತಿ ಹೇಳುವುದಾಯಿತಷ್ಟೆ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ಮೊದಲು ನೀವು ಕರೆಯಿರಿ. ನಾವು ಕರೆಯುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಕೇವಲ ರಾಜಕಾರಣ ಮಾಡುವುದಾಯಿತ್ತು. ಗೋವಾ ರಾಜ್ಯಕ್ಕೆ ನಾವು ಬರುತ್ತೇವೆ ನೀವೂ ಬನ್ನಿ. ಅಲ್ಲಿ ನಿಮ್ಮ ಕಾಂಗ್ರೆಸ್ ಲೀಡರ್ಸ್ ಮತ್ತು ಮಾಜಿ ಮುಖ್ಯಮಂತ್ರಿಗಳು ಹಾಗೂ ಅಲ್ಲಿನ ಪ್ರತಿಪಕ್ಷದ ನಾಯಕರಿಗೆ ಮತ್ತು ನಿಮ್ಮ ಸೋನಿಯಾ ಗಾಂಧಿಯವರಿಗೆ convince ಮಾಡಿ. ಶ್ರೀಮತಿ ಸೋನಿಯಾ ಗಾಂಧಿರವರು ಗೋವಾ ರಾಜ್ಯಕ್ಕೆ ಹೋಗಿ ಕಳಸಾ ಬಂಡೂರಿ ನಾಲಾದಿಂದ ಒಂದು ಹನಿ ನೀರನ್ನು ಗೋವ ರಾಜ್ಯದಿಂದ ಕೊಡುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ, ಶ್ರೀಮತಿ ಸೋನಿಯಾ ಗಾಂಧಿಯರವರಿಗೆ ಮತ್ತು ಮಾನ್ಯ ರಾಹುಲ್ ಗಾಂಧಿಯವರಿಗೆ ಹೇಳಿ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ಯಾವುದೊಂದು ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನು ಇಲ್ಲಿ ಹೇಳಬೇಡಿ. ಈ ಬಗ್ಗೆ ದಾಖಲೆ ಇದ್ದರೆ ತೆಗೆದುಕೊಂಡು ಬನ್ನಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ತಾವು district minister ಆಗಿ ಈ ಸಮಸ್ಯೆಯನ್ನು ಯಾವ ರೀತಿಯಾಗಿ solve ಮಾಡಬೇಕೆಂಬುದುರ ಬಗ್ಗೆ ವಿಚಾರ ಮಾಡಬೇಕು. ಅಸೆಂಬ್ಲಿಗೆ ಬಂದಾಗ ಕೇವಲ ರಾಜಕಾರಣ ಮಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಉಪಾಧ್ಯಕ್ಷರು:- ಈ ವಿಷಯ ಇಲ್ಲಿಗೆ ಬಿಡಿ.

(ಗೊಂದಲ)

14-06-2017

ಶ್ರೀ ಜಗದೀಶ್ ಶೆಟ್ಟರ್:- ಈ ರೀತಿಯಾಗಿ ರಾಜಕಾರಣ ಮಾಡುವುದೆಲ್ಲವನ್ನು ಬಿಡಿ. ಅಲ್ಲಿ ನಿಮ್ಮ ಶ್ರೀಮತಿ ಸೋನಿಯಾ ಗಾಂಧಿರವರೆಗೆ ಮತ್ತು ಮಾನ್ಯ ರಾಹುಲ್ ಗಾಂಧಿಯವರಿಗೆ ಹೇಳಿ. ಗೋವಾ ರಾಜ್ಯದ ಕಾಂಗ್ರೆಸ್ ಸದಸ್ಯರನ್ನು ನಾನು convince ಮಾಡುತ್ತೇನೆಂದು ಮಾನ್ಯ ರಾಹುಲ್ ಗಾಂಧಿಯವರು ಪಾರ್ಲಿಮೆಂಟ್‌ನಲ್ಲಿ promise ಮಾಡಲಿ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ಮಾನ್ಯ ಉಪಾಧ್ಯಕ್ಷರೆ, ಇವತ್ತು ಕಾಂಗ್ರೆಸ್‌ನವರ ಕೈಯಲ್ಲಿ ಇಲ್ಲ.

(ಗೊಂದಲ)

ಉಪಾಧ್ಯಕ್ಷರು:- ಆಯಿತು ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ರಾಹುಲ್ ಗಾಂಧಿಯವರು ಪಾರ್ಲಿಮೆಂಟ್‌ನ ನೇತಾರರು ಆಗಿದ್ದಾರೆ. ಆದ್ದರಿಂದ, ಕಳಸಾ-ಬಂಡೂರಿ ವಿಷಯದ ಬಗ್ಗೆ ನಾನು ಗೋವಾ ರಾಜ್ಯದ ಕಾಂಗ್ರೆಸ್‌ನವರನ್ನು convince ಮಾಡುತ್ತೇನೆಂದು ಅವರು ಅಲ್ಲಿ ಹೇಳಲಿ. ಅದನ್ನು ಬಿಟ್ಟು ಈ ರೀತಿ ಮಾಡಿದರೆ ಅರ್ಥ ಇಲ್ಲ.

(ಗೊಂದಲ)

ಉಪಾಧ್ಯಕ್ಷರು:- ಆಯಿತು ಬಿಡಿ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ನಿಮಗೆ ಏಕೆ ಈ ಬಗ್ಗೆ ಕಳಕಳಿ ಇಲ್ಲ. ಇಲ್ಲಿ ಮಾತನಾಡುವುದಕ್ಕಿಂತ ಮೊದಲು ಅಲ್ಲಿ ಕೆಲಸ ಮಾಡಿ.

(ಗೊಂದಲ)

ಶ್ರೀ ಸಿ.ಟಿ.ರವಿ:- ಮಾನ್ಯ ಸಚಿವರೆ, ತಾವು ಈ ವಿಷಯ ಮಾತನಾಡುವ ಬದಲು ಬಡವರಿಗೆ ಮೊದಲು ಮರಳು ಭಾಗ್ಯ ಕೊಡಿ. ಅದು ನಿಮ್ಮ ಇಲಾಖೆಗೆ ಬರುತ್ತದೆ. ಮೊದಲು ಇದನ್ನು ಮಾಡಿ ತೋರಿಸಿ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ಮೊದಲು ನಿಮ್ಮ ಪಾರ್ಲಿಮೆಂಟ್ ಸದಸ್ಯರೆಲ್ಲರೂ ಕುಳಿತು ಒಂದು ಸಭೆ ಮಾಡಿ.

(ಗೊಂದಲ)

ಶ್ರೀ ಸಿ.ಟಿ.ರವಿ:- ಮರಳು ಭಾಗ್ಯ ನಿಮ್ಮ ಕೈಯಲ್ಲಿದೆ. ಬಡವರಿಗೆ ಏಕೆ ಈ ರೀತಿಯಾಗಿ ಗೋಳಾಡಿಸುತ್ತೀರಿ? ನಿಮ್ಮ ಕೈಯಲ್ಲಿದೆ ಕೊಡಿ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ನಾನು ಕುಳಿತುಕೊಳ್ಳುತ್ತೇನೆ. ನಮ್ಮ ಕೈಯಲ್ಲಿ ಏನು ಇದೆ ಎಂದು ಮತ್ತು ನಾವು ಏನು ಮಾಡಬಹುದೆಂದು ಹೇಳಿ.

(ಗೊಂದಲ)

ಶ್ರೀ ಸಿ.ಟಿ.ರವಿ:- ನಿಮ್ಮ ಕೈಯಲ್ಲಿರುವುದನ್ನು ಕೊಡಿ. ಉಳಿದ ವಿಚಾರವನ್ನು ಆನಂತರ ಮಾತನಾಡಿ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ನಾನು ಕುಳಿತುಕೊಳ್ಳುತ್ತೇನೆ. ನಮ್ಮ ಕೈಯಲ್ಲಿ ಏನಿದೆ ಎಂದು ಮಾತನಾಡಿ. ಕಾಂಗ್ರೆಸ್‌ನವರು ಏನು ಮಾಡಬಹುದೆಂದು ಹೇಳಿ.

(ಗೊಂದಲ)

ಶ್ರೀ ಸಿ.ಟಿ.ರವಿ:- ಮಾತನಾಡುವುದು ಏನಿದೆ. ನೀವು ಮಂತ್ರಿಯಾಗಿದ್ದೀರಿ. ಆದ್ದರಿಂದ ಮೊದಲು ಮರಳು ಭಾಗ್ಯ ಕೊಡಿ. ಮರಳು ಲೂಟಿ ಹೊಡೆಯುವುದಕ್ಕೆ ಇವತ್ತು ಅವಕಾಶ ಕೊಟ್ಟಿದ್ದೀರಿ. ಆದ್ದರಿಂದ ಬಡವರಿಗೆ ಮರಳು ಭಾಗ್ಯ ಕೊಡಿ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ಯಾವುದೋ ವಿಚಾರ ಮಾತನಾಡುವುದಕ್ಕೆ ಹೋಗಿ ಏನೇನೋ ವಿಚಾರ ಮಾತನಾಡುತ್ತಿದ್ದೀರಿ. ಮರಳು ಎಲ್ಲಿ ಲೂಟಿ ಆಗುತ್ತಿದೆ ಹೇಳಿ?

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಸಿ.ಟಿ.ರವಿ:- ನಮ್ಮ ಕೈಯಲ್ಲಿದೆಯಾ ಎಂದು ತಾವು ಹೇಳಿದ್ದೀರಿ. ಆದರಿಂದ ನಾನು ಹೇಳುವುದೇನೆಂದರೆ, ನಿಮ್ಮ ಕೈಯಲ್ಲಿಯೇ ಮರಳು ಭಾಗ್ಯ ಇದೆ. ಬಡವರು ಮನೆ ಕಟ್ಟುವುದಕ್ಕೆ ಮರಳು ಇಲ್ಲ. ಹಳ್ಳಿಗಳಲ್ಲಿ ಮರಳು ಸಿಗುತ್ತಿಲ್ಲ. ಇದು ನಿಮ್ಮದೇ ಇಲಾಖೆ ಆಗಿದೆ. ಆದ್ದರಿಂದ, ಮೊದಲು ಮರಳು ಕೊಡಿ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- 264 ಬ್ಲಾಕ್ ಟೆಂಡರ್ ಮಾಡಿದ್ದೇವೆ.

(ಗೊಂದಲ)

ಶ್ರೀ ಸಿ.ಟಿ.ರವಿ:- ಮೊದಲು ಮರಳು ಕೊಟ್ಟು ಆನಂತರ ಮುಂದಿನ ವಿಚಾರದ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ಮೊದಲು ನೀರು ಕೊಡಿ. ನೀರಿನ ಬಗ್ಗೆ ಮಾತನಾಡುವಾಗ ಕೇವಲ ನೀರಿನ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಸಿ.ಟಿ.ರವಿ:- ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ ಕೊಡುತ್ತೇವೆ. ಅಲ್ಲಿಯವರೆಗೆ ಕಾಯಿರಿ.

(ಗೊಂದಲ)

ಶ್ರೀ ವಿನಯ್ ಕುಲಕರ್ಣಿ:- ಈಗಲೇ ಕೊಡುವುದಕ್ಕೆ ಆಗುತ್ತಿಲ್ಲ. ಆಗ ಕೊಡುವುದಕ್ಕೆ ಏಕೆ ಬರುತ್ತೀರಿ? (ಗೊಂದಲ) ನಮ್ಮ ಸರ್ಕಾರ ಅಧಿಕಾರಕ್ಕೆ ಬರಲಿ ಆನಂತರ ಕಳಸಾ ಬಂಡೂರಿ ನಾಲಾಕ್ಕೆ ನೀರು ಕೊಡುತ್ತೇವೆಂದು ಮಾನ್ಯ ಯಡಿಯೂರಪ್ಪನವರು ಎಲ್ಲಾ ಕಡೆ ಭಾಷಣ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಮಹಾದಾಯಿ ಭಾಗ್ಯ ಕೊಡಲಿಲ್ಲವೆಂದು ಚುನಾವಣೆಯಲ್ಲಿ ಸೋಲಿಸಿದರೆ ಏನು ಮಾಡುತ್ತೀರಿ?

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ವಿನಯ್ ಕುಲಕರ್ಣಿ:- ಈಗ ಕೊಡುವುದಕ್ಕೆ ಆಗುವುದಿಲ್ಲ. ಆಮೇಲೆ ಕೊಡುತ್ತಾರಂತೆ? ಈಗ ಏಕೆ ಕೊಡುವುದಕ್ಕೆ ಆಗುವುದಿಲ್ಲ? ಸರ್ಕಾರ ಬಂದ ಮೇಲೆ ಏಕೆ ಕೊಡಬೇಕು? ಸರ್ಕಾರ ಬರುವುದರ ಬಗ್ಗೆ ಕನಸು ಕಾಣಿ.

(ಗೊಂದಲ)

ಶ್ರೀ ಸಿ.ಟಿ.ರವಿ:- ಮಾನ್ಯ ಅಧ್ಯಕ್ಷರೆ, ಈಗ ಮಹಾರಾಷ್ಟ್ರದಲ್ಲಿ ಮತ್ತು ದೆಹಲಿಯಲ್ಲಿ ಬಿಜೆಪಿ ಸರ್ಕಾರ ಇದೆ ಎಂದು ಹೇಳುತ್ತಿದ್ದೀರಿ. ಆದ್ದರಿಂದ, ಕರ್ನಾಟಕ ರಾಜ್ಯದಲ್ಲಿಯೂ ಕೂಡ ಬಿಜೆಪಿ ಸರ್ಕಾರ ಇದೆ. ಆದ್ದರಿಂದ, ಮಾಡಿ ಎಂದು ಹೇಳುವ ಕಾಲ ಬರುತ್ತದೆ. ಅಲ್ಲಿಯವರೆಗೆ ಕಾಯಿರಿ.

ಉಪಾಧ್ಯಕ್ಷರು:- ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 47 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

ದಿ:14-06-2017-3.30(24)-ಜೆ.ಎಲ್-ಹೆಚ್.ಎಸ್

**(ಸದನವು ಭೋಜನಾ ವಿರಾಮದ ನಂತರ ಪುನಃ 3 ಗಂಟೆ 37 ನಿಮಿಷಕ್ಕೆ ಪ್ರಾರಂಭವಾಯಿತು ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)**

**2017-18 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ:**

ಅಧ್ಯಕ್ಷರು: ಜಗದೀಶ್ ಶೆಟ್ಟರ್ ರವರೆ ಎಷ್ಟು ಸಮಯ ಮಾತನಾಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, 45 ನಿಮಿಷ ಸಮಯ ತೆಗೆದುಕೊಳ್ಳುತ್ತೇನೆ. ಆದಷ್ಟು ಬೇಗ ಮುಗಿಸುತ್ತೇನೆ. ನೀರಾವರಿ ಯೋಜನೆ ಬಗ್ಗೆ ನಾನು ಬೆಳಿಗ್ಗೆ ಮಾತನಾಡುತ್ತಿದ್ದೆ. ಈ ವಿಷಯವನ್ನು ಮಾನ್ಯ ಕೃಷಿ ಸಚಿವರು ಗಮನಿಸಬೇಕು. ಕಳೆದ ಬಾರಿ ಇದ್ದಂತಹ ಕೇಂದ್ರ ಸರ್ಕಾರದ short term loanಗೆ ಮಾಡಿದಂತಹ subsidized

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

interest rate ಅನ್ನು ಮತ್ತೆ ಒಂದು ವರ್ಷ extend ಮಾಡಿದ್ದಾರೆ ಈ ವಿಷಯವನ್ನು ನಾನು ಮಧ್ಯಾಹ್ನ ಮನೆಗೆ ಹೋದಂತಹ ಸಂದರ್ಭದಲ್ಲಿ ನೋಡಿದೆ. "Introduced by the Central Government last year, the scheme provides for short term loan up to Rs. 3 lakh to farmers at a subsidized interest rate of 4% for prompt payers." ಕಳೆದ ಬಾರಿ ಇದ್ದಂತಹ 7% subsidized interest rate ಅನ್ನು 4%ಗೆ ಕಡಿಮೆ ಮಾಡಿದ್ದರು. ಅದನ್ನು ಮತ್ತೊಂದು ವರ್ಷ extend ಮಾಡಿದ್ದಾರೆ. Prompt payers ಗೆ 4% interest rate continue ಮಾಡಿದ್ದಾರೆ. ಕೃಷ್ಣಾ ಮೇಲ್ದಂಡೆ ಹಾಗೂ ಇನ್ನಿತರೆ ನೀರಾವರಿ ಯೋಜನೆಗಳ ಬಗ್ಗೆ ನಾನು ಈಗಾಗಲೇ ಮಾತನಾಡಿದ್ದೇನೆ. ಒಂದು ವಿಷಯ ನಿನ್ನೆ ಕೂಡ ಇಲ್ಲಿ ಚರ್ಚೆ ಆಗಿದೆ ಅದೇನೆಂದರೆ, ಕೋಲಾರ, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ ಭಾಗಗಳಲ್ಲಿ ಶಾಶ್ವತ ನೀರಾವರಿ ಯೋಜನೆ ಮತ್ತು ಶಾಶ್ವತ ಕುಡಿಯುವ ನೀರಿನ ಯೋಜನೆ ಆಗಬೇಕೆಂಬ ಹೋರಾಟವಿದ್ದು, ಈ ಬಗ್ಗೆ ಈಗಾಗಲೇ ಸಾಕಷ್ಟು ಜನ ಶಾಸಕರು ಮಾತನಾಡಿದ್ದಾರೆ. ಪರಮಶಿವಯ್ಯನವರ ವರದಿ, ಭದ್ರಾ ಮೇಲ್ದಂಡೆ ಯೋಜನೆ, ಯರಗೋಳು ಕುಡಿಯುವ ನೀರಿನ ಯೋಜನೆ ಮತ್ತು ಇತ್ತೀಚೆಗೆ ಎತ್ತಿನ ಹೊಳೆ ಯೋಜನೆ ಮತ್ತು ಅದಾದ ನಂತರ ಕೆ.ಸಿ.ವ್ಯಾಲಿ ಯೋಜನೆ, ಹೆಬ್ಬಾಳ ವ್ಯಾಲಿ ಯೋಜನೆ ಈ ರೀತಿ ಹಲವಾರು ಯೋಜನೆಗಳನ್ನು ಜಾರಿ ಮಾಡುತ್ತೇವೆಂದು ಹೇಳಿ ಬಹಳ confusion ಆಗುತ್ತಿದೆ. ಇದರ ಬಗ್ಗೆ ನಾವೇನು ಮಾಡುತ್ತೇವೆಂಬ ಬಗ್ಗೆ ಸರ್ಕಾರಕ್ಕೆ ಒಂದು clarity ಇರಬೇಕು. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರದಲ್ಲಿ ಕೃಷಿಗೆ ಯೋಗ್ಯವಾದಂತಹ ಭೂಮಿ ಎಷ್ಟಿದೆ? ಕೃಷಿಯಿಂದ ವಂಚಿತವಾಗಿರುವ ಭೂಮಿ ಎಷ್ಟಿದೆ ಎಂಬ ಬಗ್ಗೆ ಸರ್ಕಾರದಿಂದ ಒಂದು clear ಆದಂತಹ ವರದಿ ಬೇಕಾಗುತ್ತದೆ.

(ಮುಂದುವರೆದಿದೆ)

ದಿನಾಂಕ: 14-06-2017-03.40 (25) AJ/SP

ಶ್ರೀ ಜಗದೀಶ್ ಶೆಟ್ಟರ್ (ಮುಂದು . . .)



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

## 14-06-2017

ಇನ್ನೊಂದು ಬಹಳ ಮುಖ್ಯವಾದ ಅಂಶವೆಂದರೆ, ಈ ಯೋಜನೆಗಳನ್ನು ಜಾರಿಗೆ ತರುವಂತಹ ಸಂದರ್ಭದಲ್ಲಿ 6.3.2016 ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ, ಆ ಸಭೆಯಲ್ಲಿ resolution ಒಂದನ್ನು ಮಾಡಲಾಗಿತ್ತು. ಈ ವಿಷಯ ಮಾನ್ಯ ಸಚಿವರಾದ ರಮೇಶ್ ಕುಮಾರ್ ಅವರಿಗೂ ಸಹ ಗುರುತಿದೆ. ಕೋಲಾರ ಜಿಲ್ಲೆಯ ಶಾಶ್ವತ ಕುಡಿಯುವ ನೀರಿನ ಯೋಜನೆ ಬಗ್ಗೆ 6.3.2016 ರಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನಿರ್ಧಾರವೊಂದನ್ನು ಅಲ್ಲಿ ಕೈಗೊಳ್ಳಲಾಗಿರುತ್ತದೆ. ಅದೇನೆಂದರೆ ಬರಪೀಡಿತ ಜಿಲ್ಲೆಗಳಿಗೆ ಶಾಶ್ವತವಾದ ನೀರಾವರಿ ಕಲ್ಪಿಸುವ ಬಗ್ಗೆ ತಜ್ಞರ ಸಮಿತಿ ರಚನೆ ಮಾಡಿದ್ದು, ಸಮಿತಿಯು ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಜೊತೆಗೆ ಕೃಷ್ಣಾ ಜಲವಿವಾದ ನ್ಯಾಯಾಧೀಕರಣದಲ್ಲಿ ಹಂಚಿಕೆಯಾದ ನೀರಿನ ಲಭ್ಯತೆ, ಮೇಕೆದಾಟು ಯೋಜನೆಯಲ್ಲಿನ ನೀರಿನ ಲಭ್ಯತೆ, ಬೆಂಗಳೂರು ನಗರದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರಿನಿಂದ ಕೆರೆ ತುಂಬಿಸುವ ಯೋಜನೆಯಲ್ಲಿನ ನೀರಿನ ಲಭ್ಯತೆ, ಶರಾವತಿ ಮತ್ತು ಅಘನಾಶಿನಿ ತಿರುವು ಯೋಜನೆಯಲ್ಲಿನ ನೀರಿನ ಲಭ್ಯತೆ ಮತ್ತು ಡಾ. ಜಿ.ಎಸ್.ಪರಮಶಿವಯ್ಯ ನವರ ಪ್ರಸ್ತಾವನೆಯ ಪ್ರಾರಂಭಿಕ ಅಧ್ಯಯನದ ವರದಿ ಬಗ್ಗೆ, ಡಾ: ಜಿ.ಎಸ್.ಪರಮಶಿವಯ್ಯ ನವರ ಅಧ್ಯಕ್ಷತೆಯ ತಜ್ಞರ ಸಮಿತಿ ನೀಡಿರುವ ಶಿಫಾರಸ್ಸಿನ ಅನ್ವಯ ನೀರಿನ ಲಭ್ಯತೆ ಹಾಗೂ ಇತರೆ ಯಾವುದಾದರೂ ಮೂಲಗಳಿಂದ ನೀರಿನ ಲಭ್ಯತೆ. ಈ ರೀತಿ ಬೇರೆ ಬೇರೆ ಮೂಲಗಳಿಂದ ದೊರಕಬಹುದಾದ ಪರ್ಯಾಯ ನೀರಿನ ಲಭ್ಯತೆ ಬಗ್ಗೆ ವಿವರವಾದಂತಹ ಅಧ್ಯಯನ ನಡೆಸಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಬರಪೀಡಿತ ಪ್ರದೇಶಗಳಿಗೆ ಶಾಶ್ವತ ನೀರಾವರಿ ಯೋಜನೆ ಕಲ್ಪಿಸುವ ಬಗ್ಗೆ ಆರು ತಿಂಗಳೊಳಗಾಗಿ ವರದಿ ಸಲ್ಲಿಸುವುದು. ದಿನಾಂಕ : 6.3.2016 ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಯಲ್ಲಿ ಈ ರೀತಿ ನಿರ್ಧಾರವಾಗಿರುತ್ತದೆ. ಅದಾದ ನಂತರ ಆರು ತಿಂಗಳೊಳಗೆ ವರದಿ ಬರಲೇ ಇಲ್ಲ. ಈ ಕ್ಷಣದವರೆವಿಗೂ ವರದಿ ಬಂದಿರುವುದಿಲ್ಲ. ಆ ಒಂದು ವರದಿಯನ್ನು ಏಕೆ ಕೊಡಲಿಲ್ಲ? ಎಲ್ಲಿಯವರೆಗೆ ಬಂತು ಎನ್ನುವ ಬಗ್ಗೆ ಸ್ವತ: ಮಾನ್ಯ ಮುಖ್ಯಮಂತ್ರಿಗಳಾಗಲಿ, ನೀರಾವರಿ ಮಂತ್ರಿಗಳಾಗಲಿ ಈ ಬಗ್ಗೆ ಹೆಚ್ಚಿನ ರೀತಿಯಲ್ಲಿ ಸ್ಪಷ್ಟೀಕರಣ ಕೊಡಬೇಕೆನ್ನುವ ಮಾತನ್ನು ಹೇಳುತ್ತಿದ್ದೇನೆ. ಎತ್ತಿನ ಹೊಳೆ ಯೋಜನೆ ಪ್ರಾರಂಭವಾದ ಎರಡು ವರ್ಷದ ಕಾಲಮಿತಿಯೊಳಗಾಗಿ ಮುಗಿಸುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದರು. ಆದರೆ ಇವತ್ತು ಈ ಯೋಜನೆಯಲ್ಲಿ ಶೇಕಡ ಎಷ್ಟು ಕಾಮಗಾರಿ ಕೆಲಸ ಆಗಿದೆ, ಎಷ್ಟು ಹಣ ಬಿಡುಗಡೆ ಆಗಿದೆ

ಎನ್ನುವ ಸರ್ಕಾರ ಸ್ಪಷ್ಟೀಕರಣ ನೀಡಿ ಉತ್ತರ ಕೊಡಬೇಕಾಗಿರುತ್ತದೆ. ಇಷ್ಟೇ ಅಲ್ಲದೆ ವಿದ್ಯುಚ್ಛಕ್ತಿ ಉತ್ಪಾದನೆಗೆ ಯಾವ ರೀತಿಯ ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಈ ಯೋಜನೆಯಲ್ಲಿ ಪ್ರಸ್ತಾಪಿಸಿರುವ ಕೆರೆಗಳ ಗಾತ್ರದ ಆಧಾರದ ಮೇಲೆ ಭರ್ತಿ ಮಾಡಲು ಬೇಕಾದ ನೀರಿನ ನಿಖರವಾದಂತಹ ಪ್ರಮಾಣವೇನು? ಎತ್ತಿನ ಹೊಳೆ ಯೋಜನಾ ವರದಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿರುವ ಬಗ್ಗೆ ನೀರು ತುಂಬಿಸಲು ಉದ್ದೇಶಿಸಿರುವ ಕೆರೆಗಳ ಪೈಕಿ ನೀರು ತುಂಬಿಸುವ ಕಾಲಮಿತಿ ಬಗ್ಗೆ ಸರ್ಕಾರಕ್ಕೆ ಸ್ಪಷ್ಟತೆ ಇದೆಯೇ? ಇಷ್ಟೇ ಅಲ್ಲದೆ ಇದರ ಜೊತೆಗೆ ಕೆ.ಸಿ. ವ್ಯಾಲಿ ಮತ್ತು ಹೆಬ್ಬಾಳ ವ್ಯಾಲಿ ಯೋಜನೆಗಳಿಗೆ ಅತ್ಯಗತ್ಯವಾದಂತಹ ಪರಿಸರ ಪರಿಣಾಮದ ಅಧ್ಯಯನ, ಸಾಮಾಜಿಕ ಪರಿಣಾಮಗಳ ಅಧ್ಯಯನ ಮಾಡಲಾಗಿದೆಯೇ ಅಥವಾ ಅಧ್ಯಯನ ನಡೆಸದೇ ಯೋಜನೆಯನ್ನು ಮುಂದುವರೆಸಲಾಗಿದೆಯೇ ಎನ್ನುವ ಬಗ್ಗೆಯೂ ಸಹ ಸರ್ಕಾರ ಬೆಳಕನ್ನು ಚೆಲ್ಲಬೇಕು. ಶಾಶ್ವತ ಕುಡಿಯುವ ನೀರಿನ ಯೋಜನೆ ಒಂದು ಕಡೆಯಾದರೆ, ಶಾಶ್ವತ ನೀರಾವರಿ ಯೋಜನೆ ಮತ್ತೊಂದು ಕಡೆ. ಜನರಲಿ ಎತ್ತಿನ ಹೊಳೆ ಯೋಜನೆಯ ಕೆಲಸ ನಡೆಯುತ್ತಿದೆ, pipeline ಹಾಕುತ್ತಿದ್ದಾರೆ. ಕೊನೆಗೆ result ಏನು? ಎಷ್ಟು ಟಿ.ಎಂ.ಸಿ. ನೀರಿನ ಲಭ್ಯತೆ ಇದೆ ಎನ್ನುವ ವಿಚಾರಗಳ ಬಗ್ಗೆ ಸರ್ಕಾರ ಸ್ಪಷ್ಟತೆಯನ್ನು ಮಾಡಬೇಕಾಗಿದೆ. ನಿನ್ನೆ ಆ ಭಾಗದ ಶಾಸಕರು ಇಲ್ಲಿ ಬಹಳಷ್ಟು ಚರ್ಚೆಯನ್ನು ಮಾಡಿದ್ದಾರೆ. ಆದ್ದರಿಂದ ಸರ್ಕಾರ ಇದಕ್ಕೆ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕೆಂದು ನಾನೂ ಸಹ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಇನ್ನೊಂದು ವಿಷಯವೆಂದರೆ, ವಿ.ಟಿ.ಯು ಬಗ್ಗೆ ನಾನು ಕೆಲವೊಂದು ಮಾತುಗಳನ್ನು ಮಾತನಾಡಬೇಕಾಗಿದೆ. Visvesvaraya Technological University (VTU) ಏನಿದೆ ಅದರ ಬಗ್ಗೆ ಮಾತನಾಡುತ್ತಿದ್ದು, ದೇಶಪಾಂಡೆ ಅವರೆ, ಸಚಿವರಾದ ಬಸವರಾಜ ರಾಯರೆಡ್ಡಿ ಅವರು ಇಲ್ಲಿಲ್ಲ. ಅವರು ಇಲ್ಲಿದ್ದಿದ್ದರೆ ಚಲೋ ಇರುತ್ತಿತ್ತು. ಈ ಯೂನಿವರ್ಸಿಟಿಯ ಕೆಲವೊಂದು ವಿಚಾರಗಳ ಬಗ್ಗೆ ಬಹಿರಂಗವಾಗಿ ಚರ್ಚೆಯಾಗುತ್ತಿದೆ. ನಾನು ಮಾನ್ಯ ಸಚಿವರಾದ ರಾಯರೆಡ್ಡಿ ಅವರಿಗೆ ಹೇಳುವುದೇನೆಂದರೆ, ಇವರು ಜವಾಬ್ದಾರಿ ಸ್ಥಾನದಲ್ಲಿದ್ದಂತಹವರು. ಇವತ್ತು ಉನ್ನತ ಶಿಕ್ಷಣ ಸಚಿವರಾಗಿದ್ದಾರೆ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯಕ್ಕೆ ಮುಖ್ಯಸ್ಥರೂ ಸಹ ಆಗಿದ್ದಾರೆ. ಆದರೆ IT Department ನವರು ಸುಮಾರು 441 ಕೋಟಿ ರೂ.ಗಳ income

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

tax ತುಂಬಿರುವುದಿಲ್ಲ ಎನ್ನುವ ಕಾರಣಕ್ಕೆ account ಅನ್ನು seize ಮಾಡಿದ್ದಾರೆ. ಇದನ್ನು exemption ಮಾಡುವುದಕ್ಕೆ ಕೇಂದ್ರ ಸಚಿವರಾದ ಶ್ರೀ ಅರುಣ್ ಜೇಟ್ಲಿ ಅವರ ಹತ್ತಿರ ಸಹ ಪ್ರಸ್ತಾವನೆ ಹೋಗಿರುತ್ತದೆ. ಈ ರೀತಿ ಆಗಿದ್ದರೂ, ಕೋರ್ಟಿನಲ್ಲಿ ವಿ.ಟಿ.ಯು. ಅವರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ fight ಮಾಡಿದಂತಹ ಸಂದರ್ಭದಲ್ಲಿ ಕಾನೂನು ಪ್ರಕಾರ, rules ಪ್ರಕಾರ 441 ಕೋಟಿ ರೂ.ಗಳನ್ನು release ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಸುಪ್ರೀಂ ಕೋರ್ಟಿನಲ್ಲಿ ನಿರ್ಧಾರ ಆಗಿರುವ judgment ಪ್ರತಿ ಸಹ ನನ್ನ ಹತ್ತಿರವಿದೆ. ಅವರು clear cut ಆಗಿ ಹೇಳಿದ್ದಾರೆ. ಇದರ ಬಗ್ಗೆ complete ಆಗಿ ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) : ಇದರ ಬಗ್ಗೆ confusion ಬೇಡ. ನಾನು ಮೊದಲು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು Visvesvaraya Technological University (VTU) ಒಳ್ಳೆಯ University. 200ಕ್ಕಿಂತಲೂ ಹೆಚ್ಚಾಗಿ ಕಾಲೇಜ್‌ಗಳು affiliate ಆಗಿದೆ. ಹಲವಾರು ಬೇರೆ ದೇಶದ ಸಂಸ್ಥೆಗಳು ಸಹ tie-up ಮಾಡಿಕೊಂಡಿರುತ್ತಾರೆ. ಆದರೆ Income Tax Department ನವರು ನೀವು ಮಾಡಿರುವುದು ಲಾಭ ಎಂದು assessment ಮಾಡಿ ಅವರು ಹೇಳಿದ ಹಾಗೆ 430 ಕೋಟಿ ರೂ.ಗಳ account ಅನ್ನು seize ಮಾಡಿದ್ದಾರೆ. ಇನ್ನು ಕೆಲವು ಹಣ, ಬಡ್ಡಿ, penalty ಬಗ್ಗೆ demands ಇವೆ. ಇದರ ಬಗ್ಗೆ, ನಾನು ಶಿಕ್ಷಣ ಸಚಿವನಾಗಿದ್ದ ಸಂದರ್ಭದಲ್ಲಿ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಗೌರವಾನ್ವಿತ ಆರ್ಥಿಕ ಸಚಿವರಾದಂತಹ ಶ್ರೀ ಅರುಣ್ ಜೇಟ್ಲಿ ಅವರನ್ನು ಭೇಟಿಯಾಗಿದ್ದೆವು. ಆ ಸಮಯದಲ್ಲಿ ಅವರಿಗೂ ಸಹ ಬಹಳ ಆಶ್ಚರ್ಯವಾಯಿತು. ಇದೇನು ದೇಶಪಾಂಡೆಯವರೆ, Government University ಗೆ how can Income tax department take taxes? ಈ ಬಗ್ಗೆ ಅವರಿಗೂ ಬಹಳ confusion ಆಯಿತು. ಈ ರೀತಿ ಆಗಬಾರದು. ಅದಕ್ಕೋಸ್ಕರ ಮುಂದೆ ಈ ರೀತಿ ಆಗಬಾರದೆಂದು ಅದರಿಂದ ನಾವೇನು ಮಾಡಿದ್ದೇವೆಂದರೆ, ಆ ಸಮಯದಲ್ಲಿ ನಾನು ಶಿಕ್ಷಣ ಸಚಿವನಾಗಿದ್ದು, ಇದೇ ಸದನದಲ್ಲಿ income tax ನಿಂದ exemption ತೆಗೆದುಕೊಳ್ಳುವುದಕ್ಕೆ Act ಗೆ ಒಂದು amendment ಸಹ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡಲಾಯಿತು. ಆದರೆ ಅದು prospective ಆಗಿದ್ದು retrospective ಮಾಡುವುದಕ್ಕೆ ಬರುವುದಿಲ್ಲ. ಪುನ: ಕೇಂದ್ರ ಸಚಿವರಾದ ಶ್ರೀ ಅನಂತಕುಮಾರ್ ಅವರನ್ನು ರಾಯರೆಡ್ಡಿ ಅವರು ಭೇಟಿ ಮಾಡಿದರು. ಮತ್ತೆ ನಾನು ಭೇಟಿ ಮಾಡಿ ಪ್ರಸ್ತಾಪ ಮಾಡಿದಾಗ, ಇಲ್ಲ we will call a meeting ಎಂದು ಹೇಳಿದರು. ಇದರ ಬಗ್ಗೆ ನಾನೂ ಸಹ ಇದು ಆಗದ ಕಾರಣದಿಂದ we have to convey meeting Jaitligi ಎಂದು suggest ಮಾಡಿದ್ದೆ. ಆ ಪ್ರಕಾರ ಅವರು meeting ಕರೆದಿದ್ದರು. ಯೂನಿವರ್ಸಿಟಿಗೆ ತೊಂದರೆಯಾಗುತ್ತಿರುವ ಕಾರಣದಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಬಹಳ ಉತ್ಸುಕರಾಗಿದ್ದರು. ಆ ಸಮಯದಲ್ಲಿ ಬಹಳ ಚರ್ಚೆಯಾಗಿತ್ತು. ಆ ಚರ್ಚೆಯನ್ನು ಇಲ್ಲಿ ಹೇಳುವುದಕ್ಕೆ ಬಯಸುವುದಿಲ್ಲ. ಬಹಳಷ್ಟು Private universities ಗೆ Income tax Department ನವರು ಕರ್ನಾಟಕದಲ್ಲಿ exemption ಕೊಟ್ಟಿದ್ದಾರೆ. I don't want to name them. ಜೇಟ್ಲಿ ಅವರು ಆ ಸಮಯದಲ್ಲಿ ಕೇಳಿದರು. If you have given exemption to private universities, why you are not going to give Government universities? You could have done that. ಆದರೆ ಜಗದೀಶ್ ಶೆಟ್ಟರ್ ಅವರು ಸುಪ್ರೀಂ ಕೋರ್ಟಿನಲ್ಲಿ ವ್ಯಾಜ್ಯ ನಡೆದಿತ್ತು ಹಾಗೂ ಅಲ್ಲೇ ಕೆಲವು ನಿರ್ಣಯಗಳಾಗಿವೆಂದು ಹೇಳಿದ್ದರು. ಅಂತಿಮವಾಗಿ ಅವರು ತಮ್ಮ Officers ಗೆ ಹೇಳಿದರು. This is a Government University, ನಾವು ಕಾನೂನಿನಂತೆ -- ಸಹಾಯ ಮಾಡಬೇಕಾಗುತ್ತದೆ. ತಾವು ಸದ್ಯಕ್ಕೆ interest, penalty ಅನ್ನು pursue ಮಾಡುವುದಕ್ಕೆ ಹೋಗಬಾರದು. Let us examine, legally ಏನು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡಬೇಕು. ಒಂದು ಸಾರಿ discussion ನಲ್ಲಿ ಏನು ಬಂತೆಂದರೆ, remedy is not with the Income Tax Department now, University will have to go to the High Court. ರಾಯರೆಡ್ಡಿ ಅವರು ಇದ್ದಿದ್ದರೆ ಗೊತ್ತಾಗುತ್ತಿತ್ತು. ಆ ಪ್ರಕಾರ, so, ultimately the decision was taken that High Court of Dharwad ದಲ್ಲಿ writ petition file ಮಾಡಿ ಇದನ್ನು challenge

14-06-2017

ಮಾಡಬೇಕೆಂದು decide ಆಗಿದೆ. ಅ ಪ್ರಕಾರ ಹಾಗೆಯೇ ಆಗಿರಬೇಕೆಂದು ನಾನು ಭಾವಿಸುತ್ತೇನೆ. Ultimately ಹಣದ seizure ಆದ ನಂತರ ಯೂನಿವರ್ಸಿಟಿಗೆ ಬಹಳ ಕಷ್ಟವಾಗಿದೆ. ಇತ್ತೀಚೆಗೆ ನಾನು ಪತ್ರಿಕೆಯಲ್ಲಿ ಓದುತ್ತಿರುವಾಗ ಸ್ವಲ್ಪ ಹಣವನ್ನು ಸರ್ಕಾರದಿಂದಲೂ ಬಿಡುಗಡೆ ಮಾಡಲಾಗಿದೆ. ನಾನು ಶಿಕ್ಷಣ ಸಚಿವನಾಗಿದ್ದಾಗ 50 ಕೋಟಿ ರೂ.ಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿತ್ತು. ಏಕೆಂದರೆ ಅವರು ನಾಲ್ಕು ಇಂಜಿನಿಯರಿಂಗ್ ಕಾಲೇಜ್‌ಗಳನ್ನು develop ಮಾಡುತ್ತಿದ್ದರು. ಹಣ ಇರುತ್ತಿರಲಿಲ್ಲ. So, Rs.50 crores I have got released from Government to complete those 4 Engineering colleges. ಹಾಗಾಗಿ ಒಳ್ಳೆಯ ಸಂಸ್ಥೆ, ಒಳ್ಳೆಯ ಯೂನಿವರ್ಸಿಟಿ. ಆದರೆ ಅಲ್ಲಿ financial problem ಇದೆ. ಹಾಗಾಗಿ ಇದನ್ನು solve ಮಾಡುವುದಕ್ಕೆ ಕೇಂದ್ರ ಸರ್ಕಾರ ಆರ್ಥಿಕ ಸಚಿವರ ಸಹಕಾರದಿಂದ ಮಾಡುತ್ತಿದ್ದೇವೆ. Ultimately ಕೆಲವೊಂದು legal issue ಬಂದಾಗ, he advised, better you approach the Court ಎಂದು ಅವರೇ advice ಮಾಡಿದ್ದಾರೆ. ಅದರ ಪ್ರಕಾರ ಮಾಡಿರಬಹುದು. I don't know, ಇದು 2-3 ತಿಂಗಳ ಹಿಂದಿನ ಮಾತು. Definitely ಮಾಡಿರಬಹುದು. ಅವರನ್ನು ಕೇಳಿ ಹೇಳುತ್ತೇನೆ. ಆದರೆ ಯೂನಿವರ್ಸಿಟಿ ತೊಂದರೆಯಲ್ಲಿರುವುದು ನಿಜ. But we are trying to find out the way. ಸರ್ಕಾರದಿಂದಲೂ ಸಹಾಯ ಮಾಡುತ್ತಿದ್ದೇವೆ. Court decision ನಮಗೆ failure ಆಗಿದೆ. ಏಕೆಂದರೆ private universities exemption ಕೊಟ್ಟ ನಂತರ ಅವರೇ ಕೇಳಿದ್ದು, how could you deny a Government university. ಹಾಗಾಗಿ ಆ ಒಂದು ದಿಕ್ಕಿನಲ್ಲಿ ಹೈಕೋರ್ಟಿನಲ್ಲಿಯೂ ಸಹ ನ್ಯಾಯ ಸಿಗಬಹುದೆನ್ನುವ ವಿಶ್ವಾಸ ನಮಗೆ ಇದೆ. This is for your kind information.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟಿನಲ್ಲಿ Civil Appeal No.4361/2016, 2016 ನಲ್ಲಿ file ಮಾಡಿದ್ದರು. ಈಗಾಗಲೇ ಅದು judgment ಆಗಿದೆ. Judgment ಆಗಿದ ನಂತರ exemption ಕೇಳಿದ್ದು, 441 ಕೋಟಿ ರೂ.ಗಳ account ಅನ್ನು seize ಮಾಡಿರುವುದು ತಪ್ಪೆಂದು ಹೇಳಿ, ಹೋಗಿ challenge ಮಾಡಿ ಅಲ್ಲಿ ವಾದ-



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವಿವಾದ ಆದಮೇಲೆ ಕೊನೆಗೆ ಸುಪ್ರೀಂ ಕೋರ್ಟ್‌ನವರು ನಮ್ಮ ಸರ್ಕಾರದ ವಿ.ಟಿ.ಯು. ವಾದವನ್ನು ಮಾನ್ಯತೆ ಮಾಡಲಿಲ್ಲ.

(ಮುಂದು . . .)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವಿ.ಸ.:14.06.2017.03.50.(26).ಜಿಎಂ.ಎಸ್‌ಪಿ.

ಶ್ರೀ ಜಗದೀಶ್ ಶೆಟ್ಟರ್(ಮುಂದುವರೆದುದು):

'The situation before us on facts is different leading to the irresistible conclusion that the appellant University does not satisfy the second requirement spelt out by Sec.10 (2) (3) (c) of the Act, that appellant University is neither directly nor even substantially financed by the Government, so as to entitled to exemption from payment of tax under the Act.' For the aforesaid reasons we do not find the present to be a fit case for interference. The appeals consequently are dismissed however without any order as a cost. Dismiss ಮಾಡಿಬಿಟ್ಟರು. Finalನಲ್ಲಿ ಆಗಿ ಬಿಟ್ಟಿತು. Income Tax ಪರವಾಗಿ ತೀರ್ಪು ಬಂದಿತು.

14-06-2017

ಶ್ರೀ ಆರ್.ವಿ.ದೇಶಪಾಂಡೆ(ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, Income Tax Department ಪರವಾಗಿ ತೀರ್ಪು ಆಗಿಲ್ಲ. ಸುಪ್ರೀಂ ಕೋರ್ಟಿಗೆ ಸರಿಯಾಗಿ ಇವರು plead ಮಾಡಿಲ್ಲ.

ಶ್ರೀ ಜಗದೀಶ್ ಶೆಟ್ಟರ್: Technological University ಅವರು ಹೋಗಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ: Government Universityಗೆ ನೂರಾರು ಎಕರೆ land ಕೊಟ್ಟಿದ್ದೇವೆ. ತಾವು ಇದನ್ನು study ಮಾಡಿರಬಹುದು.

ಶ್ರೀ ಜಗದೀಶ್ ಶೆಟ್ಟರ್: ಮಾಡಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ: 100 acres of land fraud ಮಾಡಿ ಕೊಟ್ಟಿದ್ದಾರೆ. ಅದರ value is in crores. Somebody should have told the Supreme Court bloody Government has given so much land. So, ಹಾಗಾಗಿ ಅವರೇನು ಮಾಡಿದರೆಂದರೆ, they have not passed against the order of the Government. They say Government ನಿಂದ ನಿಮಗೇನೂ ಸಹಾಯ ಆಗುತ್ತಿಲ್ಲ ಎನ್ನುವ ಅಭಿಪ್ರಾಯಕ್ಕೆ ಅವರು ಬಂದರು. This is the situation.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿ ಬಂದಿದೆ. ಇದು ಏನಾಗಿದೆಯೆಂದರೆ, ಸರ್ಕಾರದವರು ನೀವು land ಕೊಟ್ಟಿದ್ದೀರಿ. State Government has given the land, O.K. Land valuation ಹೇಳಬೇಕಲ್ಲವೆ? ಎಲ್ಲಾ ಕೂಡಿದರೂ 1% ಆಗುವುದಿಲ್ಲವೆಂದು ಅವರು ಹೇಳಿದರು. ನಿಮ್ಮದೇನು ಈಗ 441 ಕೋಟಿ ರೂಪಾಯಿ fees collection ಮತ್ತೊಂದರಿಂದ ಏನು revenue ಬಂದಿದೆಯೋ, ಅದನ್ನು ಬ್ಯಾಂಕ್‌ನಲ್ಲಿ ಇವರು deposit ಇಟ್ಟಿದ್ದು, ಬಡ್ಡಿ ತಿನ್ನುತ್ತಿದ್ದಾರೆ. ಹೀಗಾಗಿ, ಅದೊಂದು income ಎಂದು ತಿಳಿದುಕೊಂಡು ಕೋರ್ಟ್‌ನಲ್ಲಿ ಆದೇಶ ಮಾಡಿದ್ದಾರೆ. ಇವರು ವಾದ ಮಾಡಬೇಕಿತ್ತಲ್ಲವೆ? ಸರ್ಕಾರದ complete ನಿಯಂತ್ರಣ, ಸರ್ಕಾರದ ಅನುದಾನದಿಂದ ನಡೆಯುತ್ತಿದ್ದರೆ ಅದು entirely different. ಆಗ exemption ಕೊಟ್ಟುಬಿಡುತ್ತಿದ್ದಿರಿ. ಅದು ಆ ರೀತಿ ಆಗಿಲ್ಲ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಆರ್.ವಿ.ದೇಶಪಾಂಡೆ: ಅದು ಬಡ್ಡಿ ಅಲ್ಲ. ಮಕ್ಕಳನ್ನು ಸೇರಿಸುವುದರಿಂದ fees ಬರುತ್ತದೆಯಲ್ಲ. . . ಬಡ್ಡಿ ಮೇಲೆ ಅಲ್ಲ, affiliation fee, students fee ಇತ್ಯಾದಿ ಬರುತ್ತದೆಯಲ್ಲವೇ, ಇದನ್ನೆಲ್ಲಾ ಅವರು income ಎಂದು treat ಮಾಡಿಬಿಟ್ಟರು.

ಶ್ರೀ ಜಗದೀಶ್ ಶೆಟ್ಟರ್: ಇದನ್ನು deposit ಮಾಡಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ: For a information I just, Finance Minister was not kind to them. I don't want to tell because, I don't want it to go on record, what he said about that. But he was not kind to the department. He said, if you have given an exemption you should have given retrospectively, why did you not give? ಎಂದು ಪಾಪ ನಮ್ಮ ಮುಂದೆ ಕೇಳಿದರು. But I don't want to go into all those details. ಹಾಗಾಗಿ ಅವರು ಹೇಳಿದ್ದು ನಿಜ. But that was not a judgment against the Government or the University. ಸುಮ್ಮನೆ ಒಂದು flaw ತೆಗೆದು ಮಾಡಿದರು. ಆದರೆ ಬೇರೆ ಯೂನಿವರ್ಸಿಟಿಗೆ ಕೊಟ್ಟಿದ್ದಾರಲ್ಲವೆ? Income Tax Department ಎಲ್ಲಾ private institutions, I don't want to name them. You name the University, they had been given. So he was very particular. Why if you have . . . ಏಕೆ ಕೊಟ್ಟಿದ್ದೀರಿ ಎಂದು ಕೇಳಿಲ್ಲ. ಕೊಟ್ಟರೆ ಇವರಿಗೆ ಏಕೆ ಕೊಟ್ಟಿಲ್ಲ?

ಶ್ರೀ ಜಗದೀಶ್ ಶೆಟ್ಟರ್: ದೇಶಪಾಂಡೆಯವರೆ, ನನ್ನ question ಅದಲ್ಲ. ಆಯಿತು, ಅಲ್ಲಿಗೆ ಮುಗಿಯಿತಲ್ಲ. ನನ್ನ ಪ್ರಶ್ನೆ ಒಂದೇ ಒಂದು ಏನೆಂದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಂದು co-ordinationನಲ್ಲಿ ಹೋಗಬೇಕು. ಕೇಂದ್ರ ಮಂತ್ರಿಗಳು ಒಂದು ಮೀಟಿಂಗ್‌ನಲ್ಲಿ express ಮಾಡಿದ್ದು, ಮತ್ತೊಂದನ್ನು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ನೀವು ಟೀಕೆಯನ್ನೇ ಮಾಡುತ್ತಾ ಉಳಿದರೆ; ಇಲ್ಲಿ ಹೇಳುತ್ತೇನೆ ನೋಡಿ. ನೀವಲ್ಲ ರೀ, ನಿಮ್ಮ ಉನ್ನತ ಶಿಕ್ಷಣ ಸಚಿವರು. ನಿಮ್ಮ ಮುಂದಿನ

ವಾರಸುದಾರರು. ನೀವು ಎಂದೂ ಟೀಕೆ ಮಾಡಿಲ್ಲ. ನಿಮ್ಮ ವಾರಸುದಾರರಾದ ರಾಯರೆಡ್ಡಿಯವರಿದ್ದಾರಲ್ಲವೆ ಅವರು ಬಹಳ ಶಾಣೆಯವರಿದ್ದಾರೆ. ಏನು ಹೇಳುತ್ತಾರೆಂದರೆ, 'VTUನಲ್ಲಿ ಚಹಾ ಕುಡಿಯಲು ದುಡ್ಡಿಲ್ಲ.' ಆಯಿತು, ಕುಡಿಯುವುದಕ್ಕೆ ಇಲ್ಲ. 'ಕೇಂದ್ರ ಸರ್ಕಾರಕ್ಕೆ ಸಾಮಾನ್ಯ ಜ್ಞಾನವೂ ಇಲ್ಲ' ಎಂದು ಈ ರೀತಿ ಬಯ್ಯುತ್ತಾರೆಯೇ? Commonsense ಇಲ್ಲವೆಂದು ಬಯ್ಯುತ್ತಾರೆಂದರೆ, ಹೇಗೆ ನಡೆಯುತ್ತಿದೆ ರೀ ಸರ್ಕಾರ ಎನ್ನುವಂಥದ್ದು, ಇದು ನಾಳೆ ಅರುಣ್ ಜೇಟ್ಲಿಯವರ ಕಡೆಗೆ ಹೋಗುತ್ತದೆ. ಅವರು ಏನೋ ಒಂದು help ಮಾಡಬೇಕೆಂದು ಅಂದರೂ . . . .

ಶ್ರೀ ಸಿ.ಟಿ.ರವಿ: ಶೆಟ್ಟರ್‌ರವರೆ, raid ಆಗಿದ್ದು ಯಾವಾಗ?

ಶ್ರೀ ಜಗದೀಶ್ ಶೆಟ್ಟರ್: ಇವರ timeನಲ್ಲೇ raid ಆಗಿದೆ ಬಿಡಿ.

ಶ್ರೀ ಸಿ.ಟಿ.ರವಿ: Raid ಆದಾಗ ಯುಪಿಎ ಸರ್ಕಾರವೇ ಇದ್ದಿದ್ದು. ಯುಪಿಎ ಸರ್ಕಾರವೇ ಇದ್ದಿದ್ದು.

ಶ್ರೀ ಆರ್.ವಿ.ದೇಶಪಾಂಡೆ: ಚುನಾವಣೆ ಬಂದಾಗ ನಾವೂ ನೀವೂ ಅಲ್ಲಿ fight ಮಾಡೋಣ. ನಿಮ್ಮ ನಿಮ್ಮ programme ಮೇಲೆ, ಇಲ್ಲಿ ಮಾತನಾಡುವಾಗ ಆಯಿತು, ಒಂದು ಸರ್ಕಾರದ achievement ಹೇಳುವವರು ತಾವು. ಆದರೆ, you should also telling the correct facts. ನಾನು ನಿಮಗೆ ಏನು ಹೇಳಿದೆನು ಈಗ? I never distorted any facts.

ಶ್ರೀ ಜಗದೀಶ್ ಶೆಟ್ಟರ್: ಬಂದಿರುವುದು ಒಂದೇ ಪ್ರಶ್ನೆ. ಅದನ್ನು ನಾನು ಹೇಳುತ್ತೇನೆ. ರಾಯರೆಡ್ಡಿಯವರ ಒಂದು ನಡವಳಿಕೆಯಿಂದ ಜನರಲ್ಲಿ, ವಿದ್ಯಾರ್ಥಿಗಳಲ್ಲಿ VTU ಬಗ್ಗೆ ಕೆಟ್ಟ ಅಭಿಪ್ರಾಯ ಬರುತ್ತಿದೆ. ಅದನ್ನು ನಾನು basic ಆಗಿ ಹೇಳುತ್ತಿದ್ದೇನೆ. ನೀವು ನಾವು review ಮಾಡೋಣ, Finance Minister ಕಡೆ ಹೋಗೋಣ ತೆ, ಏನು help ತೆಗೆದುಕೊಳ್ಳಬೇಕಾಗಿದೆಯೋ ಅದೆಲ್ಲವನ್ನೂ ತೆಗೆದುಕೊಳ್ಳೋಣವಂತೆ. ಆದರೆ, ಇವತ್ತು ನಮ್ಮ ರಾಯರೆಡ್ಡಿಯವರ ಬೇಜವಾಬ್ದಾರಿ ಹೇಳಿಕೆಗಳಿಂದ ಏನು ಅನಾಹುತವಾಗುತ್ತದೆ ಎನ್ನುವುದನ್ನು ನಿಮ್ಮ ಗಮನಕ್ಕೆ ತೆಗೆದುಕೊಂಡು ಬರುತ್ತಿದ್ದೇನೆ. 'ಕೇಂದ್ರ ಸರ್ಕಾರಕ್ಕೆ ಸಾಮಾನ್ಯ ಜ್ಞಾನವಿಲ್ಲ- ಸಚಿವ ರಾಯರೆಡ್ಡಿ'. ಇದಾದ ನಂತರ ಮತ್ತೆ ಹೇಳುತ್ತಾರೆ, 'ವಾರದೊಳಗಾಗಿ ನ್ಯಾಯಾಲಯಕ್ಕೆ ಮೊರೆ'. ಹೋಗಿರಿ, ಯಾರು ಬೇಡ ಎಂದು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಹೇಳುತ್ತಾರೆ. ಅದನ್ನೇ ಅರುಣ್ ಜೇಟ್ಲಿಯವರು ಹೇಳಿದ್ದು. ನೀವು ಬೇಕಾದರೆ ಕೋರ್ಟ್‌ನಲ್ಲಿ file ಮಾಡಿ, ನಾವೇನು ಸಹಾಯ ಮಾಡಬೇಕಾಗಿದೆಯೋ ಅದನ್ನು ನಾವು ಮಾಡುತ್ತೇವೆ. ಈಗ ಸುಪ್ರೀಂ ಕೋರ್ಟ್‌ನಲ್ಲಿ judgment ಆಗಿದೆ. ಅದನ್ನು ತಕ್ಷಣವೇ ನಾವೇನಾದರೂ consider ಮಾಡಿ ಎಂದರೆ ಆಗುವುದಿಲ್ಲ. ಅದಕ್ಕೆ ಈ ರೀತಿ ಮತ್ತೊಂದು comment ಮಾಡುತ್ತಾರೆ ನೋಡಿ. ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ರಾಯರೆಡ್ಡಿಯವರು, 'ವಿತ್ತ ಸಚಿವ ಅರುಣ್ ಜೇಟ್ಲಿ ಅವಕೃಪೆಯಿಂದಾಗಿ ರಾಜ್ಯದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 217 ಕಾಲೇಜುಗಳ 4 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಮಂಕು ಕವಿದಂತಾಗಿದೆ. ವಿಶ್ವವಿದ್ಯಾಲಯದ 441 ಕೋಟಿ ರೂಪಾಯಿಗಳ ಹಣವನ್ನು ಆದಾಯ ತೆರಿಗೆ ಇಲಾಖೆ ಮುಟ್ಟುಗೋಲು ಹಾಕಿಕೊಂಡಿದ್ದರೂ ಸಚಿವರು ನೆರವಿಗೆ ಬರುತ್ತಿಲ್ಲ'. ಎಂದರೆ, ಅರುಣ್ ಜೇಟ್ಲಿಯವರಿಗೆ ನೇರವಾಗಿ allegations ಮಾಡಿದ್ದಾರೆ. ಇದರಲ್ಲಿ ತಪ್ಪು ಯಾರದ್ದಿದೆ? ನೀವು ಮೊದಲಿನಿಂದ follow ಮಾಡಬೇಕಾಗಿತ್ತು. ನೀವು 1999 ರಿಂದ retrospective ವಿನಾಯಿತಿ ಕೇಳುತ್ತಿದ್ದೀರಿ. ಹಾಗಾದರೆ ಯುಪಿಎ ಸರ್ಕಾರ ಹತ್ತು ವರ್ಷಗಳ ಕಾಲ ಇತ್ತಲ್ಲವೇ? ಅವತ್ತು ಏಕೆ ವಿನಾಯಿತಿ ಸಿಗಲಿಲ್ಲ? ಇದು ಅರ್ಥವಾಗುತ್ತಿಲ್ಲ. ಈ ರೀತಿ ರಾಯರೆಡ್ಡಿಯವರು ಮಾಡುವುದರಿಂದ ಯಾವ ರೀತಿ message ಹೋಗುತ್ತದೆಯೆಂದರೆ, ಇಲ್ಲಿ ಟಿ.ವಿ. ಸುದ್ದಿಯೊಳಗೆ ಬಂದಿತು. ಒಂದು ಕಡೆ VTU ಮುಚ್ಚಿ ಹೋಗುತ್ತಿದೆ ಎನ್ನುವುದು ಒಂದು ವಿಚಾರವಾದರೆ, ಮತ್ತೊಂದು ರಾಯರೆಡ್ಡಿಯವರ ಬೇಜವಾಬ್ದಾರಿ statement ಹೇಗಿದೆಯೆಂದರೆ, 'VTU ಭ್ರಷ್ಟಾಚಾರದ ಕೂಪವಾಗಿದೆ. ಸತ್ಯ ಒಪ್ಪಿಕೊಂಡ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ'. ಭ್ರಷ್ಟಾಚಾರದ ಕೂಪ, ಹಾಗಾದರೆ ಸರ್ಕಾರ ನೀವು ರೀ. ನೀವು ಆ ಇಲಾಖೆಯ ಮಂತ್ರಿಯಾಗಿದ್ದೀರಿ. ನಿಮ್ಮ ಅಧೀನದಲ್ಲಿ ಅದು ಬರುತ್ತದೆ. ಅಲ್ಲಿ ಭ್ರಷ್ಟಾಚಾರ ನಡೆಯುತ್ತದೆಯೆಂದರೆ, ನಿಮ್ಮ knowledgeನಲ್ಲಿ ಈ ವಿಷಯ ಇದ್ದಿತ್ತೆಂದರೆ ಇಲ್ಲಿಯವರೆಗೂ ಅದರ ಬಗ್ಗೆ ಏಕೆ action ತೆಗೆದುಕೊಂಡಿಲ್ಲ? ಯಾರು ಭ್ರಷ್ಟಾಚಾರ ಮಾಡಿದ್ದಾರೆ? V.C. ಮಾಡಿದ್ದಾರೋ, ಕೆಳಗಿನ Administrator ಮಾಡಿದ್ದಾರೋ, Accountant ಮಾಡಿದ್ದಾನೋ, ಎಷ್ಟು ಭ್ರಷ್ಟಾಚಾರ ಆಗಿದೆ ಎನ್ನುವುದನ್ನು disclose ಮಾಡಿ. ನೇತೃತ್ವ ವಹಿಸಿಕೊಂಡಿರುವ ನೀವೇ VTUನ ಹೆಸರನ್ನು ಕೆಡಿಸುತ್ತಿದ್ದೀರಲ್ಲವೆ? Oppositionನವರಾಗಿ ನಾವೇನಾದರೂ VTU ಬಗ್ಗೆ

14-06-2017

ಕೇಳಿದ್ದೇವೆಯೇ? ಇಲ್ಲಿ ಭ್ರಷ್ಟಾಚಾರ ನಡೆಯುತ್ತದೆಯೆಂದು ನೀವೇ ಹೇಳುತ್ತೀರಿ. ಈ ರೀತಿ ಬಹಳ ಕಡೆ ರಾಯರೆಡ್ಡಿಯವರು ಹೇಳಿದ್ದಾರೆ. ಇವತ್ತು ಕರ್ನಾಟಕದಲ್ಲಿರುವ ಎಲ್ಲಾ ಯೂನಿವರ್ಸಿಟಿಗಳಲ್ಲಿ ಸಿಕ್ಕಾಪಟ್ಟೆ ಭ್ರಷ್ಟಾಚಾರ ನಡೆಯುತ್ತಿದೆ. ಯೂನಿವರ್ಸಿಟಿಗಳು ಭ್ರಷ್ಟಾಚಾರದ ಆಗರ ಆಗಿವೆಯೆಂದು ಎಲ್ಲಾ ಯೂನಿವರ್ಸಿಟಿ ಬಗ್ಗೆ general comment ಮಾಡುತ್ತಾರೆ. ನಾವೇನಾದರೂ ಇಲ್ಲಿ general comment ಮಾಡಿದರೆ, ನೀವು general comment ಮಾಡುವುದಕ್ಕೆ ಹೋಗಬೇಡಿ. Specific ಆಗಿ ಯಾವುದಾದರೂ ವಿಚಾರವಿದ್ದರೆ ಹೇಳಿ ಎಂದು ಬೆಳಗ್ಗೆ ದೇಶಪಾಂಡೆಯವರು ಹೇಳಿದರು. ಹಾಗಾದರೆ, ರಾಯರೆಡ್ಡಿಯವರಿಗೆ ಸ್ವಲ್ಪ ಇದರ ಬಗ್ಗೆ ಹೇಳುತ್ತೀರೇನು? ರಾಯರೆಡ್ಡಿಯವರಿಗೆ specific ಆಗಿ ಹೇಳಿ. ಇವತ್ತು VTU ಯಾವ ರೀತಿ ಭ್ರಷ್ಟಾಚಾರದ ಕೂಪ ಆಗಿದೆಯೆಂದು ಉದಾಹರಣೆ ಸಹಿತ ಮಂತ್ರಿಗಳು ವಿವರಣೆ ಕೊಡಲಿ. 'ಅಕ್ರಮದ ಗೂಡಾಗಿರುವ ವಿಶ್ವವಿದ್ಯಾಲಯದಲ್ಲಿ ಬಿಡಿಗಾಸು ಇಲ್ಲದೆ ಮುಚ್ಚುವ ಭೀತಿ' ಇದು ಇನ್ನೊಂದು statement. ಪ್ರತಿಷ್ಠಿತ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮುಚ್ಚುವ ಭೀತಿ ಎಂದು ಮಂತ್ರಿಗಳೇ ಈ ರೀತಿಯ statement ಕೊಡುತ್ತಿದ್ದರೆ, ಆ ಸಂಸ್ಥೆಯ ಮೇಲೆ ಏನು ನಂಬಿಕೆ ಬರುತ್ತದೆ? ಎಷ್ಟೋ ಜನ ವಿದ್ಯಾರ್ಥಿಗಳು ನನಗೆ ಫೋನ್ ಮಾಡಿ ಹೇಳಿದರು. ಸಾರ್, ನಮಗೆ VTUನಲ್ಲಿ admission ಬೇಡ, ಬೇರೆ ಯಾವುದಾದರೂ ಕಾಲೇಜ್ ಇದ್ದರೆ admission ಕೊಡಿಸಿ. ಅದೇನೋ ಮುಚ್ಚಿ ಹೋಗುತ್ತದೆಯಂತೆ, ಯೂನಿವರ್ಸಿಟಿ ಮುಚ್ಚಿ ಹೋಗುತ್ತದೆ, ಮುಚ್ಚಿ ಹೋಗುತ್ತದೆ ಎಂದು ಎಲ್ಲಾ ಕಡೆ ಇದೇ ಸುದ್ದಿಯಾಗಿ ಬಿಟ್ಟಿದೆ. ಅದಕ್ಕೆ ಅರುಣ್ ಜೇಟ್ಲಿಯವರನ್ನು ರಾಯರೆಡ್ಡಿಯವರು blame ಮಾಡುತ್ತಿದ್ದಾರೆ. ನಿಮ್ಮ ಕಡೆ capacity ಇದ್ದರೆ ನೀವೊಂದು ವಾತಾವರಣ ನಿರ್ಮಾಣ ಮಾಡಿ. ನಿಮ್ಮ ವಕೀಲರು Senior Counsel ಅನ್ನು consult ಮಾಡಲಿ. ಯಾವ ರೀತಿ Review Petition file ಮಾಡಬೇಕಾಗಿದೆಯೋ ಅದನ್ನು ಮಾಡಿ. ಅದನ್ನು ಬಿಟ್ಟು ಸುಪ್ರೀಂ ಕೋರ್ಟ್‌ನಲ್ಲಿ fail ಆಗಿದ್ದೀರಿ. Fail ಆಗಿ, ಕೇಂದ್ರ ಸರ್ಕಾರದ ಕಡೆ ಹಾಗೂ ಕೇಂದ್ರದ ಮಂತ್ರಿಗಳ ಕಡೆ ಬೊಟ್ಟು ಮಾಡಿ ತೋರಿಸುವುದಲ್ಲ. ಅವರು ಮತ್ತು ನೀವು ಕುಳಿತು co-ordination ಮಾಡಿ, ಇದಕ್ಕೆ ಒಂದು solution ಹುಡುಕಿರಿ. ಬಹುಶ: ದೇಶಪಾಂಡೆಯವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಇಂಥ ಯಾವುದೇ problem

ಬಂದಿರಲಿಲ್ಲ. ಆದರೆ, ಇವತ್ತು ರಾಯರೆಡ್ಡಿಯವರು ಜವಾಬ್ದಾರಿ ತೆಗೆದುಕೊಂಡ ಮೇಲೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ allegation ಮಾಡುವುದೇ ಕೆಲಸವಾಗಿ ಬಿಟ್ಟಿದೆ. ಇದರಿಂದ ಪ್ರಚಾರ ಸಿಗುತ್ತದೆಯೆಂದು ರಾಯರೆಡ್ಡಿಯವರು ತಿಳಿದುಕೊಂಡಿದ್ದಾರೇನೋ ನನಗೆ ಅರ್ಥವಾಗುತ್ತಿಲ್ಲ. ಈ ರೀತಿಯಾದ ಒಂದು ಬೇಜವಾಬ್ದಾರಿತನ ಅವರು ತೋರಿಸುತ್ತಿದ್ದಾರೆ. ಅದಕ್ಕಾಗಿ ನಾನು ಈ ವಿಚಾರವನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ. ಇದರ ಮೇಲೆ ಇವತ್ತು ಆ VTU ಉಳಿಯಬೇಕು ಮತ್ತು ಕೇಂದ್ರ ಸರ್ಕಾರದಿಂದ ಏನು ನೆರವು ಬೇಕೋ ಅದು ಬರಲೇಬೇಕು. ಅದರ ಪ್ರಶ್ನೆಯೇ ಇಲ್ಲ. ನಾವೂ fight ಮಾಡುತ್ತೇವೆ. ಆದರೆ, ಈ ರೀತಿ ಕೇಂದ್ರ ಸಚಿವರ ಮೇಲೆ ಬೇಜವಾಬ್ದಾರಿ allegations ಮಾಡುವುದನ್ನು ಬಿಡಿ. ನೀವು ಕಾನೂನು ರೀತಿ ಏನು ಹೋರಾಟ ಮಾಡಬೇಕಾಗಿದೆಯೋ ಅದನ್ನು ಮಾಡಿ. ಅದನ್ನು ಬಿಟ್ಟು ಈ ರೀತಿ ಬೇಜವಾಬ್ದಾರಿಯಿಂದ ನಡೆದುಕೊಳ್ಳುವುದು ಬೇಡ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇದರ ಜೊತೆಗೆ ಮತ್ತೊಂದು ವಿಚಾರದ ಬಗ್ಗೆ ರಾಯರೆಡ್ಡಿಯವರಿಗೆ ನಾನು ಕೇಳಬಯಸುತ್ತಿದ್ದೇನೆ. ಏನಾಗಿದೆಯೆಂದರೆ, ಕರ್ನಾಟಕದಲ್ಲಿ ಅವರ ಅಧೀನದಲ್ಲಿ ಬರುವಂಥ 412 First Grade Degree Collegesಗಳಿವೆ. ಅದರಲ್ಲಿ 390 ಕಾಲೇಜುಗಳಿಗೆ ಪ್ರಾಂಶುಪಾಲರೇ ಇಲ್ಲ. 390 post ಖಾಲಿಯಿದೆ. ಎಲ್ಲಾ in-charge ಮೇಲೆ ನಡೆಯುತ್ತಿದೆ. ಹಾಗಾದರೆ ಯಾವ ರೀತಿ ಒಂದು ಉತ್ತಮವಾದ ಶಿಕ್ಷಣ ಸಿಗುವುದಕ್ಕೆ ಸಾಧ್ಯವಿದೆ? ಇದನ್ನು ಇವತ್ತು ನಾವು ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ. ಈ ರೀತಿ ರಾಯರೆಡ್ಡಿಯವರು ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡುವುದರ ಮುಖಾಂತರ ಇವತ್ತು ಇಡೀ ಒಂದು ವ್ಯವಸ್ಥೆಯನ್ನು ಕೆಡಿಸುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಇದು ಆಗಬಾರದು ಎನ್ನುವಂಥ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಮತ್ತೊಂದು ಪ್ರಮುಖವಾದ ವಿಚಾರಕ್ಕೆ ನಾನು ಬರುತ್ತಿದ್ದೇನೆ. ನಿನ್ನೆ ದಿವಸ ಪೌರ ಕಾರ್ಮಿಕರನ್ನು ಖಾಯಂ ಮಾಡುವ ಬಗ್ಗೆ ಇಲ್ಲಿ ನಾನು Zero Hourನಲ್ಲಿ ವಿಷಯ raise ಮಾಡಿದ್ದೆನು. ಅಲ್ಲಿ ಸತ್ಯಾಗ್ರಹಕ್ಕೆ ಕುಳಿತಿರುವ ಪೌರ ಕಾರ್ಮಿಕರನ್ನು ಖಾಯಂ ಮಾಡುವ ಬಗ್ಗೆ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನದ ಬಗ್ಗೆ ನಾವು discussion ಮಾಡಿ ನಿರ್ಧಾರ ಕೈಗೊಳ್ಳುತ್ತೇವೆಂದು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಜಾರ್ಜ್‌ರವರು ಭರವಸೆ ಕೊಟ್ಟರು. ಅಲ್ಲಿ ಆಂಜನೇಯರವರು ಹೋಗಿ ಸತ್ಯಾಗ್ರಹ ಕುಳಿತಿದ್ದ ಪೌರಕಾರ್ಮಿಕರನ್ನು ಎಬ್ಬಿಸಿಕೊಂಡು ಬಂದರು.

(ಮುಂದುವರೆದಿದೆ)

14.06.2017 / 04.00 (27) MPL-SSD

**ಶ್ರೀ ಜಗದೀಶ್ ಶೆಟ್ಟರ್ (ಮುಂದು. . .)**

ಆಂಜನೇಯ ಅವರು ಅವರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಾಗಿ ಹೇಳಿದರು. ಒಂದು ಕಡೆ ಇಲ್ಲಿ ಪೌರ ಕಾರ್ಮಿಕರು. ಪೌರ ಕಾರ್ಮಿಕರ ಬಗ್ಗೆ ರಾಜ್ಯಸರ್ಕಾರ 04.05.2016 ಕ್ಕೆ ಸಚಿವ ಸಂಪುಟದಲ್ಲಿ ನಿರ್ಧಾರ ತೆಗೆದುಕೊಂಡಿದೆ. ಪೌರ ಕಾರ್ಮಿಕರು ನಿರ್ವಹಿಸುವ ನೈರ್ಮಲ್ಯ ಕಾರ್ಯವನ್ನು ಗಮನದಲ್ಲಿಟ್ಟುಕೊಂಡು ಇಲಾಖೆಯು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಈ ನಿಯಮಗಳಡಿ ನೇಮಕಾತಿ ಮಾಡಬೇಕೆಂದು ಸಚಿವ ಸಂಪುಟ ಇಲಾಖೆಗೆ ಸೂಚಿಸಿತು. ಸದರಿ ಪ್ರಕ್ರಿಯೆಯನ್ನು ಮಾರ್ಚ್-2017 ರೊಳಗಾಗಿ ಮುಗಿಸಬೇಕೆಂದು ಗಡುವು ನೀಡಿ ಅಲ್ಲಿಯವರೆಗೆ ಹೊರ ಗುತ್ತಿಗೆಯನ್ನು ಮುಂದುವರೆಸಬೇಕೆಂದು ಸಚಿವ ಸಂಪುಟವು ನಿರ್ಧರಿಸಿತು. ಕೆಲವೊಬ್ಬರು ಪೌರ ಕಾರ್ಮಿಕರು ನೇರವಾಗಿ appoint ಆದವರಿದ್ದಾರೆ. ಕೆಲವರು ಗುತ್ತಿಗೆ ಆಧಾರದ ಮೇಲೆ ಇದ್ದಾರೆ. ಬೇರೆ ಯಾವುದೋ agency ಮುಖಾಂತರ ಬಂದವರಿದ್ದಾರೆ. ಅವರೆಲ್ಲರನ್ನು ಸಹಿತ ಹೊರ ಗುತ್ತಿಗೆಯನ್ನು ಮುಂದುವರೆಸಿಕೊಂಡು ಅವರಿಗೆ ಎಲ್ಲಾ ರೀತಿಯ ಸೇವಾ ಸೌಲಭ್ಯಗಳನ್ನು ಕೊಡಬೇಕೆಂಥ ನಿರ್ಧಾರವಾಯಿತು. ಯಾವಾಗ? 03.05.2016 ಕ್ಕೆ ಆಯಿತು. ಮಾರ್ಚ್ -2017 ಕ್ಕೆ ಮುಗಿಯಬೇಕಿತ್ತು. ಆದರೆ ಮಾರ್ಚ್ ತಿಂಗಳು ಕಳೆದು ಈಗ ಜೂನ್ ತಿಂಗಳಿನಲ್ಲಿದ್ದೇವೆ. ಆದರೆ ಇದರ ಬಗ್ಗೆ ಏನೂ ಕ್ರಮ ಕೈಗೊಳ್ಳಲಿಲ್ಲ. ಅದಕ್ಕಾಗಿ ಪೌರ ಕಾರ್ಮಿಕರು ಬೀದಿಗೆ ಬಿದ್ದಿದ್ದರು. ನಿನ್ನೆ ಇದನ್ನು ಸರ್ಕಾರದ ಗಮನಕ್ಕೆ ತಂದೆ. ಅದಾದ ಮೇಲೆ ಆಂಜನೇಯ ಅವರು ಅಲ್ಲಿಗೆ ಹೋಗುತ್ತಾರೆ. ಅಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಹೀಗಾಗಿ ಇಡೀ ರಾಜ್ಯದಲ್ಲಿ ಇದು ಎಲ್ಲಾ ಕಡೆ ಸಮಸ್ಯೆ ಇದೆ. ನಾನು ಇಂದು ಒತ್ತಾಯ ಮಾಡುತ್ತೇನೆ. ಪೌರ ಕಾರ್ಮಿಕರಿಗೆ ಹರಿಯಾಣದಲ್ಲಿ ಏನಿದೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಪರಿಸ್ಥಿತಿ, ಚಂಡೀಘಡದಲ್ಲಿ ಏನಿದೆ, ಎಲ್ಲವೂ report ಇದೆ. ಎಲ್ಲವನ್ನು ಅಧ್ಯಯನ ಮಾಡಿಕೊಂಡು ವರದಿಯು ಸರ್ಕಾರದ ಮುಂದಿದೆ. ಅಲ್ಲಿ ಯಾವ ರೀತಿ ಒಂದು ಹೊಸ ಕಾನೂನು ತಂದು ಬಿಲ್ ತಂದು ಪೌರ ಕಾರ್ಮಿಕರನ್ನು ಖಾಯಂ ಮಾಡುವ ಕೆಲಸವನ್ನು ಮಾಡಿದ್ದಾರೆ, ಅದೇ ರೀತಿ ತಕ್ಷಣವೇ ಖಾಯಂ ಆಗಬೇಕೆಂಬ ಒತ್ತಾಯವನ್ನು ನಾನು ಮಾಡುತ್ತೇನೆ. ಹಿಂದೆ ನಾನು ಮುಖ್ಯಮಂತ್ರಿಯಿದ್ದಾಗ ಅದೇ ರೀತಿ ಸುಮಾರು 23 ಸಾವಿರ ದಿನಗೂಲಿ ನೌಕರರು 15-20 ವರ್ಷ ಕೆಲಸ ಮಾಡುವವರು ಅವರ ಪರಿಸ್ಥಿತಿಯೂ ಇದೇ ರೀತಿ ಇತ್ತು. ಸೇವಾ ಭದ್ರತೆ ಇರಲಿಲ್ಲ, ಏನೂ ಇರಲಿಲ್ಲ ಅವರಿಗೆ. I.B ಯಲ್ಲಿ ಚಹಾ ಕುಡಿಯುವುದು, ಮತ್ತೊಂದು, ಕಸ ಹೊಡೆಯುವುದು ಇವೆಲ್ಲ ಮಾಡುತ್ತಿದ್ದರಲ್ಲ ಅಂತಹ ವ್ಯಕ್ತಿಗಳು 23 ಸಾವಿರ ಜನರು ಒದ್ದಾಡುತ್ತಿದ್ದರು. ಆಗ ನಮ್ಮ ಅಧಿಕಾರಿಗಳ ಜೊತೆ consultation ಮಾಡಿದಾಗ ಇದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಅವೆಲ್ಲಾ report cabinet ನಲ್ಲಿವೆ. ಮಾಡಲಿಕ್ಕೆ ಬರುವುದಿಲ್ಲ Supreme Court ruling ಆಗದೆ ಎಂದು. ಕೊನೆಗೆ ಅದನ್ನೆಲ್ಲಾ ತೆಗೆದು ಕಾನೂನು ವ್ಯಾಪ್ತಿಯೊಳಗೆ ಬರುವ ರೀತಿಯಲ್ಲಿ ನಮ್ಮ Secretary ಯವರು ಹೇಳಿದ ಮೇಲೆ ಬೆಳಗಾವಿ ಅಧಿವೇಶನದಲ್ಲಿ ಒಂದು ಬಿಲ್ಲನ್ನು ತಂದೆ. ಬಿಲ್ಲನ್ನು ತಂದು ಅದು ಸರ್ವಾನುಮತದಿಂದ ಪಾಸ್ ಆಗಿದ್ದರಿಂದ ಇವತ್ತು 23 ಜನ ದಿನಗೂಲಿ ನೌಕರರು ಖಾಯಂ ಆದರು. ಅವರಿಗೆ ಎಲ್ಲಾ ರೀತಿಯ ಸೇವಾ ಭದ್ರತೆ ಇವತ್ತು ಸಿಕ್ಕಿದೆ. ಹೀಗಾಗಿ ಆ ರೀತಿಯಲ್ಲಿ ಒಂದು ಬಿಲ್ಲನ್ನು ತಂದು ಇವರನ್ನು ಖಾಯಂ ಮಾಡಬೇಕಾಗುತ್ತದೆ. ಬರೀ ನೀವು ಹೇಳುವುದಷ್ಟೇ ಅಲ್ಲ. ಅದರಿಂದ ಏನೂ ಆಗುವುದಿಲ್ಲ. ಆ ರೀತಿ ಕಾನೂನು ಮಾಡುವ ಬಗ್ಗೆ ಚಿಂತನೆ ಆಗಬೇಕು. ಇದರ ಜೊತೆಗೆ ಇನ್ನೂ ಹಲವಾರು ಇವೆ. ಕರ್ನಾಟಕ ರಾಜ್ಯ ನೀರು ಸರಬರಾಜು ಮಂಡಳಿಯಲ್ಲಿ ಕಾರ್ಮಿಕರಿದ್ದಾರೆ, ಅವರು ಸಹಿತ... ಈಗಾಗಲೇ ಮೈಸೂರು ಮಹಾನಗರ ಸಭೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವಂತಹವರು. ಕರ್ನಾಟಕ ರಾಜ್ಯ ನೀರು ಸರಬರಾಜು ಸಂಸ್ಥೆ ಇದೆ ಅದರಲ್ಲಿ ಮೈಸೂರಿನಲ್ಲಿ ಮಾಡುವವರನ್ನು ಈಗಾಗಲೇ ಖಾಯಂ ಮಾಡಿದ್ದಾರೆ. ಅವರಿಗೆ ಸೇವಾ ಭದ್ರತೆ ಮಾಡುವುದು, direct ಅವರಿಗೆ ವೇತನ ಕೊಡುವುದು ಎಲ್ಲಾ ಆಗಿದೆ. ಅದು Supreme Court ನ order ಪ್ರಕಾರವೇ ಆಗಿದೆ. ಆದರೆ ಹುಬ್ಬಳಿ-ಧಾರವಾಡ ಮಹಾನಗರ ಇರಬಹುದು, ಮತ್ತೊಂದು ಇರಬಹುದು. ಅಲ್ಲಿಗೆ ಇದನ್ನು apply ಮಾಡಿಲ್ಲ. ಅವರಿಗೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

14-06-2017

ಈ ರೀತಿ ವ್ಯವಸ್ಥೆಯನ್ನೂ ತಂದಿಲ್ಲ. ಜಲಮಂಡಳಿ ನೌಕರರಿಗೆ ಸೇವಾ ಭದ್ರತೆ ಕೊಡಬೇಕೆನ್ನುವುದು ಸುಪ್ರೀಂ ಕೋರ್ಟಿನ ತೀರ್ಪಾಗಿದೆ. ಇಲ್ಲಿ ಒಂದು ಹೇಳುತ್ತಾರೆ- 'It is not the case of the appellants that the respondent employees did not possess the qualifications prescribed for the appointment on regular basis. Furthermore, it is not the case of the State that any of the temporary employees would not be entitled to pay parity on any of the principles summarized by us in paragraph 42 herein above. There can be no doubt that the principle of equal pay for equal work would be applicable to all the concerned temporary employees so as to vest in them the rights to claim wages at par with the minimum of the pay scale of the regularly engaged government employees holding the same post. In view of the position expressed by us, in the foregoing paragraphs we have no hesitation in holding that all the concerned temporary employees in the present bunch of cases would be entitled to draw wages at the minimum of the pay scale at the lowest grade in the regular pay scale extended to regular employees holding the same post.' ಇದು supreme courtನ ನಿರ್ಧಾರ. ಸುಪ್ರೀಂಕೋರ್ಟಿನಲ್ಲಿ decision ಆಗಿದೆ. ಇದರ ಪ್ರಕಾರ ನೀರು ಸರಬರಾಜು ಮಾಡುವಂತಹ ಸಂಸ್ಥೆಯಲ್ಲಿ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರು, temporary ಇರುವವರನ್ನು ಖಾಯಂ ಮಾಡುವುದು ಅಥವಾ ಸಮಾನ ಕೆಲಸಕ್ಕೆ ಸಮಾನ

14-06-2017

ವೇತನ ಕೊಡುವಂತಹದು. ಇದರ ಬಗ್ಗೆಯೂ ಸಹ ಸರ್ಕಾರ ನಿರ್ಧಾರ ಕೈಗೊಳ್ಳಬೇಕು. ಇದರ ಬಗ್ಗೆ ಏಕೋ ಸರ್ಕಾರ hesitate ಮಾಡುತ್ತಿದೆ. ಇದನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಆಂಜನೇಯ ಅವರು ಸದನದಲ್ಲಿ ಈಗ ಇಲ್ಲ. ಆಂಜನೇಯ ಅವರು ಸಮಾಜ ಕಲ್ಯಾಣ ಇಲಾಖೆಯಲ್ಲಿ ಸುಮಾರು ಸಾವಿರಾರು ಹುದ್ದೆಗಳು ಖಾಲಿಯಿವೆ. ಅಲ್ಲಿ ಏನಾಗಿದೆ ಎಂದರೆ ಇವತ್ತು ಅಲ್ಲಿ ಅಡುಗೆ ಮಾಡುವವರು. ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರಿಗೆ ಸೇರಿದ ಸಾವಿರಾರು ಖಾಲಿ ಹುದ್ದೆಗಳೇನಿವೆ ಅಲ್ಲಿ ಕಳೆದ 8-10 ವರ್ಷದಿಂದ, 10-15 ವರ್ಷದಿಂದ ಖಾಲಿ ಹುದ್ದೆಗಳಲ್ಲಿ ಅದಕ್ಕೆ opposite ಆಗಿ ಗುತ್ತಿಗೆ ಆಧಾರದ ಮೇಲೆ ಸಾವಿರಾರು ಜನರು ಕೆಲಸ ಮಾಡುತ್ತಿದ್ದಾರೆ. 2001-02 ರಲ್ಲಿ ಮತ್ತು 2010 ರಲ್ಲಿ. ಹೊರ ಗುತ್ತಿಗೆ ನೌಕರರು ಎಂದು ಪರಿಗಣಿಸಿ ಈ ರೀತಿ ಅವರಿಗೆ Contract Labour Regularization and Abolition Act, 1970 ಇದರ ಪ್ರಕಾರ ಅವರನ್ನು ನೇಮಕ ಮಾಡಿಕೊಂಡು ಇವತ್ತು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ. ಅವರನ್ನು ಸಹಿತ regular ಮಾಡಿಕೊಳ್ಳಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಏನಾಗಿದೆ ಎಂದರೆ ಇವತ್ತು 02.06.2016 ಕ್ಕೆ ಆಂಜನೇಯ ಅವರು ಬಹಳ ಹೇಳುತ್ತಾರೆ. ನಾವು ಹಿಂದುಳಿದವರ ಪರವಾಗಿ, ಕೆಳಹಂತದ ನೌಕರರ ಪರವಾಗಿದ್ದೇವೆ ಎಂದು ಹೇಳುತ್ತಾರೆ. ಅವರದೇ ಸಮಾಜ ಕಲ್ಯಾಣ ಇಲಾಖೆಯಲ್ಲಿ ಈ ರೀತಿ ಸಾವಿರಾರು ಜನರು ಕೆಲಸ ಮಾಡುವಂತಹ ಅಡುಗೆ ಮಾಡುವವರು, ಸಹಾಯಕರಾಗಿ ಕೆಲಸ ಮಾಡುವವರು, ಟೀಚರ್ಸ್ ಇವರೆಲ್ಲಾ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಈಗ ಅವರು ಏನು ಮಾಡುತ್ತಿದ್ದಾರೆಂದರೆ 02.06.2017 ಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿಯಿರುವ ಗ್ರೂಪ್-ಡಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸುವ ಕುರಿತು ಒಂದು notification ಹೊರಡಿಸುತ್ತಾರೆ. ಈ ಕಡೆ ಅವರ ರಕ್ಷಣೆ ಮಾಡುತ್ತೇವೆನ್ನುತ್ತಾರೆ. ಈ ಕಡೆ ಇವರಿಗೆ ಯಾವುದೇ ರೀತಿಯ safety ಇಲ್ಲ. ಅದಕ್ಕಾಗಿ ನಾನು ಆಂಜನೇಯ ಅವರಿಗೆ ಹೇಳುತ್ತೇನೆ. ನಿನ್ನೆ ಅಲ್ಲಿ ಪೌರ ಕಾರ್ಮಿಕರ ಸಭೆಗೆ ಹೋಗಿ ಬಹಳ ವೀರಾವೇಶದಿಂದ ಘೋಷಣೆ ಮಾಡಿದ್ದಾರೆ. ಬಾಹುಬಲಿ ಚಿತ್ರದ dialogue ಹೊಡೆದಿದ್ದಾರೆ. ಆಂಜನೇಯ ಮಾಡಿದ್ದೇ ಶಾಸನ, ಸಿದ್ದರಾಮಯ್ಯನವರು ಘೋಷಣೆ ಮಾಡಿದ್ದೇ ಶಾಸನ ಎಂದು.

14-06-2017

ಬಾಹುಬಲಿಯಲ್ಲಿ ಒಂದು dialogue ಇದೆಯಂತೆ. ಆ ರೀತಿ ಇಂದು ನಾವು ಮಾಡಿದ್ದೇ ಶಾಸನ ಎಂದು ಹೇಳಿದ್ದಾರಂತೆ. ನಾನು ಆಂಜನೇಯ ಅವರಿಗೆ ಹೇಳುತ್ತೇನೆ. ಹೌದು ನೀವು ಮಾಡಿದ್ದೇ ಶಾಸನ. "ಬಿ" category ಅಥವಾ ಗುತ್ತಿಗೆ, ಪೌರ ಕಾರ್ಮಿಕರು ಇರಬಹುದು, ಜಲ ಮಂಡಳಿಯ ನೌಕರರು ಇರಬಹುದು. ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ temporary ಕೆಲಸ ಮಾಡುವವರು, ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವಂತಹ ಎಲ್ಲಾ ನೌಕರರುಗಳಿಗೆ ನೀವು ಯಾವ ಕಾನೂನು ತರುತ್ತೀರಿ ತನ್ನಿ. ಆಂಜನೇಯವರ ಕಾನೂನು ಆದರೂ ತನ್ನಿ, ಸಿದ್ದರಾಮಯ್ಯನವರ ಶಾಸನವನ್ನಾದರೂ ತನ್ನಿ. ನಾವು we will support fully. ನಿಮ್ಮ ಶಾಸನಕ್ಕೆ ನಮ್ಮೆಲ್ಲರ ಸಂಪೂರ್ಣ ಒಪ್ಪಿಗೆ. ಇವರನ್ನೆಲ್ಲಾ ಖಾಯಂ ಮಾಡುವ process ಪ್ರಾರಂಭ ಮಾಡಿ. ಅದಕ್ಕೆ ನಮ್ಮ ಸಂಪೂರ್ಣವಾದ ಬೆಂಬಲ ಇದೆ ಎಂಬ ಮಾತನ್ನು ಹೇಳುತ್ತೇನೆ. ಆದಷ್ಟು ಬೇಗನೆ ಈ process ಆಗಬೇಕು. ಹಿಂದೆ 23 ಸಾವಿರ ಜನರು ದಿನಗೂಲಿ ನೌಕರರನ್ನು ಯಾವ ರೀತಿ ಖಾಯಂ ಮಾಡಿದೆವು. ಆ ರೀತಿ ಇವರನ್ನು ಖಾಯಂ ಮಾಡಿ. ಸುಮ್ಮನೆ ಭಾಷಣ ಮಾಡುವುದು, ಹೇಳುವುದು ಯಾವುದೋ ಒಂದು ಸಭೆ, ಹತ್ತಾರು ಸಾವಿರ ಜನರು ಸಭೆ ಸೇರಿದಾಗ ಘೋಷಣೆ ಮಾಡುವುದು ನಿಮ್ಮನ್ನೆಲ್ಲಾ ಖಾಯಂ ಮಾಡುತ್ತೇವೆಂದು. ಅಂತಹ ಪೊಳ್ಳು ಘೋಷಣೆ, ಪೊಳ್ಳು ಭರವಸೆಗಳನ್ನು ನಿಲ್ಲಿಸಿ. ನಿಜವಾಗಿ ಇವರೆಲ್ಲರನ್ನು ಖಾಯಂ ಮಾಡುವ ಕೆಲಸ ಆಗಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಇನ್ನೊಂದು ಮಾನ್ಯ ದೇಶಪಾಂಡೆಯವರು ಇಲ್ಲಿಯೇ ಇದ್ದಾರೆ. ಎರಡು ಮೂರು ಬಾರಿ ಅಧಿವೇಶನದಲ್ಲಿ ಚರ್ಚೆಯಾಯಿತು. ಪೌರ ಕಾರ್ಮಿಕರ ಬಗ್ಗೆ ನಾನು ಚರ್ಚೆ ಮಾಡುತ್ತಿದ್ದೆ. ಆ ಒಂದು MPM ಸಮಸ್ಯೆ ಇನ್ನುವರೆಗೆ solve ಆಗಿಲ್ಲ. ಹಾಗೆಯೇ ಇದೆ. ಅವರ ಸಮಸ್ಯೆಗಳು ಇನ್ನೂವರೆಗೆ ಆಗಲಿಲ್ಲ. VRS ಕೊಟ್ಟು ಕಳುಹಿಸುತ್ತೇನೆ ಎಂದು ಹೇಳಿದಿರಿ. ಅವರಿಗೆ ಒಂದು ಪರಿಹಾರ ಕೊಡುತ್ತೇನೆ ಎಂದು ಹೇಳಿದಿರಿ. ಏನೂ ಆಗಲಿಲ್ಲ. ಏನೋ ಒಂದು ಉದ್ಧಾರ ಮಾಡಿರಿ ಅವರನ್ನು. ನಿಮ್ಮ ಕಾಲಕ್ಕಾದರೂ ಆಗಲಿ. ಏಕೆಂದರೆ ಹಿಂದೆಲ್ಲಾ ಪ್ರಯತ್ನವಾದರೂ ಆಗಿಲ್ಲ. ನಿಮ್ಮ ಕಾಲಕ್ಕಾದರೂ MPM ನೌಕರರ ಸಮಸ್ಯೆಗೆ VRS ಕೊಟ್ಟು ಅವರಿಗೆ ಒಂದು ಪರಿಹಾರ ಕೊಟ್ಟು ಮಾಡಿ. ಅದನ್ನು privatization ಮಾಡುತ್ತೀರೋ, ಮತ್ತೊಂದು ಮಾಡುತ್ತೀರೋ it is left to you. ಆದರೆ ಅಲ್ಲಿರುವ ನೌಕರರಿಗೆ safety, ಸೇವಾ ಭದ್ರತೆ ಅಥವಾ VRS

ಕೊಟ್ಟು ಅವರನ್ನು ಮನೆಗೆ ಕಳುಹಿಸುವ ಕೆಲಸ ಮಾಡಿ. ಅದು ನಿಮ್ಮ ಕಾಲದಲ್ಲಿ ಆಗುತ್ತದೆ ಎಂಬ ನಂಬಿಕೆ ಇದೆ. ಆದರೂ ಏಕೋ ಲೇಟ್ ಆಗಿದೆ. ಆದಷ್ಟು ಬೇಗನೆ ಇದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ : ತಾವು ಹೇಳುವುದು ಸರಿಯಿದೆ. ನಾನು ಒಪ್ಪುತ್ತೇನೆ. ನಮಗೂ ಸಹಾನುಭೂತಿ ಇದೆ. Ultimately MPM ಕಾರ್ಖಾನೆ ನಾವು ಇದರ ಬಗ್ಗೆ ಮುಂಚೆಯೇ ಕ್ರಮ ತೆಗೆದುಕೊಂಡಿದ್ದರೆ ಅದೊಂದು ಬಂಗಾರದಂತಹ ಕಾರ್ಖಾನೆ. Ultimately timely decision ಆಗಿಲ್ಲವೆಂದರೆ Industry sick ಆಗುತ್ತದೆ.

(ಮುಂದು. . . .)

14.06.2017/4.10/28/BR/SSD

ಆರ್.ವಿ.ದೇಶಪಾಂಡೆ: (ಮುಂದು)

ಈ ಹಿಂದೆ 2001ರಲ್ಲಿ sick ಆಗುವುದಕ್ಕೆ ಪ್ರಾರಂಭವಾಗಿತ್ತು. Vikrant Tyres ಅದು Government Company ಇತ್ತು. ಅದನ್ನು privatize ಮಾಡಿ workersಅನ್ನು confidenceಗೆ ತೆಗೆದುಕೊಂಡು JK Tyers ಗೆ ಕೊಟ್ಟೆವು. ಈಗ ಹೇಗೆ ನಡೆಯುತ್ತಿದೆ ನೋಡಿ. ಬಂಗಾರದಂತೆ ನಡೆಯುತ್ತಿದೆ. Workers happyಯಾಗಿದ್ದಾರೆ. ಈಗ continuously ಸರ್ಕಾರದಿಂದ ಸಾಕಷ್ಟು ಹಣ pump ಆಗಿದೆ. More than 600 crores, subject to correction, pump ಆಗಿದೆ. ಅದರ ಉಪಯೋಗ ಆಗಿದೆ. ಹಾಗಾಗಿ ಈಗ ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಕೈಗಾರಿಕೆಯನ್ನು ಲೀಸ್ ಮೇಲೆ ಕೊಡಬೇಕೆಂದು decide ಮಾಡಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. In the meantime, workersಗೆ VRS ಕೊಡಬೇಕೆಂದು package ಬಂದತ್ತು. ನಾವು ಕ್ಯಾಬಿನೆಟ್‌ಗೆ ಹೋಗಿ approval ತೆಗೆದುಕೊಂಡೆವು. ಅದರ ನಂತರ Union leaders ಪುನ: ಬಂದು ಬೇಜಾರು ಮಾಡಿಕೊಂಡು ಇಲ್ಲ, ನಮಗೆ ಈ ಪ್ಯಾಕೇಜ್‌ನಿಂದ ಹೆಚ್ಚಿನ ಉಪಯೋಗ ಆಗುವುದಿಲ್ಲ, ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು, re-consider ಮಾಡಬೇಕೆಂದು ಪುನ: fileಅನ್ನು Chief Minister

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಗೆ ಕಳುಹಿಸಿದರು. ಸಂಬಳಕ್ಕೆ ಸಹ Finance Department ಕಡೆಯಿಂದ 30.00 ಕೋಟಿ ರೂ.ಗಳನ್ನು 15-20 ದಿವಸದ ಹಿಂದೆ ರಿಲೀಸ್ ಮಾಡಿದ್ದಾರೆ. But ನಾನದನ್ನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ತಕ್ಷಣ ಒಂದು ಪರಿಹಾರ ಕಂಡು ಹಿಡಿಯಬೇಕಾಗಿದೆ. ಆದಷ್ಟು ಬೇಗ ಇದಕ್ಕೆ ಒಂದು ಪರಿಹಾರ ಕಂಡುಹಿಡಿಯುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚು (ರಂಜನ್)(ಮಡಿಕೇರಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಅಲ್ಲಿರುವ ಅಡಿಗೆಯವರು ಮತ್ತು ಇತರರನ್ನು permanent ಮಾಡುವುದಿಲ್ಲ ಎನ್ನುವ ವಿಚಾರವನ್ನು ಹೇಳಿದರು. ನಮ್ಮ ಭಾಗಮಂಡಲದಲ್ಲಿ ಒಂದು ವಾಜಪೇಯಿ ವಸತಿ ಶಾಲೆ ಇದೆ. ಆ ಶಾಲೆಯನ್ನು ತೆಗೆದು 5 ವರ್ಷ ಆಯಿತು. ಇವತ್ತಿನವರೆಗೆ ಅಲ್ಲಿರುವ ಮಕ್ಕಳಿಗೆ ಮಲಗಲು bed ಇಲ್ಲ, pillow ಇಲ್ಲ, ಕಂಬಳಿ ಇಲ್ಲ. ಬಹಳಷ್ಟು ಹೆಚ್ಚು ಮಳೆ ಬೀಳುವ ಜಾಗ. ಆ ರೀತಿಯ ವ್ಯವಸ್ಥೆ ಇದೆ. ಅದನ್ನಾದರು ತುಂಬುವಂತಹ ಕೆಲಸವನ್ನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು: O.K.

ಶ್ರೀ ಎಂ.ಜೆ.ಅಪ್ಪಾಜಿ (ಭದ್ರಾವತಿ): ಮಾನ್ಯ ಅಧ್ಯಕ್ಷರೆ, ಹಿರಿಯ ಸಚಿವರಾದ ಮಾನ್ಯ ದೇಶಪಾಂಡೆಯವರು ಸರ್ಕಾರ ಏನು ಮಾಡಿದೆ ಎಂದು ಹೇಳಿದರು. ಈ VRS ಕೊಡುತ್ತೇವೆ ಎಂದು ತೀರ್ಮಾನ ತೆಗೆದುಕೊಂಡ ಮೇಲೆ ಆ ಹಿಂಸೆಯನ್ನು ತಡೆಯಲಾರದೆ 23 ಜನ ಸಾವನ್ನು ಅಪ್ಪಿದ್ದಾರೆ. ಸುಮಾರು ಆರು ತಿಂಗಳಿಂದ ಸಂಬಳ ಕೊಟ್ಟಿರಲಿಲ್ಲ. ಮೊನ್ನೆ ಏನೋ, ಒಂದು 25.00 ಕೋಟಿ ರೂಪಾಯಿ release ಮಾಡಿದ್ದೇವೆ ಎಂದು ಹೇಳುತ್ತಾರೆ. VRS introduce ಆಗುವವರೆವಿಗೂ ಕೊನೆಯ ಪಕ್ಷ ಅವರಿಗೆ ಜೀವನಕ್ಕೆ ಸಂಬಳವಾದರೂ ಕೊಡುವ ರೀತಿಯಲ್ಲಿ ಕಾರ್ಖಾನೆ ತೀರ್ಮಾನ ತೆಗೆದುಕೊಳ್ಳಲಿ ಎಂದು ನನ್ನ ವಿನಂತಿ. ಏಕೆಂದರೆ, ಒಂದೂವರೆ ವರ್ಷದಿಂದ ಈ ಒಂದು ಸಮಸ್ಯೆ ಬಗೆಹರಿಸಿಲ್ಲವೆಂದು ನಾನು ಅಂದು ಕೊಳ್ಳುತ್ತೇನೆ. ದಯಮಾಡಿ, ಮಾನ್ಯ ಹಿರಿಯ ಸಚಿವರಿಗೆ ಕಾರ್ಮಿಕರ ಕಷ್ಟ ಗೊತ್ತಿದೆಯೆಂದು ನಾನು ತಿಳಿದುಕೊಳ್ಳುತ್ತೇನೆ. ಆ ಕಾರ್ಮಿಕರ ನೋವು ಏನಿದೆ, ಅಳಲು ಏನಿದೆ, ಏಕೆಂದರೆ ಕೆಲಸವೂ ಇಲ್ಲ, ಸಂಬಳವೂ ಇಲ್ಲವೆಂದರೆ ಬಹುತೇಕ ಆ ಕಾರ್ಮಿಕರ ಮನೆ ಹೆಂಗಸರೆಲ್ಲರೂ ಗದ್ದೆಗಳಿಗೆ, ಕೂಲಿಗಳಿಗೆ ಹೋಗುವ ಮೂಲಕ ಜೀವನವನ್ನು ನಡೆಸುತ್ತಿದ್ದಾರೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ
ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಮಾನ್ಯ ಸಚಿವರು ದಯಮಾಡಿ ನಾಳೆ ಎನ್ನುವ ಬದಲು ಯಾವ ದಿನ ಹತ್ತಿರದಲ್ಲಿ ಆಗುತ್ತದೆಯೋ ಆ VRS ಅನ್ನು ಕೊಡುವ ಬಗ್ಗೆ ಉತ್ತಮ ರೀತಿಯಲ್ಲಿ ರಕ್ಷಣೆಗೆ ಬರಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ: ನಾನು ಹೇಳಿದ್ದೇನೆ. ಈಗಾಗಲೇ ಹಣ ಬಿಡುಗಡೆ ಮಾಡಿದ್ದೇವೆ. ಅವರ Regular ಸಂಬಳ ಸಿಗುವಂತೆ ಮಾಡುತ್ತೇವೆ. VRS ಬಗ್ಗೆಯೂ ಈಗಾಗಲೇ ಹೇಳಿದ್ದೇನೆ. ಎಷ್ಟು ಬೇಗ ಸಾಧ್ಯ, . . ಈಗಾಗಲೇ package ಆಗಿದೆ. ಆದರೆ, ಅವರು ಹ್ಯಾಪಿ ಇಲ್ಲ with that package. Package ready ಇದೆ, ನಾಳೆಯೇ ಬಿಡುಗಡೆ ಮಾಡಬಹುದು, ಅದನ್ನು ತಾವು ಪ್ರಸ್ತಾಪ ಮಾಡಿದ್ದೀರಿ, ಬೇರೆಯವರು ಪ್ರಸ್ತಾಪ ಮಾಡಿದ್ದಾರೆ. Union leader ಅದು ನಮಗೆ ಕಡಿಮೆಯಾಗುತ್ತದೆ ಎಂದು ಹೇಳಿದಾಗ ಪುನ: fileಅನ್ನು ಮುಖ್ಯ ಮಂತ್ರಿಗಳಿಗೆ, ಅವರು ಹಣಕಾಸು ಸಚಿವರಿದ್ದಾರೆ ಹಾಗಾಗಿ ಅವರಿಗೆ ಕಳುಹಿಸಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ನಿಮ್ಮ ಸಮಯದಲ್ಲಿ ಅದನ್ನು ಆದಷ್ಟು ಬೇಗ solve ಮಾಡಿ. ಇನ್ನೊಂದು ನಾನು ಏನು ಪ್ರಸ್ತಾಪ ಮಾಡುತ್ತಿದ್ದೇನೆ, ಅದು class-1, class-2 employees ಬಗ್ಗೆ ಅಲ್ಲ, ಕೆಳ ಹಂತದಲ್ಲಿ ಕೆಲಸ ಮಾಡುತ್ತಾರಲ್ಲಾ ಅವರ ಬಗ್ಗೆ. ಏಕೆಂದರೆ, ಅದರ ಬಗ್ಗೆ ನಮಗೆ sympathy ಇರಬೇಕು. ಅವರಿಗೆ ಪಗಾರವೂ ಕಡಿಮೆ, securityಯು ಇರುವುದಿಲ್ಲ. ಈಗ ನೋಡಿ ಗ್ರಾಮ ಪಂಚಾಯಿತಿ ನೌಕರರು, ನಮ್ಮ ರಾಜ್ಯದಲ್ಲಿ 6,043 ಗ್ರಾಮ ಪಂಚಾಯಿತಿ ಇವೆ. ಸುಮಾರು 56,000 ಜನ ನೌಕರದಾರರು ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಾರೆ. ಅದರಲ್ಲಿ 12,000 ಜನ ಕಸ ಗುಡಿಸುವವರು, 27,000 ಜನ pump operator, 6,000 ಜನ bill collector ಇದ್ದಾರೆ, 6,000 ಜನ peons ಇದ್ದಾರೆ, 5,000 ಜನ computer operator ಇದ್ದಾರೆ. ಈ ರೀತಿ 56,000 ಜನ ಇದ್ದಾರೆ. ಆದರೆ, ಏನಾಗಿದೆಯೆಂದರೆ, ಮಾನ್ಯ ಹೆಚ್.ಕೆ.ಪಾಟೀಲ್ ಸಾಹೇಬರು decentralization ಮಾಡಿ ಅವರಿಗೆಲ್ಲಾ ಅಧಿಕಾರ ಕೊಟ್ಟಿದೆ ಎಂದು ಹೇಳುತ್ತಾರೆ. ಕಳೆದ ಒಂದು ವರ್ಷದಿಂದ ಅವರಿಗೆ ವೇತನ ಸಿಕ್ಕಿಲ್ಲ. ಅದಕ್ಕಾಗಿ ನಾನು ಒಂದೇ ಒತ್ತಾಯ ಮಾಡುವುದು, ಹೆಚ್.ಕೆ.ಪಾಟೀಲರು ಕೆಳ ಹಂತದ ನೌಕರದಾರರ ಬಗ್ಗೆ ಕಾಳಜಿ ವಹಿಸಬೇಕು. ಆ ಹಳ್ಳಿಯಲ್ಲಿ A-Z ಕೆಲಸ ಮಾಡುವವರು ಅವರು.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಮೇಲಿನವರು ಸುಮ್ಮನೆ ಖೊಕ್ಕೊ ಗೇಮ್ ಆಡುತ್ತಾರೆ. ಇವರೇ ಕೆಲಸ ಮಾಡುವವರು. ನಿಜವಾಗಿ ಅವರಿಗೆಲ್ಲ ಏನು benefit ಸಿಗಬೇಕು, ಒಂದು ವರ್ಷದಿಂದ ವೇತನ ಇಲ್ಲವೆಂದರೆ ಹೇಗೆ ಜೀವನ ಮಾಡಬೇಕು? ಅದಕ್ಕಾಗಿ ಇದರ ಬಗ್ಗೆ ಮಂತ್ರಿಗಳು ತಕ್ಷಣವೇ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಇದರ ಜೊತೆಗೆ, ಇನ್ನೊಂದು 108 ಏನು Ambulance Service ಇದೆ, ಏನಾಗಿದೆಯೆಂದರೆ ಹಿಂದೆ strike ಎಲ್ಲ ಆದಾಗ ಅಲ್ಲಿ ಕೆಲಸ ಮಾಡುತ್ತಿದ್ದ 674 ಜನರನ್ನು ಆರೋಗ್ಯ ಕವಚ ಸಿಬ್ಬಂದಿ ಏನಿದ್ದಾರೆ ಅವರನ್ನು ತೆಗೆದು ಹಾಕಿದರು. GVK companyಯವರು ನೀವು ಸರಿಯಾಗಿ ಕೆಲಸ ಮಾಡಿಲ್ಲ, disciplinary action ಎಂದು 674 ಮಂದಿಯನ್ನು ತೆಗೆದರು. ಆ ನಂತರ ಅದು enquiry ಆಯಿತು. ಮಾನ್ಯ ರಮೇಶ್ ಕುಮಾರ್‌ರವರು ಬಂದ ಮೇಲೆ ಅವರನ್ನು consider ಮಾಡಬೇಕೆಂದು ಆದೇಶ ಕೊಟ್ಟ ಮೇಲೆ IAS ಅಧಿಕಾರಿ, ಇಲಾಖೆಯ secretary ಸುಬೋಧ್ ಯಾದವ್‌ರವರು ಅದಕ್ಕೆ positive ಆಗಿ ಸ್ಪಂದನೆ ಮಾಡಿ enquiry ಮಾಡಿ, ಇದರಲ್ಲಿ ತಪ್ಪಿಲ್ಲ, ಅವರ ಮೇಲೆ disciplinary ಕ್ರಮ ಕೈಗೊಂಡಿರುವುದು ಸರಿಯಿಲ್ಲ ಅದಕ್ಕಾಗಿ ಅವರನ್ನು ತಕ್ಷಣವೇ ತೆಗೆದುಕೊಳ್ಳಬೇಕೆಂದು ಹೇಳಿ ಅವರು ಈಗಾಗಲೇ order ಮಾಡಿದ್ದಾರೆ. Order ಮಾಡಿ ಆಗಲೇ ಒಂದು ತಿಂಗಳ ಮೇಲೆ ಆಯಿತು. Order ಮಾಡಿ ಬಿಟ್ಟಿದ್ದರು. 10.05.2017ರ ಒಳಗಾಗಿ ತೆಗೆದುಕೊಳ್ಳಬೇಕೆಂದು Order ಮಾಡಿದ್ದರೂ ಸಹ ಆ ಸುಬೋಧ್ ಯಾದವ್‌ರವರ orderಗೂ ಕಿಮ್ಮತ್ತಿಲ್ಲ. ಮಂತ್ರಿಗಳ order ಗೂ ಕಿಮ್ಮತ್ತಿಲ್ಲ. ಅದನ್ನೆಲ್ಲ ಒರೆಸಿ ಹಾಕುತ್ತಿದ್ದಾರೆ. ಈ ರೀತಿ ಭಂಡತನ ಮಾಡುವ GVK companyಯವರನ್ನು black list ನಲ್ಲಿ ಇಡಿ. ತಕ್ಷಣ ಅವರ ಜೊತೆ contract ಮಾಡಿಕೊಂಡಿರುವ agreement ಅನ್ನು ರದ್ದು ಮಾಡಿ. ಹೊರಗೆ ಹಾಕಿ ಅವರನ್ನು. ಮತ್ತೆ ಬೇರೆ ಯಾರನ್ನಾದರೂ ತೆಗೆದುಕೊಳ್ಳಿ. ಈ ರೀತಿ ಉದ್ಧಟತನ ಮಾಡಿರುವ GVK companyಯವರು, ಕೆಳ ಹಂತದ ನೌಕರರು ಪಾಪ ಏನೋ strike ಮಾಡಿದ್ದಾರೆ. Demands ಇದೆ, ಪಗಾರ ಕೊಟ್ಟಿಲ್ಲ. ನಿಮ್ಮ ಸರ್ಕಾರದ agreement ಪ್ರಕಾರ ಅವರಿಗೆ ಏನೇನು ಸವಲತ್ತು ಕೊಡಬೇಕಿತ್ತೋ ಅದನ್ನು ಕೊಟ್ಟಿಲ್ಲ. ಅಂಥವರು strike ಮಾಡಿದರೆ ಅದೂ ತಪ್ಪು. ಇದು Democratic Countryಯೇ? Strike ಮಾಡಬಾರದು, Demand ಕೇಳಬಾರದು ಎಂದರೆ ಬೇಕಾದ್ದನ್ನು

ಮಾಡಿಕೊಂಡು ಹೋಗಬಹುದಾ? ಉದ್ಧಟತನ ಮಾಡುತ್ತಿರುವ GVK companyಯವರಿಗೆ ಇನ್ನೊಮ್ಮೆ direction ಕೊಡಿ. ತಕ್ಷಣವೇ ಅವರನ್ನು ವಾಪಸ್ಸು ತೆಗೆದುಕೊಳ್ಳಿ, ಅವರಿಗೆ service ಕೊಡಿ ಎಂದು ಕೇಳಿ. ಇಲ್ಲದೇ ಇದ್ದರೆ, black list ನಲ್ಲಿಟ್ಟು ಸರ್ಕಾರದ order ಅನ್ನು ನೀವು ಉಲ್ಲಂಘನೆ ಮಾಡುತ್ತಿದ್ದೀರಿ ಎಂದು ಅವರನ್ನು ಹೊರಗೆ ಹಾಕಿ. ನೌಕರದಾರರನ್ನು ಹೊರಗೆ ಅಲ್ಲ, ಅವರನ್ನು ಹೊರಗೆ ಹಾಕಿ ಆಗ ನಿಮ್ಮ ಸರ್ಕಾರಕ್ಕೆ ನಾನು ಶಹಭಾಷ್‌ಗಿರಿ ಕೊಡುತ್ತೇನೆ. ಇಲ್ಲವೆಂದರೆ ನಿಮ್ಮ ಸರ್ಕಾರ ಇಂಥ ಹಿತಾಸಕ್ತಿ ಇದ್ದ GVK ರೆಡ್ಡಿಯಂಥವರಿಗೆ ಗುಲಾಮರಾಗಿದ್ದೀರಿ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ತಕ್ಷಣವೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ : ಮಾನ್ಯ ಅಧ್ಯಕ್ಷರೆ, GVK ಕಂಪನಿಯವರ ಬಗ್ಗೆ ಏನು ಪ್ರಸ್ತಾಪ ಮಾಡಿದ್ದೀರಿ, ಅವರು ಯಾವುದೇ accident ಆದರೂ ಸಹ immediateಆಗಿ ಮೊದಲಿನಂತೆ service ಕೊಡುತ್ತಿಲ್ಲ. 670 ಮಂದಿ ನೌಕರರನ್ನು ತೆಗೆದ ನಂತರ ಅವರಿಗೆ ಎಲ್ಲಿ ನೌಕರಿಗೆ ಹೋಗಬೇಕೆಂದು ಗೊತ್ತಿಲ್ಲ. ಶೆಟ್ಟರ್ ಸಾಹೇಬರು ಬಹಳ ಒಳ್ಳೆಯ ವಿಷಯ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದ ಮಾತು ಕೇಳದೆ ಇದ್ದರೆ ಒಂದು AMC ಏಕೆ ಬೇಕು ರಾಜ್ಯದಲ್ಲಿ? ಎಲ್ಲ accident ಆದ ಗಾಡಿಗಳೇ ಇವೆ, ಅದಕ್ಕೆ ಯಾವುದೇ ಸೌಲಭ್ಯಗಳಿಲ್ಲ. ಅದಕ್ಕೆ ಏನು ಮಾಡಬೇಕು, ಯಾರೂ ಕ್ರಮ ತೆಗೆದುಕೊಳ್ಳದೇ ಇದ್ದರೆ ಅವರು ಹೀಗೇ ಮುಂದುವರೆಯುತ್ತಾರೆ. ನನಗೆ ಒಂದು ದಿನ accident ಆಗಿ ಒಂದು ರಸ್ತೆ ಮೇಲೆ 2 ತಾಸು ನಿಂತೆ, ಯಾವುದೇ ಗಾಡಿ ಬರಲಿಲ್ಲ. ದಯವಿಟ್ಟು ಇದಕ್ಕೆ ಒಂದು ಗಂಭೀರವಾದ ತೀರ್ಮಾನ ಮಾಡಿಸಿ.

ಅಧ್ಯಕ್ಷರು: ಇದರ ಬಗ್ಗೆ ಈಗಾಗಲೇ ನಾನು Health Minister ರವರಿಗೆ ಪತ್ರ ಬರೆದಿದ್ದೇನೆ. ಈಗಾಗಲೇ ಆದೇಶ ಮಾಡಲಾಗಿದೆ ಎನ್ನುತ್ತಾರೆ. ಶೆಟ್ಟರ್‌ರವರು ಹೇಳುವ ಹಾಗೆ ಇದುವರೆವಿಗೂ ಅದು implement ಆಗಿಲ್ಲ. ಸರ್ಕಾರ ಅದರ ಬಗ್ಗೆ ಇನ್ನೂ ಸ್ವಲ್ಪ ಸೀರಿಯಸ್ ಆಗಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

14-06-2017

ಶ್ರೀ ಎನ್.ಹೆಚ್.ಕೋನರೆಡ್ಡಿ: ಸರ್ಕಾರದ ವತಿಯಿಂದ ಯಾರಾದರೂ ಹೇಳಿ, ಸ್ಪಷ್ಟಪಡಿಸಿ, ಏಕೆ ಮಾತು ಬರುವುದಿಲ್ಲವೇ? ಇದು ಬಹಳ ಗಂಭೀರವಾದ ವಿಷಯ. Accident ಆದರೂ vehicleಗಳು ಬರದೇ ಇದ್ದರೆ ಹೇಗೆ?

ಶ್ರೀ ಆರ್.ವಿ.ದೇಶಪಾಂಡೆ: ನೋಡಿ, Order ಪ್ರಕಾರ ಮೇ ಒಳಗಾಗಿ ಅವರು ಪುನ: ಕೆಲಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಮಾಡಿಲ್ಲವೆಂದರೆ ನಾನು ಆರೋಗ್ಯ ಸಚಿವರ ಗಮನಕ್ಕೆ ತಂದು ಖಂಡಿತವಾಗಿ ಕ್ರಮ ತೆಗೆದುಕೊಳ್ಳಲು ಹೇಳುತ್ತೇನೆ.

ಅಧ್ಯಕ್ಷರು: O.K.

ಶ್ರೀ ಜಗದೀಶ್ ಶೆಟ್ಟರ್: ನಾನು ಹೇಳುವಂಥದ್ದು, ಈ ವ್ಯವಸ್ಥೆ ಇದೆಯಲ್ಲಾ ದೇಶಪಾಂಡೆಯವರೆ, ಮಾನ್ಯ ಮುಖ್ಯಮಂತ್ರಿಗಳು ಇದ್ದಿದ್ದರೂ ಹೇಳುತ್ತಿದ್ದೆ, ಈ ವ್ಯವಸ್ಥೆಯನ್ನು ಸುಧಾರಣೆ ಮಾಡುವ ದಿಕ್ಕಿನಲ್ಲಿ ನೀವು ಹೋಗಿ. ಆಗ ನಿಮ್ಮ ಆಡಳಿತಕ್ಕೆ ಒಂದು ಗೌರವ ಬರುತ್ತದೆ. ಇಲ್ಲವೆಂದರೆ, ಇಂಥ ನೌಕರರ ಬಗ್ಗೆ ನಿಷ್ಕಾಳಜಿ ಮಾಡುವುದಾದರೆ ಒಳ್ಳೆಯ ಹೆಸರು ಬರುವುದಿಲ್ಲ. ಇನ್ನು ನಾನು ಎರಡು Department ಗಳ ಬಗ್ಗೆ RDPR ಮತ್ತು ನಗರಾಭಿವೃದ್ಧಿ ಬಗ್ಗೆ ಮಾತನಾಡಿಬಿಡುತ್ತೇನೆ. ಈ ಹಿಂದೆ RDPR ಇಲಾಖೆಗೆ ಬಗ್ಗೆ ಸಾಕಷ್ಟು ಸಲ ಮಾತನಾಡಿದ್ದೇನೆ. ಇವತ್ತು ನರೇಗಾ ಕಾಮಗಾರಿಯಲ್ಲಿ ಏನೇನು ಅವ್ಯವಹಾರಗಳಾಗಿವೆ ಎನ್ನುವುದಕ್ಕೆ ಇವತ್ತು ಅವರು ಒಂದು question ನಲ್ಲಿ ಉತ್ತರ ಹೇಳಿದ್ದಾರೆ. ಒಟ್ಟು 2845 ಪ್ರಕರಣಗಳಲ್ಲಿ ನರೇಗಾ ಕಾಮಗಾರಿಯಲ್ಲಿ ದುರುಪಯೋಗ ಆಗಿದೆ ಎನ್ನುವುದರ ಬಗ್ಗೆ ಸುಮಾರು 21.00 ಕೋಟಿ ರೂಪಾಯಿಗಳಷ್ಟು ಅಕ್ರಮ ಆಗಿದೆಯೆಂದು ನನಗೆ ಒಂದು report ಕೊಟ್ಟಿದ್ದಾರೆ. ಇದು recordನಲ್ಲಿ ಇದ್ದದ್ದು. ಆದರೆ, actually ಬಹಳಷ್ಟು ಅವ್ಯವಹಾರಗಳು ನಡೆಯುತ್ತಿವೆ. ಅವೆಲ್ಲ ಇಲ್ಲಿ ಲೆಕ್ಕದಲ್ಲಿ ಬಂದಿಲ್ಲ. ನರೇಗಾದಲ್ಲಿ ಏನು ಹಣ ಖರ್ಚು ಮಾಡಬೇಕಾಗಿತ್ತು, ಇನ್ನೂ ಹೆಚ್ಚಿನ ನರೇಗಾದ ನೆರವು ಏನು ಕೇಂದ್ರ ಸರ್ಕಾರದಿಂದ ಬರಬೇಕಾಗಿತ್ತು. ಆದರೆ, ಅದು ಬಂದಿಲ್ಲ ಎನ್ನುವ ಕೊರಗು ಇದೆ. ಆದರೆ ಇವತ್ತು ಏನಾಗಿದೆ ಎಂದರೆ, ಇವತ್ತು ನರೇಗಾದಲ್ಲಿ ಎಷ್ಟು ಕೋಟಿ ಮಾನವ ದಿನಗಳ ಸೃಜನೆಯಾಗಬೇಕಾಗಿತ್ತೋ ಒಟ್ಟು 19.51 ಕೋಟಿ ದಿನಗಳ ಸೃಜನೆಯಾಗಬೇಕಾಗಿತ್ತು, ಆದರೆ ಅದರಲ್ಲಿ 7 ಕೋಟಿ ಮಾನವ ದಿನಗಳ ಉದ್ಯೋಗ ಸೃಜನೆ ಆಗಲಿಲ್ಲ.

14-06-2017

(ಮುಂದು)

14-06-2017/4-20/29/HRV/VR

ಶ್ರೀ ಜಗದೀಶ್ ಶೆಟ್ಟರ್ (ಮುಂ.ವ)

Percentage of success 73%, ಇನ್ನು 17% ಆಗಲಿಲ್ಲ. ಆ 17% ಕೂಡ success ಆಗಿಬಿಟ್ಟಿದ್ದರೆ ನಮಗೆ ನರೇಗಾದಲ್ಲಿ ಇನ್ನು ಹೆಚ್ಚು ಹಣ ಬರುತ್ತಿತ್ತು. ಆದರೆ ಅದು ಆಗಿಲ್ಲ ಎನ್ನುವಂಥದ್ದನ್ನು ಹೇಳುತ್ತಿದ್ದೇನೆ. ಇನ್ನು ಇವರು ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮವೆಂದು ಮಾಡಿಕೊಂಡರು. ನಾನು ಇದರ ಬಗ್ಗೆ ಸ್ವಲ್ಪ details ಹೇಳುತ್ತೇನೆ. ಆಟದ ಮೈದಾನ, ಮತ್ತೊಂದು ಎಂದು ಇವೆಲ್ಲವನ್ನು ಮಾಡಿದರು. 2015-16 ರಲ್ಲಿ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದಲ್ಲಿ 5,743 ಕೋಟಿ ರೂ.ಗಳನ್ನು ನಿಗದಿ ಮಾಡಿದರು. ಅದರಲ್ಲಿ ವೆಚ್ಚ ಮಾಡಿದ್ದು 1,920 ಕೋಟಿ ರೂ.ಗಳನ್ನು, ಅಂದರೆ 36% ಖರ್ಚಾಗಿದೆ. 2016-17 ನೇ ಸಾಲಿನಲ್ಲಿ 7,497 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿತ್ತು. ಅದರಲ್ಲಿ 3,036 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ, percentage of work ನೋಡಿದರೆ ಅದು 40% ಆಗಿದೆ. 2017-18ನೇ ಸಾಲಿನಲ್ಲಿ 4,608 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿತ್ತು. ಅದರಲ್ಲಿ 1,120 ಕೋಟಿ ರೂ.ಗಳನ್ನು ಖರ್ಚು ಮಾಡಿರುವುದು, performance 24% ಆಗಿದೆ. Over all ಕಳೆದ ಮೂರು ವರ್ಷಗಳಲ್ಲಿ 17,349 ಕೋಟಿ ರೂ.ಗಳಲ್ಲಿ 6,077 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದ್ದು total average performance 35% ಇದೆ. ಅಂದರೆ ಯಾವ ರೀತಿ ಇವತ್ತು RDPR Department ನಡೆಯುತ್ತಿದೆ ಎನ್ನುವಂಥದ್ದಕ್ಕೆ ಇದೊಂದು ಉದಾಹರಣೆಯೆಂದು ನಾನು ಹೇಳುತ್ತಿದ್ದೇನೆ. ಇನ್ನು ಶೌಚಾಲಯ ನಿರ್ಮಾಣ ಮಾಡುವುದರಲ್ಲಿಯೂ ಕೂಡ 2016-17 ನೇ ಸಾಲಿನಲ್ಲಿ 12,89,748 ಶೌಚಾಲಯಗಳನ್ನು ನಿರ್ಮಾಣ ಮಾಡಬೇಕೆನ್ನುವ ಗುರಿ ಇಟ್ಟುಕೊಂಡಿದ್ದರು. ಆದರೆ ಇದುವರೆಗೆ 6,27,522 ಶೌಚಾಲಯಗಳನ್ನು ಮಾತ್ರ ನಿರ್ಮಾಣ ಮಾಡಲಾಗಿದೆ. ಅಂದರೆ performance 48% ಮಾತ್ರ ಆಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಶೌಚಾಲಯ ನಿರ್ಮಾಣ ಮಾಡುವುದರಲ್ಲಿ ಇವರ performance ಹೇಗಿದೆಯೆಂಬುದನ್ನು ನೋಡಿದರೆ, 4 ವರ್ಷದಲ್ಲಿ ಅವರ ಗುರಿ 36,77,000 ಇತ್ತು, ಗುರಿ ಸಾಧನೆ ಮಾಡಿರುವುದು 27,18,000 ಮಾತ್ರ. ಅಂದರೆ 73%

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾತ್ರ ಸಾಧನೆ ಮಾಡಿದ್ದಾರೆ. ಇವರು ಹೇಳಿದ್ದು ಇಷ್ಟು ವರ್ಷದಲ್ಲಿ ಎಲ್ಲ ಕಡೆ ಶೌಚಾಲಯ ಮಾಡುತ್ತೇವೆಂದು, ಆದರೆ ಇವರ performance ನೋಡಿದರೆ ಬಹಳ ಕಡಿಮೆಯಾಗಿದೆ. ಕೇವಲ 73 % ಸಾಧನೆ ಆಗಿದೆ. ನಿಜವಾಗಿ ಹೇಳಬೇಕೆಂದರೆ ಇವರು 100% ದಾಟಿ ಇನ್ನು ಹೆಚ್ಚಿನ ರೀತಿಯಲ್ಲಿ performance ಮಾಡಬೇಕಾಗಿತ್ತು. ಅವರ ವೇಗ ನೋಡಿದರೆ ಈ ರೀತಿಯಲ್ಲಿ performance ಆಗಬೇಕಾಗಿತ್ತು. ಆದರೆ ಆಗಲಿಲ್ಲ. ಅದೇ ರೀತಿ ಶುದ್ಧ ನೀರಿನ ಘಟಕದ ಹಣೆಬರಹವೂ ಕೂಡ ಹಾಗೆಯೇ ಇದೆ. ಇಲ್ಲಿ ಕೂಡ total commission ಆಗಿದ್ದು 8,837 ಮಾತ್ರ. ನಾಲ್ಕು ವರ್ಷದಲ್ಲಿ ಇವರ ಗುರಿ ಇದ್ದದ್ದು 11,301. ಆದರೆ ಅಫಿಡವಿಟ್ ದಾಖಲೆ ಪ್ರಕಾರ ಆಗಿರುವುದು 8,837. ವಾಸ್ತವವಾಗಿ ಇನ್ನು ಕಡಿಮೆಯಾಗಿದೆ. Indian Express ಪತ್ರಿಕೆಯಲ್ಲಿ ಇದರ ಬಗ್ಗೆ ಸಂಬಂಧಿಸಿದಂತೆ ಒಂದು ರಿಪೋರ್ಟ್ ಬಂದಿದೆ. ಧಾರವಾಡದಲ್ಲಿ total plants 12 ರಲ್ಲಿ 10, ಹುಬ್ಬಳ್ಳಿಯಲ್ಲಿ 16 ರಲ್ಲಿ 9, ಕುಂದಗೋಳದಲ್ಲಿ 37 ರಲ್ಲಿ 35, ನವಲಗುಂದದಲ್ಲಿ 19 ಕ್ಕೆ 18, ಅಂದರೆ ಅಲ್ಲೇನಾಗಿದೆ round about ಅವರೇನು ಗುರಿ ಇಟ್ಟುಕೊಂಡಿದ್ದರೋ ನಾವು ಮಾಡಿದ್ದೇವೆ ಎಂದು ಏನು ಹೇಳುತ್ತಾರೋ ಅದರಲ್ಲಿ 56 R.O. plants non-functional in Dharwad district ಎಂದಿದ್ದಾರೆ. ಅಂದರೆ overall ಕರ್ನಾಟಕದಲ್ಲಿ 50% ಗೆ ಮೇಲ್ಪಟ್ಟು ಈ R.O. ಘಟಕ functional ಇಲ್ಲ, defunct ಆಗಿವೆ ಎಂದಿದ್ದಾರೆ. ಇದನ್ನು ನಾನು ಒಂದು ಸಲ ಹೇಳಿದಾಗ ಹೆಚ್.ಕೆ. ಪಾಟೀಲರು ಒಂದು ಕಡೆ comment ಮಾಡಿದ್ದರು. ಅದೇನೆಂದರೆ atleast ಶೆಟ್ಟರು 50% ಆದರೂ ಕೆಲಸ ಮಾಡುತ್ತವೆ ಎಂದು ಹೇಳಿದ್ದಾರಲ್ಲ ನನಗೆ ಅಷ್ಟೇ ಖುಷಿ ಎಂದು ಹೇಳಿದ್ದರು. ಹೆಚ್.ಕೆ. ಪಾಟೀಲರೆ ನೀವು ಅಷ್ಟಕ್ಕೆ ಸಮಾಧಾನ ಪಟ್ಟುಕೊಳ್ಳಿ. ಇನ್ನು 'ನಮ್ಮ ಗ್ರಾಮ ನಮ್ಮ ರಸ್ತೆ' ಯೋಜನೆಯಲ್ಲಿಯೂ ಕೂಡ ಹಣ ಪೂರ್ಣ ಖರ್ಚು ಮಾಡಲಿಲ್ಲ. ಇದರಲ್ಲಿ 1,483 ಕೋಟಿ ರೂ.ಗಳನ್ನು ವೆಚ್ಚ ಮಾಡಬೇಕಾಗಿತ್ತು. ಆದರೆ ಖರ್ಚಾಗಿದ್ದು 1,013 ಕೋಟಿ ರೂ. ಮಾತ್ರ. ಇದರಲ್ಲಿ ಇನ್ನು 469 ಕೋಟಿ ರೂ.ಗಳನ್ನು ಖರ್ಚು ಮಾಡಲಿಲ್ಲ. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಲ್ಲಿ ಇವರ performance 68%. ನಾನು ಈಗಾಗಲೇ ಎರಡು issues ಅನ್ನು ಬೇರೆ ಬೇರ ಹಂತದಲ್ಲಿ raise ಮಾಡಿದ್ದೆ. ಹೆಚ್.ಕೆ. ಪಾಟೀಲರು ಇದಕ್ಕೆ ಸ್ಪಷ್ಟವಾದಂಥ ಉತ್ತರವನ್ನು ಕೊಡಬೇಕಾಗುತ್ತದೆ. ಕುಡಿಯುವ ನೀರಿನ

14-06-2017

testing labs ನಲ್ಲಿ ಅಕ್ರಮವಾಗಿ ಟೆಂಡರ್ ಆಗಿದೆ, ಇದರ ಬಗ್ಗೆ CID ತನಿಖೆಯಾಗಬೇಕು, ಯಾರು ತಪ್ಪು ಮಾಡಿದ್ದಾರೋ ಅವರನ್ನು suspension ನಲ್ಲಿ ಇಡಬೇಕು, payment ಆಗಬಾರದು ಎಂದು ಇವೆಲ್ಲವನ್ನು ನಾನು ಹೇಳಿದ್ದೆ. ಅದಕ್ಕೆ immediately ಹೆಚ್.ಕೆ. ಪಾಟೀಲರು ಒಂದು ಪತ್ರಿಕಾ ಗೋಷ್ಠಿ ಮಾಡಿ ಟೆಂಡರ್ ಪ್ರಕ್ರಿಯೆಯಲ್ಲಿ ಸರಿಯಾಗಿಲ್ಲ, ತಪ್ಪಾಗಿದೆ ಎಂದು ಒಪ್ಪಿಕೊಂಡು, 146 ತಾಲ್ಲೂಕುಗಳಲ್ಲಿ ಪ್ರಯೋಗಾಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಉದ್ದೇಶವನಿಟ್ಟುಕೊಂಡಿದ್ದರು ಮತ್ತು 100 labs ಸ್ಥಾಪನೆ ಮಾಡುವುದಕ್ಕೆ Ray Environ ಎನ್ನುವ ಬೆಂಗಳೂರಿನ ಏಜೆನ್ಸಿಯವರಿಗೆ ಕೊಟ್ಟರು, 46 ಲ್ಯಾಬ್‌ಗಳ ಸ್ಥಾಪನೆಗೆ ಅವತ್ತು ಟೆಂಡರ್‌ನ್ನು ಕರೆದಿದ್ದರು. ಆ ಟೆಂಡರ್ ಬರೋಬ್ಬರಿ ನಡೆದಿಲ್ಲವೆಂದು ಹೇಳಿ ಕೊನೆಗೆ ರದ್ದು ಮಾಡುವಂಥದ್ದು ಆಯಿತು. In the meantime ಅವರಿಗೆಲ್ಲಾ ಟೆಂಡರ್ ಕೊಟ್ಟುಬಿಟ್ಟಿದ್ದರು. ಅದಾದ ಮೇಲೆ ನಾನು ಇದರ ಬಗ್ಗೆ allegation ಮಾಡಿದ ಮೇಲೆ ಸುಮಾರು 31 ಕೋಟಿ ರೂ.ಗಳ ಅವ್ಯವಹಾರ ಇದರಲ್ಲಿ ಆಗಿತ್ತು ಎಂದಾಗ ಆಗ ಹೆಚ್.ಕೆ. ಪಾಟೀಲರು ಏನು ಹೇಳಿದರೆಂದರೆ ಇಲ್ಲ, ಇದರ ಬಗ್ಗೆ ತನಿಖೆ ಮಾಡುತ್ತೇನೆ, CID ತನಿಖೆ ಮಾಡಿಸುತ್ತೇನೆ ಎಂದು ಹೇಳಿ ಆಗ ನಾಲ್ಕೈದು ಜನ ಆಫೀಸರ್‌ಗಳನ್ನು ಸಸ್ಪೆಂಡ್ ಮಾಡಿದರು ಮತ್ತು ತಪ್ಪಾಗಿದೆ ಎಂದು ಒಪ್ಪಿಕೊಂಡರು. ನಾನು ಇವತ್ತು ಕೇಳುತ್ತೇನೆ, ಆ CID ತನಿಖೆ ಎಲ್ಲಿಗೆ ಬಂತು, ಇದುವರೆಗೂ ಇದರ ಬಗ್ಗೆ ಹೆಚ್.ಕೆ. ಪಾಟೀಲ್‌ರವರ ಕಡೆಯಿಂದಾಗಲಿ ಅಥವಾ ಡಿಪಾರ್ಟ್‌ಮೆಂಟ್‌ನಿಂದಾಗಲಿ ನನಗೆ ಮಾಹಿತಿ ಬಂದಿಲ್ಲ. ನಾನು allegation ಮಾಡಿ ಅವ್ಯವಹಾರವಾಗಿದೆ ಎಂದು ಹೇಳಿದ್ದೇನೆ. ಇದುವರೆಗೂ CID ತನಿಖೆ ಏನಾಯಿತು ಎಂಬ ಬಗ್ಗೆ ಸುದ್ದಿಯಿಲ್ಲ. ನನ್ನ ಪ್ರಕಾರ ಆ CID ತನಿಖೆಯನ್ನು ಕೈ ಬಿಟ್ಟಿದ್ದಾರೆಂದು ಇದೆ. ಹೆಚ್.ಕೆ. ಪಾಟೀಲರು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ನೀವು ಅವರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರೆಂದು ನಾನು ತಿಳಿದುಕೊಳ್ಳುತ್ತೇನೆ. ಕುಡಿಯುವ ನೀರಿನ ಪ್ರಯೋಗಾಲಯಕ್ಕೆ ಸಂಬಂಧಿಸಿದಂತೆ CAG ವರದಿ ಬಂದಿದೆ. ಆಮೇಲೆ 19 ಕೋಟಿ ರೂ.ಗಳ furniture ಬಗ್ಗೆ ಹೇಳಿದ್ದೆ. ಅಂದರೆ ಉಪಕರಣಗಳು, ಸೋಫಾ ಮತ್ತು ಮತ್ತೊಂದು ಎಂದು ಹೇಳಿ ಕುಡಿಯುವ ನೀರಿನ ಯೋಜನೆಗೆ ಅವತ್ತೊಂದು ಇಲಾಖೆಯನ್ನು ಏನು ಮಾಡಿದರೋ ಅದಕ್ಕೆ 19 ಕೋಟಿ ರೂ.ಗಳ ಉಪಕರಣಗಳನ್ನು ಖರೀದಿ ಮಾಡುವುದಕ್ಕೆ ಹಣವನ್ನು ಮಂಜೂರು ಮಾಡಿದರು. ಅದರ ಬಗ್ಗೆಯೂ

14-06-2017

ಟೆಂಡರ್ ಆಗಿಲ್ಲ. ಯಾರಿಗೋ ತಮಗೆ ಬೇಕಾದಂಥವರಿಗೆ ಕೊಡುವಂಥ ಕೆಲಸವನ್ನು ಮಾಡಿದರು. ಅದರ ಬಗ್ಗೆ ನಾನು raise ಮಾಡಿದಾಗ ಅದನ್ನು ನ್ಯಾಯಾಂಗ ತನಿಖೆಗೆ ಕೊಟ್ಟರು. 19 ಕೋಟಿ ರೂ.ಗಳ ಉಪಕರಣಗಳ ಖರೀದಿ ವಿಚಾರದಲ್ಲಿ ಆಗಿರುವ ಅವ್ಯವಹಾರದ ವಿಚಾರವನ್ನು ನ್ಯಾಯಾಂಗ ತನಿಖೆಗೆ ಕೊಟ್ಟರು. ಕೆಲವರನ್ನು ಸಸ್ಪೆಂಡ್ ಮಾಡಿದರು. ನ್ಯಾಯಾಂಗ ತನಿಖೆ ಮುಂದೆ ಏನಾಯಿತು, ಇದರ ರಿಪೋರ್ಟ್ ಏನಾಯಿತು ಅಥವಾ ಅದನ್ನು ಕೈಬಿಟ್ಟಿರೋ ಎಂಬ ಬಗ್ಗೆ ಕೂಡ ಹೆಚ್.ಕೆ. ಪಾಟೀಲ್‌ರವರ ಕಡೆಯಿಂದ ಮಾಹಿತಿ ಬಂದಿಲ್ಲ. ಇದರ ಬಗ್ಗೆಯೂ ಸ್ಪಷ್ಟೀಕರಣವನ್ನು ನಾನು ಹೆಚ್.ಕೆ. ಪಾಟೀಲ್‌ರವರಲ್ಲಿ ಕೇಳುತ್ತೇನೆ. ಇದರ ಬಗ್ಗೆ ಏನೂ process ಇದ್ದುವರೆಗೂ ಮಾಡಿಯೇ ಇಲ್ಲವೆಂದರೆ ಬಹುಶ: ಇವೆಲ್ಲವನ್ನು ಸಹಿತ ಮುಚ್ಚಿಡುವಂಥ ಕೆಲಸವನ್ನು ನೀವು ಮಾಡುತ್ತೀರೆಂದು ಇವತ್ತು ನಾನು ಹೇಳಬೇಕಾಗುತ್ತದೆ. ಇನ್ನು ಭೂ ಅಭಿವೃದ್ಧಿ, ಕುರಿ, ದನದ ದೊಡ್ಡಿ, ರೈತರ ಕಣ, ಆಟದ ಮೈದಾನ, ಸ್ಮಶಾನ ಅಭಿವೃದ್ಧಿ, ನಮ್ಮೂರ ಕೆರೆ, ನಮ್ಮ ಹೊಲ ನಮ್ಮ ದಾರಿ, ಇವೆಲ್ಲಾ ಇದೆಯಲ್ಲಾ ಕಳೆದ ಬಾರಿ ನಾನು ಇದರ ಬಗ್ಗೆ ಕೇಳಿದ್ದೆ, ಇವೆಲ್ಲದರ ಬಗ್ಗೆ ಅವರು ಈಸ್ಟ್‌ಮನ್ ಕಲರ್‌ನಲ್ಲಿರುವ ಪಿಕ್ಚರ್‌ಗಳನ್ನು ತೋರಿಸಿದ್ದರು. ದನದ ದೊಡ್ಡಿ, ಆಟದ ಮೈದಾನ, ಸ್ಮಶಾನ, ಇಲ್ಲಿ performance ನೋಡಿದರೆ ಅದು 30 percent ಅಥವಾ 40 percent ಆಗಿದೆ. ಪ್ರತಿ ವರ್ಷದ್ದೂ ಪ್ರತಿಯೊಂದರ ಅಂಕಿ ಸಂಖ್ಯೆಯಿದೆ. ಕಳೆದ ಮೂರು ವರ್ಷದ ಅಂಕಿ ಸಂಖ್ಯೆ ನನ್ನ ಕಡೆಯಿದೆ. ಅವನ್ನೇನಾದರೂ ನೀವು ನೋಡಿಬಿಟ್ಟರೆ ಯಾವ ರೀತಿ ಇವರು ಈಸ್ಟ್‌ಮನ್ ಕಲರ್‌ನಲ್ಲಿ ಫೋಟೋಗಳನ್ನು ತೋರಿಸಿದ್ದರೋ ಶೋ ಮ್ಯಾನ್‌ಷಿಪ್ ಮಾಡಿದ್ದರೋ, ಆದರೆ actual field ನಲ್ಲಿ ಏನೂ ಇಲ್ಲ. ನಾನು ಕಳೆದ ಬಾರಿಯೇ ಶೆವರ್ ಬಾತ್, ಇತ್ಯಾದಿಗಳ ಬಗ್ಗೆ ಹೇಳಿದ್ದೆ. ಅವೆಲ್ಲಾ ಎಲ್ಲಿ ಹಾಕಿದ್ದಾರೋ ಗೊತ್ತೇ ಇಲ್ಲ. ಅವರು ಮೂರು ವರ್ಷದಿಂದ ಬಹಳ ಚೆನ್ನಾಗಿ ಹೇಳಿದ್ದರು. ಬಹುಶ: ನೀವು ಕೂಡ ಈಸ್ಟ್‌ಮನ್ ಕಲರ್‌ನಲ್ಲಿ ತೋರಿಸಿದ ಎಕ್ಸಿಬಿಷನ್ ನೋಡಿದ್ದೀರಿ. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಗಾಗ exhibition ಇಟ್ಟು ತೋರಿಸುತ್ತಾರೆ. ಅದನ್ನೂ ಕೂಡ ನೀವು ನೋಡಿದ್ದೀರಿ. ಆದರೆ actual field ನಲ್ಲಿ ಇವು ಯಾವುವು ಆಗಲಿಲ್ಲ. ಇನ್ನು ಗದಗ್‌ನಲ್ಲಿ 24 X 7 ನೀರಿನ ಘಟಕದ ಬಗ್ಗೆ ನಾನು ಮೊನ್ನೆ ಕೂಡ ಮಾತನಾಡಿದ್ದೇನೆ. ಅದು ಎಲ್ಲಿಗೆ ಬಂದಿದೆಯೋ ಗೊತ್ತಿಲ್ಲ, ನೀರನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಮತ್ತೊಂದು ಬಾರಿ ಮುಂದಿನ ಅಧಿವೇಶನದಲ್ಲಿ ನಾನು

14-06-2017

ಕೇಳುತ್ತೇನೆ. ಈ ರೀತಿ ಇವತ್ತು RDPR Department ನಲ್ಲಿ ಕೆಲಸ ನಡೆಯುತ್ತಿದೆ. ಇವತ್ತು ಏನು performance ಆಗಬೇಕಾಗಿತ್ತೋ ಅದು ಆಗಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಈಗೇನು smart cities ಎಂದು ಏನು declare ಆಗಿವೆ ಅದು ದಾವಣಗೆರೆಯಿರಬಹುದು, ಬೆಳಗಾವಿಯಿರಬಹುದು, ಹುಬ್ಬಳ್ಳಿ-ಧಾರವಾಡವಿರಬಹುದು, ಶಿವಮೊಗ್ಗವಿರಬಹುದು, ಹೀಗೆ 6 smart cities declare ಆಗಿವೆ. ಆದರೆ ಅಲ್ಲಿ ಯಾವರೀತಿಯಲ್ಲಿ speed ಆಗಿ ಕೆಲಸ ವಾಗಬೇಕಾಗಿತ್ತೋ, ಕಾರ್ಯಗತವಾಗಬೇಕಾಗಿತ್ತೋ, ಏಜೆನ್ಸಿ ಫಿಕ್ಸ್ ಆಗುವುದು, ಅಲ್ಲಿ ಯಾವ ಕಾಮಗಾರಿಗಳು ಆಗಬೇಕು ಎನ್ನುವಂಥದ್ದು, ಇದರಲ್ಲಿ speediness ಇಲ್ಲ. ಹೀಗಾಗಿ ಒಂದು ಆಡಳಿತದ ವ್ಯವಸ್ಥೆಯಲ್ಲಿ ವಿಫಲವಾಗಿರುವುದರಿಂದ ಇವೆಲ್ಲವೂ ಕೂಡ ನೆನೆಗುದಿಗೆ ಬಿದ್ದಿದೆ, ಬಹಳ ಆಮೆಗತಿಯಲ್ಲಿ smart city ಕೆಲಸ ನಡೆಯುತ್ತಿದೆ, ಅದನ್ನು ಸ್ವಲ್ಪ speed up ಮಾಡಬೇಕಿದೆ. ಇನ್ನು ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯೊಳಗೆ 2016-17 ನೇ ಸಾಲಿನಲ್ಲಿ 1000 ಕೋಟಿ ರೂ.ಗಳನ್ನು ಕೊಟ್ಟರು. ಆದರೆ ಆ ಹಣದಲ್ಲಿ ವೆಚ್ಚ ಮಾಡಿದ್ದು ಕೇವಲ 596 ಕೋಟಿ ರೂ. ಉಳಿದ 404 ಕೋಟಿ ಹಣವನ್ನು ಖರ್ಚು ಮಾಡಿಲ್ಲ. 2014-15 ನೇ ಸಾಲಿನಲ್ಲಿ ಕೂಡ 1000 ಕೋಟಿ ಹಣವನ್ನು ಹಂಚಿಕೆ ಮಾಡಲಾಗಿತ್ತು. ಆದರೆ 903 ಕೋಟಿ ರೂ.ಗಳು ಮಾತ್ರ ಬಿಡುಗಡೆಯಾಯಿತು. ಇದು ಒಂದು ಕಡೆ. ಇನ್ನು ಬೆಂಗಳೂರಿನಲ್ಲಿ 110 ಹಳ್ಳಿಗಳಿಗೆ ನೀರನ್ನು ಕೊಡುತ್ತೇವೆಂದು ಹೇಳಿದ್ದರು. ಇಲ್ಲಿ ನಮ್ಮ ಬೆಂಗಳೂರಿನ ಶಾಸಕರಿದ್ದಾರೆ. ಆದರೆ ಅದು ಇದುವರೆಗೂ ಆದಂತೆ ಕಾಣುತ್ತಿಲ್ಲ.

(ಮುಂದು)

D 14.06.2017/4.30/30/HBU-VR

ಶ್ರೀ ಜಗದೀಶ್ ಶೆಟ್ಟರ್(ಮುಂದು) : ಇಲ್ಲಿ ಬೆಂಗಳೂರು ಶಾಸಕರು ಇರಬಹುದು. ಒಂದು ವಿಚಾರ ಹೇಳುವುದಾದರೆ 110 ಹಳ್ಳಿಗಳಿಗೆ ನೀರು ಕೊಡುತ್ತೇವೆಂದು ಹೇಳಿದರು. ಆದರೆ ಇನ್ನುವರೆಗೂ ಆ ಕೆಲಸ ಆದಂತಿಲ್ಲ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಮೊನ್ನೆ ಪೂಜೆ ಮಾಡಿದ್ದಾರೆ, ಇನ್ನೂ ಕಾಮಗಾರಿ ಪ್ರಾರಂಭವಾಗಿಲ್ಲ. ಅದರಲ್ಲಿ ಇನ್ನು ಸಮಸ್ಯೆ ಏನಿದೆಯೆಂದರೆ ಯುಜಿಡಿ ಮತ್ತು ಕುಡಿಯುವ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನೀರು ಎರಡೂ ಒಟ್ಟಿಗೆ ಮಾಡಬೇಕು. BWSSB ಯವರು ಬೆಂಗಳೂರು ರಸ್ತೆಗಳನ್ನು ಅಗೆದು ಹಾಕಿಬಿಡುತ್ತಾರೆ, ನಂತರ ಅದನ್ನು restore ಮಾಡುವುದಿಲ್ಲ. ಅದಕ್ಕೆ ಎರಡನ್ನೂ ಒಟ್ಟಿಗೆ ಮಾಡಿ ಎಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಜೈಕಾದಿಂದ ಇನ್ನೂ clear ಆಗಿಲ್ಲ, ಅದನ್ನು ಮಾಡುವುದರ ಬಗ್ಗೆ ಯೋಜನೆ ಮಾಡುತ್ತಿದ್ದೇವೆಂದು ಸರ್ಕಾರ ಯೋಚಿಸುತ್ತಿದೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ 110 ಹಳ್ಳಿಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಗಂಭೀರ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಆ ಕಡೆ ಬಿಬಿಎಂಪಿ ಯವರು manage ಮಾಡುತ್ತಿದ್ದರು, ಅವರಿಗೂ ಅಡ್ಡ ಆಗಿದ್ದಾರೆ. ಈ ಕಡೆ BWSSB ಯವರು ಕೆಲಸ ಪ್ರಾರಂಭ ಮಾಡಿಲ್ಲ. ಅವರು UGD ಮಾಡುವ ಸಲುವಾಗಿ ಇನ್ನೊಂದು ಬಾರಿ ರಸ್ತೆಯನ್ನು ಅಗೆಯುತ್ತಾರೆ. ಇಂತಹ ಪರಿಸ್ಥಿತಿ ಬಂದು ಬೆಂಗಳೂರಿನ ಪರಿಸ್ಥಿತಿ ಒಟ್ಟು ಅದ್ವಾನವಾಗಿದೆ. ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಇಲ್ಲಿದ್ದಾರೆ. ಅವರು ಮುಖ್ಯಮಂತ್ರಿಯಾದಾಗ ಬೆಂಗಳೂರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯಿತು. ಆ ಸಂದರ್ಭದಲ್ಲಿ 110 ಹಳ್ಳಿಗಳನ್ನು ಏನು ಸೇರಿಸಿದರು, ಆ ಹಳ್ಳಿಗಳ ಪರಿಸ್ಥಿತಿ ಬಹಳ ಗಂಭೀರ ಇದೆ.

ಶ್ರೀ ಸತೀಶ್ ರೆಡ್ಡಿ.ಎಂ : ಮಾನ್ಯ ಅಧ್ಯಕ್ಷರೆ, ಇದು ಕೇವಲ 110 ಹಳ್ಳಿಗಳದಲ್ಲ. ಹಳೇ ಬಿಬಿಎಂಪಿ ಪರಿಸ್ಥಿತಿ ಕೂಡ ಅದೇ ರೀತಿ ಇದೆ. ಮೊನ್ನೆ ಮಾತನಾಡುವಂಥ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದಿದ್ದೇವೆ. ಅವರು ಐದು ವರ್ಷಗಳ ಹಿಂದೆ UGD ಪ್ರಾರಂಭ ಮಾಡಿದ್ದು, ಕಳೆದ ಎರಡು ವರ್ಷಗಳ ಹಿಂದೆ ಪೂರ್ಣವಾಗಬೇಕಾಗಿತ್ತು, ಆದರೆ ಇವತ್ತಿನವರೆಗೂ ಆಗಿಲ್ಲ ಮತ್ತು cost double ಆಗಿದೆ. ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಕೆರೆಗಳಿಗೆ ಭೇಟಿ ಕೊಟ್ಟಿದ್ದಿರಲ್ಲ, ಅಲ್ಲಿನ ಪರಿಸ್ಥಿತಿ ಬೇರೆ ರೀತಿ ಇದೆ. ಅದರ ಕಡೆ ಸ್ವಲ್ಪ ಗಮನ ಕೊಡಲಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, UGD ಯದು ದೊಡ್ಡ ಹಗರಣ, ಯಾವುದೇ ನಗರ ಎಂದು ತೆಗೆದುಕೊಳ್ಳಲಿ, ಅವರು ಸಮಯದಲ್ಲಿ ಮುಗಿಸುವುದೇ ಇಲ್ಲ. ಅದಕ್ಕೆ ಸಮಗ್ರ ತನಿಖೆ ಅವಶ್ಯಕತೆ ಇದೆ.

ಅಧ್ಯಕ್ಷರು : ಹೌದು, ತಮಗೆ ಅವಕಾಶ ಕೊಟ್ಟಾಗ ಮಾತನಾಡಿ, ಈಗ ಅವರು ಮಾತನಾಡಲಿ.

14-06-2017

ಶ್ರೀ ಸತೀಶ್ ರೆಡ್ಡಿ.ಎಂ : BWSSB ಯವರು ಕಾಮಗಾರಿ ಯಾವಾಗ ಪ್ರಾರಂಭ ಮಾಡುತ್ತಾರೆ, ಯಾವಾಗ ಮುಗಿಸುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಟೆಂಡರ್ ಪ್ರೊಸೆಸ್ ಮಾಡುವಾಗ ಹಣ ಯಥೇಚ್ಛವಾಗಿ ಇಟ್ಟುಕೊಳ್ಳುತ್ತಾರೆ. ಆದರೆ style of work ಏನಿದೆ, ಅವರು ಹಳೇ ಕಾಲದ ಮೆಷಿನರಿಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಆದರೆ ಹೊಸ ಟೆಕ್ನಾಲ್ಡಾಜಿ ಉಪಯೋಗ ಮಾಡುತ್ತೇವೆಂದು advertisement ನಲ್ಲಿ ಹೇಳುತ್ತಾರೆ. ಎರಡು ವರ್ಷಗಳಲ್ಲಿ ಆಗಬೇಕಾಗಿರುವ ಕೆಲಸ ಏಳು ವರ್ಷಗಳಾದರೂ ಆಗಿಲ್ಲವೆಂದರೆ, ಅದರ ಕಾಸ್ಟ್ ಡಬಲ್ ಆದರೆ ತೆರಿಗೆ ಕಟ್ಟುವವರಿಗೆ ನಷ್ಟವಾಗುವುದಿಲ್ಲವೇ?

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ. ಕೆರೆಗಳ ಸಮಿತಿಗೆ ತಾವೇ ಅಧ್ಯಕ್ಷರಿದ್ದೀರಿ. ಬೆಳ್ಳಂದೂರು ಕೆರೆಗೆ ತಾವು 2-3 ಬಾರಿ ಬಂದಿದ್ದೀರಿ. ಅದಕ್ಕೆ ಸಂಬಂಧಪಟ್ಟಂತೆ NGT order ಮಾಡಿದೆ. ಅಲ್ಲಿ ಬೆಳ್ಳಂದೂರು ಸುತ್ತಮುತ್ತಲಿನ ಭಾಗ ಅಲ್ಲ, ಇಡೀ ಬೆಂಗಳೂರಿನ ಭಾಗದ ಕೊಳಚೆ ನೀರು ಪೂರ್ತಿ ಅಲ್ಲಿಗೆ ಬರುತ್ತದೆ. ಏಕೆಂದರೆ ಮಾನ್ಯ ಸತೀಶ್ ರೆಡ್ಡಿಯವರು ಹೇಳಿದ ಹಾಗೆ treatment plants ready ಇಲ್ಲ. UGD line ಮಾಡಿದ್ದಾರೆ, ಅದರಲ್ಲಿ ಬರುವ ನೀರು ಎಲ್ಲಿ ಬಿಡುತ್ತಿದ್ದಾರೆ ಎಂದರೆ treatment ಗೆ ಹೋಗುವುದಿಲ್ಲ. ಒಂದು ಕಡೆ ಸರ್ಕಾರ ನೀರನ್ನು ಟ್ರೀಟ್ ಮಾಡಿ ಚಿಕ್ಕಬಳ್ಳಾಪುರ ಮತ್ತು ಕೋಲಾರಕ್ಕೆ ಬಿಡುತ್ತೇವೆಂದು ಹೇಳುವುದು. ಈಗ ಇರುವ ನೀರನ್ನು ಕೆರೆಗಳಿಗೆ ಬಿಡುತ್ತಿದ್ದಾರೆ. ಅಂತಹ ಪರಿಸ್ಥಿತಿ ಇದೆ. ಆ ಕೆರೆಗಳ ಪರಿಸ್ಥಿತಿಯಂತೂ ಬಹಳ ಅದ್ವಾನ ಇದೆ. ನಮ್ಮ ಕ್ಷೇತ್ರ ಮತ್ತು ಮಾನ್ಯ ಸತೀಶ್ ರೆಡ್ಡಿ ಯವರು ಕ್ಷೇತ್ರದ ಪರಿಸ್ಥಿತಿ 110 ಹಳ್ಳಿಗಳಿಗೂ ಆಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವ ಸಂಗತಿ ಅದೇ ಆಗಿದೆ. ಕುಡಿಯುವ ನೀರು ಎಂದು ಹೇಳಿದರು, ಆದರೆ ಅದನ್ನು ಕೊಡುವ ಪರಿಸ್ಥಿತಿಯಲ್ಲಿಲ್ಲ. UGD ನಾಳೆ ಮಾಡುತ್ತಾರೆ, ಇದು ಅದೇ ರೀತಿಯಾಗಬಾರದು. ಅವರು ಹೇಳಿದ ಹಾಗೆ missing bits ಸಿಕ್ಕಾಪಟ್ಟೆ ಇದೆ.

ಅಧ್ಯಕ್ಷರು : ಸರ್ಕಾರದವರು ಏನು ಉತ್ತರ ಕೊಡುತ್ತಾರೆಂದು ನೋಡೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಸಮಸ್ಯೆ ಬಹಳ ಇದೆ. ಇವರು 110 ಹಳ್ಳಿಗೆ ನೀರು ಕೊಡುತ್ತೇವೆಂದು ಮೊದಲನೇ ವರ್ಷದಿಂದ ಹೇಳಿಕೊಂಡು ಬಂದರು, ಆದರೆ

14-06-2017

ಇನ್ನುವರೆಗೂ ಕೊಡುವುದಕ್ಕೆ ಆಗಲಿಲ್ಲ. ನಮ್ಮ ಶಾಸಕರು ಬೇರೆ ಬೇರೆ ಸಮಸ್ಯೆಗಳನ್ನು ಹೇಳಿದರು. ಬೆಂಗಳೂರು ಉಸ್ತುವಾರಿ ತೆಗೆದುಕೊಂಡವರು ಈ ವಿಚಾರದಲ್ಲಿ ಸ್ಪಂದನೆ ಮಾಡಬೇಕು. ಮಾನ್ಯ ಸತೀಶ್ ರೆಡ್ಡಿಯವರು ಅನುದಾನದಲ್ಲಿ ತಾರತಮ್ಯ ಆಗುತ್ತಿದೆಯೆಂದು ಹೇಳಿದರು. ಕಾಂಗ್ರೆಸ್ಸಿನ ಶಾಸಕರಿಗೆ ಹೆಚ್ಚು ಅನುದಾನ ಕೊಡುವುದು, ಬಿಜೆಪಿಯವರಿಗೆ ಅನುದಾನ ಕೊಡುವುದಿಲ್ಲ, ಅದಕ್ಕೆ ಈ ತಾರತಮ್ಯವನ್ನು ಹೋಗಲಾಡಿಸಬೇಕು. ಎಲ್ಲಾ ಕ್ಷೇತ್ರಕ್ಕೆ ಕೊಟ್ಟರೆ ಬೆಂಗಳೂರು ಉದ್ಧಾರವಾಗುತ್ತದೆ. ಯಾವುದೋ ಒಂದು ಕ್ಷೇತ್ರಕ್ಕೆ ಕೊಡುವುದು, ಯಾವುದೋ ಕ್ಷೇತ್ರಕ್ಕೆ ಕೊಡುವುದಿವೆನ್ನುವ ವಿಚಾರ ಆಗಬಾರದು. ಇನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರದ ಹಣ ಬಳಕೆಯಾಗಲಿಲ್ಲ. ಎಸ್‌ಸಿ/ಎಸ್‌ಟಿ ಅನುದಾನ ಬಳಕೆಯಾಗಲಿಲ್ಲ. ಸ್ವಚ್ಛ ಭಾರತ ನಿಧಿ ಸೆಸ್ ಇದೆ, ಅದೂ ಕೂಡ ಬಳಕೆಯಾಗಿಲ್ಲ. ಮಾನ್ಯ ದೇಶಪಾಂಡೆಯವರೆ, ಮೂಲಸೌಲಭ್ಯ ಅಭಿವೃದ್ಧಿ ಖಾತೆ ತಮ್ಮ ಹತ್ತಿರ ಇದೆ. ಸಣ್ಣ ವಿಮಾನ ನಿಲ್ದಾಣ ಅಭಿವೃದ್ಧಿ ಯಾವುದೂ ಆಗಲಿಲ್ಲ. ಕಲ್ಬುರ್ಗಿ ವಿಮಾನ ನಿಲ್ದಾಣ, ಬೀದರ್ ವಿಮಾನ ನಿಲ್ದಾಣ ಸಮಸ್ಯೆ ಇದೆ ಎಂದು ಹೇಳಿದಿರಿ. Regional Airport Development ಗೆ ಸಂಬಂಧಪಟ್ಟಂತೆ proposal ಇದೆಯಲ್ಲ, UDAN ಯೋಜನೆ ಇದೆಯಲ್ಲ, ಅದರಲ್ಲಿ ಬೀದರ್, ಹುಬ್ಬಳ್ಳಿ, ಕಲ್ಬುರ್ಗಿ, ಮೈಸೂರು ಇವೆಲ್ಲವನ್ನು ತರುವುದಕ್ಕೆ ಸಾಧ್ಯವಿದೆ. ನೀವು ಮತ್ತು ಆಂಧ್ರ ಪ್ರದೇಶದವರು ಕುಳಿತು ಮಾತನಾಡಿದರೆ ಒಳ್ಳೆಯದು. ನಾನು ಒಮ್ಮೆ ನೀತಿ ಆಯೋಗದ ಸದಸ್ಯರನ್ನು ಹಿಂದೆ ದೆಹಲಿಯಲ್ಲಿ ಭೇಟಿಯಾಗಿದ್ದೆ. ಆಗ ಅವರು GVK ಯವರನ್ನು ಕರೆದು ಒಂದು ಮೀಟಿಂಗ್ ಮಾಡುತ್ತೇನೆ, ನಿಮ್ಮ ಮಂತ್ರಿಗಳಾದ ಆರ್. ವಿ. ದೇಶಪಾಂಡೆ ಮತ್ತು ನೀವು ಬಂದರೆ ಮೀಟಿಂಗ್ conduct ಮಾಡಿ, ಅವರನ್ನು ನಾನು ಒಪ್ಪಿಸುವಂಥ ಕೆಲಸ ಮಾಡುತ್ತೇನೆನ್ನುವ ಮಾತನ್ನು ನನಗೆ ಹೇಳಿದ್ದಾರೆ. ಅದಕ್ಕೆ ನಿಮ್ಮ ಅಧ್ಯಕ್ಷತೆಯಲ್ಲಿ, ನಾವು ಅವರು ಸೇರಿ ಒಂದು ಮೀಟಿಂಗ್ ಮಾಡೋಣ. ಈ ವಿಚಾರವಾಗಿ ದೆಹಲಿಗೆ ಹೋದರೆ ನಿಜವಾಗಿ clear ಆಗುತ್ತದೆ. ಅದನ್ನು ಮಾಡುವ ಕೆಲಸ ಆಗಬೇಕೆಂದು ಹೇಳುತ್ತೇನೆ. ಕೊನೆಯದಾಗಿ ನಾನು conclude ಮಾಡುವುದೇನೆಂದರೆ ತುಮಕೂರು-ರಾಯದುರ್ಗ ರೈಲ್ವೆ ಮಾರ್ಗ, ಚಿಕ್ಕಮಗಳೂರು-ಸಕಲೇಶಪುರ ರೈಲ್ವೆ ಮಾರ್ಗ, ಕುಡುಚಿ-ಬಾಗಲಕೋಟೆ ರೈಲ್ವೆ ಮಾರ್ಗ, ಇವುಗಳನ್ನು ಮಾಡುವುದಕ್ಕೆ ಕೆಲವು ಕಡೆ land acquisition problem ಇದೆ. ಅದನ್ನು ಆದಷ್ಟುಬೇಗ clear ಮಾಡುವಂಥ ಕೆಲಸ ತಮ್ಮ ಕಡೆಯಿಂದ ಆಗಬೇಕು. ಆಗ ಮಾತ್ರ ಇವೆಲ್ಲ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

14-06-2017

ಪೂರ್ತಿಯಾಗುವುದಕ್ಕೆ ಸಾಧ್ಯವಿದೆ. ಇನ್ನು ಬಗರ್ ಹುಕುಂ ಬಗ್ಗೆ ಹೇಳುತ್ತಿದ್ದೇನೆ. ಇಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದರೆ ಚೆನ್ನಾಗಿತ್ತು. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿ, ಸಾಗುವಳಿ ಮಾಡುವುದನ್ನು ನೋಡಿದ್ದೇವೆ. ಶಿವಮೊಗ್ಗದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಇರುವಂಥ ಕ್ಷೇತ್ರದಲ್ಲಿ ಜಿಲ್ಲಾ ಉಸ್ತುವಾರಿ, ಬಗರ್ ಹುಕುಂ ಅರ್ಜಿದಾರರು ಇವತ್ತೇನು ಅರ್ಜಿ ಕೊಟ್ಟಿದ್ದರು, ಆರ್ಜಿ hearing ಆಗಿ ವಜಾ ಆಗಿದೆ. ಮುಂದೆ ಅವರು appeal ಹಾಕಬೇಕು. ಆದರೆ ಏನಾಗಿದೆ ಎಂದರೆ ತೀರ್ಥಹಳ್ಳಿ ಕ್ಷೇತ್ರದಲ್ಲಿ ಬಗರ್ ಹುಕುಂ ಅರ್ಜಿ ವಜಾ ಆಗಿರುವವರನ್ನು ತಕ್ಷಣ ಹೊರಗೆ ಹಾಕುವಂಥಾದ್ದು ಮತ್ತು ಕ್ರಿಮಿನಲ್ ಕೇಸ್ ಹಾಕಿ ಜೈಲಿಗೆ ಹಾಕುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಹುಂಚದಕಟ್ಟೆ ಸಮೀಪ ಹುತ್ತಳ್ಳಿ ಗ್ರಾಮದ ಬಗರ್ ಹುಕುಂ ಸಾಗುವಳಿದಾರರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತಿದ್ದಾರೆ. ಅದನ್ನು ನಿಲ್ಲಿಸಬೇಕು, ಅವರು ಅಲ್ಲಿ 20 ವರ್ಷ, 30 ವರ್ಷ ಮತ್ತು 40 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ರಕ್ಷಣೆ ಕೊಡುವಂಥ ಕೆಲಸವಾಗಬೇಕು. ಅವರು ಅಪೀಲ್ ಹೋಗಲಿ. ಆದರೆ ಅವರನ್ನು ಜೈಲಿಗೆ ಕಳುಹಿಸುವಂಥ ಹುನ್ನಾರ ನಡೆಯುತ್ತಿದೆ. ಅದನ್ನು ನಿಲ್ಲಿಸಬೇಕು. ಅಲ್ಲಿ ಒಬ್ಬ ತುಕಾರಾಂ ಬಂಗಾರಪ್ಪ ಎನ್ನುವ ಭ್ರಷ್ಟ ಅಧಿಕಾರಿ ಇದ್ದಾನೆ. ಅವರನ್ನು ಬೇರೆ ಕಡೆ ಕಳುಹಿಸಿ ಎಂದರೆ ಇವತ್ತಿಗೂ ಅವನಿಗೆ ರಕ್ಷಣೆ ಕೊಡುವಂಥ ಕೆಲಸ ನಡೆಯುತ್ತಿದೆ. ಇದರ ಬಗ್ಗೆ ನಾನು ಪತ್ರವನ್ನು ಕೂಡ ಬರೆಯುತ್ತಿದ್ದೇನೆ. ಇದೆಲ್ಲ ಆಗುತ್ತಿಲ್ಲ, ಅದರ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿಲ್ಲ. ಇವತ್ತು ಅನ್ನಭಾಗ್ಯದ ಬಗ್ಗೆ ಚರ್ಚೆಯಾಗುತ್ತಿದೆ. ಇದರ ಬಗ್ಗೆ ಮಾಹಿತಿ ಹಕ್ಕಿನ ಪ್ರಕಾರ ಒಬ್ಬರು ಮಾಹಿತಿ ತೆಗೆದುಕೊಂಡಿರುವುದನ್ನು ಹೇಳುವುದಾದರೆ ಕೇಂದ್ರ ಸರ್ಕಾರ ಒಂದು ಕೆ.ಜಿ.ಗೆ 32 ರೂಪಾಯಿಯಂತೆ ಅಕ್ಕಿಯನ್ನು ಖರೀದಿ ಮಾಡಿ, ರಾಜ್ಯ ಸರ್ಕಾರಕ್ಕೆ 3 ರೂಪಾಯಿ ಕೆ.ಜಿಯಂತೆ ಕೊಡುತ್ತೇವೆ. ಇವರು ಮೂರು ರೂಪಾಯಿಯನ್ನು ತಮ್ಮ ಬಜೆಟ್‌ನಿಂದ ಕೊಟ್ಟು ಅನ್ನಭಾಗ್ಯ ಯೋಜನೆ ಮಾಡಿ, ಈ ಅನ್ನಭಾಗ್ಯ ಯೋಜನೆ ನಮ್ಮದು ಎಂದು ಹೇಳುತ್ತಾರೆ. ಇನ್ನು ಗೋಧಿಯನ್ನು ಒಂದು ಕೆ.ಜಿ.ಗೆ ರೂ. 24 ರಂತೆ ಖರೀದಿ ಮಾಡಿ ಕೇಂದ್ರ ಸರ್ಕಾರ ಕಳುಹಿಸಿದರೆ, ಇವರು 2 ರೂಪಾಯಿ ವಿನಾಯಿತಿ ಮಾಡಿ ತಮ್ಮ ಬಜೆಟ್‌ನಿಂದು ಕೊಟ್ಟು, ಆ ಯೋಜನೆ ನಮ್ಮದು ಎಂದು ಹೇಳುತ್ತಾರೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಆರ್.ವಿ. ದೇಶಪಾಂಡೆ : Quantity ಎಷ್ಟು ಕೊಡುತ್ತಾರೆ? ಕೇಂದ್ರ ಸರ್ಕಾರದಿಂದ ಅಕ್ಕಿ ಮತ್ತು ಗೋಧಿ ಎಷ್ಟು ಬರುತ್ತದೆ, ನಾವು ಈಗ individual ಆಗಿ 7 ಕೆ.ಜಿ ಕೊಡುತ್ತೇವೆ. ಅಷ್ಟೆಲ್ಲಾ ಹಣವನ್ನು ಕೇಂದ್ರ ಸರ್ಕಾರ ಕೊಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ದೇಶಪಾಂಡೆಯವರೆ, ನೀವು ಇಲ್ಲಿ ಏನು ಹಂಚುತ್ತೀರಿ, ಅದು 90% quantity ಕೇಂದ್ರ ಸರ್ಕಾರ ಕೊಡುತ್ತದೆ. ಆದರೆ ಸುಮ್ಮನೆ ಅನ್ನಭಾಗ್ಯ ನಮ್ಮದು ಎಂದು ಹೇಳುತ್ತೀರಿ. ನಾನು ಒಂದೆರಡು ವಿಚಾರಗಳ ಬಗ್ಗೆ ಹೇಳುತ್ತೇನೆ. ಮೊನ್ನೆ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿ ಹೆಸರಿಟ್ಟಿರಿ. ಆ ವಿಶ್ವವಿದ್ಯಾಲಯವನ್ನು ಅಭಿವೃದ್ಧಿ ಮಾಡುವುದಕ್ಕೆ ಹಣ ಕೊಡುವುದಕ್ಕೆ ತಯಾರಿಲ್ಲ. ತಾವು ಅಕ್ಕಮಹಾದೇವಿ ಹೆಸರಿಟ್ಟಿರುವುದಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ ವಿಶ್ವವಿದ್ಯಾಲಯಕ್ಕೆ ಆ ಹೆಸರಿಡುವುದಕ್ಕೆ ಎಲ್ಲಾ ಕಡೆಯಿಂದ ಜನರನ್ನು ಕರೆದುಕೊಂಡು ಹೋಗಿದ್ದು, ದೊಡ್ಡ ಕಾರ್ಯಕ್ರಮ ಮಾಡಿದಿರಿ.

ಶ್ರೀ ಆರ್.ವಿ. ದೇಶಪಾಂಡೆ: ನಿಮ್ಮನ್ನು ಕರೆದಿದ್ದೆವು, ಆದರೆ ನೀವು ಬರಲಿಲ್ಲವಲ್ಲ. ನಾವು ಇವರು ಬರುತ್ತಾರೆಂದು ತಿಳಿದುಕೊಂಡಿದ್ದೆವು, ಇವರು ಬಂದಿಲ್ಲ, ನಮ್ಮ friend ರಮೇಶ್ ಜಿಗಜಿಣಗಿಯವರು ಬರಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಉದಯವಾಣಿಯಲ್ಲಿ ಒಂದು ವರದಿ ಬಂದಿದೆ. ವಿಜಯಪುರ ವಿ.ವಿ.ಗೆ ಹೆಸರಿಡುವ ಸಮಾರಂಭ, ಸಂಪುಟ ಸಹದ್ಯೋಗಿಗಳಿಗೆ ರಾಯರೆಡ್ಡಿ ಪತ್ರ. ಅಕ್ಕನ ನಾಮಕರಣಕ್ಕೆ ಸಹೋದರಿಯರಿಗೆ ಭತ್ಯೆ. ಒಬ್ಬೊಬ್ಬರಿಗೆ 200 ರೂಪಾಯಿ ಕೊಟ್ಟು, ಗಾಡಿ ಮಾಡಿ, ಡಿ.ಸಿ.ಗೆ ಸೂಚನೆ ಕೊಟ್ಟು, ಯಾವ ಕೊಂಡಿ ಹಾಕಿದ್ದಾರೋ, ಒಟ್ಟು ಹಾಕಿದ್ದಾರೆ. ಅಲ್ಲಿ ಬಂದಂಥ ಅಂಗನವಾಡಿ ಸಹಾಯಕರಿಗೆ ಬಸ್ಸು ಮತ್ತು ಗಾಡಿ ಮಾಡಿ, 13 ಜಿಲ್ಲೆಯಿಂದ ಡೈರೆಕ್ಷನ್ ಕೊಟ್ಟಿದ್ದಾರೆ. ಪ್ರತಿಯೊಬ್ಬರಿಗೂ 200 ರೂಪಾಯಿ ಕೊಟ್ಟಿದ್ದಾರೆ. ಅದು ಪತ್ರಿಕೆಯಲ್ಲಿ ಬಂದಿದೆ. ಅಲ್ಲಿರುವ ಎಲ್ಲಾ ಡಿ.ಸಿ.ಯವರಿಗೆ ಸೂಚನೆ ಕೊಟ್ಟಿದ್ದಾರೆ. ಇದೇನು? ಯಾವಾಗಲೂ ಜನರ ಬೆಂಬಲ ಬೇಕು. ಜನರ ಮನಸ್ಸಿನಲ್ಲಿ ಇರಬೇಕು. ಅದು ಬಿಟ್ಟು ಏನೋ ಒಂದು ಸನ್ಮಾನ ಮತ್ತೊಂದು ಮಾಡಿದಿರಿ. ಅದಕ್ಕಿಂತ ಇನ್ನು ಒಂದೆರಡು ಬೇರೆ ಬೇರೆ ಕೆಲಸ ಮಾಡಬೇಕಾಗಿತ್ತು.

(ಮುಂದು)



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

## 14-06-2017

14.06.17 - 4.40 - (31) - RD-PS

ಶ್ರೀ ಜಗದೀಶ್ ಶೆಟ್ಟರ್: ಮುಂದು.. ..

ನೀವು ಇನ್ನು ಒಂದೆರಡು ಕೆಲಸಗಳನ್ನು ಮಾಡಬೇಕಾಗಿತ್ತು, ಅದನ್ನು ನಾನು ಹೇಳುತ್ತೇನೆ. ಇಲ್ಲಿ ಕೂಡಲಸಂಗಮದೊಳಗೆ ಬಸವ ಅಂತರಾಷ್ಟ್ರೀಯ ಮ್ಯೂಸಿಯಂ ಉದ್ಘಾಟನೆಯಾಗಬೇಕಾಗಿದೆ. ಅದು ಇದುವರೆಗೂ ಆಗಿಲ್ಲ, ಅದಕ್ಕೆ 367 ಕೋಟಿ ರೂ.ಗಳು ಎಂದು announce ಮಾಡಿದಿರಿ. ಅದು ಎಲ್ಲಿಯವರೆಗೆ ದೆಹಲಿಯಲ್ಲಿ ಸ್ವಾಮಿ ನಾರಾಯಣ ಅಕ್ಷರಧಾಮವಿದೆಯಲ್ಲಾ, ಆ ಮಾದರಿಯಲ್ಲಿ ಅಂತರಾಷ್ಟ್ರೀಯ ಮ್ಯೂಸಿಯಂ ಮಾಡುತ್ತೇವೆಂದು ಹೇಳಿ, ಅದರ ಸುದ್ದಿಯೇ ಇಲ್ಲ. ಅಕ್ಕ ಮಹಾದೇವಿಯ ಹೆಸರಿಟ್ಟರು, ಬಸವಣ್ಣನವರದ್ದು ಏನು ಇದೆ, ಅದಕ್ಕೆ 367 ಕೋಟಿ ರೂ.ಗಳಿದೆಯಲ್ಲಾ, ಆ ಹಣ ಖರ್ಚು ಮಾಡಿರುವ ಸುದ್ಧಿಯೇ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಕೂಡಲಸಂಗಮದ ಪರಿಸ್ಥಿತಿ ಏನಾಗಿದೆಯೆಂದರೆ, ನಾವು 1995-96ರಲ್ಲಿ ಸರ್ಕಾರದಲ್ಲಿದ್ದೆವು, 1996ರಲ್ಲಿ ಮಾನ್ಯ ದೇಶಪಾಂಡೆಯವರು ಬೃಹತ್ ಕೈಗಾರಿಕೆ ಮಂತ್ರಿಗಳಾಗಿದ್ದರು, ನಾನು ತಮಗೆ ನೆನಪು ಮಾಡುತ್ತೇನೆ. ಅವತ್ತು 50 ಕೋಟಿ ರೂ.ಗಳನ್ನು ಸಂಪುಟದಲ್ಲಿಟ್ಟು, ಅದನ್ನು ಅಭಿವೃದ್ಧಿ .. ..

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅವರು ಯಾವತ್ತು ಬೃಹತ್ ಕೈಗಾರಿಕೆಯಲ್ಲಿರುತ್ತಾರೆ, ಬೇರೆ ಯಾವುದರಲ್ಲೂ ಇರುವುದೇ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರೆ, ಒಂದು ನಿಮಿಷ, ನಾನು ತಮಗೆ ನೆನಪು ಮಾಡುತ್ತೇನೆ, ಅವತ್ತು ಮಾಡಿದ್ದೀರಿ. ಇವತ್ತು ಕಸ ಹೊಡೆಯುವವರು ದಿಕ್ಕಿಲ್ಲ, ಅಂಥ ಕೆಟ್ಟ ಪರಿಸ್ಥಿತಿಯಾಗಿದೆ. ಅಲ್ಲಿ ಗಾರ್ಡನ್ ಎಲ್ಲಾ ಹಾಳಾದವು, 8,000 ಜನರು ಕುಳಿತು ಸಭೆ ಮಾಡುವಂಥ ಒಂದು ಸಭಾ ಮಂಟಪ ಮಾಡಿದ್ದೀರಿ. ಅದರ ಪರಿಸ್ಥಿತಿ ಏನಾಗಿದೆಯೆಂಬ ಬಗ್ಗೆ ಯಾರಾದರೂ ನೋಡಿದಿರಾ? ಅದು ಎಷ್ಟು ಹಾಳು ಬಿದ್ದಿದೆ, ಅದರ maintenance ಇಲ್ಲ. ಅಲ್ಲಿ ಕಾಟಾಚಾರಕ್ಕೆ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರವನ್ನು ಮಾಡಿದ್ದೀರಿ, ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರೆ, ಅಧ್ಯಕ್ಷರಾಗಿದ್ದಾರೆ. ಈ ಸರ್ಕಾರ ಬಂದು ನಾಲ್ಕು ವರ್ಷಗಳು ಆಯಿತು, ಅಲ್ಲಿಗೆ ಹೋಗಿ ಎಷ್ಟು ಸಭೆಗಳನ್ನು ಮಾಡಿದ್ದೀರಿ? ಅಲ್ಲಿ ಹೋಗಿ ಪರಿಸ್ಥಿತಿಯನ್ನು ನೋಡಿದ್ದೀರಾ? ಅಲ್ಲಿ ಜನರು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿಯಾಗಿದೆ. ಅದನ್ನು ನೋಡಿದರೆ ಬಹಳ ನೋವಾಗುತ್ತದೆ, ಇಂಥ ಪವಿತ್ರ ಸ್ಥಳಗಳನ್ನು ಅಭಿವೃದ್ಧಿಪಡಿಸಿದಾಗ, ಅದನ್ನು maintain ಮಾಡಬೇಕು. ಅದನ್ನು maintain ಮಾಡದೇ ಹೋದರೆ, ಮಾಡುವುದಕ್ಕೆ ಹೋಗಬೇಡಿ, ಬಂದ್ ಮಾಡಿ ಬಿಡಿ.

ಅಧ್ಯಕ್ಷರು: Ok, ತಾವು conclude ಮಾಡಿ ಸಾರ್.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ಬಹಳ ಕಳಕಳಿಯಿಂದ ಬಸವಣ್ಣನವರ ಐಕ್ಯ ಸ್ಥಳವಾದ ಕೂಡಲಸಂಗಮದ ಬಗ್ಗೆ ಆತಂಕ ಮತ್ತು ಇರತಕ್ಕಂಥ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಅದು ಮಾನ್ಯ ಮುಖ್ಯಮಂತ್ರಿಯವರಿಗೂ ಕೂಡ ಅರಿವಾಗಿದೆ. ಇವತ್ತು ಬಸವಣ್ಣನವರು ಐಕ್ಯವಾದ ಸ್ಥಳ ಹಾಳಾಗಬಾರದು ಮತ್ತು ಮುಂದೆ ಏನಾದರೂ ಬಸವಣ್ಣನವರು ಸಿಟ್ಟಾಗಬಾರದೆಂದು, ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಫೋಟೊಗಳನ್ನು ಹಾಕುವುದಕ್ಕೆ ಪ್ರಾರಂಭ ಮಾಡಿದರು. ಅದರ ಸಲುವಾಗಿಯೇ ಇವತ್ತು ಅವರಿಗೆ ಅಭಿನಂದನೆಯನ್ನು ಹೇಳುವುದಕ್ಕೆ, ಇಡೀ ಸಮಾಜದವರು ಕೂಡಿ, ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ತಾವು ಏಕೆ ಹೋಗಿಲ್ಲ, ಪೇಪರ್‌ನಲ್ಲಿ ವೀರಶೈವ ಮಹಾಸಭಾದಿಂದ ಎಂದು advertisement ನೋಡಿದೆ. ಮಾನ್ಯ ಜಗದೀಶ್ ಶೆಟ್ಟರ್ ವೀರಶೈವ ಹೌದೋ, ಅಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಆನಂದ್ ವಿಶ್ವನಾಥ ಚಂದ್ರಶೇಖರ ಮಾಮನಿಯವರು ವೀರಶೈವ ಹೌದೋ, ಅಲ್ಲವೊ ಗೊತ್ತಿಲ್ಲ. ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ವೀರಶೈವ ಹೌದೋ, ಅಲ್ಲವೊ ಗೊತ್ತಿಲ್ಲ. ಬಹುಶ: ಈ ಭಾಗದಲ್ಲಿರುವವರು ಯಾರು ವೀರಶೈವರಲ್ಲವೇನೋ? ನನಗೆ ಅನಿಸುತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಗೋವಿಂದ ಎಂ. ಕಾರಜೋಳರವರೆ, ಮಾನ್ಯ ಸ್ಪೀಕರ್‌ರವರು ಹೌದೋ, ಅಲ್ಲವೊ? ಅವರನ್ನು ಕರೆದಿದ್ದಾರೋ, ಇಲ್ಲವೊ ಎಂದು.. .. .

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ಅವರಿಗೆ ಎಷ್ಟು ಆತಂಕವಾಗಿದೆ, ಅವರನ್ನೆ ಕರೆದಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಆನಂದ್ ವಿಶ್ವನಾಥ ಚಂದ್ರಶೇಖರ ಮಾಮನಿ: ರಾಜ್ಯದಲ್ಲಿ ಇನ್ನು ಒಂದು ವರ್ಷದಲ್ಲಿ ಚುನಾವಣೆ ಬರುವುದರಿಂದ ಬಸವಣ್ಣನವರು, ಅಕ್ಕಮಹಾದೇವಿ, ಕೂಡಲಸಂಗಮ ಇವೆಲ್ಲಾ ಇವರಿಗೆ ನೆನಪಾಗುತ್ತಿದೆ.

(ಗೊಂದಲ)

ಶ್ರೀ ಜೆ.ಟಿ.ಪಾಟೀಲ್: ಮಾನ್ಯ ಗೋವಿಂದ ಎಂ. ಕಾರಜೋಳರವರೆ, ಈಗ ನಿಮಗೂ ದಲಿತರ ಮನೆ ನೆನಪಾಗಿದೆಯಲ್ಲಾ, ನಮಗೆ ನೀವು ಬಸವಣ್ಣನವರ ಬಗ್ಗೆ ಹೇಳುತ್ತಿದ್ದೀರಿ. ನಿಮಗೆ ಈಗ ಚುನಾವಣೆ ಬಂದಾಗ ದಲಿತರ ಮನೆ ನೆನಪಾಗಿದೆಯಲ್ಲಾ.. ..

ಶ್ರೀ ಗೋವಿಂದ ಎಂ. ಕಾರಜೋಳ: ನಾನು ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ): ಮಾನ್ಯ ಅಧ್ಯಕ್ಷರೆ, 12ನೇ ಶತಮಾನದಲ್ಲಿ ಬಸವಣ್ಣ ಜಾತಿ ರಹಿತ ಸಮಾಜವನ್ನು ಕಟ್ಟುವುದಕ್ಕೆ ಮಂತ್ರಿ ಸ್ಥಾನವನ್ನು ತ್ಯಾಗ ಮಾಡಿ, ಕೊನೆಗೆ ಪ್ರಾಣವನ್ನು ತ್ಯಾಗ ಮಾಡಿದರು. ಆದರೆ ಇವತ್ತು ಜಾತಿ ಸಂಘಟಿತ ಸಮಾಜವನ್ನು ಕಟ್ಟುವುದಕ್ಕೆ ನಾವು ಬಸವಣ್ಣನವರ ಫೋಟೋವನ್ನು ಹಾಕುತ್ತಿದ್ದೇವೆ. ಅದಕ್ಕೆ ಕವಿ ಒಂದು ಕಡೆ ಏನು ಹೇಳುತ್ತಾರೆಂದರೆ, "ನಿನ್ನ ಪಥವ ಮರೆತು, ನಿನ್ನ ಪದಕ್ಕೆ ಬಿದ್ದ ಅಂಧರು, ನಿನಗೆ ಗುಡಿಯ ಕಟ್ಟಿ, ತಾವು ಬಚ್ಚಲಲ್ಲೆ ನಿಂತರು" ಎಂದು ಹೇಳಿದ್ದಾರೆ. ಆ ರೀತಿ ಇವತ್ತು ನಮ್ಮ ಪರಿಸ್ಥಿತಿಯಾಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ವೀರಶೈವ ಎಂಬ ಅರ್ಥ, ಲಿಂಗಾಯಿತ ಎನ್ನುವ ಅರ್ಥ ಬಹಳ ವಿಶಾಲವಾದದ್ದು. ಸಮುದ್ರ ಎಷ್ಟು ಆಳ, ಅಗಲವಿದೆ, ಅಷ್ಟು ಆಳ ಅಗಲವಿರುವಂಥದ್ದು. ವೀರಶೈವ ಎಂದರೆ ಯಾರು? ನಾಲ್ಕು ಜಾತಿಯವರು, ಮೂರೇ ಜಾತಿಯವರೇ ಅಲ್ಲ. ವೀರಶೈವರೆಂದರೆ ಹಡಪದ ಅಪ್ಪಣ್ಣನವರು ವೀರಶೈವ, ಕುಂಬಾರ ಗುಂಡಯ್ಯನವರು ವೀರಶೈವ, ಮಾದರ ಚನ್ನಯ್ಯನವರು ವೀರಶೈವ, ಸೊನ್ನಲಗಿ ಸಿದ್ಧರಾಮರು ವೀರಶೈವ, ಸಮಗಾರ ಅರಳಯ್ಯರು ವೀರಶೈವ, ಡೋರ ಕಕ್ಕಯ್ಯರು ವೀರಶೈವ, ಐದಕ್ಕಿ ಮಾರಯ್ಯರು ವೀರಶೈವ, ಸೂಳೆ ಸಂಕವ್ವ ವೀರಶೈವ, ಸತ್ಯಕ್ಕ ವೀರಶೈವ, ಅಕ್ಕಮಹಾದೇವಿ ವೀರಶೈವ, ಮುಕ್ತಾಯಕ್ಕ ವೀರಶೈವ, ಇವರೆಲ್ಲರೂ ವೀರಶೈವರಲ್ಲವೇ? ನೀವು ವೀರಶೈವರೆಂದು ಹೇಳಿ, ಏನೋ ಒಂದು frame ಹಾಕಿಕೊಳ್ಳುತ್ತೀರಿ.

14-06-2017

ತಾವು ದಯಮಾಡಿ ಅದನ್ನು ಮಾಡಬೇಡಿ. ಈಗ ಏನು ಮಾಡುತ್ತಿದ್ದೀರಿ, ಇದನ್ನು ವೀರಶೈವ ಮಹಾಸಭಾದವರಿಗೂ ಹೇಳಬಯಸುತ್ತೇನೆ. ತಾವು ಎಲ್ಲೊ ಒಂದು ಕಡೆ ತಪ್ಪುತ್ತಿದ್ದೀರಿ. ದಯಮಾಡಿ ಅದನ್ನು ಮಾಡಬೇಡಿ. ವಿಶ್ವ ಗುರು ಬಸವಣ್ಣನವರು 12ನೇ ಶತಮಾನದಲ್ಲಿ 770 ಜನ ಗಣನೀಯರನ್ನು ಅನುಭವ ಮಂಟಪದಲ್ಲಿ ಏನು ಇಟ್ಟಿದ್ದರು. ಅಲ್ಲಮಪ್ರಭು ದೇವರ ಅಧ್ಯಕ್ಷತೆಯಲ್ಲಿ ಇಟ್ಟಿದ್ದರು, ಇವರು ಸಹ ವೀರಶೈವರು, ಅವರೆಲ್ಲರನ್ನು ಕರೆದು ನೀವು ಮಾಡಿದಿರೆಂದರೆ, ಅದಕ್ಕೆ ಒಂದು ಅರ್ಥ ಬರುತ್ತದೆ, ಇಲ್ಲದಿದ್ದರೆ ಮಾನ್ಯ ದೇಶಪಾಂಡೆಯವರೆ, ಇದಕ್ಕೆ ಯಾವ ಅರ್ಥವೂ ಬರುವುದಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಅದೊಂದು ಖಾಸಗಿ ಕಾರ್ಯಕ್ರಮ, ಅದರ ಮೇಲೆ comment ಮಾಡುವುದಕ್ಕೆ ಬರುವುದಿಲ್ಲ. ಅದು ಒಂದು ಸಂಸ್ಥೆ, ಅದರ ಬಗ್ಗೆ ನಾನು comment ಮಾಡುವುದಕ್ಕೆ ಬರುವುದಿಲ್ಲ. ಅವರು ಯಾರನ್ನು ಕರೆಯಬೇಕು, ಮಾನ್ಯ ಜಗದೀಶ್ ಶೆಟ್ಟರ್‌ರವರನ್ನು ಕರೆದಿರಬಹುದು.

ಶ್ರೀ ಗೋವಿಂದ ಎಂ.ಕಾರಜೋಳ: ತಮ್ಮನ್ನು ಕರೆಯಬೇಕು, ನೀವೇ ಮೂಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನಿಮ್ಮನ್ನು ಏಕೆ ಕರೆದಿಲ್ಲ? ಬಸವಣ್ಣನವರನ್ನು ಕಳುಹಿಸಿ ಕೊಟ್ಟವರೆ ನೀವು, ಮೂಲ ವಂಶಸ್ಥರೆ ನೀವು, ನಿಮ್ಮನ್ನು ಕರೆಯಲಿಲ್ಲವೆಂದರೆ ನಿಮಗೆ ದು:ಖವಿಲ್ಲವೇ?

ಶ್ರೀ ಆರ್.ವಿ.ದೇಶಪಾಂಡೆ: ಈಗ ಆ ಸಂಸ್ಥೆ ಯಾರನ್ನು ಕರೆದಿದ್ದಾರೆ, ಅದು ಅವರಿಗೆ ಬಿಟ್ಟದ್ದು. ಇಂಥವರನ್ನು ಕರೆಯಬೇಕೆಂದು ಹೇಳುವುದಕ್ಕೆ ನನಗೂ ಅಧಿಕಾರವಿಲ್ಲ, ನಿಮಗೂ ಇಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರನ್ನು ಕರೆದಿರಬಹುದು, ಅವರು ಅಲ್ಲಿಗೆ ಹೋಗಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೆ, conclude ಮಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ದೇಶಪಾಂಡೆಯವರು ಕೇಳಿಸಿಕೊಳ್ಳಲಿಲ್ಲವೆಂದು ಕಾಣಿಸುತ್ತದೆ. ತಮ್ಮನ್ನು ಕರೆದಿಲ್ಲ, ನಮಗೆ ಹೋಗುವುದಕ್ಕೆ ಬರುವುದಿಲ್ಲವೆಂದು ಹೇಳುವುದಕ್ಕೆ ಹೋಗಬೇಡಿ. ನೀವು ಮೂಲ ವಂಶಸ್ಥರು. ನೀವು ಬಸವಣ್ಣನವರನ್ನು ಕಳುಹಿಸಿ ಕೊಟ್ಟವರು. ನೀವೇ ಹೋಗಿಲ್ಲವೆಂದರೆ ಹೇಗೆ?

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

## 14-06-2017

ಶ್ರೀ ಆರ್.ವಿ.ದೇಶಪಾಂಡೆ: ಕೆಲವು ಸ್ನೇಹಿತರು ಭೇಟಿಯಾಗಿದ್ದರು. ಆಗ ಅವರು ಹೇಳುವಾಗ ನಾನು ನಮ್ಮನ್ನು ಕರೆದಿಲ್ಲವೆಂದು ಕೇಳಿದೆ.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ಈಗ ಜಾತಿಗೊಂದು ಮಠ, ಜಾತಿಗೊಬ್ಬ ಸ್ವಾಮಿಗಳು, ಈಗ ಇನ್ನೊಂದು ಏನಾಗಿದೆಯೆಂದರೆ, ಇವತ್ತು ಗೊತ್ತಿರುವಂಥದ್ದು ಸ್ವಲ್ಪ, ಜಾತಿ ಸಮೀಕ್ಷೆ ಬಂದ ಮೇಲೆ ಇನ್ನು ಎಷ್ಟು ಜಾತಿಗಳು ಹೊರಗೆ ಬರುತ್ತದೊ, ಇನ್ನು ಎಷ್ಟು ಮಠಗಳು ಹುಟ್ಟುತ್ತದೊ, ಇನ್ನು ಎಷ್ಟು ಜನ ಸ್ವಾಮಿಗಳು ಹುಟ್ಟುತ್ತಾರೋ, ಇನ್ನು ಎಷ್ಟು ಜಾತಿ ಸಂಘಟನೆಗಳು ಪ್ರಾರಂಭವಾಗುತ್ತದೊ, ಗೊತ್ತಿಲ್ಲ. ನಿಜವಾಗಿ ಬಸವಣ್ಣ ಜಾತಿಯನ್ನು ತೊಡದು ಹಾಕಬೇಕೆಂದು ತನ್ನ ಪ್ರಾಣ ತ್ಯಾಗ ಮಾಡುತ್ತಾರೆ. ಆದರೆ ಇವತ್ತು ದುರ್ದೈವ ಏನಾಗಿದೆಯೆಂದರೆ, ನಾವು ಜಾತಿ ಹೆಸರಿನ ಮೇಲೆ ರಾಜಕಾರಣ ಮಾಡಿಕೊಂಡು, ಬಸವಣ್ಣನವರ ಹೆಸರು ಹೇಳಿಕೊಂಡು ರಾಜಕಾರಣ ಏನು ಮಾಡುತ್ತಿದ್ದೇವೆ. ಇದು ನಿಜವಾಗಿಯೂ ಕೂಡ ಎಲ್ಲರಿಗೂ ಶೋಭೆ ತರುವಂಥದ್ದಲ್ಲ, ಏಕೆಂದರೆ ನಾವು ಇವತ್ತು ನೋಡುತ್ತಿದ್ದೇವೆ. ಪ್ರತಿಯೊಂದು ವಿಷಯದಲ್ಲೂ ಏನೇ ಕೊಡಬೇಕಾಗಿದ್ದರೂ ಅವನು ಯಾವ ಜಾತಿ ಎಂದು ನೋಡಿಯೇ ಕೊಡುವುದು. ನಾವು ಆ ವ್ಯವಸ್ಥೆಯಿಂದ ಹೊರಗೆ ಬರಬೇಕಾದರೆ, ನಾವು ಆಡಳಿತದಲ್ಲಿ ಶರಣರ ತತ್ವಗಳನ್ನು ಅಳವಡಿಸಿಕೊಂಡರೆ ಸಾಧ್ಯ. ನಾವು ಬಸವಣ್ಣನವರ ಫೋಟೋ ಹಾಕಿದರೆ ಸಾಧ್ಯವಾಗುವುದಿಲ್ಲ.

ಶ್ರೀ ಆನಂದ್ ವಿಶ್ವನಾಥ ಚಂದ್ರಶೇಖರ ಮಾಮನಿ: ಮಾನ್ಯ ಅಧ್ಯಕ್ಷರೆ, ಈಗ ಹಿರಿಯ ಸದಸ್ಯರಾದ ಮಾನ್ಯ ಜೆ.ಟಿ.ಪಾಟೀಲ್‌ರವರು ಬಿ.ಜೆ.ಪಿ.ಯವರು ಅಂಬೇಡ್ಕರ್ ಮನೆಗೆ, ದಲಿತರ ಮನೆಗೆ ಹೋಗುತ್ತಾರೆಂದು ಹೇಳಿದರು. ಇವತ್ತು ಅವರ 125 ವರ್ಷಗಳು ಪರಿವರ್ತನಾ ದಿನವನ್ನು ಆಚರಿಸುತ್ತಿದ್ದೇವೆ. ದೆಹಲಿಯಲ್ಲಿ ಅಂಬೇಡ್ಕರ್‌ರವರ ಅಂತ್ಯಕ್ರಿಯೆ ಮಾಡುವುದು, ಸಮಾಧಿ ಮಾಡುವಂಥದ್ದು, ಅಭಿವೃದ್ಧಿ ಮಾಡುವಂಥದ್ದು, ಅವರ ಫೋಟೊವನ್ನು ಹಾಕುವಂಥದ್ದು, ಅವರ ನೆನಪು ಮಾಡಿಕೊಳ್ಳುವ ಸಲುವಾಗಿ ಇವತ್ತು ನಮ್ಮ ನಾಯಕರು ದಲಿತರ ಮನೆಗೆ ಹೋಗುವುದು.

(ಗೊಂದಲ)

ಶ್ರೀ ಜೆ.ಟಿ.ಪಾಟೀಲ್: ಮಾನ್ಯ ಆನಂದ್ ವಿಶ್ವನಾಥ ಚಂದ್ರಶೇಖರ ಮಾಮನಿಯವರೆ, ಚುನಾವಣೆ ಬರುತ್ತಿದೆ..

14-06-2017

(ಗೊಂದಲ)

ಅಧ್ಯಕ್ಷರು: ಸಾಕು ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈಗ ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದನೆಯನ್ನು ಮಾಡುವಂಥದ್ದು. ಎಲ್ಲಾ ಕಡೆಗಳಲ್ಲೂ ಬಸವಣ್ಣನವರ ಭಾವಚಿತ್ರವನ್ನು ಹಾಕುವ ವಿಷಯವಾಗಿ ಮಾಡಿರುವುದು. ಇದು ಒಂದು ಒಳ್ಳೆಯ ವಿಷಯವಾಗಿದ್ದು, ನಾನು ಅದನ್ನು ಸ್ವಾಗತಿಸುತ್ತೇನೆ, ಅಭಿನಂದಿಸುತ್ತೇನೆ. ಆದರೆ ನನ್ನದು ಒಂದು ಅರ್ಥವಾಗದೇ ಇರುವ ಪ್ರಶ್ನೆ ಏನಿದೆಯೆಂದರೆ, ಅಖಿಲ ಭಾರತ ವೀರಶೈವ ಮಹಾಸಭಾದವರು ಅವರು ಕೇವಲ ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಇದ್ದಾರೋ, ಬೇರೆ ಎಲ್ಲಾ ಕಡೆಗಳಲ್ಲೂ ಇದ್ದಾರೋ?

ಅಧ್ಯಕ್ಷರು: ಈ ಪ್ರಶ್ನೆಯನ್ನು ಯಾರಿಗೆ ಕೇಳುತ್ತಿದ್ದೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈ ಜಾಹೀರಾತನ್ನು ನೋಡಿದರೆ.. ..

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಈ ವಿಷಯ ಸದನದಲ್ಲಿ ಚರ್ಚೆಯಾಗುವ ವಿಷಯವಲ್ಲ. ತಾವು ಚರ್ಚೆ ಮಾಡಿದ್ದು ಸರಿಯಲ್ಲ, It is all not go on record also.

(ಗೊಂದಲ)

ಅಧ್ಯಕ್ಷರು: ಹೌದು, ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಹೇಳಿ.

ಶ್ರೀ ಆರ್.ವಿ.ದೇಶಪಾಂಡೆ: ನಮಗೆ ಏನು ಸಂಬಂಧವಿದೆ ಹೇಳಿ. ಅವರು ಯಾರನ್ನು ಕರೆಯಬೇಕೆಂಬುದನ್ನು ಅವರು ನೋಡಿಕೊಳ್ಳುತ್ತಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ಹೆಸರು ವೀರಶೈವ ಸಮಾಜದ್ದು ಇದೆ. ಈ ವೀರಶೈವ ಹೆಸರನ್ನು ಬಳಸಿಕೊಂಡು .. ..

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಜಗದೀಶ್ ಶೆಟ್ಟರ್‌ರವರು, ಒಂದು ಸಾರಿ ವೀರಶೈವ ಸಮಾಜದವರು ಸಭೆ ಕರೆದಾಗ ಅವರು ಕೇಳಿದ್ದರು, ನನಗಲ್ಲ. ಅಲ್ಲಿ ಸಮಾಜದಲ್ಲಿ, ಇಲ್ಲ ಅಲ್ಲ. ಇದು ಇಲ್ಲಿ ಸದನದಲ್ಲಿ ಚರ್ಚೆಯಾಗುವ ವಿಷಯವಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಇದು ಚರ್ಚೆಯಾಗುವ ವಿಷಯವಲ್ಲವೆಂಬುದನ್ನು ನನಗೂ ಅರ್ಥವಾಗುತ್ತದೆ.

ಅಧ್ಯಕ್ಷರು: ನಿಮ್ಮ ಪ್ರಶ್ನೆಗೆ ಇಲ್ಲಿ ಯಾರು ಉತ್ತರ ಹೇಳುವವರು ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಆದರೆ ಫೋಟೊ ನೋಡಿದರೆ, ಸರ್ಕಾರದಲ್ಲಿ ಇರುವವರೆ ಈ ಕಾರ್ಯಕ್ರಮವನ್ನು ತಮ್ಮ ಹೆಸರಿನಲ್ಲಿ ಮಾಡುವುದಕ್ಕೆ ಆಗುವುದಿಲ್ಲವೆಂದು, ಈ ಹೆಸರು ಬಳಸಿಕೊಂಡು ಮಾಡುತ್ತಿದ್ದಾರೆನೋ, ಎಂದು ಅನುಮಾನ ಬರುವ ಹಾಗೆ ಆಗಿದೆ.

ಶ್ರೀ ಆರ್.ವಿ.ದೇಶಪಾಂಡೆ: ಅದು ವೀರಶೈವ ಸಮಾಜಕ್ಕೆ ಬಿಟ್ಟಂಥ ಪ್ರಶ್ನೆ, ಮಹಾಸಭಾಕ್ಕೆ ಬಿಟ್ಟಿದ್ದು. ಅದರಲ್ಲಿ ನಮ್ಮ ಹಸ್ತಕ್ಷೇಪ ಏನು ಇಲ್ಲ.

ಶ್ರೀ ಕಿಮ್ಮನೆ ರತ್ನಾಕರ: ಮಾನ್ಯ ವಿರೋಧ ಪಕ್ಷ ನಾಯಕರೆ, ಒಂದು ನಿಮಿಷ. ಬಸವಣ್ಣನವರ ಬಗ್ಗೆ ಮತ್ತು ದಲಿತರ ಸಮಾಜದ ಬಗ್ಗೆ ಮಾನ್ಯ ಗೋವಿಂದ ಎಂ. ಕಾರಜೋಳರವರು ಮಾತನಾಡಿದರು. ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಈ ಘಟನೆಗಳು ಸಮಾಜದಲ್ಲಿ ನಡೆದುಕೊಂಡು ಬರುತ್ತಿದೆ. ಇದು ಒಬ್ಬರು ಮಾಡಿದರು, ಅವರು ಮಾಡಿದರೆಂಬ ಪ್ರಶ್ನೆಯಲ್ಲ. ಇವತ್ತು ಅಂಬೇಡ್ಕರ್ ಜಯಂತಿಯನ್ನು ಇಡೀ ರಾಜ್ಯದಾದ್ಯಂತ, ರಾಷ್ಟ್ರದಾದ್ಯಂತ ಎಲ್ಲರೂ ಆಚರಣೆ ಮಾಡಿದರು, ಯಾರ್‍ಯಾರು ಆಚರಣೆ ಮಾಡಿದರು. ಮನಸ್ಮೃತಿಯನ್ನು 1927ನೇ ಇಸವಿಯಲ್ಲಿ ಡಿಸೆಂಬರ್ 12ನೇ ತಾರೀಖಿನಂದು ಬಹಿರಂಗವಾಗಿ ಸುಟ್ಟು ಹಾಕಿದರು.

ಮುಂದು.. ..

14-06-2017/4.50/32/GG/PS

ಶ್ರೀ ಕಿಮ್ಮನೆ ರತ್ನಾಕರ್ (ಮುಂದುವರೆದುದು): ಅದಾದ ಮೇಲೆ 1956ನೇ ಇಸವಿಯಲ್ಲಿ ಅವರು ಹಿಂದೂ ಧರ್ಮದ ಶ್ರೇಣೀಕೃತ ಸಮಾಜವನ್ನು ಖಂಡಿಸಿ, ಹಿಂದೂ ಸಮಾಜವನ್ನು ತ್ಯಜಿಸಿ ಬೌದ್ಧ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಧರ್ಮಕ್ಕೆ ಸೇರಿದರು. ಯಾರು ಹಿಂದೂ ರಾಷ್ಟ್ರವನ್ನು ಕಟ್ಟುತ್ತೇವೆ ಎಂದು ಹೊರಟಿದ್ದಾರೆ, ಅವರು ಇವತ್ತು ಅಂಬೇಡ್ಕರ್ ಜಯಂತಿಯ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ಅದನ್ನು ಯಾವ ರೀತಿ ಸಮರ್ಥನೆ ಮಾಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀ ಅರವಿಂದ ಲಿಂಬಾವಳಿ: ಅವರ ಅಂತ್ಯಕ್ರಿಯೆಯಾದಾಗ ಇವರು ಅದಕ್ಕೆ ದೆಹಲಿಯಲ್ಲಿ ಜಾಗವನ್ನು ಕೊಡಲಿಲ್ಲ.

ಅಧ್ಯಕ್ಷರು: ಈ ಚರ್ಚೆಯೆಲ್ಲ ಈಗ ಅಪ್ರಸ್ತುತ. ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದೆ. ಅಪ್ರಸ್ತುತವಾದಂಥ ಚರ್ಚೆ ಬೇಡ. ವಿರೋಧ ಪಕ್ಷದ ನಾಯಕರೆ ನೀವು ಚರ್ಚೆಯನ್ನು conclude ಮಾಡಿಬಿಡಿ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್: ಅವರು ನಡೆದ ಘಟನೆಯನ್ನು ಹೇಳಿದ್ದಾರೆ. ಅವರು ಯಾರನ್ನೂ ಕುರಿತಾಗಿ ಮಾತನಾಡಿಲ್ಲ.

ಶ್ರೀ ಕಿಮ್ಮನೆ ರತ್ನಾಕರ್: ನಾನು ಯಾವುದನ್ನೂ ಹೇಳಲಿಲ್ಲ, ಇತಿಹಾಸ ಏನಿದೆ ಅದನ್ನು ಹೇಳಿದೆ, ಇದು ನನ್ನ ಪ್ರತಿಪಾದನೆ ಅಲ್ಲ. ಇದು ಅಂಬೇಡ್ಕರ್‌ರವರದೇ ಪುಸ್ತಕ, ಅವರ ಪುಸ್ತಕದಲ್ಲಿರುವುದನ್ನು ನಾನು ಪ್ರಸ್ತಾಪ ಮಾಡಿದೆ. ನಿಮಗೆ ಮಾಹಿತಿ ಕೊಟ್ಟೆ ಅಷ್ಟೇ.

ಶ್ರೀ ಅರವಿಂದ ಲಿಂಬಾವಳಿ: ಇರುವ ವಸ್ತುಸ್ಥಿತಿಯನ್ನೇ ನಾನೂ ಹೇಳಿರುವುದು. ಅವರನ್ನು ಚುನಾವಣೆಗೆ ನಿಲ್ಲಿಸಿ ಅವರನ್ನು ಸೋಲಿಸಿದವರು ಕಾಂಗ್ರೆಸ್ಸಿನವರು. ಅವರಿಗೆ 'ಭಾರತ ರತ್ನ' ಸಿಕ್ಕಿದ್ದು ಯಾವಾಗ? ಮಹಾಪುರುಷರು, ವಿದೇಶೀ ಗಣ್ಯರು ಅಲ್ಲಿಗೆ ಹೋಗಬಾರದು ಎಂದು ಹೇಳಿ ಅವರ ಅಂತ್ಯಕ್ರಿಯೆಗೆ ದೆಹಲಿಯಲ್ಲಿ ಜಾಗ ಕೊಡದೇ ಮುಂಬೈಗೆ ಕಳುಹಿಸಿದರು.

ಅಧ್ಯಕ್ಷರು: ಮಾಹಿತಿ ತೆಗೆದುಕೊಳ್ಳುವಂಥ ವಿಷಯಗಳನ್ನು ಇಲ್ಲಿ ಮಂಡನೆ ಮಾಡುವುದರಿಂದ ಏನು ಉಪಯೋಗ? ಅದನ್ನು ಬಿಟ್ಟುಬಿಡಿ, ಎಲ್ಲರೂ ಕುಳಿತುಕೊಳ್ಳಿ. ಜಗದೀಶ್ ಶೆಟ್ಟರ್‌ರವರೇ ನೀವು ಶುರು ಮಾಡಿ. ನಿಮ್ಮ ಪ್ರತಿಪಾದನೆಯನ್ನು ನೀವು ಮಾಡಿ, ಅವರು ಮಾಡಬೇಕಾದುದನ್ನು ಅವರು ಮಾಡುತ್ತಾರೆ. ಅದನ್ನು ಜನ ನೋಡಿ, ಜನರೇ ನಿರ್ಣಯ ಮಾಡುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಚರ್ಚೆ ನಡೆಯುತ್ತಿದೆ. ವಿಷಯಾಂತರ ಮಾಡಿ ಎಲ್ಲೆಲ್ಲಿಗೋ ಹೋಗುತ್ತಿದ್ದಾರೆ.

14-06-2017

ಅಧ್ಯಕ್ಷರು: ಈ ಎಲ್ಲ ಚರ್ಚೆ ಅನಾವಶ್ಯಕ. ಯಾವುದೂ ರೆಕಾರ್ಡ್‌ಗೆ ಹೋಗುವ ಹಾಗಿಲ್ಲ, ಎಲ್ಲವೂ ಅಪ್ರಸ್ತುತ. ಶೆಟ್ಟರ್‌ರವರೇ ನೀವು conclude ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹಲವಾರು ವಿಚಾರಗಳನ್ನು ಹೇಳಿದ್ದೇನೆ, ಕೊನೆಯದಾಗಿ ನಾನು ಎರಡು ವಿಚಾರಗಳನ್ನು ಹೇಳಿ conclude ಮಾಡುತ್ತೇನೆ. ಅಕ್ಕಮಹಾದೇವಿಯವರ ಹೆಸರನ್ನಿಟ್ಟಿದ್ದು, ಬಸವಣ್ಣನವರ ಫೋಟೋ ಹಾಕಿದ್ದು ಮುಂತಾದವುಗಳನ್ನು ನಾನು ಆಗಲೇ ಹೇಳಿದೆ. ಇಲ್ಲಿಯವರೆಗೆ ಅಹಿಂದ ಮುಖ್ಯಮಂತ್ರಿ ಎಂದುಕೊಂಡಿದ್ದ ಅವರಿಗೆ ಈಗ ಬೇರೆ ಕಡೆ ನೆನಪಾಗಿದೆ, ಅದನ್ನು ಅವರು ಮಾಡಲಿ. ಆದರೆ ನಿಜವಾಗಿ ಏನು ಮಾಡಬೇಕಾಗಿತ್ತೋ, ಬಜೆಟ್‌ನಲ್ಲಿ ಏನು ಘೋಷಣೆ ಮಾಡಿದರೋ ಅದನ್ನು ಮಾಡಲಿಲ್ಲ. ಕೂಡಲಸಂಗಮದಲ್ಲಿ ಬಸವ ಅಂತರರಾಷ್ಟ್ರೀಯ ಮ್ಯೂಸಿಯಂಗೆ 367 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದರು. ಅಕ್ಷರಧಾಮದ ರೀತಿಯಲ್ಲಿ ಇದನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದರು. ದಿನಾಂಕ 13-07-2016ಕ್ಕೆ 44.93 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲು ಆಡಳಿತಾತ್ಮಕ ಅನುಮೋದನೆ ಸಿಕ್ಕಿತು. ಬಸವ ಅಂತರರಾಷ್ಟ್ರೀಯ ಮ್ಯೂಸಿಯಂ ಮಾಡಲು ಈ ಸರ್ಕಾರಕ್ಕೆ ಎಷ್ಟು ಕಾಳಜಿ ಇದೆ ಎಂದರೆ 44 ಕೋಟಿ ರೂಪಾಯಿಗಳಲ್ಲಿ ಇಲ್ಲಿಯವರೆಗೆ ಒಂದು ಪೈಸೆಯೂ ರಿಲೀಸ್ ಆಗಿಲ್ಲ, ಇಲ್ಲಿಯವರೆಗೆ ಒಂದು ಪೈಸೆಯನ್ನೂ ಖರ್ಚು ಮಾಡಿಲ್ಲ. ಯಾವ ರೀತಿ ಸರ್ಕಾರದ ನಿರ್ಲಕ್ಷ್ಯ ಇದೆ ಎನ್ನುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ಅದೇ ರೀತಿ, ಯಡಿಯೂರು ಸಿದ್ದಲಿಂಗೇಶ್ವರದ ದೇವಸ್ಥಾನದ ದುರಸ್ತಿ ಕಾರ್ಯವನ್ನು ಸುಮಾರು ಮೂರು ವರ್ಷಗಳಿಂದ ಮಾಡಲಿಲ್ಲ. ಗದಗ್‌ನಲ್ಲಿ ಬಸವ ಅಂತರರಾಷ್ಟ್ರೀಯ ಮ್ಯೂಸಿಯಂನ ಬಾಗಿಲು ಬಂದ್ ಮಾಡಿ ಒಂದು ವರ್ಷದ ಮೇಲಾಯಿತು. ಅದನ್ನೂ ಸಹ ನಿರ್ಲಕ್ಷ್ಯ ಮಾಡಲಾಗಿದೆ. ಯಾವ ಆದ್ಯತೆ ಮೇಲೆ ಈ ಸರ್ಕಾರ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತೋ ಅದನ್ನು ಮಾಡಲಿಲ್ಲ.

ಇದರ ಜೊತೆಗೆ, ಜಾತಿ ಸಮೀಕ್ಷೆ ಎಂದು ಮಾಡಿ ಸುಮಾರು ಒಂದು ವರ್ಷವಾಯಿತು. ಅದಕ್ಕೆ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು. ಒಂದು ತಿಂಗಳು ಸರ್ವೆ ಮಾಡಿದರು. ಎಲ್ಲವೂ ಆಯಿತು. ಆದರೆ ಇವತ್ತಿಗೂ ಜಾತಿ ಸಮೀಕ್ಷೆಯ ವರದಿ ಹೊರಗಡೆ ಬರುತ್ತಿಲ್ಲ, ಏಕೆ? ಜಾತಿಜಾತಿಗಳಲ್ಲಿ ಸಂಘರ್ಷ, ವರ್ಗ ಕಲಹ ಇವುಗಳನ್ನೆಲ್ಲ ಮಾಡುವಂಥಾದ್ದು ಆಗುತ್ತಿದೆ. ಜಾತಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸಮೀಕ್ಷೆ ಮಾಡಿದಿರಲ್ಲ ಅದನ್ನು disclose ಮಾಡಿ ಎಂದು ನಾವು ಆವತ್ತೇ ಹೇಳಿದೆವು. ಆದರೆ ಇವತ್ತಿಗೂ ಅದು ಹೊರಗೆ ಬರುತ್ತಿಲ್ಲ. ಪತ್ರಿಕೆಗಳ ಮುಖಾಂತರ ಆ ಜಾತಿಯವರು ಇಷ್ಟು ಜನರಿದ್ದಾರೆ, ಈ ಜಾತಿಯವರು ಇಷ್ಟು ಜನರಿದ್ದಾರೆ, ಅವರದು majority ಇದೆ, ಈ ರೀತಿಯ discussion ನಡೆದಿದೆ. ಜಾತಿ, ವರ್ಗ ಕಲಹ, ಸಂಘರ್ಷಗಳಿಗೆ ಈಡು ಮಾಡುವಂಥ ಕೆಲಸ ಆಗುತ್ತಿದೆ. ಹಲವಾರು ವಿಚಾರಗಳ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡಿದ್ದೇನೆ. ಅದು ನೀರಾವರಿ ಇರಬಹುದು, ಮತ್ತೊಂದು ವಿಚಾರ ಇರಬಹುದು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ವಿರೋಧ ಪಕ್ಷದ ನಾಯಕರೆ, ಒಂದು ನಿಮಿಷ, ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್‌ಅನ್ನು ಕೊಡುತ್ತಿದ್ದೀರಿ. ದಯವಿಟ್ಟು ಅದನ್ನು ಶಾಲೆಯಲ್ಲಿ ಎಲ್ಲ ಬಡ ಮಕ್ಕಳಿಗೂ ಅನ್ವಯವಾಗುವ ಹಾಗೆ ಮಾಡಿ. ಅದರಲ್ಲಿ differentiate ಮಾಡುವಂಥ ಕೆಲಸವನ್ನು ಮಾಡಬೇಡಿ.

ಶ್ರೀ ಜಗದೀಶ್ ಶೆಟ್ಟರ್: ನಾನು ಒಂದು ಮಾತನ್ನು ಹೇಳುತ್ತೇನೆ. ದೇಶಪಾಂಡೆಯವರೆ ನೀವೂ ಇಲ್ಲಿದ್ದೀರಿ, ಉಳಿದ ಸಚಿವರೂ ಇದ್ದಾರೆ. ಎಸ್.ಸಿ./ಎಸ್.ಟಿ. ಜನಾಂಗದ ಉದ್ಧಾರವಾಗಬೇಕು, ಅವರ ಅಭಿವೃದ್ಧಿಯಾಗಬೇಕು ಎನ್ನುವ ಕಳಕಳಿ ಎಲ್ಲರಿಗೂ ಇದೆ. ಅವರಿಗೆ ನೀವು ಎಲ್ಲ ರೀತಿಯ ಸೌಲಭ್ಯಗಳನ್ನು ಕೊಡಿ. ಇದಕ್ಕೆ ಎಷ್ಟು ಹಣ ಖರ್ಚು ಮಾಡುತ್ತೀರೋ ಮಾಡಿ. ಆದರೆ ಚಿಕ್ಕಮಕ್ಕಳಲ್ಲಿ ದಯವಿಟ್ಟು differentiate ಮಾಡಲು ಹೋಗಬೇಡಿ. ಅವರಿಗೆ ಉಚಿತ ಪಾಸ್ ನೀಡುವುದು, ಇವರಿಗೆ ಮತ್ತೊಂದು ನೀಡುವುದು, ಒಬ್ಬರಿಗೆ ವಾರದಲ್ಲಿ ಎರಡು ದಿವಸ ಮೊಟ್ಟೆ ಕೊಡುವುದು, ಮತ್ತೊಬ್ಬರಿಗೆ ಐದು ದಿವಸ ಮೊಟ್ಟೆ ಕೊಡುವುದು ಈ ರೀತಿಯೆಲ್ಲ differentiate ಮಾಡುವುದಕ್ಕೆ ದಯವಿಟ್ಟು ಹೋಗಬೇಡಿ. ಅದರಿಂದ ಆ ಮಕ್ಕಳ ಮನಸ್ಸು ಕೆಟ್ಟು ಹೋಗುತ್ತದೆ. ಮಕ್ಕಳು ಎಂದರೆ ದೇವರಿದ್ದ ಹಾಗೆ. ಅವರಲ್ಲೇ differentiate ಮಾಡಿ ಆತ ಎಸ್.ಸಿ., ಈತ ಮುಂದುವರೆದ ವರ್ಗದವ ಎಂದು ಮಾಡಬೇಡಿ. ಎಸ್.ಸಿ. ಎಂದರೆ ಏನು ಎಂದರೆ ಅವರಿಗೆ ಗೊತ್ತಿರುವುದಿಲ್ಲ, ಮುಂದುವರೆದ ವರ್ಗದ ಹುಡುಗ ಎಂದರೆ ಏನು ಎಂದು ಅವರಿಗೆ ಗೊತ್ತಿರುವುದಿಲ್ಲ. ಜಾತಿಜಾತಿಗಳಲ್ಲಿ ಸಂಘರ್ಷ ಮಾಡುವಂಥಾದ್ದನ್ನು ಸಣ್ಣ ಬೇರಿನ ಹಂತದಲ್ಲೇ ಮೊಳಕೆ ಮಾಡುವುದನ್ನು ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ. ನೀವಾದರೂ ಮುಖ್ಯಮಂತ್ರಿಗಳಿಗೆ ಬುದ್ಧಿ ಹೇಳಿ. ಈ ಕಡೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಕ್ಕಮಹಾದೇವಿಯ ಹೆಸರಿಡುವುದು, ಇನ್ನೊಂದು ಕಡೆ ಬಸವಣ್ಣನವರ ಹೆಸರಿಡುವುದು ಆಗುತ್ತಿದೆ. ಬಸವಣ್ಣನವರು ಜಾತ್ಯಾತೀತರಾಗಿದ್ದರು. ಆದರೆ ಅದರ ಪರಿಪಾಲನೆ ಮಾತ್ರ ಇನ್ನೂ ಆಗುತ್ತಿಲ್ಲ. ಇಂಥ differentiate ಮಾಡದೇ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಇವತ್ತು ನಾವು ಹಲವಾರು ಸಲಹೆ, ಸೂಚನೆಗಳನ್ನೇನು ಕೊಟ್ಟಿದ್ದೇವೆ ಅವುಗಳಿಗೆ ಸ್ಪಷ್ಟವಾದಂಥ ಉತ್ತರ ಸರ್ಕಾರದಿಂದ ಬರಬೇಕು. ಅದನ್ನು ಹೇಳದೇ, ನಾವು ಇಷ್ಟು ಬಜೆಟ್ ಮಾಡಿದ್ದೇವೆ, ಅದಕ್ಕೆ ನೀವು ಒಪ್ಪಿಗೆ ಕೊಡಿ ಎಂದರೆ ಅದಕ್ಕೆ ಅರ್ಥವಿಲ್ಲ. ಅದಕ್ಕಾಗಿ ಸರ್ಕಾರದಿಂದ ಸರಿಯಾದಂಥ ಉತ್ತರ ಬರಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ಧನ್ಯವಾದಗಳನ್ನು ಅರ್ಪಣೆ ಮಾಡುತ್ತೇನೆ.

ಅಧ್ಯಕ್ಷರು: ಬೇಡಿಕೆಗಳ ಮೇಲಿನ ಚರ್ಚೆಯನ್ನು ನಾಳೆಗೆ ಮುಂದುವರೆಸೋಣ.

ಶ್ರೀ ಎ.ಎಸ್. ಪಟೀಲ್ (ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ನಾನು ಐದು ನಿಮಿಷಗಳಲ್ಲಿ ಮಾತನಾಡುತ್ತೇನೆ.

ಅಧ್ಯಕ್ಷರು: ಆಯಿತು, ಐದು ನಿಮಿಷಗಳಲ್ಲಿ ನೀವು ಮುಗಿಸಬೇಕು.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) (ದೇವರ ಹಿಪ್ಪರಗಿ): ಮಾನ್ಯ ಅಧ್ಯಕ್ಷರೆ, ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲಿಗೆ ತಮಗೆ ಅಭಿನಂದನೆಗಳು. ನಾನು ಎರಡು ಇಲಾಖೆಗಳ ಬಗ್ಗೆ ಮಾತ್ರ ಮಾತನಾಡಿ ಐದು ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಬೆಳಗಾವಿಯಲ್ಲಿ ತಾವು ಅಧಿವೇಶನವನ್ನು ಕರೆಯುತ್ತೀರಿ. ಉತ್ತರ ಕರ್ನಾಟಕ ಭಾಗದಲ್ಲಿರುವ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು ಎನ್ನುವ ದೃಷ್ಟಿಯಿಂದಲೇ ತಾವು ಬೆಳಗಾವಿಯಲ್ಲಿ ಅಧಿವೇಶನವನ್ನು ಕರೆಯುತ್ತೀರಿ. ಆ ಪೀಠದಲ್ಲಿ ಕಾಗೋಡು ತಿಮ್ಮಪ್ಪ ಸಾಹೇಬರು ಕುಳಿತಿದ್ದರು. ಬೆಳಗಾವಿ ಅಧಿವೇಶನದಲ್ಲಿ ನಾನು ಭೌಗೋಳಿಕವಾಗಿ ಅಸಮತೋಲನ ಏನಿದೆ ಎನ್ನುವುದನ್ನು ದಾಖಲಾತಿಗಳ ಸಮೇತ ಸರ್ಕಾರದ ಮುಂದಿಡತಕ್ಕಂಥ ಪ್ರಯತ್ನ ಮಾಡಿದೆ. ಅದಕ್ಕೆ ಮುಖ್ಯಮಂತ್ರಿಗಳಿಂದ ಉತ್ತರವೇ ಬರಲಿಲ್ಲ. ಇತ್ತೀಚೆಗೆ ಯಮನೂರು ಭಾಗದಲ್ಲಿರುವಂಥ ರೈತರ ಮೇಲೆ ಲಾಠಿ ಚಾರ್ಜ್ ಮಾಡಿದಾಗ ಮೂರು ಜನ ರೈತರು ಸತ್ತಿದ್ದರು. ಅದರ ಮೇಲೆ ನಿಯಮ 69ರಡಿಯಲ್ಲಿ ಇಲ್ಲಿ ಚರ್ಚೆ ಮಾಡಿದ್ದೇವೆ. ಅದಕ್ಕೂ ಸರ್ಕಾರದಿಂದ ಉತ್ತರವಿಲ್ಲ. ಅಧ್ಯಕ್ಷರೆ, ಇವತ್ತು ನಾನು ಎರಡು ಇಲಾಖೆಗಳ ದಾಖಲಾತಿಗಳನ್ನು ತಮ್ಮ ಮುಂದೆ



ತಿದ್ದುಪಡಿಯಾಗದ uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಇಡುತ್ತೇನೆ. ಈ ಸರ್ಕಾರ ಅಷ್ಟಕ್ಕೆ ಉತ್ತರ ಕೊಟ್ಟರೆ ಸಾಕು. ಎರಡು ಪ್ರಮುಖವಾಗಿರತಕ್ಕಂಥ ಇಲಾಖೆಗಳೆಂದರೆ ಒಂದು ಆರೋಗ್ಯ ಇಲಾಖೆ, ಇನ್ನೊಂದು ಶಿಕ್ಷಣ ಇಲಾಖೆ. ಸರ್ಕಾರ ಕೊಟ್ಟಿರುವಂಥ ದಾಖಲಾತಿಗಳಲ್ಲಿರುವ ವ್ಯತ್ಯಾಸಗಳನ್ನು ಹೇಳುತ್ತೇನೆ. ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆಯಲ್ಲಿಯೇ ದಾಖಲಾತಿಗಳನ್ನು ಕೊಡುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಶಿಶು ಮರಣ, ಬಾಣಂತಿ ಮರಣ ಮತ್ತು ಜನಸಂಖ್ಯೆ ನಿಯಂತ್ರಣ ಇವೆಲ್ಲವನ್ನು ತಡೆದು ಗ್ರಾಮೀಣ ಪ್ರದೇಶದಲ್ಲಿರುವ ಪ್ರತಿಯೊಬ್ಬ ವ್ಯಕ್ತಿ ಆರೋಗ್ಯವಂತನಾಗಿ ಬದುಕಬೇಕು ಎನ್ನುವ ದೃಷ್ಟಿಯಿಂದ ಆರೋಗ್ಯ ಇಲಾಖೆ ಸರ್ವರನ್ನು ಸಮಾನವಾಗಿ ಕಾಣುವ ದೃಷ್ಟಿಯಿಂದ ಕೆಲಸ ಮಾಡಬೇಕು. ರಮೇಶ್ ಕುಮಾರ್ ಸಾಹೇಬರು ಈಗ ಇಲ್ಲಿ ಇಲ್ಲ, ಅವರು ಇದ್ದಿದ್ದರೆ ನನಗೆ ಖುಷಿಯಾಗುತ್ತಿತ್ತು. ಅವರ ಇಲಾಖೆಯ ಅಧಿಕಾರಿಗಳು ಇದ್ದಾರೋ, ಇಲ್ಲವೋ ನನಗೆ ಗೊತ್ತಿಲ್ಲ. ನಾನು ಬರೀ ಗ್ರಾಮೀಣ ಪ್ರದೇಶದಷ್ಟೇ ತೆಗೆದುಕೊಳ್ಳುತ್ತೇನೆ. 2011-12ರ ಜನಗಣತಿ ಪ್ರಕಾರ ಕರ್ನಾಟಕದ ಗ್ರಾಮೀಣ ಪ್ರದೇಶದ ಜನಸಂಖ್ಯೆ 3,75,52,000. ಅದರಲ್ಲಿ ನಾಲ್ಕು ವಿಭಾಗಗಳು ಬರುತ್ತವೆ. ಒಂದು ಗುಲ್ಬರ್ಗ ವಿಭಾಗ, ಎರಡನೆಯದು ಹೈದರಾಬಾದ್ ಕರ್ನಾಟಕ-ಮುಂಬೈ ಕರ್ನಾಟಕ ವಿಭಾಗ, ಮೂರನೆಯದು ಮೈಸೂರು ವಿಭಾಗ ಮತ್ತು ನಾಲ್ಕನೆಯದು ಬೆಂಗಳೂರು ವಿಭಾಗ. ಆರೋಗ್ಯ ಉಪ ಕೇಂದ್ರಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ನೀತಿ ಏನಿದೆ ಎಂದರೆ 5,000 ಜನಸಂಖ್ಯೆಗೆ ಒಂದು ಆರೋಗ್ಯ ಉಪ ಕೇಂದ್ರ ಇರಬೇಕು ಎಂದು ಇದೆ. ಕರ್ನಾಟಕ ರಾಜ್ಯ ಸರ್ಕಾರ 4,233 ಜನರಿಗೆ ಒಂದು ಆರೋಗ್ಯ ಉಪ ಕೇಂದ್ರವನ್ನು ಮಾಡಬೇಕೆಂದು ಮಾಡಿದೆ, ಬಹಳ ಸಂತೋಷ, ನಾವು ರಾಷ್ಟ್ರೀಯ ನೀತಿಗಿಂತಲೂ ಮುಂದುವರೆದಿದ್ದೇವೆ. ಆರೋಗ್ಯ ಉಪ ಕೇಂದ್ರಗಳ ಮಾಹಿತಿಯನ್ನು ವಿಭಾಗಾವಾರು ನೋಡಿದರೆ, ವಿಭಾಗಾವಾರು ಹೇಳಬೇಕೆಂದರೆ ನೀವು ನನಗೆ ಅಷ್ಟು ಟೈಂ ಕೊಟ್ಟಿಲ್ಲ, ನಾನು ದಯಮಾಡಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಮುಂದಿನ ಬೆಳಗಾವಿ ಅಧಿವೇಶನದಲ್ಲಿ ಸವಿಸ್ತಾರವಾಗಿ ಇಲಾಖಾವಾರು, ಪ್ರತಿಯೊಂದು ಇಲಾಖೆಯಲ್ಲಿ ಉತ್ತರ ಕರ್ನಾಟಕಕ್ಕೆ ಮತ್ತು ವಿಭಾಗಾವಾರು ಏನೇನು ತಾರತಮ್ಯವಾಗಿದೆ ಎನ್ನುವುದನ್ನು ಚರ್ಚೆಗೆ ತೆಗೆದುಕೊಳ್ಳಿ. ಈಗ ಇಲ್ಲಿ ನಾನು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ದಾಖಲಾತಿಯನ್ನಷ್ಟೇ ನಿಮ್ಮ ಮುಂದೆ ಇಡುತ್ತೇನೆ.

(ಮುಂದುವರೆದಿದೆ)

14-06-2017

ವಿಸ:14-06-2017 5-00 (33) ಎಂಕೆಕೆ:ವಿಜಿ

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ)(ಮುಂದು)

ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಅಷ್ಟೇ ತಮ್ಮ ಮುಂದಿಡುತ್ತೇನೆ. ಆರೋಗ್ಯ ಉಪಕೇಂದ್ರಗಳು ನಮ್ಮಲ್ಲಿ 3583 ಇವೆ. ದಕ್ಷಿಣ ಕರ್ನಾಟಕದಲ್ಲಿ 5288 ಇವೆ. ದಕ್ಷಿಣ ಕರ್ನಾಟಕದಲ್ಲಿ ಮಾಡಬಾರದೆಂಬುದು ನಮ್ಮ ಉದ್ದೇಶವಲ್ಲ. 4233 ರಾಜ್ಯದ ಸರಾಸರಿ ಜನಸಂಖ್ಯೆ ಆಧಾರದ ಮೇಲೆ ನೀವು ಮಾಡುವುದಾದರೆ 1,550 ಉಪ ಕೇಂದ್ರಗಳು ಈ ಕಡೆ ಜಾಸ್ತಿ ಇವೆ, ಆ ಕಡೆ ಕಡಿಮೆ ಇವೆ. ಇದನ್ನು ಯಾರು ಸರಿಪಡಿಸಬೇಕು? ಇದು ಒಟ್ಟಾರೆ ಕರ್ನಾಟಕದ ಸಮಗ್ರ ಆರೋಗ್ಯ ನೀತಿಯೇ? ಎರಡನೆಯದಾಗಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಷಯಕ್ಕೆ ಬಂದರೆ, ಉತ್ತರ ಕರ್ನಾಟಕದಲ್ಲಿ 873 ಇವೆ. ಜನಸಂಖ್ಯೆ ಏನಾದರೂ ವ್ಯತ್ಯಾಸವಿದೆಯೇ ಎಂದು ಇವರು ಕೇಳಬಹುದು. ಉತ್ತರ ಕರ್ನಾಟಕದ ಗ್ರಾಮೀಣ ಜನಸಂಖ್ಯೆ ಸುಮಾರು 1 ಕೋಟಿ 85 ಲಕ್ಷ ಇದೆ. ದಕ್ಷಿಣ ಕರ್ನಾಟಕದ ಗ್ರಾಮೀಣ ಜನಸಂಖ್ಯೆ ಸುಮಾರು 1 ಕೋಟಿ 90 ಲಕ್ಷ ಇದೆ. ಆದರೆ, ವ್ಯತ್ಯಾಸಗಳೆಷ್ಟು ಇವೆ ಎಂದರೆ, ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರ ಉತ್ತರ ಕರ್ನಾಟಕದಲ್ಲಿ 873 ಇವೆ. ದಕ್ಷಿಣ ಕರ್ನಾಟಕದಲ್ಲಿ 1,482 ಇವೆ. ಅದೇ ರೀತಿಯಾಗಿ, ಸಮುದಾಯ ಆರೋಗ್ಯ ಕೇಂದ್ರಗಳನ್ನು ತೆಗೆದುಕೊಂಡರೆ, ಉತ್ತರ ಕರ್ನಾಟಕದಲ್ಲಿ 165 ಬಂದರೆ, ಇಲ್ಲಿ 185 ಬರುತ್ತದೆ. ಹಾಸಿಗೆಗಳ ವ್ಯತ್ಯಾಸ, ಮೂಲಭೂತ ಸೌಕರ್ಯಗಳನ್ನು ನೋಡಿದರೆ ನಿಜವಾಗಿಯೂ ಕೂಡ ಬಹಳ ನೋವಾಗುತ್ತದೆ. ಏಕೆಂದರೆ, ಒಟ್ಟಾರೆ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡತಕ್ಕಂಥ ಸರ್ಕಾರಗಳು, ನಂಜುಂಡಪ್ಪ ವರದಿ ಬಗ್ಗೆ ಹೇಳಿದರು. ಯಾವುದೋ ಒಂದು ಧಾರವಾಡದ ಸಂಸ್ಥೆಗೆ ಕೊಟ್ಟಿದ್ದೇವೆ, ಅವರು ಸಮೀಕ್ಷೆ ಮಾಡುತ್ತಾರೆ, ಅದು ಬಂದಮೇಲೆ ಸರ್ಕಾರ ಅದಕ್ಕೆ ಹೆಚ್ಚು ಹಣ ಕೊಡುತ್ತದೆ, ನಂಜುಂಡಪ್ಪ ವರದಿಯಲ್ಲಿ 3 ಸಾವಿರ ಕೋಟಿ ರೂಪಾಯಿ ಕೊಡುತ್ತೇವೆ ಎಂದರು. ಇನ್ನೂ ಅವರು 800 ಕೋಟಿ ರೂಪಾಯಿ ಕೂಡ ಖರ್ಚು ಮಾಡಿಲ್ಲ. Not even 25%. ನಾವು ಒಟ್ಟಾರೆ ಕನ್ನಡಿಗರ ಬಗ್ಗೆ ಮಾತನಾಡುತ್ತೇವೆ. ಈ ವ್ಯತ್ಯಾಸವನ್ನು ಯಾವಾಗ



ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸರಿಪಡಿಸುತ್ತಾರೆ? ಇದನ್ನು ಯಾರು ಸರಿಪಡಿಸಬೇಕು? ಇಲ್ಲಿ ಅಧಿಕಾರಿಗಳು ಕುಳಿತಿದ್ದಾರೆ. ಅಲ್ಲೆಲ್ಲ ಹೋರಾಟ ನಡೆಯುತ್ತವೆ. ಪತ್ರಿಕೆಯಲ್ಲಿ ಉತ್ತರ ಕರ್ನಾಟಕದ್ದೇ separate ಬರುತ್ತದೆ. Head of the Departments ಎಲ್ಲ ಇಲ್ಲೇ ಕುಳಿತಿರುತ್ತಾರೆ. Secretary, Under Secretary, ಎಲ್ಲ Head of the Departments Bangalore ನಲ್ಲೇ ಇರುತ್ತಾರೆ. ಅಲ್ಲೇನು ನಡೆದಿದೆ ಎಂದು ಯಾರಿಗೂ ಗೊತ್ತಿಲ್ಲ. ಇವರ್‍ಯಾರೂ ಬೆಂಗಳೂರು ಬಿಟ್ಟು ಹೋಗುವುದೂ ಇಲ್ಲ. ಹೋಗಲಿ ಉಸ್ತುವಾರಿ ಸಚಿವರುಗಳು ಹೋಗಿ ಅಲ್ಲಿ ಸಭೆ ಮಾಡುವುದಿಲ್ಲವೆಂದ ಮೇಲೆ. . . .

ಅಧ್ಯಕ್ಷರು: ಆರೋಗ್ಯ ಇಲಾಖೆ ಮೇಲೆ difference ಹೇಳಿದಿರಿ, ಇನ್ನೊಂದು ಇಲಾಖೆ ಬಗ್ಗೆ ಹೇಳಿ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ): ಬಿಟ್ಟುಬಿಡಿ, ಏನೂ ಹೇಳುವುದು ಬೇಡವೆಂದರೆ. . .

ಅಧ್ಯಕ್ಷರು: ಇಲ್ಲ, ಆರೋಗ್ಯ ಇಲಾಖೆ ಬಗ್ಗೆ ಹೇಳಿದಿರಿ. ಶಿಕ್ಷಣ ಇಲಾಖೆ ಬಗ್ಗೆ ಹೇಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಶಿಕ್ಷಣ ಇಲಾಖೆಯದ್ದು ತೆಗೆದುಕೊಂಡರೆ ಬಹಳ ಆಶ್ಚರ್ಯ ಎನಿಸುತ್ತದೆ. ನಾನು ಮೊನ್ನೆ High School, PUC results ನೋಡುತ್ತಿದ್ದೆ. ಇಲ್ಲಿಯ ಮಕ್ಕಳು ಏಕೆ ಚೆನ್ನಾಗಿ ಹೆಚ್ಚು ಬುದ್ಧಿವಂತರಿದ್ದಾರೆ? ನಮ್ಮವರು ಏಕೆ ಕಡಿಮೆ ಇದ್ದಾರೆಂದು ನೋಡುತ್ತಿದ್ದೆ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತದ ಬಗ್ಗೆ ಹೇಳುತ್ತೇನೆ. ಇಲ್ಲಿ ನಾರಾಯಣಸ್ವಾಮಿಯವರು ಇಲ್ಲ. ಅವರು ಮೊನ್ನೆ 10 ಸಾವಿರ ಶಾಲೆಗಳನ್ನು ಮುಚ್ಚಿದ್ದಾರೆಂದು ಬಹಳ ಚೆನ್ನಾಗಿ ಮಾತನಾಡಿದರು. ಶಿಕ್ಷಕ ಮತ್ತು ವಿದ್ಯಾರ್ಥಿ ಅನುಪಾತ ಬಹಳ ಪ್ರಮುಖವಾಗಿದೆ. ಒಂದು ಭಾಗ ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕಾಗಿದ್ದರೆ ಅನುಪಾತ ಬಹಳ ಮುಖ್ಯ. ನಮ್ಮ ಕಡೆಗೆ ಹೋದರೆ, ಸರಾಸರಿ 25 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕನಂತೆ ಇವತ್ತು ಮಂಜೂರಾತಿ ಇರತಕ್ಕಂಥದ್ದು. ಇಲ್ಲಿ ಬಂದರೆ, 9 ಮಕ್ಕಳಿಗೆ ಒಬ್ಬ ಶಿಕ್ಷಕ ಇದ್ದಾರೆ. ಇದು ನಾನು ಹೇಳತಕ್ಕಂಥದ್ದಲ್ಲ. 2011-12ರಲ್ಲಿ ಸರ್ವ ಶಿಕ್ಷಣ ಅಭಿಯಾನ ವಾರ್ಷಿಕ ವರದಿ, ಕರ್ನಾಟಕ ಸರ್ಕಾರ, ಇದರಲ್ಲಿದೆ. ಇದನ್ನು ಯಾರು ಸರಿಪಡಿಸಬೇಕು? ಯಾವಾಗ ಸರಿಪಡಿಸುತ್ತೀರಿ? ಅಲ್ಲಿ ಬೀದರ್ ಕೊನೆಯ ಸ್ಥಾನದಲ್ಲಿದೆ. TV ಯಲ್ಲಿ ಚರ್ಚೆ ನಡೆಯುತ್ತಿತ್ತು. ಬೀದರ್‌ಗೇಕೆ ಕೊನೆಯ



ತಿದ್ದುಪಡಿಯಾಗದ uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಸ್ಥಾನ? ಯಾದಗಿರಿಯ ಪ್ರಾಥಮಿಕ ಶಾಲೆಯಲ್ಲಿ ಶೇ.30 ಮಕ್ಕಳಿಗೆ ಒಬ್ಬ ಶಿಕ್ಷಕ ಇದ್ದಾರೆ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶೇ. 38.25 ಇದೆ. District wise ಮಾಹಿತಿ ಇದೆ. ದಕ್ಷಿಣ ಕರ್ನಾಟಕದ್ದು ತೆಗೆದುಕೊಂಡರೆ, 9 ಮಕ್ಕಳಿಗೆ ಒಬ್ಬರು ಶಿಕ್ಷಕರು ಇದ್ದಾರೆ. ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಏಕೆಂದರೆ, ನಮಗೆ ಗೊತ್ತು. ಉತ್ತರ ಕರ್ನಾಟಕದ ಜನ ನಾವು. ಏಕೆಂದರೆ, ನಿಮ್ಮನ್ನು ರಾಜಕೀಯವಾಗಿಯಾಗಲಿ, ಪ್ರಭಾವ ಬೆಳೆಸುವಷ್ಟು ಶಕ್ತಿವಂತರು ನಾವಿರಲಿಕ್ಕಿಲ್ಲ. ಆದರೆ, atleast ಮಾನವೀಯತೆ ದೃಷ್ಟಿಯಿಂದ humanity is above the law of the land, ಒಬ್ಬ ಮನುಷ್ಯ ಮನುಷ್ಯನಾಗಿ ಬದುಕಬೇಕಾಗಿದ್ದರೆ, ಮಾನವೀಯತೆಯಾದರೂ ಇರಬೇಕೋ, ಬೇಡವೋ? ಒಂದು ಮಗುವಿಗೆ ಶಿಕ್ಷಣ ಕೊಡುವುದರಲ್ಲೂ ವ್ಯತ್ಯಾಸ ಮಾಡುತ್ತೀರಿ. ಒಬ್ಬ ಬಡವನಿಗೆ ಆರೋಗ್ಯ ಕೊಡುವುದರಲ್ಲಿ ವ್ಯತ್ಯಾಸ ಮಾಡುತ್ತೀರಿ. ಈ ರೀತಿ ಅನೇಕ ಇಲಾಖೆಗಳಿವೆ. ನಾನು ವಿನಂತಿ ಮಾಡುತ್ತೇನೆ. ದಯಮಾಡಿ, ಮುಂದಿನ ಸಾರಿ ಬೆಳಗಾವಿ ಅಧಿವೇಶನದಲ್ಲಿ ನಮಗೆ ಕನಿಷ್ಠ 3-4 ಗಂಟೆ ಅವಕಾಶ ಕೊಡಬೇಕು. ನಾನು ದಾಖಲಾತಿ ಇಲ್ಲದೇ ಮಾತನಾಡುವುದಿಲ್ಲ. ದಾಖಲಾತಿ ಇಟ್ಟುಕೊಂಡೇ ಮಾತನಾಡುತ್ತೇನೆ.

ಅಧ್ಯಕ್ಷರು: ಕೊಡೋಣ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ): ಆದರೆ, ವಾಸ್ತವ ಏನಾಗಿದೆ ಎಂದರೆ, ಯಾರು ವಾಸ್ತವಿಕ ಸತ್ಯಗಳನ್ನು ಮಾತನಾಡುತ್ತಾರೆ, ಇಲ್ಲಿ ಅವಕಾಶಗಳು ಬಹಳ ಕಡಿಮೆಯಾಗಿರತಕ್ಕಂಥದ್ದು. ಯಾರು ಸತ್ಯ ಮಾತನಾಡುತ್ತಾರೆ, ಅವರನ್ನು ಅಧಿಕಾರದಲ್ಲಿರುವವರು ತುಳಿಯುವ ಕೆಲಸ ಮಾಡುತ್ತಾರೆ. ನಾನು ಸತ್ಯವನ್ನು ಮಾತನಾಡಿದ್ದಕ್ಕೇ ಇವತ್ತು ನನ್ನನ್ನು ರಾಜಕೀಯವಾಗಿ ತುಳಿಯತಕ್ಕಂಥ ಕೆಲಸವಾಗಿರುವುದು. ಅದಕ್ಕೆ ವಿನಂತಿ ಮಾಡುತ್ತೇನೆ. ಉತ್ತರ ಕರ್ನಾಟಕದ ಜನರಿಗೆ ನ್ಯಾಯ ಸಿಗಬೇಕು. ಸುವರ್ಣ ಸೌಧ ಕಟ್ಟಿದರು. ಕುಮಾರಸ್ವಾಮಿಯವರು ಇಲ್ಲೇ ಇದ್ದಾರೆ. ಅದನ್ನು ಯಾವ ಉದ್ದೇಶಕ್ಕೆ ಕಟ್ಟಿದರು? ಅಲ್ಲಿನ ಜನರಿಗೆ ನ್ಯಾಯ ಕೊಡಬೇಕೆಂದು ಸುವರ್ಣಸೌಧ ಕಟ್ಟಿದರು. ಆದರೆ, ಸುವರ್ಣಸೌಧ ಏನಾಗಿದೆ? ಈ ಸರ್ಕಾರ ಬಂದಮೇಲೆ ಒಂದು ಇಲಾಖೆಯನ್ನಾದರೂ. . . ಇಲ್ಲಿರುವ ಕೆಲವು ಇಲಾಖೆಗಳನ್ನಾದರೂ ಅಲ್ಲಿಗೆ ತೆಗೆದುಕೊಂಡು ಹೋಗಿ, ಅಲ್ಲಿ ನಡೆಸಬೇಕೋ,

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬೇಡವೋ? ತಾವು ಅಲ್ಲೊಂದು ನಮ್ಮ ಶಾಸಕರ ಭವನ ಕಟ್ಟಬೇಕೆಂದು ಹೋದಿರಿ. ಆಗಲಿಲ್ಲ. ಸರ್ಕಾರ ಒಪ್ಪಿಗೆ ಕೊಡಲಿಲ್ಲ. ತಮ್ಮ ಕಾಲದಲ್ಲಿ ಆಗಲಿ ಎಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು: ಇನ್ನೂ ಅವಧಿ ಇದೆ, ಆಗುತ್ತದೆ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ): ಅದೇನೋ 7-8 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆಂದು ಇವತ್ತು TV ಯಲ್ಲಿ ಬರುತ್ತಿದೆ. MLA ಗಳು 2 ಲಕ್ಷ, 3 ಲಕ್ಷ ರೂ,. ಖರ್ಚು ಮಾಡಿದ್ದಾರೆಂದು ಬರುತ್ತಿದೆ. ಏಕೆ ನಾವು ಇದೆಲ್ಲ ಅಪವಾದ ಹೊರಿಸಿಕೊಳ್ಳಬೇಕು? ಏನು ಖರ್ಚು ಮಾಡಿದ್ದೇವೆ, ಆ ಹಣವನ್ನು ತೆಗೆದುಕೊಂಡು ಹೋಗಿ ಅಲ್ಲಿ ಶಾಸಕರ ಭವನ ಕಟ್ಟಿದರೆ atleast ಅದು ಒಳ್ಳೆಯದಾದರೂ ಆಗುತ್ತಿತ್ತು. ಆಮೇಲೆ, ಕೊನೆಯದಾಗಿ ನಾನು ವಿನಂತಿ ಮಾಡುತ್ತೇನೆ. ಬೆಳಗಾವಿಯನ್ನು ಕರ್ನಾಟಕ ರಾಜ್ಯದ 2ನೇ ರಾಜಧಾನಿಯನ್ನಾಗಿ ಏಕೆ ಘೋಷಣೆ ಮಾಡಬಾರದು? ಮಾಡಿ. ಬೆಳಗಾವಿಯನ್ನು develop ಮಾಡಿ. 2ನೇ ರಾಜಧಾನಿ ಎಂದಾಗಲಿ. ಉತ್ತರ ಕರ್ನಾಟಕದ ಜನರಿಗೆ ನ್ಯಾಯ ಸಿಗಲಿ. ಅದನ್ನು ಯಾವುದಕ್ಕೂ ಮಾಡಲಿಕ್ಕೆ ತಯಾರಿಲ್ಲ. ಕೇವಲ ಒಂದು ಹೆಸರು ಇಟ್ಟುಬಿಟ್ಟು ಅಥವಾ ಯಾವುದೋ ಒಂದು ಫೋಟೋ ಹಾಕಿಕೊಂಡ ತಕ್ಷಣ ನಮ್ಮ ಜನರನ್ನು ಒಲಿಸಲಿಕ್ಕಾಗುವುದಿಲ್ಲ. ನ್ಯಾಯಯುತವಾಗಿ ನಮ್ಮ ಜನರ ಬೇಡಿಕೆಗಳಿಗೆ ಸ್ಪಂದನೆ ಮಾಡಬೇಕಾಗುತ್ತದೆ. ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಮೊನ್ನೆ ಯಮನೂರು ರೈತರಮೇಲೆ ಏನು ಘಟನೆಯಾಗಿದೆ, ಕೂಡಲೇ ಒಬ್ಬೊಬ್ಬ ರೈತನಿಗೆ ಕನಿಷ್ಠ 15 ಲಕ್ಷ ರೂಪಾಯಿ ಪರಿಹಾರ ಕೊಡಬೇಕು. ಬಹಳ ಹಗುರವಾಗಿ ಈ ಸರ್ಕಾರ ರೈತರ ಬಗ್ಗೆ ತೆಗೆದುಕೊಳ್ಳುತ್ತಿರತಕ್ಕಂಥದ್ದು ನಿಜವಾಗಿಯೂ ಕೂಡ ನೋವಿನ ಸಂಗತಿ. ನಾನು ವಿನಂತಿ ಮಾಡುತ್ತೇನೆ. ಯಮನೂರು ವಿಷಯದಲ್ಲಿರಬಹುದು. ಕೊನೆಯದಾಗಿ, ಒಂದು ಹೇಳಿ ಮುಗಿಸುತ್ತೇನೆ. ಬಸವನ ಬಾಗೇವಾಡಿಯ ಕೂಡಿಗೆಯಲ್ಲಿ. . . ನಮ್ಮ ಡಿ.ಕೆ. ಶಿವಕುಮಾರ್‌ರವರು ಇಲ್ಲೇ ಇದ್ದಾರೆ. ಕೂಡಿಗೆಯಲ್ಲಿ ರೈತರು ಹೋರಾಟ ಮಾಡಿ, ಒಬ್ಬ ರೈತನ ಮೇಲೆ ಗುಂಡು ಹಾಕಿದ ಸಂದರ್ಭದಲ್ಲಿ 291 ಜನ ರೈತರ ಮೇಲೆ Section 307, attempt to murder case ಹಾಕಿದಾಗ, ನಮ್ಮ ಮಂತ್ರಿಗಳು ಅಲ್ಲಿಗೆ ಸ್ವತ: ಹೋಗಿ, ನಾವು ನಿಮ್ಮ ಮೇಲಿರತಕ್ಕಂಥ ಎಲ್ಲ ಕೇಸ್ ವಾಪಸ್ ತೆಗೆದುಕೊಳ್ಳುತ್ತೇವೆ, ದಯಮಾಡಿ, ನೀವು strike ಅನ್ನು ವಾಪಸ್ ತೆಗೆದುಕೊಳ್ಳಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಎಂದು ರೈತರನ್ನು ಕೇಳಿಕೊಂಡು ಬಂದಿದ್ದಾರೆ. ಆದರೆ, ಇವತ್ತಿನವರೆಗೆ 291 ಜನ ರೈತರ ಮೇಲಿರುವ ಒಂದು ಕೇಸ್ ಅನ್ನೂ ವಾಪಸ್ ತೆಗೆದುಕೊಳ್ಳಲಿಲ್ಲ. ಯಾರು ಗುಂಡು ಹೊಡೆಸಿಕೊಂಡಿದ್ದ, ಅವನ hospital ಖರ್ಚಿಗೆ 1 ಲಕ್ಷ ರೂ.ಕೊಟ್ಟರು. ಅವನು 6 ಲಕ್ಷ ರೂ. ಖರ್ಚು ಮಾಡಿಕೊಂಡು, 5 ಲಕ್ಷ ರೂ. ಸಾಲ ಮಾಡಿಕೊಂಡ. ಅವನಿಗೆ ಇಂದಿಗೂ ಒಂದು ರೂಪಾಯಿ ಸಹ ಪರಿಹಾರ ಕೊಟ್ಟಿಲ್ಲ. ಕೇಳಿದರೆ, ಸರ್ಕಾರದ ವಿರುದ್ಧ ಮಾತನಾಡುತ್ತಾರೆನ್ನುತ್ತಾರೆ. ಅಂದರೆ ಸತ್ಯ ಮಾತನಾಡುವುದು ಬೇಡವೇ? ನ್ಯಾಯಯುತವಾಗಿ, ರೈತರಿಗೋಸ್ಕರ ಆಗಿರತಕ್ಕಂಥ ಅನ್ಯಾಯಗಳನ್ನು ನಾವು ಹೇಳದೇ ಹೋದರೆ, ನಾವೆಲ್ಲ ವಿಧಾನಸಭೆಗೇಕೆ ಬರಬೇಕು?

ಅಧ್ಯಕ್ಷರು: Conclude ಮಾಡಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ವಿನಂತಿ ಮಾಡುತ್ತೇನೆ. ತಮ್ಮ ಮೂಲಕ ಸರ್ಕಾರಕ್ಕೆ ಕೇಳುತ್ತೇನೆ. ನಾವು ಈಗಲಾದರೂ ಕೂಡ ಮಾನವೀಯತೆ ದೃಷ್ಟಿಯಿಂದ ನಡೆದುಕೊಳ್ಳುವುದನ್ನು ಕಲಿಯಬೇಕಾಗುತ್ತದೆ. ಮನುಷ್ಯತ್ವಕ್ಕೆ ಬೆಲೆ ಕೊಡಬೇಕಾಗುತ್ತದೆ. ಯಾರಿಗೆ ನೋವಾಗಿದೆ, ಅವರಿಗೆ ನಾವು ಸಹಾಯ ಮಾಡಬೇಕೆಂದು ಕೇಳಿಕೊಂಡು, ನನ್ನ ಮಾತು ಮುಗಿಸುತ್ತೇನೆ. ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.

ಅಧ್ಯಕ್ಷರು: ಈಗ ಬೇಡಿಕೆಗಳ ಮೇಲಿನ ಚರ್ಚೆಯನ್ನು . . .

ಶ್ರೀ ಎನ್.ಹೆಚ್. ಕೋನರೆಡ್ಡಿ: ಉತ್ತರ ಕೊಡುವುದಕ್ಕೆ ಹೇಳಿ ಸಾರ್.

ಅಧ್ಯಕ್ಷರು: ಕೊಡಿಸ್ತೋಣ. ಈಗಲೇ ಕೊಡಬೇಕೇನು?

(ಗೊಂದಲ)

(ಮುಂದು)

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017 : 5-10 [34] kkd:vg 1

**ನಿಯಮ 69ರ ಮೇರೆಗೆ ಚರ್ಚೆ**

ವಿಷಯ: **ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಗರ ಶಾಖೆಯಲ್ಲಿ ನಡೆದಿರುವ ಅಕ್ರಮ ಹಾಗೂ ಅವ್ಯವಹಾರಗಳ ಪ್ರಕರಣಗಳನ್ನು ಸಿ.ಬಿ.ಐ.ಗೆ ವಹಿಸುವುದು**

14-06-2017

**ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.**

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ಇದೇ ವಿಷಯದ ಬಗ್ಗೆ ನಿನ್ನೆ ತಮಗೆ ವಿನಂತಿ ಮಾಡಿಕೊಂಡಾಗ ಮಾನ್ಯ ಮುಖ್ಯಮಂತ್ರಿಗಳು ಇದ್ದಂಥ ಸಂದರ್ಭದಲ್ಲಿ ಇದನ್ನು ಚರ್ಚೆ ಮಾಡೋಣ, ಬಹಳ ಮಹತ್ವವಾಗಿರತಕ್ಕಂಥ ವಿಚಾರ.

ಅಧ್ಯಕ್ಷರು: ಆಯಿತು, ಇದೇ ನಿಯಮದ ಅಡಿಯಲ್ಲಿ ಬೇರೆ ವಿಷಯಗಳು ಚರ್ಚೆಗೆ ಇವೆ. ಅವುಗಳನ್ನು ತೆಗೆದುಕೊಳ್ಳಬೇಕೇ, ಅಥವಾ ಇದರ ಬಗ್ಗೆ ಮಾತನಾಡುತ್ತೀರಾ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಬಹಳ ಮಹತ್ವವಾದ ಸಂಗತಿ ಇದರಲ್ಲಿ ಇದೆ. ಇಡೀ ಸಹಕಾರಿ ಕ್ಷೇತ್ರದಲ್ಲಿ ಒಂದು ದೊಡ್ಡ ಪ್ರಮಾಣದ ಹಗರಣ ಇದಾಗಿದೆ. ಆ ಇಲಾಖೆ ಮಾನ್ಯ ಮುಖ್ಯಮಂತ್ರಿಯವರ ಅಧೀನದಲ್ಲಿದೆ. ಸುಮ್ಮನೆ ಅಧಿಕಾರಿಗಳು ಯಾವುದೋ ಒಂದು ಉತ್ತರ ಕೊಟ್ಟು ಕಳುಹಿಸಿದ್ದಾರೆ. ಆ ಉತ್ತರ ತೆಗೆದುಕೊಂಡು ಇಟ್ಟರೆ ಇದಕ್ಕೆ ತೆರೆ ಎಳೆಯಲಿಕ್ಕೆ ಆಗುವುದಿಲ್ಲ. ಆದ್ದರಿಂದ, ದಯಮಾಡಿ ಸಿ.ಎಂ. ರವರು ಬರುವುದಿದ್ದರೆ ಬೇಕಾದರೆ ಈ ವಿಷಯವನ್ನು ಕೊನೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು: ಬಂದರೆ ನೋಡೋಣ, ಇಲ್ಲದಿದ್ದರೆ ಇದನ್ನು ನಾಳೆಗೆ ಹಾಕೋಣವೇ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಬೇಕಾದರೆ ನಾಳೆಗೆ ಹಾಕಿರಿ.

ಅಧ್ಯಕ್ಷರು: **O.K.**

**2. ವಿಷಯ: ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಜಮೀನಿನಲ್ಲಿ ಜೀವನೋಪಯೋಗಕ್ಕಾಗಿ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಬಡ ರೈತರಿಗೆ ಕಂದಾಯ ಇಲಾಖೆಯ ಕಾಯ್ದೆ 192ಎ ಮತ್ತು 192 ಬಿ ಯಿಂದ ಅನ್ಯಾಯವಾಗುತ್ತಿರುವುದರಿಂದ ಅಗತ್ಯ ತಿದ್ದುಪಡಿ ತರುವ ಬಗ್ಗೆ.**

ಶ್ರೀ ಬಿ.ಬಿ. ನಿಂಗಯ್ಯ: ಸನ್ಮಾನ್ಯ ಸಭಾಧ್ಯಕ್ಷರೆ, ಬಹಳ **ಗಂಭೀರವಾದ ವಿಚಾರವನ್ನು** ಪ್ರಸ್ತಾಪ ಮಾಡಬೇಕೆಂದು ನಾವು ನಿಯಮ 69ರಡಿಯಲ್ಲಿ ಇದನ್ನು ಚರ್ಚೆಗೆ ತಂದಿದ್ದೇವೆ. ಸನ್ಮಾನ್ಯ ಕಂದಾಯ ಸಚಿವರು ಇಲ್ಲಿ ಇಲ್ಲ. ಅವರು ಇಲ್ಲದೆ ಇದನ್ನು ಮಾತನಾಡತಕ್ಕಂಥದ್ದು ನನಗೆ ಸರಿ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅನಿಸುವುದಿಲ್ಲ. ಆದ್ದರಿಂದ ಸನ್ಮಾನ್ಯ ಕಂದಾಯ ಸಚಿವರನ್ನು ಕರೆಸಿದರೆ ನಾವು ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು: ಈಗ ನೀವು ಮಾತನಾಡುತ್ತೀರೋ ಅಥವಾ ಇಲ್ಲವೋ?

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್): ಈ ವಿಷಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ಮಾನ್ಯ ಕಂದಾಯ ಮಂತ್ರಿಯವರು ಬೇಕು. ಇದು ಬಹಳ important ವಿಷಯ.

ಶ್ರೀ ಬಿ.ಬಿ.ನಿಂಗಯ್ಯ: ಬಹಳ ಗಂಭೀರವಾದ ವಿಷಯ.

ಅಧ್ಯಕ್ಷರು: ಮಂತ್ರಿಗಳನ್ನು ಕರೆಸೋಣ. ಈಗ ಸದ್ಯಕ್ಕೆ ಮಾತನಾಡುತ್ತೀರೋ ಇಲ್ಲವೋ? ಇದನ್ನು ನಾಳೆಗೆ ಹಾಕೋಣವೇ?

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್): ನಾಳೆಗೆ ಹಾಕಿ.

ಅಧ್ಯಕ್ಷರು: ಈಗ ಮಾತನಾಡುತ್ತೀರೋ ಅಥವಾ ನಾಳೆಗೆ ಹಾಕೋಣವೇ?

ಶ್ರೀ ಬಿ.ಬಿ. ನಿಂಗಯ್ಯ: ಇವತ್ತು ಮಾತನಾಡಿ ಎಂದರೆ, ಅವರು ಇಲ್ಲದಿರುವಾಗ ನಾವು ಏನು ಮಾತನಾಡುವುದು?

ಅಧ್ಯಕ್ಷರು: ನೋಡೋಣ, ಅವರನ್ನು ಕರೆಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಬಂದರೆ ಮಾತನಾಡಿರಿ.

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್): ಮಾನ್ಯ ಕಂದಾಯ ಸಚಿವರು ಬಂದರೆ ಮಾತನಾಡುತ್ತೇವೆ. ಬರಲಿಲ್ಲವೆಂದರೆ ನಾಳೆಗೆ ಹಾಕಿ.

ಶ್ರೀ ಬಿ.ಬಿ. ನಿಂಗಯ್ಯ: ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ನಾಳೆಗೆ ತಪ್ಪಿದರೆ ನಾಡಿದ್ದಿಗೆ ಹಾಕಿ. ನಾಳೆ ಕರೆಸಿದರೆ ನಾಳೆಯೇ ಮಾತನಾಡುತ್ತೇವೆ. ಮಾನ್ಯ ಕಂದಾಯ ಸಚಿವರು ಇಲ್ಲದೆ ಮಾತನಾಡುವುದು ಹೇಗೆ?

**ವಿಷಯ: ಸರ್ಕಾರ ನೀಡಿದ ಆಶ್ವಾಸನೆಯಂತೆ ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಯ ಸುಮಾರು 100 ಕೋಟಿಯಷ್ಟು ಪಿಂಚಣಿ ಹಣ ಈವರೆವಿಗೂ ಮರುಪಾವಿತಿಯಾಗದೇ ಇರುವ ಬಗ್ಗೆ.**

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

## 14-06-2017

ಅಧ್ಯಕ್ಷರು: ಶ್ರೀಯುತರುಗಳಾದ ಅರವಿಂದ ಚಂದ್ರಕಾಂತ ಬೆಲ್ಲದ, ಡಾ: ಅಶ್ವಥ್‌ನಾರಾಯಣ ಸಿ.ಎನ್. ಮತ್ತು ಆನಂದ ಅಲಿಯಾಸ್ ವಿಶ್ವನಾಥ ಚಂದ್ರಶೇಖರ ಮಾಮನಿಯವರು ನಿಯಮ 69ರಲ್ಲಿ ಕೇಳಿದ ವಿಷಯಕ್ಕೆ ಸರ್ಕಾರದಿಂದ ಉತ್ತರ ಕೊಡಲು ಸಮಯ ಕೇಳಿದ್ದಾರೆ. ಈಗ **ಗಮನ ಸೆಳೆಯುವ ಸೂಚನೆಗಳು.**

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

**ಗಮನ ಸೆಳೆಯುವ ಸೂಚನೆಗಳು**

**ವಿಷಯ: ಹಾಸನ - ಮೈಸೂರು ರಸ್ತೆಯ ಮಧ್ಯದಲ್ಲಿರುವ ಹಂಗರಹಳ್ಳಿ ಗ್ರಾಮದ ಕಸ್ತೂರಿ ಬಾ ವಸತಿ ಶಾಲೆಯಲ್ಲಿ ಪದವಿ ಪೂರ್ವ ತರಗತಿಗಳನ್ನು ಆರಂಭಿಸಲು ಅವಶ್ಯಕ ಬೋಧಕ/ಬೋಧಕೇತರ ಸಿಬ್ಬಂದಿಯ ಹುದ್ದೆಗಳೊಂದಿಗೆ ಮಂಜೂರು ಮಾಡುವ ಬಗ್ಗೆ.**

**ಅಧ್ಯಕ್ಷರು:** ಹೆಚ್.ಕೆ. ಕುಮಾರಸ್ವಾಮಿಯವರೆ ಮಾತನಾಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ನಾನು ಕೇಳಬೇಕಾದ ಗಮನ ಸೆಳೆಯುವ ವಿಷಯಕ್ಕೆ ಸಂಬಂಧಿಸಿದಂತೆ ಮಂತ್ರಿಗಳೇ ಇಲ್ಲ.

ಅಧ್ಯಕ್ಷರು: ಆಯಿತು, ಕೇಳಿ. ಇದೇ ಉತ್ತರ ಏನಿದೆ, ಕೊಡಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ನನಗೆ ಉತ್ತರದ ಪ್ರತಿ ಸಹ ಬಂದಿಲ್ಲ.

ಅಧ್ಯಕ್ಷರು: ಆಮೇಲೆ ಕೊಡಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಆಯಿತು.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಸದನದಲ್ಲಿ ಇರದಿದ್ದ ಮೇಲೆ ಅಧಿವೇಶನ ಏತಕ್ಕಾಗಿ ನಡೆಸಬೇಕು?

ಅಧ್ಯಕ್ಷರು: ಹಾಗಲ್ಲ, ನೀವು mention ಮಾಡುತ್ತಿಲ್ಲವಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಒಂದೇ ಒಂದು ಪ್ರಶ್ನೆಗೂ ಸರಿಯಾದ ಉತ್ತರ ಬರುವುದಿಲ್ಲ. ಸಚಿವರಾರೂ ಸದನಕ್ಕೆ ಬರುವುದಿಲ್ಲ.

ಶ್ರೀ ಎನ್.ಹೆಚ್. ಕೋನರೆಡ್ಡಿ: ಸದನದಲ್ಲಿ ಸಚಿವರಿಗೇ ಬರ ಬಂದುಬಿಟ್ಟಿದೆ.

ಅಧ್ಯಕ್ಷರು: Calling attention ಅನ್ನು ನೀವು ಹೇಳಿರಿ. ಉತ್ತರ ಕಳುಹಿಸಿಕೊಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಸಚಿವರು ಸದನದಲ್ಲಿ ಇರುವುದಿಲ್ಲವಾದ್ದರಿಂದ ಯಾವುದೂ ಸರಿಯಾಗಿ ಚರ್ಚೆಯಾಗುವುದಿಲ್ಲ. ಸರ್, ಇದು ಸರಿಯಲ್ಲ. ಈ ರೀತಿ ನಾವು ಸದನ ನಡೆಸುವುದರಲ್ಲಿ ಏನೂ ಅರ್ಥವಿಲ್ಲ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಅಧ್ಯಕ್ಷರು: You don't want to call the attention of the Minister? Attention call ಮಾಡಿರಿ, ನಾನು ಉತ್ತರ ಕೊಡಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿಲ್ಲ.

ಅಧ್ಯಕ್ಷರು: ಆಯಿತು ಬಿಡಿ. ನಾಳೆ ನೋಡೋಣ. ಇನ್ನು ಅಪ್ಪಾಜಿಯವರ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿದೆ. ಇದನ್ನು ನಾಳೆಗೆ ಹಾಕೋಣವೇ?

ಶ್ರೀ ಗೋವಿಂದ ಎಂ. ಕಾರಜೋಳ: ಸಂಬಂಧಪಟ್ಟ ಸಚಿವರಿಲ್ಲ. ಸುಮ್ಮನೆ ಏಕೆ time waste ಮಾಡುವುದು? ಸದನವನ್ನು ಮುಂದಕ್ಕೆ ಹಾಕಿ. ನಾಳೆ ಬೆಳಗ್ಗೆ ಚರ್ಚೆಗೆ ತೆಗೆದುಕೊಳ್ಳೋಣವಂತೆ. ಸದನವನ್ನು ಇವತ್ತು ಮುಂದೂಡಿಬಿಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಯಾರನ್ನಾದರೂ ಒಬ್ಬರು Minister ಅನ್ನು ಉತ್ತರ ಹೇಳುವುದಕ್ಕೆ frontline ನಲ್ಲಿ ಕೂರಿಸಿ.

(ಗೊಂದಲ)

ಅಧ್ಯಕ್ಷರು: ನೋಡಿ, ನಿಮ್ಮ ಪರವಾಗಿ ದಿನಾಲೂ ಸರ್ಕಾರದವರಿಗೆ ನಾನು ಹೇಳುತ್ತಿದ್ದೇನೆ. ಏನು ಮಾಡುವುದಕ್ಕಾಗುತ್ತದೆ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಯಾರ ಗಮನ ಸೆಳೆಯುವುದು ಎಂದು ಅಷ್ಟೇ ಪ್ರಶ್ನೆ. ಬೇರೆ ಇನ್ನೇನೂ ಇಲ್ಲ.

ಅಧ್ಯಕ್ಷರು: ಯಾರು ಸಚಿವರು ಇದ್ದಾರೆ ಅವರ ಗಮನ ಸೆಳೆಯಿರಿ. ನಿಮಗೆ ಉತ್ತರ ಬರುತ್ತದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಸಂಬಂಧಪಟ್ಟ ಸಚಿವರಿಗೆ ಹೇಳಿದ ಹಾಗೆ ಆಗುವುದಿಲ್ಲವಲ್ಲ.

ಅಧ್ಯಕ್ಷರು: ಅಪ್ಪಾಜಿಯವರೆ, ನೀವು ಮಾತನಾಡಿ. ಕೃಷಿ ಸಚಿವರು ಉತ್ತರ ಕೊಡುತ್ತಾರೆ.

2. ವಿಷಯ: **ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಕಬ್ಬಿಣದ ಅದಿರನ್ನು ಪೂರೈಸಲು ಗಣಿಯನ್ನು ಮಂಜೂರು ಮಾಡುವ ಬಗ್ಗೆ.**

**ಶ್ರೀ ಎಂ.ಜೆ.**ಅಪ್ಪಾಜಿ (ಭದ್ರಾವತಿ): ಮಾನ್ಯ ಅಧ್ಯಕ್ಷರೆ, ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಕಬ್ಬಿಣದ ಅದಿರನ್ನು ಪೂರೈಸಲು ಗಣಿಯನ್ನು ಮಂಜೂರು ಮಾಡುವ ಬಗ್ಗೆ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರ ಗಮನ ಸೆಳೆಯುತ್ತೇನೆ.

14-06-2017

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)(ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

(ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಲಾಗಿದೆ)

ಶ್ರೀ ಎಂ.ಜೆ.ಅಪ್ಪಾಜಿ : ಮಾನ್ಯ ಅಧ್ಯಕ್ಷರೆ, ಪರಿಶೀಲನೆಯಲ್ಲಿದೆ ಎನ್ನುವ ಉತ್ತರವನ್ನು ಕೊನೆಯದಾಗಿ ಹೇಳಿದ್ದಾರೆ. ನನ್ನ ವಿನಂತಿ ಏನೆಂದರೆ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, 1994ರಲ್ಲಿ VISLನಲ್ಲಿ ನಾನು ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದೆ. ಸುಮಾರು 18 ಸಾವಿರ ಜನ ಕಾರ್ಮಿಕರು ಅಲ್ಲಿ ಕೆಲಸ ಮಾಡುತ್ತಿದ್ದರು. ಕಳೆದ 7-8 ವರ್ಷಗಳಿಂದ ಅದಿರನ್ನು ಕೊಡದೆ ಕಾರ್ಖಾನೆಯಲ್ಲಿ ಇವತ್ತು ಸಾವಿರ ಜನಕ್ಕೆ ಬಂದಿದೆ.

**(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)**

ಶ್ರೀ ಎಂ.ಜೆ. ಅಪ್ಪಾಜಿ: ತಮಗೆ ಗೊತ್ತಿರುವಹಾಗೆ, ಕರ್ನಾಟಕ ರಾಜ್ಯದಲ್ಲಿ ಗೊತ್ತುಗುರಿ ಇಲ್ಲದವರೆಲ್ಲ ಅದಿರನ್ನು ಮಾರಾಟ ಮಾಡಿಕೊಂಡು, ಅದರಿಂದ ಹಣ ಮಾಡಿಕೊಂಡಿದ್ದರಲ್ಲಿ, ಒಂದು ಕಬ್ಬಿಣದ ಕಾರ್ಖಾನೆಗೆ ಅದಿರನ್ನು ಕೊಟ್ಟಿದೆ. ಇವತ್ತು 18 ಸಾವಿರ ಜನ ಕಾರ್ಮಿಕರು ಅಲ್ಲಿ ಕೆಲಸ ಮಾಡುತ್ತಿದ್ದವರು, ಅವರನ್ನು retain ಮಾಡಿಕೊಳ್ಳುವಂಥ ಅವಕಾಶವಿತ್ತು. ಬಹುತೇಕ ಕರ್ನಾಟಕ ರಾಜ್ಯ ಸರ್ಕಾರ, ಕೇಂದ್ರಸರ್ಕಾರ job ಅನ್ನು create ಮಾಡುತ್ತವೆ. ಪ್ರತಿ ಬಜೆಟ್‌ನಲ್ಲಿ ನಾವು ಒಂದು ವರ್ಷಕ್ಕೆ ಇಂತಿಷ್ಟು ಕೆಲಸಗಳನ್ನು ಯುವಕರಿಗೆ ನೀಡುತ್ತೇವೆ ಎನ್ನುವ ಮಾತನ್ನು ಪ್ರತಿ ಸಂದರ್ಭದಲ್ಲೂ ಹೇಳುತ್ತಾರೆ.

ಉಪಾಧ್ಯಕ್ಷರು: ಅಪ್ಪಾಜಿಯವರೆ, ಏನಾಗಬೇಕೆಂದು, ಏನು ಮಾಡಬೇಕೆಂದು ಹೇಳಿ.

ಶ್ರೀ ಎಂ.ಜೆ. ಅಪ್ಪಾಜಿ: ಇರತಕ್ಕಂಥ ಕಾರ್ಖಾನೆಯನ್ನು ಉಳಿಸಿಕೊಳ್ಳುವಂಥ ಪರಿಸ್ಥಿತಿಯಲ್ಲಿ ಇಲ್ಲವಲ್ಲ ಎಂಬುದಾಗಿದ್ದು, ಅದನ್ನು ಉಳಿಸಿಕೊಳ್ಳಬೇಕೆನ್ನುವುದು ನನ್ನ ವಿನಂತಿ. ಏಕೆಂದರೆ, ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಯನ್ನು ಹಿಂದಿನ ರಾಜರಾದಂಥ ಮಾನ್ಯ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಮತ್ತು ವಿಶ್ವೇಶ್ವರಯ್ಯನವರು ಬಹಳ ದೂರದೃಷ್ಟಿ ಇಟ್ಟುಕೊಂಡು ಮಾಡಿದ್ದರು.

ಉಪಾಧ್ಯಕ್ಷರು: ಈ ಉತ್ತರ ನಿಮಗೆ ಸಮಾಧಾನ ಇಲ್ಲವೇ?



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

14-06-2017

ಶ್ರೀ ಎಂ.ಜೆ. ಅಪ್ಪಾಜಿ: ಈ ಕಾರ್ಖಾನೆ ಮುಚ್ಚುವ ಹಂತದಲ್ಲಿದೆ, ಇನ್ನೂ ಪರಿಶೀಲನೆಯಲ್ಲಿದೆ ಎಂದರೆ, ಈ ಉತ್ತರ ತೆಗೆದುಕೊಂಡು ಏನು ಮಾಡಲಿ? ಪರಿಶೀಲನೆಯಲ್ಲಿದೆ ಎಂದರೆ ಅರ್ಥವೇನು ಹೇಳಿ? ಕಳೆದ 3 ವರ್ಷಗಳಿಂದಲೂ ಇಂಥಿಂಥ ಕಡೆ ಇದೆ, mines ಕೊಡಬೇಕೆಂದು ಮುಖ್ಯಮಂತ್ರಿಗಳ ಸಭೆಯಲ್ಲಿ ಹೇಳಿದ್ದೇವೆ, ಮಾನ್ಯ ಕಾಗೋಡು ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿದ್ದೇವೆ. 4 ವರ್ಷ ಕಳೆದ ಮೇಲೂ ಇನ್ನೂ ಪರಿಶೀಲನೆಯಲ್ಲಿದೆ ಎನ್ನುವುದಾದರೆ ಕಾರ್ಖಾನೆ ಮುಚ್ಚಿಹೋದ ಮೇಲೆ mines ಕೊಡುತ್ತೇವೆಂದು ಹೇಳುತ್ತಾರೆಯೇ, ಹೇಳಿ.

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ಸಚಿವರು): ಅವರು ಅರ್ಜಿ ಕೊಟ್ಟಿರುವುದೇ ಜೂನ್, 2016ರಲ್ಲಿ.

ಶ್ರೀ ಎಂ.ಜೆ. ಅಪ್ಪಾಜಿ: ಈ ಸರ್ಕಾರ ಬಂದ ಮೇಲೆ ಕೊಟ್ಟಿರುವುದು. 2014ರ ನಂತರ ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ short period ನಲ್ಲಿ ಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳನ್ನು, ಸಂಬಂಧಪಟ್ಟ ಅಧಿಕಾರಿಗಳನ್ನು mines ಕೊಡಬೇಕೆಂದು . . . .

ಶ್ರೀ ಕೃಷ್ಣ ಬೈರೇಗೌಡ: ಹೌದು, ಮುಖ್ಯಮಂತ್ರಿಗಳ ಹತ್ತಿರ ಸಭೆ ಆದಮೇಲೆ, ತಮಗೂ ಗೊತ್ತಿದೆ, ಅದಕ್ಕೆ ನ್ಯಾಯಾಲಯದಿಂದ ಕೆಲವು ತಡೆಯಾಜ್ಞೆ ಬಂದಿದೆ. ಅದೆಲ್ಲ ಹೊರತುಪಡಿಸಿ,ಆಮೇಲೆ, ಜೂನ್ 2016ರಲ್ಲಿ ಅವರು ಸಂಡೂರಿನಲ್ಲಿ ನಮಗೆ ಗಣಿ ಕೊಡಿ ಎಂದು ಅರ್ಜಿ ಕೊಟ್ಟಿದ್ದಾರೆ. ಅದು ಪರಿಶೀಲನೆಯಲ್ಲಿದೆ. ಅದಕ್ಕೆ ಮೊದಲು ಆದಂಥ ಕೆಲವು ತೀರ್ಮಾನಗಳಿಗೆ ಯಥಾಸ್ಥಿತಿಯನ್ನು ಕಾಪಾಡುವಂತೆ ನ್ಯಾಯಾಲಯ ತಡೆಯಾಜ್ಞೆ ಕೊಟ್ಟಿದೆ. ಹಾಗಾಗಿ, ಅದು ನಿಂತಿದೆ. ಅವು ಹಿಂದೆ (ಹಿಂದಿನ) ತೀರ್ಮಾನಗಳು. ಅದರಿಂದ ನಿಂತಿದೆ.

ಶ್ರೀ ಎಂ.ಜೆ. ಅಪ್ಪಾಜಿ: ತಾವೇನು ಹೇಳುತ್ತೀರಿ, private party ಅದೇ ಜಾಗದಲ್ಲಿ mines ಬೇಕೆಂದು ಹಾಕಿಕೊಂಡಿದ್ದರು, stay ಏನಿತ್ತೋ, ಅದಾದಮೇಲೆ, ಬೇರೆ ಕಡೆ ಒಂದು mines ಕೊಡಿ ಎಂದು ನಾವು ಕೇಳಿದ್ದೆವು.

ಶ್ರೀ ಕೃಷ್ಣ ಬೈರೇಗೌಡ: ಅದನ್ನೇ ಜೂನ್ 2016ರಲ್ಲಿ ಕೇಳಿರುವುದು.

ಶ್ರೀ ಎಂ.ಜೆ. ಅಪ್ಪಾಜಿ: ನನ್ನ ವಿನಂತಿ ಏನೆಂದರೆ, 2014ರಿಂದ . . .

ಶ್ರೀ ಕೃಷ್ಣ ಬೈರೇಗೌಡ: 2016.

14-06-2017

ಶ್ರೀ ಎಂ.ಜೆ. ಅಪ್ಪಾಜಿ: 2016ರಿಂದ. . .ಈಗ 2017ರ ಜೂನ್ ಬಂದಿದೆ. 2016ರ 7ನೇ ತಿಂಗಳಲ್ಲಿ ಕೇಳಿದ್ದೇವೆ.

ಉಪಾಧ್ಯಕ್ಷರು: ಬೇಗ ಆಗಿಲ್ಲ ಎನ್ನುತ್ತಿದ್ದಾರೆ. ಏನು ಮಾಡುತ್ತೀರಿ, ಹೇಳಿ?

ಶ್ರೀ ಎಂ.ಜೆ. ಅಪ್ಪಾಜಿ: ದಯಮಾಡಿ, mines ಅನ್ನು ಬೇಗ ಕೊಡಿ.

ಶ್ರೀ ಕೃಷ್ಣ ಬೈರೇಗೌಡ: ಅವರು ಜೂನ್ 2016ರಲ್ಲಿ ಹೊಸ ಅರ್ಜಿ ಕೊಟ್ಟಿದ್ದಾರೆ. ಬದಲಿ ಜಾಗ ಕೊಡಿ ಎಂದು ಕೇಳಿದ್ದಾರೆ. ಅದನ್ನು ಆದಷ್ಟು ಬೇಗ ವಿಲೇ ಮಾಡುವಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

ಶ್ರೀ ಎಂ.ಜೆ. ಅಪ್ಪಾಜಿ: ಮಾನ್ಯ ಮಂತ್ರಿಯವರೇ, ಬದಲಿ ಜಾಗವೂ ಗುರುತಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು . . . .

ಶ್ರೀ ಕೃಷ್ಣ ಬೈರೇಗೌಡ: ಗುರುತಾಗಿದೆ. ಆದರೆ, Supreme Court ನ ಆದೇಶ ಬಂದಮೇಲೆ ಖನಿಜ ಸಂಪತ್ತನ್ನು ಹಂಚಿಕೆ ಮಾಡುವ ವಿಚಾರ ಬಹಳ ಜಟಿಲವಾಗಿದೆ. ಮೊದಲು ಬಹಳ ಸರಳವಿತ್ತು. ಸರ್ಕಾರಕ್ಕೆ ಮುಕ್ತ ಅವಕಾಶವಿರುತ್ತಿತ್ತು. 4-5 ವರ್ಷಗಳ ಹಿಂದೆ Supreme Court ಆದೇಶ ಬಂದಮೇಲೆ ಈಗ ಹಂಚಿಕೆ ಮಾಡುವುದು ಬಹಳ ಜಟಿಲವಾಗಿದೆ. ಹಾಗಾಗಿ, ಸ್ವಲ್ಪ ಸಮಯವಾಗಿದೆ. ಬೇಗ ವಿಲೇ ಮಾಡುವ ಪ್ರಯತ್ನ ಮಾಡುತ್ತೇವೆ.

ಉಪಾಧ್ಯಕ್ಷರು: ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಂ.ಜೆ. ಅಪ್ಪಾಜಿ: ಮಾನ್ಯ ಮಂತ್ರಿಯವರು ಉತ್ತರ ಹೇಳಿದರು. ನನ್ನ ವಿನಂತಿ ಇಷ್ಟೇ, ಕಾರ್ಖಾನೆ ಮುಚ್ಚಿದಮೇಲೆ mines ಕೊಡುವುದರಿಂದ ಏನೂ ಅರ್ಥವಿಲ್ಲ. Mines ಇಲ್ಲವೆಂದು ಹೇಳಿ ಇರತಕ್ಕಂಥ 1800 ಜನ ಕಾರ್ಮಿಕರಿಗೆ 13 ದಿನ ಮಾತ್ರ ಸಂಬಳ ಕೊಡುತ್ತಿದ್ದಾರೆ. ಅವರು 13 ದಿನ ಕೆಲಸಕ್ಕೆ ಬರುತ್ತಿದ್ದಾರೆ. ದಯಮಾಡಿ, ಗಮನಹರಿಸಬೇಕು. ಒಬ್ಬ ಕಾರ್ಮಿಕನಿಗೆ 13 ದಿನ ಕೆಲಸ ಕೊಡುತ್ತಿದ್ದಾರೆ. ಅವನ ಬವಣೆಯನ್ನು ಹೇಳುವುದಕ್ಕಾಗುತ್ತಿಲ್ಲ. ಏಕೆಂದರೆ, mines ಹಿಂದೆ ಇತ್ತು. ನೀವು ಹೇಳುವ ರೀತಿಯಲ್ಲಿ High Court ಆದೇಶದಮೇಲೆ ಯಾರೋ ಕೇಸ್ ಹಾಕಿದ್ದರು ಎಂದು ಹೇಳಿ ಮತ್ತೊಂದು ಭೂಮಿಯನ್ನು ನಾವು ಗುರುತಿಸಿರುವುದರಿಂದ ಅದನ್ನು ಕೊಡಲಿಕ್ಕೆ ಒಂದೂವರೆ ವರ್ಷವೇನೂ ಅವಕಾಶ ಬೇಕಾಗಿಲ್ಲ. ಇದು ಸರ್ಕಾರದ ಕೈಯಲ್ಲಿದೆ. ದಯಮಾಡಿ, ಮಾನ್ಯ

ಮಂತ್ರಿಯವರು ಇಚ್ಛಾಶಕ್ತಿಯನ್ನು ಮೆರೆಯಲಿ, ತತ್‌ಕ್ಷಣ ಆ mines ಕೊಡಲಿ ಎಂದು ನಿಮ್ಮ ಮುಖೇನ ವಿನಂತಿಸುತ್ತೇನೆ.

**ವಿಷಯ: ವಿದ್ಯಾರ್ಥಿನಿಲಯಗಳಿಗೆ, ಅನಾಥಾಶ್ರಮದ ಮಕ್ಕಳಿಗೆ, convent sister ಗಳಿಗೆ, ಕುಷ್ಠರೋಗಿಗಳ ಮತ್ತು ಇನ್ನಿತರ ಅನಾಥಾಶ್ರಮಗಳಿಗೆ, ಈಶ್ವರೀಯ ಬ್ರಹ್ಮಕುಮಾರಿ ಸಂಸ್ಥೆಯವರಿಗೆ ಪಡಿತರ ಚೀಟಿಗಳು ಸಿಗದ ಕಾರಣ ಆಗಿರುವ ಸಮಸ್ಯೆಗಳ ಬಗ್ಗೆ.**

ಉಪಾಧ್ಯಕ್ಷರು: ಜೆ.ಆರ್. ಲೋಬೋರವರೆ, ನಿಮ್ಮ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿಲ್ಲ.

ಶ್ರೀ ಜೆ.ಆರ್. ಲೋಬೋ: ಉತ್ತರ ಬಂದಿಲ್ಲವೆಂದೇ ನಿನ್ನೆ ಇದ್ದ ಗಮನ ಸೆಳೆಯುವ ಸೂಚನೆಯನ್ನು ಇವತ್ತಿಗೆ ಹಾಕಿಕೊಂಡಿದ್ದು.

ಉಪಾಧ್ಯಕ್ಷರು: ನೋಡಿ, ಬಂದಿಲ್ಲವಲ್ಲ. ಉತ್ತರ ಬಂದಿದೆಯೇ?

ಶ್ರೀ ಜೆ.ಆರ್. ಲೋಬೋ: ಉತ್ತರ ಬಂದಿಲ್ಲ.

ಉಪಾಧ್ಯಕ್ಷರು: ನಾಳೆ ಕೊಡಿಸೋಣ.

**ವಿಷಯ: ಮಂಡ್ಯ ಜಿಲ್ಲೆ, ಕೆ.ಆರ್. ಪೇಟೆ ತಾಲ್ಲೂಕಿನ ಮುರುಕನಹಳ್ಳಿಯಲ್ಲಿ ನಡೆದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪವೆಸಗಿರುವ ಡಿ.ವೈ.ಎಸ್.ಪಿ.ಯವರನ್ನು ಅಮಾನತ್ತುಗೊಳಿಸದಿರುವ ಬಗ್ಗೆ.**

ಡಾ: ನಾರಾಯಣ ಗೌಡ (ಕೆ.ಆರ್. ಪೇಟೆ): ಮಾನ್ಯ ಉಪಾಧ್ಯಕ್ಷರೆ, ಮಂಡ್ಯ ಜಿಲ್ಲೆ, ಕೆ.ಆರ್. ಪೇಟೆ ತಾಲ್ಲೂಕಿನ ಮುರುಕನಹಳ್ಳಿಯಲ್ಲಿ ನಡೆದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪವೆಸಗಿರುವ ಡಿ.ವೈ.ಎಸ್.ಪಿ.ಯವರನ್ನು ಅಮಾನತ್ತುಗೊಳಿಸದಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು: ತಾವು ಇದನ್ನು ನಿನ್ನೆ raise ಮಾಡಿದ್ದದ್ದು.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು) (ಮಾನ್ಯ ಗೃಹ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ,

(ಮಾನ್ಯ ಗೃಹ ಸಚಿವರ ಲಿಖಿತ ಹೇಳಿಕೆಯ ಪ್ರತಿ ಲಗತ್ತಿಸಿದೆ)

14-06-2017

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಡಾ: ನಾರಾಯಣಗೌಡ: ಕಳೆದ 3-4 ಬಾರಿಯಿಂದ Dy.SP ಯವರ ವಿಷಯದಲ್ಲಿ ನಾನು ಗಮನ ಸೆಳೆಯುತ್ತಿದ್ದೇನೆ. ಇದಕ್ಕೆ ಉತ್ತರ ಬರುತ್ತಿದೆ. ಆದರೆ, ಇದುವರೆಗೂ ಇವರಮೇಲೆ ತಕ್ಕ ಕ್ರಮವನ್ನು ತೆಗೆದುಕೊಂಡಿಲ್ಲ.

ಉಪಾಧ್ಯಕ್ಷರು: ನಿನ್ನೆಯೂ ಮಾತನಾಡಿದ್ದರು. ಮಂತ್ರಿಗಳು ಹೇಳುತ್ತಾರೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಿತ್ರರಾದಂಥ ನಾರಾಯಣಗೌಡರವರು ನಿಯಮ 73ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ, ಕೆ.ಆರ್. ಪೇಟೆ ತಾಲ್ಲೂಕಿನ ಶೀಳನೆರೆ ಹೋಬಳಿ ಮುರುಕನಹಳ್ಳಿ ಗ್ರಾಮದಲ್ಲಿ ರಾತ್ರಿ 11 ಗಂಟೆ ಸಮಯದಲ್ಲಿ ಅವರ ಪಕ್ಷದ ಕಾರ್ಯಕರ್ತರಿಗೆ ರಾಜಕೀಯ ವೈಷಮ್ಯದಿಂದ ತೊಂದರೆಯಾಗಿದೆ ಎಂದು ನಮ್ಮ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ ಇವರು ಸಲ್ಲಿಸಿರುವ ವರದಿಯಲ್ಲಿ ಮುರುಕನಹಳ್ಳಿ ಗ್ರಾಮದಲ್ಲಿ ದಿ: 31.12.2016ರಂದು ನಡೆದ ಕೊಲೆಗೆ ಸಂಬಂಧಿಸಿದಂತೆ, ಕೆ.ಆರ್. ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯ ಮೊಕದ್ದಮೆ ಸಂ. 01/2017, ಕಲಂ 324, 302ರ ಜೊತೆಗೆ 34 IPC ರೀತ್ಯಾ ಪ್ರಕರಣ ದಾಖಲಾಗಿತ್ತು. ಸದರಿ ಪ್ರಕರಣ ತನಿಖೆಯಾಗಿ ಕಂಡು ಬಂದಿರುವ ಲೋಪದೋಷಗಳ ಹಿನ್ನೆಲೆಯಲ್ಲಿ ಶ್ರೀ ಸಿ.ಎನ್. ಜನಾರ್ಧನ್, Dy.S.P., ನಾಗಮಂಗಲ ಉಪ ವಿಭಾಗ, ಮಂಡ್ಯ ಜಿಲ್ಲೆ ಇವರ ವಿರುದ್ಧ KPSC ನಿಯಮ 70ರ ಅಡಿಯಲ್ಲಿ D.G. and IGP ಯವರು ದಿ:14.2.2017ರಂದು ದೋಷಾರೋಪಣಾ ಪತ್ರವನ್ನು ಹೊರಡಿಸಿರುತ್ತಾರೆ.

(ಮುಂದು)

ವಿಸ-14-06-2017-(35)-5-20-ಎಸ್ಕೆ-ಸಿಪಿ

ಶ್ರೀ ಡಿ.ಕೆ.ಶಿವಕುಮಾರ್ (ಮುಂದು. . . ) : ಈಗಾಗಲೇ officer ಮೇಲೆ ಏನು action ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ. ತಮ್ಮ ಚಿಂತನೆ ಏನಿತ್ತು ಅದಕ್ಕೆ ಉತ್ತರ ಸಿಗುತ್ತಿದೆ. ಸರ್ಕಾರ ಕಾನೂನು ಬದ್ಧವಾಗಿ ಕಾನೂನು ಸುವ್ಯವಸ್ಥೆ ಕಾಪಾಡಬೇಕು, ಯಾರಿಗೂ ತೊಂದರೆ ಕೊಡಬಾರದು, ದ್ವೇಷ ಸಾಧನೆ ಮಾಡಬಾರದು, ಆ ಪಕ್ಷ ಈ ಪಕ್ಷ ಎಂದು ಹೇಳದೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳುತ್ತದೆ ಎಂದು ಈ ವೇದಿಕೆಯ ಮೂಲಕ ತಮಗೆ ತಿಳಿಸಲಿಕ್ಕೆ ಬಯಸುತ್ತೇನೆ.

14-06-2017

(ಗೊಂದಲ)

ಉಪಾಧ್ಯಕ್ಷರು : ಆಯಿತು ಬಿಡಿ ಚರ್ಚೆಗೆ ಅವಕಾಶ ಇಲ್ಲ.

ಡಾ: ನಾರಾಯಣ ಗೌಡ : ಚರ್ಚೆಯಲ್ಲ ಇದನ್ನು ನಾವು ಮೂರನೇ ಸಾರಿ ಕೇಳಿರುವುದು. Dy.S.P. ಯವರಿಗೆ ಇದೊಂದೆ ಕ್ರಮವಲ್ಲ. ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ತುಂಬಾ ಹೆಸರುವಾಸಿಯಾಗಿದ್ದ ಕುಟುಂಬ, ಅದು ಎಲ್ಲರಿಗೂ ಗೊತ್ತಿದೆ, ಮಾನ್ಯ ಮಂತ್ರಿಯವರಿಗೂ ಗೊತ್ತಿದೆ. ಮಾನ್ಯ ಕೆಂಗೇಗೌಡರು, ಸ್ವರ್ಗವಾಸಿಯಾಗಿದ್ದಾರೆ, ಅವರ ಮೇಲೆ FIR lodge ಮಾಡಿದ್ದಾರೆ. ಇಂಥ Dy.S.P. ಯವರನ್ನು ನೀವು ಇಟ್ಟುಕೊಂಡರೆ ಹೇಗೆ? ನಾನು ಕಳೆದೆರಡು ವರ್ಷಗಳಿಂದ ನಿಮ್ಮನ್ನು ಕೇಳುತ್ತಿದ್ದೇನೆ. ಶಾಸಕರಿಗೆ ಗೌರವ ಇಲ್ಲವೇ?

(ಗೊಂದಲ)

ಉಪಾಧ್ಯಕ್ಷರು : Dy.S.P. ಯವರ ಮೇಲೆ action ತೆಗೆದುಕೊಳ್ಳಬೇಕಲ್ಲವೇ ಆಯಿತು ಬಿಡಿ.

ಡಾ: ನಾರಾಯಣ ಗೌಡ : ಇಲ್ಲ ಎಂದರೆ ಕಷ್ಟವಾಗುತ್ತದೆ, ಅವರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ವರ್ಗಾವಣೆ ಮಾಡಬೇಕಾಗಿತ್ತು.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಈ ಪ್ರಕರಣದಲ್ಲಿ ಕೊಲೆಯಾಗಿದೆ ಎಂದು ಉತ್ತರದಲ್ಲಿ ಕೊಡುತ್ತಾರೆ. 8 ಕೊಲೆಯಾಗತಕ್ಕಂಥ ಹಿನ್ನಲೆಯಲ್ಲಿ ಆ ಅಧಿಕಾರಿ ಎಷ್ಟರ ಮಟ್ಟಿಗೆ ಕೊಲೆ ಆಪಾಧಿತರುಗಳ ಮೇಲೆ ಕೊಲೆಗೆ ಸಂಬಂಧಪಟ್ಟವರ ಮೇಲೆ action ತೆಗೆದುಕೊಂಡಿದ್ದಾರೆ? ಅದೇ ವ್ಯಕ್ತಿಯನ್ನು ಅಲ್ಲಿ ಮುಂದುವರಿಸಬೇಕು ಎನ್ನುವುದಾದರೆ ಸರ್ಕಾರಕ್ಕೆ ಆ ವ್ಯಕ್ತಿಯ ಮೇಲೆ ಅಷ್ಟೊಂದು ಏನು ಇದೆ?

ಉಪಾಧ್ಯಕ್ಷರು : ನೋಡಿ ಸಚಿವರೆ, ಅವರೇನು ಬಹಳ indiscipline ಎಂದು ಹೇಳುತ್ತಾರೆ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್ : ಇದು ಗಂಭೀರವಾದ ವಿಚಾರ ನಾನು ಇಲ್ಲವೆಂದು ಹೇಳುವುದಿಲ್ಲ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಉಪಾಧ್ಯಕ್ಷರು : Home Minister ರವರ ಹತ್ತಿರ ಮಾತನಾಡಿ.

ಶ್ರೀ ಡಿ.ಕೆ.ಶಿವಕುಮಾರ್ : ಇದಕ್ಕೆ detail ಉತ್ತರ ಬೇಕಾದರೆ ನಾನು Home Minister ಕಡೆಯಿಂದ ಕೊಡಿಸುತ್ತೇನೆ.

(ಗೊಂದಲ)

ಡಾ: ನಾರಾಯಣ ಗೌಡ : ಮಾನ್ಯ ಸಚಿವರೆ, ಮೂರು ದಿವಸಗಳಿಂದ ನಾನು ಇದಕ್ಕೆ ಕಾದುಕೊಂಡು ಕುಳಿತಿದ್ದೇನೆ. ನೀವು ಇಲ್ಲ ಎಂದರೆ ನಾನು ಸದನದ ಬಾವಿಗೆ ಇಳಿಯುತ್ತೇನೆ. ಏಕೆಂದರೆ, ಇದು ನಮ್ಮ ಗೌರವದ ಪ್ರಶ್ನೆಯಾಗಿದೆ.

ಉಪಾಧ್ಯಕ್ಷರು : ಗೌಡ್ರೆ, Home Minister ಕಡೆಯಿಂದ ಉತ್ತರ ಕೊಡಿಸೋಣ ಬಿಡಿ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್ : ಈ ನಿಯಮದಲ್ಲಿ ಚರ್ಚೆಗೆ ಅವಕಾಶವಿಲ್ಲ. ನಾವು ಏನು ಹೇಳಬೇಕೊ ಹೇಳಿದ್ದೇವೆ. ನಾಯಕರು ಮಾತನಾಡಿದ್ದಾರೆ, ತಾವು ಮಾತನಾಡಿದಿರಿ, ತಮ್ಮ ಕಳಕಳಿ ಅರ್ಥವಾಗುತ್ತದೆ. ದಯವಿಟ್ಟು ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ಅವರ ಮೇಲೆ DG and DIG ಯವರು ಏನು ಆರೋಪಪಟ್ಟಿ ಹೊರಡಿಸಬೇಕೊ ಆ ಪ್ರಕಾರ ಕಾನೂನು ಕ್ರಮ ಕೈಗೊಳ್ಳುತ್ತಿದ್ದಾರೆ.

ಡಾ: ನಾರಾಯಣ ಗೌಡ : ಅವರನ್ನು ಅದೇ ಜಾಗದಲ್ಲಿ continue ಮಾಡುತ್ತಿದ್ದಿರಲ್ಲ?

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್ : ಈಗ ತಾವು ಏನು ಹೇಳಿದಿರಿ ತಮ್ಮ ವಿಚಾರವನ್ನು ನಾನು ನನ್ನ ಸಹದ್ಯೋಗಿಗಳಿಗೆ ತಿಳಿಸುತ್ತೇನೆ.

ಡಾ: ನಾರಾಯಣ ಗೌಡ : ನಾಳೆ ಉತ್ತರ ಕೊಡಬೇಕಾಗುತ್ತದೆ, ಇಲ್ಲವೆಂದರೆ ನಾನು ಆ ತಾಲ್ಲೂಕಿಗೆ ಹೋಗುವ ಸ್ಥಿತಿಯೇ ಇಲ್ಲ.

(ಗೊಂದಲ)

ಉಪಾಧ್ಯಕ್ಷರು : ಆಯಿತು ಗೌಡ್ರೆ ಅವರು ಮಾತನಾಡುತ್ತಾರೆ ಬಿಡಿ.

ಶ್ರೀ ಡಿ.ಕೆ.ಶಿವಕುಮಾರ್ : ಅದಕ್ಕೂ ಬಿಡುವುದಿಲ್ಲ. ತಾಲ್ಲೂಕಿನಲ್ಲಿ ಇರುವ ಹಾಗೆ ಮಾಡೋಣ ಸುಮ್ಮನಿರಿ.

14-06-2017

(ಗೊಂದಲ)

ಡಾ: ನಾರಾಯಣ ಗೌಡ : ದಯವಿಟ್ಟು ಅವರನ್ನು transfer ಮಾಡಿ, ಅಥವಾ ಬೇರೆ ಕ್ರಮ ತೆಗೆದುಕೊಳ್ಳಿ.

ಉಪಾಧ್ಯಕ್ಷರು : ಆಯಿತು ಬಿಡಿ, next ಕೇಳಿ.

(ಗೊಂದಲ)

ಡಾ: ನಾರಾಯಣ ಗೌಡ : ಇಲ್ಲ ಇಲ್ಲ ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು. ನನಗೆ ತುಂಬಾ ನೋವು ಆಗಿದೆ. ಅವರು ಮರಳು ದಂಧೆಯಲ್ಲಿದ್ದರು.

(ಗೊಂದಲ)

ಉಪಾಧ್ಯಕ್ಷರು : ಆಯಿತು ಬಿಡಿ ಗೌಡ್ರೆ. ತಾವು ಹೇಳಿದಿರಿ.

ಡಾ: ನಾರಾಯಣ ಗೌಡ : 8 murder ಆಗಿದೆ. ದಯವಿಟ್ಟು ಎರಡು ನಿಮಿಷ ಕೇಳಿ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ : ಅವರು ಎಂಥವರೇ ಇರಲಿ, ಒಬ್ಬ ಶಾಸಕನಿಗೆ ತೊಂದರೆ ಮಾಡಿದ್ದರ ಬಗ್ಗೆ ಸರ್ಕಾರ ಉತ್ತರ ಹೇಳುವುದಕ್ಕೆ ಏನಾಗಿದೆ? ಅವರ ಮೇಲೆ ಕ್ರಮ ಕೈಗೊಂಡು ವರ್ಗ ಮಾಡಿ ಅದೇನು ದೊಡ್ಡದು? ಒಬ್ಬ ಶಾಸಕನಿಗಿಂತಲೂ ಹೆಚ್ಚು ಇರುತ್ತದೆಯೆ?

(ಗೊಂದಲ)

ಡಾ: ನಾರಾಯಣ ಗೌಡ : ನನಗೆ ಒಂದು ನಿಮಿಷ ಅವಕಾಶ ಕೊಡಿ. ಕಳೆದ ಒಂದು ವಾರದ ಹಿಂದೆ ಒಂದು ಪುಟ್ಟ ಮಗುವಿನ murder ಆಗಿದೆ.

ಉಪಾಧ್ಯಕ್ಷರು : ಆಯಿತು ಬಹಳ ಚರ್ಚೆಗೆ ಅವಕಾಶವಿಲ್ಲ. ಹೇಳಿದ್ದಾರೆ ಅವರು action ತೆಗೆದುಕೊಳ್ಳುತ್ತಾರೆ ಬಿಡಿ. ಆಯಿತು ಬಿಡಿ.

ಡಾ: ನಾರಾಯಣ ಗೌಡ : ಉಪಾಧ್ಯಕ್ಷರೆ ತಾವು ಒಂದೇ ಒಂದು ನಿಮಿಷ ಅವಕಾಶ ಕೊಡಿ. ಸ್ವಲ್ಪ ತಾವು ಕೇಳಿ. ಮಕ್ಕಳು-ಮಕ್ಕಳು ಹೊಡದಾಡಿಕೊಂಡು murder ಆಗಿದೆ.

ಉಪಾಧ್ಯಕ್ಷರು : ತಮ್ಮ ಕಳಕಳಿ ಅರ್ಥವಾಗುತ್ತದೆ. ಹೇಳಿದ್ದೀರಿ ಬಿಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಡಾ: ನಾರಾಯಣ ಗೌಡ : Dy.S.P. ಯವರು, ಒಳ್ಳೆಯ ಕುಟುಂಬದ ಮಕ್ಕಳನ್ನು ತಂದು ಲಕ್ಷ ಎರಡು ಲಕ್ಷ ರೂಪಾಯಿ collection ಮಾಡಿದ್ದಾರೆ.

ಉಪಾಧ್ಯಕ್ಷರು : ಅವರ ಮೇಲೆ action ತೆಗೆದುಕೊಳ್ಳಬೇಕು.

ಡಾ: ನಾರಾಯಣ ಗೌಡ : ಅದೇ ದಂಧೆಗೆ ಅವರು ಇಳಿದಿದ್ದಾರೆ. ದಯವಿಟ್ಟು ಅವರನ್ನು transfer ಮಾಡಬೇಕಾಗಿದೆ. ಇಲ್ಲವೆಂದರೆ ನಾನು ನಿಜವಾಗಿಯೂ ಪ್ರತಿಭಟಿಸಬೇಕಾಗುತ್ತದೆ.

ಉಪಾಧ್ಯಕ್ಷರು : ಬೇಡ ಬೇಡ ಸ್ವಲ್ಪ ತಾಳಿ.

ಡಾ: ನಾರಾಯಣ ಗೌಡ : ನಮ್ಮ minister ರವರು, ಅವರನ್ನು transfer ಮಾಡಿಸುತ್ತೇನೆಂದು ಹೇಳಿ ಬಿಡಲಿ.

ಉಪಾಧ್ಯಕ್ಷರು : ಅವರು Home Minister ರವರು ಹೇಳಬೇಕು.

ಡಾ: ನಾರಾಯಣ ಗೌಡ : ಅವರು ಹೇಳಲೇಬೇಕು ಅವರನ್ನು transfer ಮಾಡಿಸಲೇಬೇಕು.

ಉಪಾಧ್ಯಕ್ಷರು : ಈಗ ಅವರು, Home Minister ರವರ ಜೊತೆಗೆ ಮಾತನಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಎನ್.ಹೆಚ್.ಕೋನರೆಡ್ಡಿ : ಸರ್ಕಾರದ ಪರವಾಗಿ ಹೇಳಿ sir ಅದರಲ್ಲೇನು ತಪ್ಪಿದೆ?

ಶ್ರೀ ಡಿ.ಕೆ.ಶಿವಕುಮಾರ್ : ನಾನು ಇವರ ಪರವಾಗಿ ಇರುವವರು.

ಡಾ: ನಾರಾಯಣ ಗೌಡ : ನಾನು ಇದನ್ನು ಎರಡು ವರ್ಷಗಳಿಂದ ಕೇಳುತ್ತಿದ್ದೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ : ಈ ಸದನದ ಒಬ್ಬ ಸದಸ್ಯರಿಗೆ ಇಷ್ಟು ತೊಂದರೆಯಾಗುತ್ತದೆ ಎಂದಾಗ ಸರ್ಕಾರ ಒಂದು ತೀರ್ಮಾನ ಹೇಳಲಿ.

ಶ್ರೀ ಬಿ.ಬಿ.ನಿಂಗಯ್ಯ : ಪಾಪ ಆ ಶಾಸಕರಿಗೆ ಇಷ್ಟೊಂದು ನೋವು, ಸಂಕಟ ಇದೆ, ಅಧಿಕಾರಿ ದೊಡ್ಡವರಲ್ಲ.

ಡಾ: ನಾರಾಯಣ ಗೌಡ : ನನಗೆ ಉತ್ತರ ಕೊಡಿಸಿ, ಇಲ್ಲವೆಂದರೆ ನಾನು ಸದನದ ಬಾವಿಗೆ ಬಂದು ಪ್ರತಿಭಟಿಸುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಬಿ.ಬಿ.ನಿಂಗಯ್ಯ : ಆಮೇಲೆ ನೀವು ಏನು Home Minister ಆಗುವ chances ಇದೆಯಂತೆ? ಪಾಪ ಶಾಸಕರು ಅವರ ಊರಿನಲ್ಲಿ ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ.

(ಈ ಹಂತದಲ್ಲಿ ಡಾ: ನಾರಾಯಣ ಗೌಡರವರ ಜೊತೆಗೆ JD(S)ನ ಇತರೆ ಸದಸ್ಯರು ಸದನದ ಬಾವಿಗೆ ಆಗಮಿಸಿದರು)

ಉಪಾಧ್ಯಕ್ಷರು : ಹೇಳಿದ್ದಾರೆ ಬಿಡಿ. Home minister ರವರು ಬರಲಿ ಅವರ ಕಡೆಯಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ಕೆ.ಗೋಪಾಲಯ್ಯ : ಮಾನ್ಯ ಉಪಾಧ್ಯಕ್ಷರೆ, ಇಷ್ಟೊಂದು ನೋವಿನಿಂದ ಸದಸ್ಯರು ತಮ್ಮ ನೋವು ಅನ್ನು ಹೇಳುತ್ತಿದ್ದಾರೆ. ಇದಕ್ಕೂ ಉತ್ತರ ಬರಲಿಲ್ಲವೆಂದರೆ ಹೇಗೆ? ಅವರೊಬ್ಬ ಶಾಸಕರಾಗಿ ಹೇಗೆ ಕೆಲಸ ಮಾಡುವುದಕ್ಕೆ ಆಗುತ್ತದೆ?

ಶ್ರೀ ಎನ್.ಹೆಚ್.ಕೋನರೆಡ್ಡಿ : ಇದೇ ಸದನದಲ್ಲಿ ಅವರು ಮೂರು ಸಾರಿ ಪ್ರಸ್ತಾಪಿಸಿದ್ದಾರೆ. ಶಾಸಕರೊಬ್ಬರ ಮಾತು ಕೇಳಿ Dy.S.P. ಯವರನ್ನು ವರ್ಗ ಮಾಡುವುದಕ್ಕೆ ಆಗುವುದಿಲ್ಲವೇ?

(ಸದನದ ಬಾವಿಯಲ್ಲಿದ್ದ ಡಾ: ನಾರಾಯಣ ಗೌಡರವರು ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ಗೌಡ್ರೆ ಇಲ್ಲಿ ಕೇಳಿ ಈ ಪ್ರಶ್ನೆ ಮುಂದಕ್ಕೆ ಹಾಕಿ Home Minister ಕಡೆಯಿಂದ ನಾನು ಉತ್ತರ ಕೊಡಿಸುತ್ತೇನೆ. ದಯವಿಟ್ಟು ತಾವೆಲ್ಲರು ತಮ್ಮ ಸೀಟ್‌ಗೆ ಹೋಗಿ.

ಶ್ರೀ ಡಿ.ಕೆ.ಶಿವಕುಮಾರ್ : ಈಗ ಉಪಾಧ್ಯಕ್ಷರು ಒಂದು suggestion ಕೊಡುತ್ತಿದ್ದಾರೆ.

ಉಪಾಧ್ಯಕ್ಷರು : ಗೌಡ್ರೆ ಈಗ ಇದನ್ನು ಮುಂದಕ್ಕೆ ಹಾಕುತ್ತೇವೆ. Home Minister ಬಂದರೆ ಅವರ ಕಡೆಯಿಂದ ಉತ್ತರ ಕೊಡಿಸುತ್ತೇವೆ. (ಗೊಂದಲ) ಈಗ ಅವರನ್ನು ಕರೆಸೋಣ, ಅವರು ಈಗ ಬರುತ್ತಾರೆ ಇವತ್ತೇ ಉತ್ತರ ಕೊಡಿಸೋಣ. ಅವರು ಆ ಮನೆಯಲ್ಲಿ ಇದ್ದಾರೆ. (ಗೊಂದಲ) ಈಗ ಅವರನ್ನು ಕರೆಸೋಣ, ತಾವು ದಯವಿಟ್ಟು ತಮ್ಮ ಸೀಟ್‌ಗಳಿಗೆ ಹೋಗಿ. ಅವರ ಕಡೆಯಿಂದಲೇ ಉತ್ತರ ಹೇಳಿಸುತ್ತೇವೆ ತಾವು ತಮ್ಮ ಸೀಟ್‌ಗಳಿಗೆ ಹೋಗಿ. (ಗೊಂದಲ) ಗೌಡ್ರೆ ಇಲ್ಲಿ ಕೇಳಿ, ಈಗ ಇದನ್ನು defer ಮಾಡುತ್ತಿದ್ದೇವೆ, Home Minister ಕರೆಯಿಸಿ ಅವರ ಕಡೆಯಿಂದ statement

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೊಡಿಸೋಣ. (ಗೊಂದಲ) ಇವತ್ತೇ ಕೊಡಿಸುತ್ತೇವೆ ದಯವಿಟ್ಟು ತಮ್ಮ ಸೀಟುಗಳಿಗೆ ಹೋಗಿ. ದಯವಿಟ್ಟು ತಾವು ಅರ್ಥ ಮಾಡಿಕೊಳ್ಳಿ. (ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಇದಕ್ಕೆ ಸಂಬಂಧಪಟ್ಟ ಹಾಗೆ ನಾಳೆಯೇ ಉತ್ತರ ಕೊಡಿಸಿ.

ಉಪಾಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನಿನ್ನೆಯು ಹೀಗೆ ಆಯಿತಾ?

ಉಪಾಧ್ಯಕ್ಷರು : ಆಯಿತು ಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅವರು ವಿಷಯ ಮಂಡಿಸಿದ್ದು ಏನೆಂದರೆ, ಒಬ್ಬ Dy.S.P. ಸಲುವಾಗಿ. ಮಾನ್ಯ ನಾರಾಯಣ ಗೌಡರವರು ಅಲ್ಲಿ represent ಮಾಡುವಂಥ ಶಾಸಕರು. ನಾವು ಬಹಳಷ್ಟು ಶಾಸಕರು ಇದನ್ನೆಲ್ಲಾ ಅನುಭವಿಸುತ್ತೇವೆ. ಇದೊಂದು symbolic case ಆಗಿ ಇವತ್ತು ಬಂದಿದೆ. ಅವರು ಪದೇ ಪದೇ ಇಲ್ಲಿ ಪ್ರಸ್ತಾಪಿಸುತ್ತಿದ್ದಾರೆ. ಇಂಥ ವಿಚಾರ ಪ್ರಸ್ತಾಪಿಸಿದಾಗ ಸರ್ಕಾರ ಈ ಬಗ್ಗೆ ಗಂಭೀರವಾಗಿ ಸ್ಪಂದಿಸುತ್ತಿಲ್ಲ. Opposition ನವರು ಬರಿ ನಾವು ಹೇಳುವುದಕ್ಕೆ ಕೇಳುವುದಕ್ಕೆ ಅಷ್ಟೇ ಅಲ್ಲ. ಅವರು immediateಆಗಿ action ತೆಗೆದುಕೊಳ್ಳುತ್ತೇನೆಂದು ಹೇಳಲಿ. ಅದು ಬಿಟ್ಟು ಇಲ್ಲಿಯವರೆಗೆ ಪ್ರಸ್ತಾಪ ಆಗಿದೆಯಲ್ಲವೇ? ಒಂದು ಕೊಲೆ ಪ್ರಕರಣದ ಬಗ್ಗೆ ಹೇಳುತ್ತಾರೆ. ಕೊಲೆ ಪ್ರಕರಣದಲ್ಲಿ ಕರ್ತವ್ಯ ನಿರ್ವಹಣೆ ಮಾಡಿಲ್ಲ ಎಂದು ಹೇಳುತ್ತಾರೆ. 8 ಕೊಲೆಗಳಾಗಿದೆ ಎಂದು ಹೇಳುತ್ತಾರೆ. ಅವರು ಈ ರೀತಿ ಹೇಳಿದಾಗ ಅದನ್ನು ಗಂಭೀರವಾಗಿ ತೆಗೆದುಕೊಂಡು immediately action ತೆಗೆದುಕೊಂಡು suspend ಮಾಡುತ್ತೇನೆ ಎಂದು ಹೇಳಬೇಕಲ್ಲವೆ? ಆ ರೀತಿಯಾದ positive ಆದಂಥ reply ಸರ್ಕಾರ ಕೊಡುತ್ತಿಲ್ಲ. ಶಾಸಕರು ಈ ರೀತಿಯಾಗಿ ದರಣಿಗೆ ಬರುವುದು ಅನಿವಾರ್ಯವಾಗುತ್ತದೆ. ಒಬ್ಬ ವ್ಯಕ್ತಿಯ ಸಲುವಾಗಿ, ಒಬ್ಬ police ಅಧಿಕಾರಿಯ ಸಲುವಾಗಿ, ಸರ್ಕಾರ ಇದೊಂದು ಪ್ರತಿಷ್ಠೆಯನ್ನಾಗಿ ತೆಗೆದುಕೊಳ್ಳುತ್ತಿದೆಯಲ್ಲ ಇದಕ್ಕೆ ಇವರ ಸರ್ಕಾರಕ್ಕೆ ನಾಚಿಕೆ ಬರಬೇಕು.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಒಂದು ನಿಮಿಷ. ಉಪಾಧ್ಯಕ್ಷರೆ, ನಾನು ಸದನದ ಗಮನಕ್ಕೆ ಒಂದು ವಿಷಯ ತರುತ್ತೇನೆ. ನಾನು ಅಂದು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಇದೇ ಮುಖ್ಯಮಂತ್ರಿಗಳ ಕ್ಷೇತ್ರದ ಜಯಪುರ ಎನ್ನುವ village ನಲ್ಲಿ ನಮ್ಮ ಕಾಲದಲ್ಲಿ ನಾವು hospital sanction ಮಾಡಿ ಕಟ್ಟಡ ಕಟ್ಟಿಸಿ ಕೊಟ್ಟೆವು. ನಮ್ಮನ್ನು ಬಿಟ್ಟು ಅವರು ಉದ್ಘಾಟನೆ ಮಾಡಬೇಕೆಂದು ಹೋದರು. ಅವರು ಉದ್ಘಾಟನೆ ಮಾಡಲಿಕ್ಕೆ ಅಡಚಣೆ ಮಾಡಿದ ಎಂದು ಅಲ್ಲಿನ Dy.S.P. ಯವರ ಮೇಲೆ ಇದೇ ಸದನದಲ್ಲಿ ದೊಡ್ಡ ಗಲಾಟೆ ಎಬ್ಬಿಸಿ, ಶಾಸಕರು ಉದ್ಘಾಟನೆ ಮಾಡಲಿಕ್ಕೆ ಹೋಗಲಿಲ್ಲ, ಹೀಗಾಗಿ ಅವನನ್ನು suspend ಮಾಡಬೇಕೆಂದು ಈ ಸದನದಲ್ಲಿ ಚರ್ಚೆ ಮಾಡಿದಂಥವರು ಈ ಮುಖ್ಯಮಂತ್ರಿಗಳು. ಅಲ್ಲಿ 8 ಕೊಲೆಯಾಗಿದೆ, ಆ ಅಧಿಕಾರಿಯ ಮೇಲೆ DG and IGP ಯವರು ಅವನ work ಬಗ್ಗೆ report ಕೊಡುತ್ತಾರೆ. ಹುಡುಗಾಟದಲ್ಲಿ ಇವರು ಅದೇ ಅಧಿಕಾರಿಯನ್ನು ಹಿಡಿದುಕೊಂಡು ಆಟ ಆಡಿಕೊಂಡು ಉತ್ತರ ಕೊಟ್ಟುಕೊಂಡು ಕುಳಿತರೆ ಮಾರ್ಯಾದೆ ಇರತಕ್ಕಂಥ ಸರ್ಕಾರ ನಡೆಸತಕ್ಕಂಥ ರೀತಿಯೇ ಇದು? ನನಗೆ ಆ ಜಾಗದಲ್ಲಿ ಕುಳಿತಾಗ ಇಲ್ಲಿ ಹೇಗೆ ನಡೆದುಕೊಂಡಿದ್ದಾರೆಂದು ಅನುಭವ ಆಗಿದೆ.

(ಗೊಂದಲ)

ಉಪಾಧ್ಯಕ್ಷರು : ಕುಮಾರಸ್ವಾಮಿಯವರೆ, Home Minister ರವರನ್ನು ಕರೆಯಿಸಿ ಅವರ ಕಡೆಯಿಂದಲೇ statement ಕೊಡಿಸುತ್ತೇವೆ. ಈಗಲೇ ಕರೆಸುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ಗೌಡ್ರೆ ಅರ್ಥ ಮಾಡಿಕೊಳ್ಳಿ ಸದನ ನಡೆಯಬೇಕೊ ಬೇಡವೋ? ನಿಮಗೆ ಉತ್ತರ ಕೊಡಿಸುತ್ತೇವೆ, ಅರ್ಥ ಮಾಡಿಕೊಳ್ಳಿ. ಈಗಲೇ ನಿಮಗೆ ಉತ್ತರ ಕೊಡಿಸುತ್ತೇವೆ. ದಯವಿಟ್ಟು ನೀವು ನಿಮ್ಮ ನಿಮ್ಮ ಸೀಟುಗಳಿಗೆ ಹೋಗಿ.

(ಸದನದ ಬಾವಿಯಲ್ಲಿದ್ದ ಡಾ: ನಾರಾಯಣ ಗೌಡರವರು ಮಾತನಾಡುತ್ತಿದ್ದರು)

(ಗೊಂದಲ)

ಉಪಾಧ್ಯಕ್ಷರು : ಗೌಡ್ರೆ ನೀವು ಸ್ವಲ್ಪ ಅರ್ಥ ಮಾಡಿಕೊಳ್ಳಿ. ಇಲ್ಲಿ ಕೇಳಿ ಇವತ್ತೇ ಈಗಲೇ ಉತ್ತರ ಕೊಡಿಸುತ್ತೇವೆ. ಬೇರೆ ಕಲಾಪ ನಡೆಯಬೇಕೋ ಬೇಡವೋ?



ತಿದ್ದುಪಡಿಯಾಗದ uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

(ಗೊಂದಲ)

ಉಪಾಧ್ಯಕ್ಷರು : ಗೃಹ ಸಚಿವರು ಆ ಮನೆಯಲ್ಲಿದ್ದಾರೆ ಕರೆಸೋಣ. ದಯವಿಟ್ಟು ನೀವು ಸಹಕಾರ ಕೊಡಿ. ದಯವಿಟ್ಟು ಕುಮಾರಸ್ವಾಮಿಯವರೇ ಹೇಳಿ. ಕಲಾಪ ನಡೆಯಲಿ ಈಗಲೇ ಉತ್ತರ ಕೊಡಿಸೋಣ. ದಯವಿಟ್ಟು ತಮ್ಮ ಸೀಟುಗಳಿಗೆ ಹೋಗಿ. ಈಗಲೇ ಉತ್ತರ ಕೊಡಿಸೋಣ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಒಬ್ಬ ಶಾಸಕರು ಮೂರು ಬಾರಿ ಈ ವಿಷಯ ಪ್ರಸ್ತಾಪಿಸಿದ ಮೇಲೆ Home Minister ರವರು ಉತ್ತರ ಕೊಡಬೇಕು. ಈ ರೀತಿಯಾಗಿ ಮುಂದಕ್ಕೆ ತಳ್ಳಿಕೊಂಡು ಹೋದರೆ ಶಾಸಕರಾಗಿ ಅವರು ಅಲ್ಲಿ ಹೇಗೆ ಕೆಲಸ ಮಾಡುವುದು? ನಾನು ಕೂಡ murder ಆಗಿರುವ ಹಳ್ಳಿಗೆ ಹೋಗಿ ಬಂದೆ. ಹಳ್ಳಿಯ ಆ ಮನೆಯ ಪರಿಸ್ಥಿತಿಗಳನ್ನು ನೋಡಿ ಬಂದೆ. ಕೊಲೆಯಾಗತಕ್ಕಂಥದ್ದಕ್ಕೆ ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಎಲ್ಲಾ ರೀತಿಯ ಬೆಂಬಲ ಕೊಲೆಗಾರರಿಗೆ ಸಿಗುತ್ತದೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ಎರಡು ವರ್ಷಗಳಿಂದ ಇಂಥ ಗಂಭೀರವಾದ ವಿಚಾರ ಹೇಳುವಾಗ ಎರಡು ವರ್ಷದಿಂದ enquiry ಮಾಡಲಿಲ್ಲವೆಂದರೆ ಏನರ್ಥ?

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಇದಾದ ಮೇಲೆ ಮತ್ತೆ ಮೂರು case ಆಗಿದೆಯೆ? ದೇವರೇ ಕಾಪಾಡಬೇಕು. ಉಪಾಧ್ಯಕ್ಷರೆ, ದಯವಿಟ್ಟು ಗೃಹ ಸಚಿವರನ್ನು ಕರೆಯಿಸಿ. ಅದಕ್ಕೆ ಅವರೇನು action ತೆಗೆದುಕೊಳ್ಳುತ್ತಿದ್ದಾರೆನ್ನುವ ಬಗ್ಗೆ ದಯವಿಟ್ಟು ನೀವು ಅವರಿಂದ ಉತ್ತರ ಕೊಡಿಸಿ.

(ಮುಂದು)

14.06.2017 5.30(36) KS:CP

ಉಪಾಧ್ಯಕ್ಷರು:- ಮಾನ್ಯ ಗೃಹ ಸಚಿವರು ಮೇಲ್ಮನೆಯಲ್ಲಿದ್ದಾರೆ. ಇಲ್ಲಿಗೆ ಬರುವುದಕ್ಕೆ ಸಂದೇಶ ಕಳುಹಿಸಿದ್ದೇನೆ. ಅರ್ಧ ಗಂಟೆಯಲ್ಲಿ ನಿಮಗೆ ಉತ್ತರ ಕೊಡಿಸುತ್ತೇನೆ. ಈಗಲೇ ಉತ್ತರ ಕೊಡಿಸುತ್ತೇನೆಂದು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹೇಳುತ್ತಿದ್ದೇನೆ. ಆದರೆ, ನೀವು ಅರ್ಥ ಮಾಡಿಕೊಳ್ಳುತ್ತಿಲ್ಲ. ಮಾನ್ಯ ಸಚಿವರು ಇಲ್ಲಿಗೆ ಬರುತ್ತಿದ್ದಾರೆ. ಅವರು ಉತ್ತರ ಕೊಡದಿದ್ದರೆ ಆಮೇಲೆ ಕೇಳಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೃಹ ಸಚಿವರು ಬಂದು ಆ ಬಗ್ಗೆ ಇಲ್ಲಿ ಉತ್ತರ ಕೊಡಲಿ ಅಥವಾ ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡುವುದಕ್ಕೆ ಮತ್ತು ಅವರ ಮೇಲೆ action ತೆಗೆದುಕೊಳ್ಳುವುದಕ್ಕೆ ನನಗೆ ಅಧಿಕಾರ ಇಲ್ಲ. ಈ ಅಧಿಕಾರ ಮಾನ್ಯ ಮುಖ್ಯ ಮಂತ್ರಿಯವರ ಹತ್ತಿರ ಇದೆ. ಆದ್ದರಿಂದ, ನಾನು ಅಸಹಾಯಕ ಎಂದಾದರೂ ಹೇಳಿಬಿಡಲಿ. ಏಕೆಂದರೆ, ಎರಡು ವರ್ಷದಿಂದ ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಅವರು ಅಸಹಾಯಕರಾಗಿದ್ದಾರೆಂದು ನನಗೆ ಅನಿಸುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರದಲ್ಲಿ defacto ಮಾಡುವ Home Minister ಬೇರೊಬ್ಬರು ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೃಹ ಸಚಿವರಿಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಸದನ ಮುಗಿಯುವವರೆಗೆ ನೀವು Home Minister ಆಗಿರಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. Atleast ಮಾನ್ಯ ಪರಮೇಶ್ವರ್‌ರವರು ಹೋಗುವಾಗ ಒಂದು ಒಳ್ಳೆಯ ಕೆಲಸವನ್ನು ಮಾಡಿಕೊಂಡು ಹೋಗಲಿ. ಅಂದರೆ, ಮಾನ್ಯ ಶಾಸಕರಿಗೆ ಗೌರವ ತರುವಂಥ ಒಂದು ಕೆಲಸವನ್ನು ಅವರು ಮಾಡಲಿ.

ಶ್ರೀ ವೈ.ಎ.ನಾರಾಯಣಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಕೆಂಪಯ್ಯನವರನ್ನು ಕರೆಸಿ ಅವರಿಂದ ಉತ್ತರ ಕೊಡಿಸಿಬಿಡಿ.

ಉಪಾಧ್ಯಕ್ಷರು:- ನಿಮಗೆ ಉತ್ತರ ಕೊಡಿಸುತ್ತೇನೆಂದು ನಾನು ಹೇಳಿದ್ದೀನಿ, ನಿಮಗೆ ನಂಬಿಕೆ ಇಲ್ಲವೇ?

ಶ್ರೀ ವೈ.ಎ.ನಾರಾಯಣಸ್ವಾಮಿ:- ಈಗಲೇ ಮಾನ್ಯ ಸಚಿವರನ್ನು ಕರೆಸಿ.

ಉಪಾಧ್ಯಕ್ಷರು:- ಈಗಲೇ ಕರೆಸುತ್ತೇನೆ. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ.

**(ಈ ಹಂತದಲ್ಲಿ ಸದನ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಸದಸ್ಯರು ಮಾತನಾಡುತ್ತಿದ್ದರು)**

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ವೈ.ಎ.ನಾರಾಯಣಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, Home Minister ಇಲ್ಲದೆ ಇದ್ದರೆ ಕೆಂಪಯ್ಯನವರನ್ನು ಕರೆಸಿ ಉತ್ತರ ಕೊಡಿಸಿ.

ಶ್ರೀ ಎಸ್. ಎನ್. ನಾರಾಯಣಸ್ವಾಮಿ ಕೆ. ಎಂ.:- ಕೆಂಪಯ್ಯನವರನ್ನು ಏಕೆ ಕರೆಸಬೇಕು. ಕೆಂಪಯ್ಯನವರು ಈ ಮನೆಯ ಸದಸ್ಯರಲ್ಲ. ಆದ್ದರಿಂದ, ಕೆಂಪಯ್ಯನವರು ಇಲ್ಲಿಗೆ ಏಕೆ ಬರಬೇಕು.

ಉಪಾಧ್ಯಕ್ಷರು:- ಆಯಿತು. ಈಗ ಸದನವನ್ನು 10 ನಿಮಿಷ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 5 ಗಂಟೆ 32 ನಿಮಿಷಕ್ಕೆ 10 ನಿಮಿಷಗಳ ಕಾಲ ಮುಂದೂಡಿ ಪುನ: 10 ನಿಮಿಷದ ನಂತರ ಸಭೆ ಸೇರಲು ನಿಶ್ಚಯಿಸಿತು)**

14-06-2017-5-40-37-MS-HS.

( ಪುನ: ಸದನದ ಕಲಾಪವು ಸಂಜೆ 5 ಗಂಟೆ 47 ನಿಮಿಷಕ್ಕೆ ಪ್ರಾರಂಭಗೊಂಡಾಗ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು )

( ಈ ಹಂತದಲ್ಲಿ ಜೆಡಿಎಸ್‌ನ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು )

ಉಪಾಧ್ಯಕ್ಷರು: ನಾರಾಯಣಗೌಡರ ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಗೃಹಮಂತ್ರಿಗಳೆ ತಾವು ಉತ್ತರವನ್ನು ಕೊಡಿ.

ಡಾ:ಜಿ.ಪರಮೇಶ್ವರ್(ಗೃಹ ಮಂತ್ರಿಗಳು): ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ನಾರಾಯಣಗೌಡರು ಬಹಳ ಗಂಭೀರವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಯಾವುದೇ ಅಧಿಕಾರಿಯಾಗಲಿ ಪೋಲೀಸ್ ಇಲಾಖೆ ಒಂದರಲ್ಲಿಯೇ ಅಲ್ಲ, ಯಾವುದೇ ಅಧಿಕಾರಿಯಾಗಲಿ ಕಾನೂನಿನ ಚೌಕಟ್ಟಿನ ಒಳಗಡೆಯೇ ಕೆಲಸವನ್ನು ಮಾಡಬೇಕಾಗುತ್ತದೆ. ಒಂದು ವೇಳೆ ಯಾರಾದರೂ ಕಾನೂನಿಗೆ ವಿರುದ್ಧವಾಗಿ ಕೆಲಸವನ್ನು ಮಾಡಿದ್ದರೆ ಅಥವಾ ಯಾರಿಗೋ ಸಹಾಯ ಮಾಡುವುದಕ್ಕಾಗಲಿ, ಯಾವುದೇ ರಾಜಕೀಯ ಒತ್ತಡದಿಂದಾಗಲಿ ಅಥವಾ ಬೇರೆ ಯಾವುದೇ ಕಾರಣದಿಂದ ಅಂತಹ ಕೆಲಸ ಮಾಡಿದ್ದರೆ ಬಹುಶ: ಅವರ ಮೇಲೆ ನಾವು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಕೊಲೆ ಪ್ರಕರಣ ನಡೆದಿದೆ, ಈಗಾಗಲೇ ಇದರ ಬಗ್ಗೆ ತನಿಖೆಯು ನಡೆಯುತ್ತಿದೆ. ಅದರ ಬಗ್ಗೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ಆದರೆ ಈ ಅಧಿಕಾರಿಯೇ ಶಾಮೀಲಾಗಿದ್ದಾನೆಂದು ನಾರಾಯಣಗೌಡರ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಆಪಾದನೆಯಾಗಿದೆ. ಬಹುಶ: ನನಗೆ ಅದರ ಬಗ್ಗೆ ಸತ್ಯಾಸತ್ಯತೆಯನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಒಂದು ವೇಳೆ ಅದು ಸತ್ಯವೇ ಆಗಿದ್ದರೆ ನಾನು ಆ ಅಧಿಕಾರಿಯನ್ನು ಒಂದು ನಿಮಿಷ ಕೂಡ ಆ ಸ್ಥಾನದಲ್ಲಿ ಇಡುವುದಿಲ್ಲ. ಅಲ್ಲಿಂದ ಅವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡುತ್ತೇನೆ. ಅವರಿಗೆ ಯಾವ ರೀತಿ ಎಲ್ಲಿ post ಮಾಡಬೇಕು, Non-Executive ಗಾ ಅಥವಾ Executive ಗಾ, ಅದನ್ನು ನಂತರ ನಾನು ತೀರ್ಮಾನ ಮಾಡುತ್ತೇನೆ. ಆದರೆ ಒಂದು ವೇಳೆ ಅವರು ಕೆ.ಆರ್.ಪೇಟೆ ನಡೆದಂತಹ ಘಟನೆಯಲ್ಲಿ ಅಥವಾ ಬೇರೆ ಯಾವುದೇ ಘಟನೆಯಲ್ಲಿ ಅವರ ಕೈವಾಡ ಇದ್ದರೆ ಅವರು involve ಆಗಿದ್ದು ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡಿದ್ದರೆ ತಕ್ಷಣ ಇವತ್ತೆ ಅವರನ್ನು ಅಲ್ಲಿಂದ transfer ಮಾಡುವ ಬಗ್ಗೆ ಆದೇಶ ಮಾಡುತ್ತೇನೆ. ಮಾನ್ಯ ಸದಸ್ಯರುಗಳು ತಾವುಗಳು ತಮ್ಮತಮ್ಮ ಸ್ಥಾನಕ್ಕೆ ಹೋಗಬೇಕು. ಈಗ ತಾನೇ ತಾವು ಹೇಳಿದ್ದೀರಿ. ನಾನು ತಕ್ಷಣ ತಮಗೆ respond ಮಾಡಿದ್ದೇನೆ. ಇವತ್ತೇ ನಾನು D.G.ಯವರ ಜೊತೆಯಲ್ಲಿ ಮಾತನಾಡುತ್ತೇನೆ. ಅವರು ಯಾವ ರೀತಿಯಾಗಿ ನಡೆದುಕೊಂಡಿದ್ದಾರೆಂದು ನಮಗಂತೂ ಗೊತ್ತಾಗುತ್ತದೆಯಲ್ಲಾ. ಈ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ. ಆದ್ದರಿಂದ ತಾವುಗಳು ತಮ್ಮ ತಮ್ಮ ಸ್ಥಾನಕ್ಕೆ ಹೋಗಬೇಕು.

ಉಪಾಧ್ಯಕ್ಷರು: ನಾರಾಯಣಗೌಡರೆ, ಮಾನ್ಯ ಗೃಹಮಂತ್ರಿಗಳು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ತಾವುಗಳೆಲ್ಲರು ತಮ್ಮತಮ್ಮ ಸ್ಥಾನಗಳಿಗೆ ತೆರಳಬೇಕು.

( ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಜೆಡಿಎಸ್‌ನ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು )

(ಮುಂದು)

ವಿಸ. 14.06.2017/5.50/38/ಎನ್.ಸಿ.ಕೆ/ಹೆಚ್.ಎಸ್

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಉಪ ಸಭಾಧ್ಯಕ್ಷರೆ, I should complement this Government. ಶ್ರೀ ನಾರಾಯಣಗೌಡರಂಥವರಿಗೂ ಕೂಡ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೋಪ ಬರುವ ಹಾಗೆ, ಇಲ್ಲಿಗೆ ಬರುವ ರೀತಿಯಲ್ಲಿ ಅವರಿಗೆ ಮಾಡಿದರಲ್ಲ, ನಿಜವಾಗಲೂ ಈ ಸರ್ಕಾರ great.

ಡಾ:ಜಿ.ಪರಮೇಶ್ವರ(ಮಾನ್ಯ ಗೃಹ ಸಚಿವರು): ನಾವು ಯಾವತ್ತೂ great. ಸುರೇಶ್‌ಕುಮಾರ್‌ರವರು ಅಪರೂಪಕ್ಕೆ ನೀವು ಆ ರೀತಿ certificate ಕೊಟ್ಟುಬಿಟ್ಟರೆ ಹೇಗೆ? ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವವರಿಗೆ ನಮ್ಮ ಸರ್ಕಾರದಲ್ಲಿ ಎಲ್ಲ ರೀತಿಯ ಸಹಕಾರ ಇದೆ. ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡುವವರ ಮೇಲೆ ಖಂಡಿತವಾಗಿ ಕ್ರಮಕೈಗೊಳ್ಳುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್: ಎರಡು ವರ್ಷಗಳಿಂದ ಅವರು ಒದ್ದಾಡುತ್ತಿರುವುದು. ನೀವು ಇರಲಿಲ್ಲ. ಅವರು ಮಾತನಾಡಿದ ರೀತಿ, ಅವರು ಬಂದಿದ್ದು, ಅವರ ಆಕ್ರೋಶ ನೀವು ನೋಡಬೇಕಾಗಿತ್ತು.

ಡಾ: ಜಿ.ಪರಮೇಶ್ವರ (ಮಾನ್ಯ ಗೃಹ ಸಚಿವರು): ನಾನು ಇರಲಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ಅದಕ್ಕೋಸ್ಕರ ಅವರಿಗೆ ಆಕ್ರೋಶವೇ?

ಡಾ: ಜಿ.ಪರಮೇಶ್ವರ (ಮಾನ್ಯ ಗೃಹ ಸಚಿವರು): ಅವರ ಆಕ್ರೋಶ ನೋಡುವುದಕ್ಕೆ ನಾನು ಇರಲಿಲ್ಲ.

SRI S SURESH KUMAR: Again, you may consider it as a complement.

ಡಾ: ಜಿ.ಪರಮೇಶ್ವರ (ಮಾನ್ಯ ಗೃಹ ಸಚಿವರು): Thank you.

ಶ್ರೀ ನಾರಾಯಣ ಗೌಡ: ಮಾನ್ಯ ಉಪ ಸಭಾಧ್ಯಕ್ಷರೆ, ನಾನು ತುಂಬ ತುಂಬ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಆದರೆ ಆ ಅಧಿಕಾರಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು: ಕ್ರಮ ತೆಗೆದುಕೊಳ್ಳುತ್ತಾರೆ ಬಿಡಿ, ಹೇಳಿದ್ದಾರಲ್ಲಾ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಇವತ್ತೇ ವರ್ಗಾವಣೆ ಮಾಡುತ್ತಾರೆಂದು ಹೇಳಿಬಿಡಿ.

ಉಪಾಧ್ಯಕ್ಷರು: ಹೆಚ್.ಕೆ.ಕುಮಾರಸ್ವಾಮಿಯವರೇ ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಗಮನ ಸೆಳೆಯುತ್ತಿದ್ದೇನೆ. ಉತ್ತರ ಕೂಡ ಬಂದಿಲ್ಲ.



ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಉಪಾಧ್ಯಕ್ಷರು: ಇದರ ಬಗ್ಗೆ ನಾಳೆ ಉತ್ತರ ಕೊಡಿಸೋಣ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಇದು ಸಾರಿಗೆ ಸಚಿವರಿಗೆ ಕೇಳಿದ್ದೇನೆ. ಅದು miss ಆಗಿ ಇವರಿಗೆ ಹೋಗಿದೆ.

ಡಾ: ಹೆಚ್.ಸಿ.ಮಹದೇವಪ್ಪ(ಮಾನ್ಯ ಲೋಕೋಪಯೋಗಿ ಸಚಿವರು): ನಮ್ಮ ಇಲಾಖೆಗೆ ಸಂಬಂಧಪಟ್ಟಿದ್ದರೂ ಅದು ಸಾರಿಗೆ ಇಲಾಖೆಗೆ ಸೇರಿದೆ. ಆದರೂ ಸಾರಿಗೆ ಇಲಾಖಾ ಸಚಿವರಿಗೆ ರಸ್ತೆ ಮಾಡುವುದಕ್ಕೆ ಅವರಿಗೆ ನಾನು ಹೇಳಿದ್ದೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಶುಕ್ರವಾರ ಕೊಡಿ.

ಉಪಾಧ್ಯಕ್ಷರು: ಶ್ರೀ ಅರವಿಂದ ಲಿಂಬಾವಳಿ ಕೇಳಿ.

7. ಗಮನ ಸೆಳೆಯುವ ಸೂಚನೆ

ವಿಷಯ: ಸಿದ್ದಾಪುರ ಗ್ರಾಮ ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ
ಸರ್ವೆ ನಂ.3/1ಎಪಿ/1ರ ಜಮೀನನ್ನು ಆಸ್ಪತ್ರೆ ನಿರ್ಮಾಣ ಮಾಡಲು
ಬಿ.ಎಂ.ಟಿ.ಸಿ ಯಿಂದ ಆರೋಗ್ಯ ಇಲಾಖೆಗೆ ಹಸ್ತಾಂತರಿಸದೇ ಇರುವ ಬಗ್ಗೆ.

\- - -

ಶ್ರೀ ಅರವಿಂದ ಲಿಂಬಾವಳಿ(ಮಹದೇವಪುರ): ನನ್ನ ಮತಕ್ಷೇತ್ರದ ಸಿದ್ದಾಪುರದಲ್ಲಿ 100 ಹಾಸಿಗೆಗಳ ಸರ್ಕಾರಿ ಆಸ್ಪತ್ರೆ ಕಟ್ಟಡಕ್ಕೆ ಬಿ.ಎಂ.ಟಿ.ಸಿ.ಯವರು land ಅನ್ನು transfer ಮಾಡಬೇಕು. ಅನಗತ್ಯವಾಗಿ ಅದನ್ನು ಇಟ್ಟುಕೊಂಡು ಕುಳಿತಿದ್ದಾರೆ. ಆ ನಿಮಿತ್ತವಾಗಿ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ(ಮಾನ್ಯ ಕೃಷಿ ಸಚಿವರು)(ಶ್ರೀ ಕಾಗೋಡು ತಿಮ್ಮಪ್ಪ, ಮಾನ್ಯ ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,
(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ಅರವಿಂದ ಲಿಂಬಾವಳಿ: ಅವರ ಪರವಾಗಿ ನೀವು ಉತ್ತರ ಕೊಡುವಿರಾ?

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ಸಚಿವರು)(ಶ್ರೀ ಕಾಗೋಡು ತಿಮ್ಮಪ್ಪ, ಮಾನ್ಯ ಕಂದಾಯ ಸಚಿವರ ಪರವಾಗಿ): ಹೌದು. ಮಾನ್ಯ ಅಧ್ಯಕ್ಷರೆ, ಆ ಜಾಗ ಆಸ್ಪತ್ರೆಗೆ ಈಗಾಗಲೇ ಹಂಚಿಕೆಯಾಗಿದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹಿಂದೆ ಅದೇ ಜಾಗ ಸಾರಿಗೆ ಇಲಾಖೆಗೆ ಹಂಚಿಕೆಯಾಗಿತ್ತು. ಸಂಪುಟದಲ್ಲಿ ತೀರ್ಮಾನವಾಗಿದೆ. ಅದಾದ ಮೇಲೆ ಸಾರಿಗೆ ಇಲಾಖೆಯವರು ಇಲ್ಲ ಈ ಜಾಗ ನಮಗೆ ಬೇಕು ಎಂದು ಅರ್ಜಿ ಕೊಟ್ಟಿದ್ದಾರೆ. ಅವರಿಗೆ ತತ್‌ಕ್ಷಣ ಮನವರಿಕೆ ಮಾಡಿ ಇದರ ಮೇಲೆ ಅವರು ಒತ್ತಾಯ ಮಾಡುವುದನ್ನು ಬಿಟ್ಟು ತಕ್ಷಣ ಆರೋಗ್ಯ ಇಲಾಖೆಗೆ ಅದನ್ನು ವರ್ಗಾವಣೆ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಬೇರೆ ಇಲಾಖೆಯವರು ಈ ಜಾಗ ನಮಗೆ ಬೇಕು ಎಂದು ಒತ್ತಾಯ ಮಾಡಿದ್ದರಿಂದ ಸ್ವಲ್ಪ ವಿಳಂಬವಾಗಿದೆ. ಅವರಿಗೆ ಮನವರಿಕೆ ಮಾಡಿಸಿ ಆರೋಗ್ಯ ಇಲಾಖೆಗೆ ಕೊಡಿಸುತ್ತೇವೆ.

ಶ್ರೀ ಅರವಿಂದ ಲಿಂಬಾವಳಿ: ಆರೋಗ್ಯ ಸಚಿವರು ಸದನದಲ್ಲಿದ್ದಾರೆ. ನಾನೂ ಒಪ್ಪುತ್ತೇನೆ. ಆದರೆ ಅವರ decision ಗೆ ಅವರು ಒಪ್ಪಿಕೊಳ್ಳುತ್ತಾರೆಯೇ ಎಂದು.

ಉಪಾಧ್ಯಕ್ಷರು: ಮಾಡುತ್ತಾರೆ ಬಿಡಿ. ಅವರು ಹೇಳುತ್ತಾರೆ. He is a part of the Government.

ಶ್ರೀ ಅರವಿಂದ ಲಿಂಬಾವಳಿ: ಇಲ್ಲ ಸರ್, ಆಗುತ್ತಿಲ್ಲ. ನಾನು ಮೂರು ಸಾರಿ ರಾಮಲಿಂಗಾರೆಡ್ಡಿಯವರ ಬಳಿ ಹೋಗಿದ್ದೇನೆ. ಇದು ಸರ್ಕಾರಿ ಜಾಗ, ಸರ್ಕಾರಿ ಆಸ್ಪತ್ರೆಗೆ ಕೊಡಬೇಕೆಂದು ಎರಡೂ ಸಲ ಇವರು ಬರೆದರು. ಆಮೇಲೆ ಕಂದಾಯ ಇಲಾಖೆಯವರು ಅದು ಅವರಿಗೆ ಹಸ್ತಾಂತರವಾಗಿದೆ ಅವರಿಗೆ ಬಿಟ್ಟುಕೊಡಿ ಎಂದು ಹೇಳಿದರು. ಬಿಡಿಎನವರು already ದುಡ್ಡು ಕಳುಹಿಸಿದ್ದಾರೆ. Health Departmentನಲ್ಲಿದೆ. ಅವರು ದುಡ್ಡು ಕಟ್ಟಿಸಿಕೊಳ್ಳುತ್ತಿಲ್ಲ. ಈ private real estateನವರು ಮಾಡುವ ರೀತಿಯಲ್ಲಿ ಬಿ.ಎಂ.ಟಿ.ಸಿ.ಯವರು ಮಾಡುತ್ತಿದ್ದಾರೆ. ಮಾನ್ಯ ಸಚಿವರು ಇಲ್ಲಿದ್ದಾರೆ. ಮಾನ್ಯ ಸಚಿವರು ಕೊಟ್ಟಿರುವಂಥ ಉತ್ತರಕ್ಕೆ ಅವರು ಬದ್ಧರೇ ಎಂದಷ್ಟೇ ಹೇಳಿದರೆ ನನಗೆ ಸಾಕು.

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು) : ಬಿ.ಎಂ.ಟಿ.ಸಿ.ಯವರು ಆ ಸ್ಥಳವನ್ನು ಹಣ ಕೊಟ್ಟು ಖರೀದಿ ಮಾಡಿದ್ದಾರೆ. ನಮ್ಮ ಪ್ರದೇಶವನ್ನು ಬೇರೆ ಇಲಾಖೆಯವರು ಹೇಗೆ ಕೊಡಲಿಕ್ಕಾಗುತ್ತದೆ? ಬೇಕಾದರೆ ಆ ಜಾಗ ತೆಗೆದುಕೊಳ್ಳಲಿ, ಅದಕ್ಕೆ alternate ಜಾಗವನ್ನಾದರೂ ನಮಗೆ ಕೊಡಬೇಕಲ್ಲವೇ?

ಶ್ರೀ ಅರವಿಂದ ಲಿಂಬಾವಳಿ: ಇಲ್ಲಿ alternate ಜಾಗದ ಪ್ರಶ್ನೆ ಬಂದಿಲ್ಲ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು) : ಸರ್ಕಾರದಿಂದ ನಮಗೆ ಉಚಿತವಾಗಿ ಕೊಟ್ಟಿರುವುದಲ್ಲ, ಹಣ ಕೊಟ್ಟು ಖರೀದಿಸಿರುವ ಜಾಗವದು. ನಾವು ಜಾಗ ಕೊಡುವುದಕ್ಕೆ ರೆಡಿಯಿದ್ದೇವೆ. Alternate ಜಾಗ ನಮಗೆ ಕೊಡಲಿ.

ಉಪಾಧ್ಯಕ್ಷರು: Alternate ಜಾಗ ಯಾರು ಕೊಡಬೇಕು?

ಶ್ರೀ ಅರವಿಂದ ಲಿಂಬಾವಳಿ: ಅಧ್ಯಕ್ಷರೆ, alternate ಜಾಗದ ಪ್ರಶ್ನೆ ಬಂದಿಲ್ಲ. ಹಿಂದೆ ಕ್ಯಾಬಿನೆಟ್‌ನಲ್ಲಿ ಬಿ.ಎಂ.ಟಿ.ಸಿ.ಯವರು ಎಷ್ಟು ದುಡ್ಡು ಕೊಟ್ಟು ಖರೀದಿ ಮಾಡಿದ್ದಾರೆ ಆ ದುಡ್ಡನ್ನು Health Departmentನವರು ಕಟ್ಟಬೇಕೆಂದು ನಿರ್ಣಯವಾಗಿರುವುದು. ದಯವಿಟ್ಟು ಸಚಿವರು ಆ ಸಚಿವ ಸಂಪುಟದ ತೀರ್ಮಾನವನ್ನು ತೆಗೆದು ನೋಡಲಿ. ಅದರ ಪ್ರಕಾರ ಹಣ ಕಟ್ಟುವುದಕ್ಕೋಸ್ಕರ ಬಿಡಿಎನವರು Health Departmentಗೆ ಹಣ ಕಳುಹಿಸಿದ್ದಾರೆ. ಅವರು ಆ ಹಣ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಅಂದಿನಿಂದ ರಾಮಲಿಂಗಾರೆಡ್ಡಿಯವರು alternate ಜಾಗ ಕೊಡಿ ಎಂದು ಕೇಳುತ್ತಿದ್ದಾರೆ. ಇದು ಸರ್ಕಾರಿ ಆಸ್ಪತ್ರೆ, ಬಡವರಿಗೆ ಅನುಕೂಲವಾಗುತ್ತದೆನ್ನುವ concernನಿಂದ ಹೋರಾಟ ಮಾಡುತ್ತಿದ್ದರೆ ಸಚಿವರ ಸಹಕಾರವೇ ನಮಗಿಲ್ಲ. ಅದು ಸರ್ಕಾರಿ ಜಾಗ. ಸರ್ಕಾರಿ ಜಾಗದಲ್ಲಿ ಇವರು ಹಣ ಕೊಟ್ಟು ಖರೀದಿ ಮಾಡಿದರೂ ಆ ಹಣವನ್ನು ವಾಪಸ್ ಕಟ್ಟುತ್ತೇವೆ ಸರ್ಕಾರಿ ಆಸ್ಪತ್ರೆಗೆ ಬಿಟ್ಟುಕೊಡಿ ಎಂದು ಕೇಳಿದರೆ, ಇವರು ಬೇರೆ alternate ಜಾಗ ಕೊಡಿ ಎಂದರೆ ನಾನು alternate ಜಾಗ ಕೊಡುವುದಕ್ಕೆ ಸಾಧ್ಯವಿದೆಯೇ ಸರ್ಕಾರವೆ ಅವರದು. ಅಂಥ ಸಂದರ್ಭದಲ್ಲಿ ಒಂದು public purposeಗೋಸ್ಕರ ಇವರ concern ಎಷ್ಟಿದೆ ಎನ್ನುವುದು ಗೊತ್ತಾಗುತ್ತದೆ. ಈಗ ಸಚಿವರು ಅವರಿಗೆ ಮನವರಿಕೆ ಮಾಡಿಸಿ ಹಸ್ತಾಂತರ ಮಾಡಿಸುತ್ತೇವೆಂದು ಉತ್ತರ ಕೊಟ್ಟರು. ಮಾನ್ಯ ಸಾರಿಗೆ ಸಚಿವರು ನಮಗೆ alternate land ಕೊಟ್ಟರೆ ಆ ಜಾಗ ಕೊಡುತ್ತೇವೆಂದು ಹೇಳುತ್ತಾರೆ.

ಶ್ರೀ ರಾಮಲಿಂಗಾರೆಡ್ಡಿ(ಮಾನ್ಯ ಸಾರಿಗೆ ಸಚಿವರು): ನೀವು ಬಿ.ಎಂ.ಟಿ.ಸಿ. ಎಂದು ಹೇಳಿದಿರಿ, ಅದಕ್ಕೆ ನಾನು ಉತ್ತರ ಕೊಡುತ್ತಿದ್ದೇನೆ. ಅವರ ಏರಿಯಾದಲ್ಲಿ ಬೇಕಾದಷ್ಟು ಸರ್ಕಾರಿ ಜಾಗಗಳಿವೆ. ಅಲ್ಲಿ ಕಟ್ಟಿಸಲಿ, ನಮ್ಮ ಜಾಗವೇ ಇವರಿಗೆ ಏಕೆ ಬೇಕು? ಆ ಪ್ರದೇಶದಲ್ಲಿ ಬೇರೆ ಜಾಗವಿಲ್ಲವೇ? ನಾನೇ ಹುಡುಕಿಕೊಡುತ್ತೇನೆ, ಬೇಕಾದಷ್ಟು ಜಾಗಗಳಿವೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಅರವಿಂದ ಲಿಂಬಾವಳಿ: ಬೇಕಾದಷ್ಟು ಜಾಗಗಳಿವೆ ಎಂದು ನನಗೂ ಗೊತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ: ಗೊತ್ತಿದ್ದರೆ ತೆಗೆದುಕೊಳ್ಳಿ.

ಶ್ರೀ ಅರವಿಂದ ಲಿಂಬಾವಳಿ: ಆದರೆ ಮಾನ್ಯ ಆರೋಗ್ಯ ಸಚಿವರು ಇಲ್ಲೇ ಇದ್ದಾರೆ. ಸರ್ಕಾರಿ ಆಸ್ಪತ್ರೆ ಎಂದರೆ main roadಗೆ ಬರುತ್ತದೆ.

ಉಪಾಧ್ಯಕ್ಷರು: ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಆಯಿತು.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಇದು public purposeಗೋಸ್ಕರ. ಸಾಕಷ್ಟು ಜಾಗವಿದೆ ಹೌದು.

ಉಪಾಧ್ಯಕ್ಷರು: ಇದನ್ನು ಕುಳಿತುಕೊಂಡು sort out ಮಾಡಿ. ಒಕೆ.

ಶ್ರೀ ಅರವಿಂದ ಲಿಂಬಾವಳಿ: ಆದರೆ ಅಲ್ಲಿಗೆ patients ಹೋಗುವುದಿಲ್ಲ. ಅದಕ್ಕೋಸ್ಕರ ಅವರು ಬಿಟ್ಟುಕೊಡಬೇಕು. ಎರಡು ಬಾರಿ ಕಂದಾಯ ಇಲಾಖೆಯಿಂದ ವಾಪಸ್ ಕಳುಹಿಸಿಕೊಟ್ಟಿದ್ದಾರೆ. ಅವರು ಹಣ ಕಟ್ಟುವುದಕ್ಕೆ ರೆಡಿ ಇದ್ದಾರೆ. ಇವರು ಜಾಗ ಬಿಡಬೇಕಾಗಿತ್ತು. ಇವರು ಕಸ ಹಾಕುವುದಕ್ಕೆ ಜಾಗ ಕೊಡುತ್ತಾರೆ. 50-60 ಎಕರೆ ಸರ್ಕಾರ ಖರೀದಿ ಮಾಡಿರುವ ಜಾಗದಲ್ಲಿ ಕಸ ತುಂಬುವುದಕ್ಕೆ ಕೊಟ್ಟಿದ್ದಾರೆ.

ಉಪಾಧ್ಯಕ್ಷರು: ಈಗ ಲಿಂಬಾವಳಿಯವರೆ ಬೇರೆ ವಿಚಾರಗಳು ಬೇಡ. ಓಕೆ

ಶ್ರೀ ಅರವಿಂದ ಲಿಂಬಾವಳಿ: ಆಸ್ಪತ್ರೆಗೋಸ್ಕರ ಜಾಗ ಬಿಡುವುದಕ್ಕೆ ತಯಾರಿಲ್ಲವೆಂದರೆ ಇದು ಮೊಂಡುವಾದ ಆಗುತ್ತದೆ. ಅದನ್ನು ಅವರಿಗೆ ಮನವರಿಕೆ ಮಾಡಿಸಿ ಬಿಡಿಸಿಕೊಡುತ್ತೇನೆಂದು ಸಚಿವರು ಉತ್ತರ ಕೊಡುತ್ತಾರೆ. ಸಾರಿಗೆ ಸಚಿವರು ಬೇರೆ ಕಡೆ ಕಟ್ಟಿಕೊಳ್ಳಲಿ ಎಂದು ಉತ್ತರ ಕೊಡುತ್ತಾರೆ.

ಉಪಾಧ್ಯಕ್ಷರು: ಆಯಿತು, ನೀವು ಅದನ್ನು ಹೀಗೇ ಮಾಡಿ, ಹಾಗೇ ಮಾಡಿ ಎಂದು ಹೇಳುವುದಕ್ಕಾಗುತ್ತದೆಯೇ? ಆಯಿತು, ಆ ರೀತಿ ನೀವು force ಮಾಡುವುದಕ್ಕಾಗುವುದಿಲ್ಲ. ಸಚಿವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಅರವಿಂದ ಲಿಂಬಾವಳಿ: ಇದರ ಬಗ್ಗೆ ಸ್ಪಷ್ಟಪಡಿಸಬೇಕು. ಇದರಲ್ಲಿ confusion ಇದೆ. ಈಗ ಮನವರಿಕೆ ಮಾಡಿ ಬಿಡಿಸಿಕೊಡುತ್ತೇನೆಂದು ಅವರು ಹೇಳಿದರು. ಅದು ಸರ್ಕಾರಿ ಉತ್ತರ. ಇವರು ಬೇರೆ ಕಡೆ ಕಟ್ಟಿಕೊಳ್ಳಲಿ ಎಂದು ಹೇಳುತ್ತಾರೆ.

14-06-2017

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು): ನೀವು ಜೋರಾಗಿ ಮಾತನಾಡಿಬಿಟ್ಟರೆ ನಾನು ಕೇಳಿಬಿಡುತ್ತೇನೆಯೇ? ಮೆತ್ತಗೆ ಮಾತನಾಡುವುದು ಕಲಿತುಕೊಳ್ಳಿ. ನಿಮಗಿಂತ ಜೋರಾಗಿ ನನಗೂ ಮಾತನಾಡುವುದಕ್ಕೆ ಬರುತ್ತದೆ.

ಶ್ರೀ ಅರವಿಂದ ಲಿಂಬಾವಳಿ: ನಾನು ಜೋರಾಗಿ ಮಾತನಾಡುತ್ತಿಲ್ಲ. ಸದನಕ್ಕೆ ಗೊತ್ತಾಗಲಿ ಎಂದು ಹೇಳುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು): ಮತ್ತೆ ಜೋರು ಮಾಡುವುದಕ್ಕೆ ಬರಬೇಡಿ. ನಿಮಗಿಂತ ಜೋರಾಗಿ ನಾನು ಮಾತನಾಡುತ್ತೇನೆ.

ಶ್ರೀ ಎಂ.ಆರ್.ಸೀತಾರಾಂ( ಮಾನ್ಯ ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) : ನೀವು ಮಾತನಾಡುವಾಗ ಉದ್ರೇಕದಿಂದ ಮಾತನಾಡಬೇಡಿ.

ಶ್ರೀ ಅರವಿಂದ ಲಿಂಬಾವಳಿ: ಉದ್ರೇಕದಿಂದ ಮಾತನಾಡುತ್ತಿಲ್ಲ. ಈಗ ನನ್ನ ಹತ್ತಿರ ಸಂಪೂರ್ಣವಾದ ವಿವರ ಇದೆ. ಅವರು ಆ ರೀತಿ ಹೇಳುತ್ತಿದ್ದಾರಲ್ಲ.

ಉಪಾಧ್ಯಕ್ಷರು: ಲಿಂಬಾವಳಿಯವರೆ ಆಯಿತು, ಅವರು sort out ಮಾಡುತ್ತಾರೆ ಬಿಡಿ.

ಶ್ರೀ ಎಂ.ಆರ್.ಸೀತಾರಾಂ: ಮಾತನಾಡುವಾಗ ಆವೇಶದಿಂದ ಮಾತನಾಡಬೇಡಿ ಎಂದು ಹೇಳುತ್ತಿದ್ದೇವೆ.

ಉಪಾಧ್ಯಕ್ಷರು: ಆಯಿತು ಬಿಡಿ. ಇದರ ಬಗ್ಗೆ ಚರ್ಚೆ ಮಾಡಲಿಕ್ಕಾಗುವುದಿಲ್ಲ.

ಶ್ರೀ ಅರವಿಂದ ಲಿಂಬಾವಳಿ: ನಾನು ಆವೇಶದಿಂದ ಮಾತನಾಡುತ್ತಿಲ್ಲ. ಬೇಕಾದರೆ ಇನ್ನೂ ಆವೇಶದಿಂದ ಮಾತನಾಡುತ್ತೇನೆ. ಹೌದು ಸರ್, ನಾನು ಆವೇಶದಿಂದ ಮಾತನಾಡುತ್ತಿಲ್ಲ.

ಶ್ರೀ ಎಂ.ಆರ್.ಸೀತಾರಾಂ: ನೀವು ಆವೇಶ ಮಾಡಿಕೊಳ್ಳಬೇಡಿ ಎಂದು ನಾನು request ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಅರವಿಂದ ಲಿಂಬಾವಳಿ: ವಿಷಯಾಂತರ ಮಾಡಬೇಡಿ. ನಾನು ಕೇಳುತ್ತಿರುವುದೇನೆಂದರೆ ಮಾನ್ಯ ಕೃಷ್ಣಬೈರೇಗೌಡರು ಹೇಳಿದ stand ಗೆ ಸರ್ಕಾರ ಬದ್ಧವಾಗಿದೆಯೇ? ಅದಕ್ಕೆ ಸಚಿವರು ಇಲ್ಲೇ objection ಮಾಡಿದರು. ಅವರನ್ನು ಒಪ್ಪಿಸುತ್ತೇನೆಂದು ನೀವು ಸ್ಪಷ್ಟವಾಗಿ ಹೇಳಿ.

ಉಪಾಧ್ಯಕ್ಷರು: ಅದನ್ನು ನೀವು ಹೀಗೆ ಮಾಡಿ ಎಂದು force ಮಾಡುವುದಕ್ಕಾಗುವುದಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಕೆ.ಆರ್.ರಮೇಶ್‌ಕುಮಾರ್(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಕೃಷ್ಣಬೈರೇಗೌಡರವರದು stand, ರಾಮಲಿಂಗಾರೆಡ್ಡಿಯವರದು bus stand. Difference ಇರುತ್ತದೆ. ಇದು ಆರೋಗ್ಯ ಇಲಾಖೆಗೆ ಬರುತ್ತದೆ. ನಿಮ್ಮದು ಯಾವ stand ಎಂದು ಹೇಳಿ.

ಶ್ರೀ ಅರವಿಂದ ಲಿಂಬಾವಳಿ: ಅದು ನಿಮಗೆ ಬೇಕಾಗಿರುವುದು ಸರ್, ನಾನು ನಿಮಗೆ ಸಹಾಯ ಮಾಡುತ್ತಿದ್ದೇನೆ. ಸರ್ ಇದಕ್ಕೆ administrative approval ಆಗಿದೆ. ಕೃಷ್ಣಬೈರೇಗೌಡರು documents ಎಲ್ಲ ನೋಡಿದ್ದಾರೆಂದು ಹೇಳಲಿ.

ಉಪಾಧ್ಯಕ್ಷರು: ಹೇಳಿ.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಉಪ ಸಭಾಧ್ಯಕ್ಷರೆ, ಈ ವಿಚಾರವನ್ನು ಮತ್ತೊಮ್ಮೆ ಸಂಪುಟ ಸಭೆಯಲ್ಲಿ ಇಟ್ಟು ಅಲ್ಲಿಯೇ amicable ಆಗಿ ತೀರ್ಮಾನ ಮಾಡುತ್ತೇವೆ.

ಶ್ರೀ ಅರವಿಂದ ಲಿಂಬಾವಳಿ: ಒಂದು ನಿಮಿಷ, ಸಂಪುಟ ಸಭೆಯಲ್ಲಿ ಬಂದು administrative approval ಆಗಿ BDAನವರಿಂದ Health Departmentಗೆ ಕೊಡುವುದಕ್ಕೆ ಅವರಿಗೆ ಹಣ ಕಟ್ಟುವುದಕ್ಕೆ ಅವಕಾಶ ಇಲ್ಲ. BDAನವರು ಅವರಿಗೆ ಹಣ ಕೊಟ್ಟು BMTCಗೆ ಹಣ ಕಟ್ಟಬೇಕೆಂದು ಆಗಿತ್ತು. 2014 ಕ್ಕೆ ಹಣ ಬಂದಿದೆ. ಅಂದಿನಿಂದ ಇಂದಿನವರೆಗೆ ಇವರಿಗೆ ಜಾಗ ಕೊಡದೇನೆ ಅನಗತ್ಯವಾಗಿ ವಿಳಂಬವಾಗುತ್ತಿದೆ. ನಾವೇನು ನಮ್ಮ ಮನೆಗೆ ಕೇಳುತ್ತಿಲ್ಲ ಅಥವಾ ಖಾಸಗಿ ಆಸ್ಪತ್ರೆಗೆ ಕೇಳುತ್ತಿಲ್ಲ. ಸರ್ಕಾರಿ ಆಸ್ಪತ್ರೆ ಕಟ್ಟುತ್ತೇವೆಂದು ಕೇಳುತ್ತಿದ್ದೇವೆ.

ಉಪಾಧ್ಯಕ್ಷರು: ಈಗ ವಿಷಯ ಗೊತ್ತಾಗಿದೆ. ಈಗ ತಮ್ಮ ಕೋರಿಕೆಯನ್ನು ಅವರು ಮಾಡಬೇಕು.

ಶ್ರೀ ಕೃಷ್ಣಬೈರೇಗೌಡ (ಮಾನ್ಯ ಕೃಷಿ ಸಚಿವರು)(ಶ್ರೀ ಕಾಗೋಡು ತಿಮ್ಮಪ್ಪ, ಮಾನ್ಯ ಕಂದಾಯ ಸಚಿವರ ಪರವಾಗಿ): ಲಿಂಬಾವಳಿಯವರೆ ಇದರಲ್ಲಿ ಎರಡು ಪರಿಹಾರ ಇದೆ. ಒಂದು ಅವರಿಗೆ ಪರ್ಯಾಯ ಜಾಗ ಕೊಡುವುದು. ಆ ಜಾಗ ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶ ಇದೆ, ಅಧಿಕಾರ ಇದೆ, ಸ್ಥಳಾವಕಾಶವೂ ಇದೆ. ಒಂದು ನಿಮಿಷ ಕೇಳಿಸಿಕೊಳ್ಳಿ. ಅಥವಾ ಆ ಇಲಾಖೆಯವರಿಗೆ ಮನವರಿಕೆ ಮಾಡಿ ಹಣದ ರೂಪದಲ್ಲಿ ಇದನ್ನು ತೆಗೆದುಕೊಳ್ಳಿ ಎಂದು ಹೇಳುವುದು. ಸಂಪುಟದಲ್ಲಿ ಇರುತ್ತವೆ. ಆರೋಗ್ಯ,

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಸಾರಿಗೆ, ಕಂದಾಯ ಹೀಗೆ ಎಲ್ಲ ಇಲಾಖೆಗಳು ಇರುತ್ತವೆ. ಅಲ್ಲಿ ಚರ್ಚೆ ಮಾಡಿಬಿಟ್ಟು ಒಂದಲ್ಲ ಒಂದು ರೂಪದಲ್ಲಿ ಆಸ್ಪತ್ರೆಗೆ ಜಾಗವನ್ನು ಒದಗಿಸಿಕೊಡುವಂಥ ಕೆಲಸವನ್ನು ಸರ್ಕಾರ ಮಾಡುತ್ತದೆ.

ಶ್ರೀ ಅರವಿಂದ ಲಿಂಬಾವಳಿ: ಇದಕ್ಕೆ ಇಷ್ಟೇ ಸಮಯ ಎಂದು fix ಮಾಡುವಿರಾ? ಏಕೆಂದರೆ ಇದು ನಾಲ್ಕು ವರ್ಷಗಳಿಂದ ನಡೆಯುತ್ತಿದೆ.

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ಸಚಿವರು)(ಶ್ರೀ ಕಾಗೋಡು ತಿಮ್ಮಪ್ಪ, ಮಾನ್ಯ ಕಂದಾಯ ಸಚಿವರ ಪರವಾಗಿ): ಎರಡು ತಿಂಗಳುಗಳ ಒಳಗೆ ಕ್ಯಾಬಿನೆಟ್‌ಗೆ ತರುತ್ತೇವೆ. ಕ್ಯಾಬಿನೆಟ್‌ಗೆ ತರುತ್ತೇವೆ. ಎರಡು ತಿಂಗಳುಗಳ ಒಳಗೆ ಇತ್ಯರ್ಥವಾಗುತ್ತದೆ.

ಶ್ರೀ ಅರವಿಂದ ಲಿಂಬಾವಳಿ: ಕ್ಯಾಬಿನೆಟ್‌ಗೆ ತಂದು ಈ ಜಾಗ ಬಿಟ್ಟು ಕೊಡುತ್ತೇವೆ ಎಂದು ಆಗಬೇಕು.

ಶ್ರೀ ರಾಮಲಿಂಗಾರೆಡ್ಡಿ(ಮಾನ್ಯ ಸಾರಿಗೆ ಸಚಿವರು): ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಸ್ಥಳ ಕೊಡಬೇಕಾಗಿದ್ದರೆ ನಮ್ಮ ಅಭಿಪ್ರಾಯ ಕೇಳಬೇಕಾಗಿತ್ತು. ಆಗ ಸಾರಿಗೆ ಅಭಿಪ್ರಾಯವನ್ನು ಕೇಳಲೇ ಇಲ್ಲ. ಏಕಾಏಕಿ ಕೊಟ್ಟುಬಿಟ್ಟರು.

ಶ್ರೀ ಅರವಿಂದ ಲಿಂಬಾವಳಿ: ಸರ್ ಏಕೆ ಕೇಳಲಿಲ್ಲ?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು): ಒಂದು ನಿಮಿಷ, ಲಿಂಬಾವಳಿಯವರು ಬಂದು ಕೇಳಿದಾಗ ನಮಗೆ ಬೇರೆ ಜಾಗ ಕೊಡಿಸಿ ನಾವು ಕೊಡುತ್ತೇವೆಂದು ಹೇಳಿದ್ದೇನೆ. ಎರಡು ವರ್ಷ, ಮೂರು ವರ್ಷಗಳಾಯಿತು. ಬೇರೆ ಸ್ಥಳ ಕೊಟ್ಟರೆ ಕೊಡುತ್ತೇವೆಂದು ಹೇಳಿದ್ದೇವೆ.

(ಮುಂದು)

14.06.2017 / 6.00 (39) / JB-SP

ಶ್ರೀ ಅರವಿಂದ ಲಿಂಬಾವಳಿ: ದಯವಿಟ್ಟು ರಾಮಲಿಂಗಾರೆಡ್ಡಿಯವರೆ, ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ. ಅವರು ತಪ್ಪು ಹೇಳಿದ್ದಾರೆ ಅದಕ್ಕೆ ಹೇಳುತ್ತಿದ್ದೇನೆ. Cabinet ನ decision ಇಲ್ಲಿದೆ. ದುಡ್ಡು ಕಟ್ಟಬೇಕೆಂದು ಅವರ ಅಭಿಪ್ರಾಯ ತೆಗೆದುಕೊಂಡೇ ಈ ಮೀಟಿಂಗ್ ಆಗಿರುವುದು. ಆ ಇಲಾಖೆಯ ಅಭಿಪ್ರಾಯದ ಮೇಲೆಯೇ ಮೀಟಿಂಗ್ ಆಗಿರುವುದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಕೃಷ್ಣ ಬೈರೇಗೌಡ: ಸಾರಿಗೆ ಇಲಾಖೆ ಸಾರ್ವಜನಿಕರಿಗಾಗಿ. ಆರೋಗ್ಯ ಇಲಾಖೆಯ ಕೆಲಸಗಳೂ ಸಾರ್ವಜನಿಕರಿಗೆ ಇರುವುದು. ಇಬ್ಬರಿಗೂ ಸ್ಥಳಾವಕಾಶ ಮಾಡಿಕೊಟ್ಟು ಸಮಸ್ಯೆ ಪರಿಹಾರ ಮಾಡೋಣ. ಎರಡು ತಿಂಗಳೊಳಗೆ subject ಅನ್ನು ಕ್ಯಾಬಿನೆಟ್‌ಗೆ ತೆಗೆದುಕೊಂಡು ಬಂದು ಒಂದು ತೀರ್ಮಾನ ಮಾಡುತ್ತೇವೆ.

ಉಪಾಧ್ಯಕ್ಷರು: ಈಗ ಹೆಚ್.ಕೆ.ಕುಮಾರಸ್ವಾಮಿಯವರು ಹೇಳಿ.

**ವಿಷಯ: ರಾಷ್ಟ್ರೀಯ ಹೆದ್ದಾರಿಯಿಂದ ಹಾಸನ ಜಿಲ್ಲೆ ಸಕಲೇಶಪುರ ನೂತನ ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ದುರಸ್ತಿಪಡಿಸುವ ಬಗ್ಗೆ.**

***

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಸಕಲೇಶಪುರ ನೂತನ ಬಸ್ ನಿಲ್ದಾಣ ರಾಷ್ಟ್ರೀಯ ಹೆದ್ದಾರಿಯಲ್ಲಿದ್ದು, ಹೆದ್ದಾರಿಯಿಂದ ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿಗಳಿಂದ ಕೂಡಿದ್ದು, ದುರಸ್ತಿಪಡಿಸುವ ಬಗ್ಗೆ ಮಾನ್ಯ ಸಾರಿಗೆ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು): ನಮ್ಮ ಬಸ್ ಸ್ಟಾಂಡ್ ಬಗ್ಗೆ ಏನೂ ಸಮಸ್ಯೆಯಿಲ್ಲ. ಆದರೆ, National Highway ಗೂ ಹಾಗೂ ಬಸ್ ಸ್ಟಾಂಡ್ ಮಧ್ಯದಲ್ಲಿಯೂ ಒಂದು ಸರ್ವೀಸ್ ರೋಡ್ ಇದೆ ಅಲ್ಲವೇ? ನಾವು ಮಾಡುತ್ತೇವೆಂದು ಹೇಳಿದರೂ National Highwayನವರು ನಮಗೆ ಅವಕಾಶ ಮಾಡಿಕೊಡುತ್ತಿಲ್ಲ. Permission ಕೊಟ್ಟರೆ ಒಂದೇ ಒಂದು ವಾರದಲ್ಲಿ ನಾವು ಮಾಡಿಕೊಡುತ್ತೇವೆ. National Highway ನವರು objection ಮಾಡಲಿಲ್ಲವೆಂದರೆ ಒಂದೇ ಒಂದು ವಾರದಲ್ಲಿ ಮಾಡಿಸಿಕೊಡುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಈ ವಿಷಯದಲ್ಲಿ ನಾನು ನಿಮ್ಮ DC, DTO, Engineerರವರೆಲ್ಲರ ಗಮನ ಸೆಳೆದಿದ್ದೇನೆ. ಆ ಕಡೆ ಗಮನವನ್ನೇ ಕೊಟ್ಟಿಲ್ಲ. ಇಂತಹ ಅತ್ಯಂತ ಸಣ್ಣ ವಿಚಾರಗಳು ಇಲ್ಲಿಗೆಲ್ಲಾ ಬರಬಾರದು. ಅಧಿಕಾರಿಗಳು ಸ್ವಲ್ಪ ಸಾಮಾನ್ಯ ಜ್ಞಾನ ಇಟ್ಟುಕೊಂಡು ಅಲ್ಲಿಯೇ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

attend ಮಾಡಿದರೆ ಮುಗಿದು ಹೋಗುತ್ತಿತ್ತು. ಆದರೆ, ಪೂರಾ ತಾವು ಅವರ ಮೇಲೆಯೇ ಜವಾಬ್ದಾರಿ ಹಾಕಿದ್ದೀರಿ. PWD Minister ಮೇಲೆ ಹಾಕಿದ್ದೀರಿ.

ಶ್ರೀ ರಾಮಲಿಂಗಾರೆಡ್ಡಿ: ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ Highway ನವರು allow ಮಾಡಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: PWD Minister ಗೆ ಬರುವುದಿಲ್ಲ ಸರ್.

ಶ್ರೀ ರಾಮಲಿಂಗಾರೆಡ್ಡಿ: National Highway ನವರಿಗೆ ಹೇಳಿ ನಾನು ಒಂದು ವಾರದಲ್ಲಿ ಮಾಡಿಸಿಕೊಡುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಆಯಿತು. ಅವರಿಗೆ ಒಂದು ಪತ್ರ ಬರೆಯಿರಿ. Permission ತೆಗೆದುಕೊಂಡು ಮಾಡಿಕೊಡಿ ಅಷ್ಟೆ.

ಶ್ರೀ ರಾಮಲಿಂಗಾರೆಡ್ಡಿ: ಕೇಳಿದ್ದಾರೆ. ಕೆಲಸ ಮಾಡುವುದಕ್ಕೆ ಹೋದಾಗ ಅಡ್ಡ ಹಾಕಿದ್ದಾರೆ. ಅದು ನಮ್ಮ ವ್ಯಾಪ್ತಿಗೆ ಬರುತ್ತದೆ. ನೀರೆಲ್ಲಾ ಈ ಕಡೆಗೆ ಬರುತ್ತದೆ ಎಂದು ಹೀಗೆ ಮಾಡಿದ್ದಾರೆ.

ಉಪಾಧ್ಯಕ್ಷರು: ಅವರು sort out ಮಾಡುತ್ತಾರೆ ಬಿಡಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಅವರ ಇಲಾಖೆಗೆ ತಾವು ಒಂದು ಪತ್ರ ಬರೆಯಿರಿ. Permission ತೆಗೆದುಕೊಂಡು ಮಾಡಿಕೊಡಿ ಅಷ್ಟೆ.

ಉಪಾಧ್ಯಕ್ಷರು: ಆಯಿತು. o.k., ಮಾನ್ಯ ಶಿವಲಿಂಗೇಗೌಡರು ಹೇಳಿ.

**ವಿಷಯ: ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ರಾಷ್ಟ್ರೀಯ ಹೆದ್ದಾರಿ-234ರಲ್ಲಿ ಬಾಣಾವಾರದಿಂದ ಹುಳಿಯಾರು ಭಾಗದ ರಸ್ತೆ ಟೆಂಡರನ್ನು ರದ್ದುಗೊಳಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ.**

***

ಶ್ರೀ ಕೆ.ಎಂ.ಶಿವಲಿಂಗೇಗೌಡ: ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ರಾಷ್ಟ್ರೀಯ ಹೆದ್ದಾರಿ-234ರಲ್ಲಿ ಬಾಣಾವಾರದಿಂದ ಹುಳಿಯಾರು ಭಾಗದ ರಸ್ತೆ ಟೆಂಡರನ್ನು ರದ್ದುಗೊಳಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಕೆ.ಎಂ.ಶಿವಲಿಂಗೇಗೌಡ: ಉತ್ತರ ಬಂದಿರುವುದರಿಂದ ಅಲ್ಲಿರುವ ಸಮಸ್ಯೆಯನ್ನು ಸಚಿವರ ಹತ್ತಿರ ಕೇಳುತ್ತೇನೆ.

ಉಪಾಧ್ಯಕ್ಷರು: ಇದರ ಮೇಲೆ ಏನಾದರೂ ಇದ್ದರೆ ಕೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಸಚಿವರೆ, ರಾತ್ರಿ 8 ಗಂಟೆಗೆ ಬಂದು ನನ್ನನ್ನೂ ಬಿಟ್ಟು ಹೋಗಿ ವಜಾ ಮಾಡಿ ಬಂದರು. ಅದು resend ಆಯಿತು. ಏಕೆ ಆಯಿತು ಎಂದು ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ನಾಲ್ಕು ವರ್ಷಗಳಿಂದ ನರಕಯಾತನೆ ಅನುಭವಿಸುತ್ತಿರತಕ್ಕಂತಹವರು ನಮ್ಮ ಕ್ಷೇತ್ರದ ಜನ. ಆಮೇಲೆ National Highway ಕೂಡ complete ಆಗಿಲ್ಲ. ಅದು ಏಕೆ ಆಯಿತು ಗೊತ್ತಿಲ್ಲ. Contractor ರವರ ಲೋಪವಿರಬಹುದು ಮತ್ತೊಂದಾಗಿ ಅದನ್ನು contractor ಲೋಪವೆಂದೇ ಭಾವಿಸಿಕೊಳ್ಳಬೇಕಾಗುತ್ತದೆ. ಬೇರೆ ತರಹ ಅದನ್ನೆಲ್ಲಾ ಚರ್ಚೆ ಮಾಡುವುದಕ್ಕೆ ಹೋಗುವುದು ಬೇಡ. ಆದ್ದರಿಂದ, ಈಗ ಆ ಕೆಲಸ ನಾನು ಬಹಳ ಸಲ ಡೆಲ್ಲಿಗೂ ಹೋಗಿ ಬಂದಿದ್ದೇನೆ. ಒಂದೆರಡು ಸಲ ಹೋಗಿ ಬಂದು ಅಲ್ಲಿನ ಜನರ ಕೈಯಲ್ಲಿ ಬೈಯ್ಯಿಸಿಕೊಳ್ಳುವುದಕ್ಕೆ ಆಗದೇ ಅಲ್ಲಿಗೆ ಹೋಗಿ ಬಂದಿದ್ದೇನೆ. ಮಾನ್ಯ ದೇವೇಗೌಡರ ಹತ್ತಿರವೂ ಸಹ ಹೇಳಿಸಿದ್ದೇನೆ. ಆದರೆ, ಇದಕ್ಕೆ ಅವರು ಏನು ಹೇಳುತ್ತಾರೆ, ಮಾಡುತ್ತೇವೆ ಮಾಡುತ್ತೇವೆ ಎನ್ನುತ್ತಾರೆ. ಇಲ್ಲವೆನ್ನುವ ಪ್ರಶ್ನೆಯೇ ಇಲ್ಲ. ಪಾಪ ನೀವು ಈಗ ಉತ್ತರ ಕೊಟ್ಟಿರುವುದರಲ್ಲಿ ಈಗ ವಾರ್ಷಿಕ ಯೋಜನೆಯಲ್ಲಿ ಸೇರಿಸಿರುವುದು ನಿಜ. ನಾನೂ ತಿಳಿದುಕೊಂಡಿರುವಂತಹ ಮಟ್ಟಿಗೆ ನಿಜ. ಆದರೆ, ಆ estimate ಗೆ technical approval ಕೊಡಬೇಕಾದರೆ ಬಹಳ ಹಿಂಜರಿಯುತ್ತಿದ್ದಾರೆ. ಅದನ್ನು ದಯವಿಟ್ಟು ಬೇಗ ಮಾಡಿಸಿ, ಬೇಗ ಮಾಡಿಕೊಡುತ್ತೀರಿ ಎಂದು ನಾನು ಭಾವಿಸುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ (ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ವಿಷಯ ಕೂಲಂಕಷವಾಗಿ ನಮ್ಮ ಹಿರಿಯ ಶಾಸಕರಾದ ಮಾನ್ಯ ಶಿವಲಿಂಗೇಗೌಡರಿಗೆ ಗೊತ್ತಿದೆ. ನಾನೇ ರಾತ್ರಿ ಸಮಯವಾದ್ದರಿಂದ entire length ಅನ್ನು ನೋಡಿದೆ. It is in a very bad shape. ಅದು concessionaire ರವರ negligence ನಿಂದ ಆ ರೀತಿಯಾಯಿತು. ಹೀಗಾಗಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

resend ಮಾಡದೇ ಬೇರೆ ದಾರಿಯೇ ಇರಲಿಲ್ಲ, ಹಾಗಾಗಿ ಆಗಿದೆ. ಈಗ re-tender ಮಾಡಿದ್ದೇವೆ. ಟೆಂಡರ್ final ಆಗುತ್ತಿದೆ. ಆದಷ್ಟುಬೇಗ ಅದನ್ನು ಶುರು ಮಾಡಬೇಕು. ತುಂಬಾ inconvenience ಆಗಿದೆ. Public nuisance ಆಗಿದೆ, ಅಲ್ಲಿನ ಜನರು ಕಷ್ಟಪಡುತ್ತಿದ್ದಾರೆ. ಆದಷ್ಟುಬೇಗ tender final ಹಂತಕ್ಕೆ ಬಂದಿದೆ. ಆದಷ್ಟುಬೇಗ ಕೆಲಸ ಶುರು ಮಾಡುತ್ತೇವೆ.

ಉಪಾಧ್ಯಕ್ಷರು: ಆಯಿತು, ಬೋಪಯ್ಯನವರೆ ಹೇಳಿ. ನಿಮಗೆ ಉತ್ತರ ಬಂದಿಲ್ಲ. ನಾಳೆ ಕೊಡಿಸುತ್ತೇನೆ ಮಾತನಾಡಿ. ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ ತಮ್ಮದೂ ಸಹ ಉತ್ತರ ಬಂದಿಲ್ಲ.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ: ಮಾನ್ಯ ಉಪಾಧ್ಯಕ್ಷರೆ, ನನಗೂ ಉತ್ತರ ಬಂದಿಲ್ಲ.

ಉಪಾಧ್ಯಕ್ಷರು: ನಾಳೆ ಕೊಡಿಸೋಣ. ಡಾ: ಅಶ್ವಥ್‌ನಾರಾಯಣರವರು ಬಂದಿಲ್ಲ. ಗೋವಿಂದ ಎಂ.ಕಾರಜೋಳರವರು ಹೇಳಿ.

ಶ್ರೀ ಗೋವಿದ ಎಂ.ಕಾರಜೋಳ: ಮಾನ್ಯ ಉಪಾಧ್ಯಕ್ಷರೆ, ಮಂತ್ರಿಗಳಾದ ಖಂಡ್ರೆಯವರು ಇರಬೇಕಾಗುತ್ತದೆ. ಅವರು ಇಲ್ಲದೇ ನಾನು ಏನನ್ನೂ ಕೇಳಿ ಪ್ರಯೋಜನವಾಗುವುದಿಲ್ಲ.

ಉಪಾಧ್ಯಕ್ಷರು: ಅವರು ನಾಳೆ ಹೇಳುತ್ತಾರೆ.

ಶ್ರೀ ಗೋವಿಂದ ಎಂ.ಕಾರಜೋಳ: ನಾಳೆಗೆ ಹಾಕಿಕೊಳ್ಳಿ.

ಉಪಾಧ್ಯಕ್ಷರು: ಈಗ ಪರಮೇಶ್ವರನಾಯಕ್, ವಡ್ನಾಳ್ ರಾಜಣ್ಣ ಹಾಗೂ ಕಿಮ್ಮನೆ ರತ್ನಾಕರ್‌ರವರು ಮಾತನಾಡಿ.

**ವಿಷಯ: 2017-18ನೇ ಸಾಲಿಗೆ ಸಂಬಂಧಿಸಿದ ನಂಜುಂಡಪ್ಪ ಅನುಷ್ಠಾನ ಸಮಿತಿಯಿಂದ ಹಿಂದುಳಿದ 114 ತಾಲ್ಲೂಕುಗಳಿಗೆ ಸೀಮಿತವಾಗಿ ಅಭಿವೃದ್ಧಿ ಯೋಜನೆಗೆ ಅನುದಾನ ಬಿಡುಗಡೆ ಮತ್ತು ಅನುಷ್ಠಾನಗೊಳಿಸುವ ಬಗ್ಗೆ.**

***

ಶ್ರೀ ಪಿ.ಟಿ. ಪರಮೇಶ್ವರ ನಾಯಕ್: ಮಾನ್ಯ ಉಪಾಧ್ಯಕ್ಷರೆ, 2017-18ನೇ ಸಾಲಿನ ಡಾ: ಡಿ.ಎಂ.ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿಯಿಂದ ಹಿಂದುಳಿದ 114 ತಾಲ್ಲೂಕುಗಳಿಗೆ ಸೀಮಿತವಾಗಿ ಅಭಿವೃದ್ಧಿ ಯೋಜನೆಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರದ ರೂ.3000.00 ಕೋಟಿ ನಿಗದಿಪಡಿಸಲಾಗಿದ್ದು, ಯೋಜನಾ ಇಲಾಖೆಯವರು ತೆಗೆದುಕೊಂಡ ತೀರ್ಮಾನಕ್ಕೆ

ಸಂಬಂಧಿಸಿದಂತೆ ಉಳಿದ ಅನುದಾನವನ್ನು ಬಿಡುಗಡೆ ಮಾಡಲು ಮತ್ತು ಸದರಿ ವಿಷಯದಲ್ಲಿ ಸಂಬಂಧಪಟ್ಟ ಕ್ಷೇತ್ರದ ಶಾಸಕರ ಮೂಲಕ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಗಮನ ಸೆಳೆಯುತ್ತೇನೆ.

**(ಸಚಿವರ ಹೇಳಿಕೆ ಪ್ರತಿಯನ್ನು ಲಗತ್ತಿಸಲಾಗಿದೆ)**

ಶ್ರೀ ಎಂ.ಆರ್.ಸೀತಾರಾಂ (ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈಗ ಈ ನಂಜುಂಡಪ್ಪ ವರದಿಯನ್ನು ಆಧರಿಸಿ ಕಳೆದ 2007ರಿಂದ 2015-16ನೇ ಸಾಲಿನವರೆಗೂ ಹಲವಾರು ಸರ್ಕಾರಗಳು ಸುಮಾರು ರೂ.18,000-20,000 ಕೋಟಿಗಳಷ್ಟು ಈಗಾಗಲೇ ಖರ್ಚು ಮಾಡಿವೆ. ಇದನ್ನು ನಾವು ಇಲಾಖಾವಾರು ಎಂದರೆ ಸುಮಾರು 17-18 ಇಲಾಖೆಗಳಿಗೆ ಈ special development fund ಹಂಚಿ ಎರಡು ಹಂತದಲ್ಲಿ ಅದನ್ನು ಕೊಡುವಂತಹ ವಾಡಿಕೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇದರಲ್ಲಿ ಈಗಾಗಲೇ ಮೊದಲನೇ ಹಂತದ್ದು ಈ ವರ್ಷದ್ದು 2017-18ನೇ ಸಾಲಿನದು ಈಗಾಗಲೇ ನಾವು ಬಿಡುಗಡೆ ಮಾಡಿಬಿಟ್ಟಿದ್ದೇವೆ. ಈಗ ಸ್ಪಷ್ಟವಾಗಿ ನಮ್ಮ ಶಾಸಕರದು ಏನಾದರೂ ಉದ್ದೇಶವಿದ್ದರೆ ಅದನ್ನು ಹೇಳಿದರೆ ಅದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು ಆ ರೀತಿಯಾದ ಒಂದು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ.ಟಿ.ಪರಮೇಶ್ವರ ನಾಯಕ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಬಹಳ ಉತ್ತಮವಾದಂತಹ ಉತ್ತರವನ್ನು ನೀಡುವುದರ ಮೂಲಕ ಸಲಹೆಯನ್ನು ಕೂಡ ಕೇಳಿದ್ದಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಂಜುಂಡಪ್ಪ ವರದಿ 114 ತಾಲ್ಲೂಕುಗಳಿಗೆ ಏನು ಸೀಮಿತವಾಗಿ ಅನುದಾನವನ್ನು ನೀಡತಕ್ಕಂತಹ ಒಂದು ಪ್ರಕ್ರಿಯೆ ಜಾರಿಯಲ್ಲಿದೆ, ಇದು ಸುಮಾರು 18 ಇಲಾಖೆಗಳಿಗೆ ಈ ಹಣ ಹರಿದು ಹಂಚಿ ಹೋಗುವುದರಿಂದ ಅಲ್ಲಿ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ. ಹಿಂದುಳಿದ ಮತ್ತು ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಪರಿಣಾಮಕಾರಿಯಾಗಿ ಈ ಕೆಲಸವನ್ನು ಅನುಷ್ಠಾನ ಮಾಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು: ನಿಮ್ಮ ಸಲಹೆ ಕೊಡಿ.

ಶ್ರೀ ಪಿ.ಟಿ.ಪರಮೇಶ್ವರ ನಾಯಕ್: ಮಾನ್ಯ ಉಪಾಧ್ಯಕ್ಷರೆ, ಈ 114 ತಾಲ್ಲೂಕುಗಳಲ್ಲಿ ಏನು ನಮ್ಮ ಶಾಸಕರಿದ್ದಾರೆ, ನಾನು ಪಕ್ಷಾತೀತವಾಗಿ ಈ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನವನ್ನು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸೆಳೆಯುವುದಕ್ಕೆ ಬಯಸುತ್ತೇನೆ. ಅಲ್ಲಿ ಏನೇನು ಹೊಸ ಮಾರ್ಗಸೂಚಿಗಳಿವೆ, ಏಕೆಂದರೆ ಇದರ ಅವಧಿ ಇರುವುದೇ ಇನ್ನು ಕೇವಲ ಮೂರು ವರ್ಷಗಳು ಮಾತ್ರ. ಆದ್ದರಿಂದ, ಇದು ಪರಿಣಾಮಕಾರಿಯಾಗಿ ಏನು 18 ಇಲಾಖೆಗಳಿಗೆ ಹಂಚಿಕೆ ಮಾಡಿದ್ದಾರೆ, ಆ ಹಣ proper ಆಗಿ ವ್ಯಯವಾಗುತ್ತಿಲ್ಲ. ಅದು ಮತ್ತೆ ವಾಪಸ್ಸು lapse ಆಗಿ ಹಿಂದಕ್ಕೆ ಹೋಗುತ್ತಿದೆ. ಅದಕ್ಕೆ ಅದರ ಬದಲಾಗಿ 114 ತಾಲ್ಲೂಕಿನ ಶಾಸಕರನ್ನೊಳಗೊಂಡಂತೆ ಆ ತಾಲ್ಲೂಕಿಗೆ ಹಣವನ್ನು ನಿಗದಿ ಮಾಡಿ ಆ ತಾಲ್ಲೂಕಿನಲ್ಲಿ ಏನು ಅವಶ್ಯಕತೆಯಿದೆ, ಅಲ್ಲಿ ಏನು ಜನರಿಗೆ ಬೇಕಾಗುತ್ತದೆ ಅದನ್ನು ಮಾಡಲಿಕ್ಕೆ ಇವತ್ತು ನೀರಾವರಿ ಇಲಾಖೆಯಿರಬಹುದು, ಸಣ್ಣ ನೀರಾವರಿ ಇಲಾಖೆಯಿರಬಹುದು, ಶಿಕ್ಷಣ ಇಲಾಖೆಯಿರಬಹುದು . .

ಉಪಾಧ್ಯಕ್ಷರು: ಗೊತ್ತಾಯಿತು. ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬೇಕೆಂದು ಹೇಳಿ.

ಶ್ರೀ ಪಿ.ಟಿ.ಪರಮೇಶ್ವರ ನಾಯಕ್: ಮಾನ್ಯ ಉಪಾಧ್ಯಕ್ಷರೆ, ವಿಶ್ವಾಸಕ್ಕಲ್ಲ. ಶಾಸಕರ ಅಧ್ಯಕ್ಷತೆಯಲ್ಲಿ ಕ್ರಿಯಾ ಯೋಜನೆಯನ್ನು ಮಾಡಿ ಎಲ್ಲಾ ಇಲಾಖೆಗಳನ್ನೊಳಗೊಂಡಂತೆ ಕ್ರಿಯಾ ಯೋಜನೆಯನ್ನು ಮಾಡುವುದಕ್ಕೆ ನೇರವಾಗಿ ಆ ತಾಲ್ಲೂಕಿಗೆ ಅನುದಾನವನ್ನು ನಿಗದಿಗೊಳಿಸಿ ಅಲ್ಲಿ action plan ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡುವುದಕ್ಕೆ ಮಾನ್ಯ ಸಚಿವರು ಮುಂದಾಗಬೇಕೆಂದು ತಮ್ಮ ಮೂಲಕ ನಾನು ವಿನಂತಿ ಮಾಡುತ್ತೇನೆ.

ಶ್ರೀ ಡಿ.ಸಿ.ತಮ್ಮಣ್ಣ: ಮಾನ್ಯ ಉಪಾಧ್ಯಕ್ಷರೆ, ಇಲ್ಲಿಯವರೆಗೆ ಹಿಂದುಳಿದ ಹಾಗೂ ಅತೀ ಹಿಂದುಳಿದ ತಾಲ್ಲೂಕುಗಳಿಗೆ ಎಷ್ಟು ಹಣ ಬಂದಿದೆ ಎಂಬುದೇ ನಮಗೆ ಗೊತ್ತಿಲ್ಲ.

ಉಪಾಧ್ಯಕ್ಷರು: ನೀವು ಬೇರೆ ರೂಪದಲ್ಲಿ ಕೊಡಿ.

ಶ್ರೀ ಡಿ.ಸಿ.ತಮ್ಮಣ್ಣ: ಶಾಸಕರುಗಳಿಗೇ ಗೊತ್ತಿಲ್ಲ. 18 ಇಲಾಖೆಗಳಿಗೆ ಏನು ಹಂಚಿಕೆ ಮಾಡಿದ್ದಾರೆ, ಯಾವ್ಯಾವುದಕ್ಕೆ ಎಷ್ಟು ಕೊಟ್ಟಿದ್ದಾರೆ ಎಂಬುದೇ ಗೊತ್ತಿಲ್ಲ. ಅದನ್ನು atleast ತಾಲ್ಲೂಕುವಾರು ಹಿಂದುಳಿದ ತಾಲ್ಲೂಕುಗಳಿಗೆ ಇಂತಿಷ್ಟು ಹಣ ಕೊಟ್ಟಿದ್ದೇವೆ ಎಂದರೆ, ಯಾವ ಇಲಾಖೆಯಲ್ಲಿ ನಮಗೆ ಆವಶ್ಯಕವಾಗಿ ಬೇಕಾಗಿದೆ ಅಂತಹ ಇಲಾಖೆಗಳಿಗೆ ಹಂಚಿಕೆ ಮಾಡಿ ಕೆಲಸ ಮಾಡಿಸಬಹುದು. ಇಲ್ಲದೇ ಹೋದರೆ ನಮಗೆ ಏನೂ ಗೊತ್ತಾಗುವುದಿಲ್ಲ. ಇಲ್ಲಿಯವರೆಗೆ we are in dark. ನಂಜುಂಡಪ್ಪ ವರದಿ ಪ್ರಕಾರ ಏನು ಅಭಿವೃದ್ಧಿಯಾಗಿದೆ ಎಂಬುದೇ ನಮಗೆ ಗೊತ್ತಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಎಂ.ಆರ್.ಸೀತಾರಾಂ: ಈಗ ನಮ್ಮ ಶಾಸಕರಾದಂತಹ ತಮ್ಮಣ್ಣನವರು ಹೇಳುತ್ತಿರುವುದು ಏನೆಂದರೆ, ಇದು ಕಳೆದ 10 ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಒಂದು ಕ್ರಮ ಏನಿದೆ ಅದನ್ನು ಈ ಸರ್ಕಾರ ಮುಂದುವರೆಸಿಕೊಂಡು actually ನಮ್ಮ ಸರ್ಕಾರ ಬಂದಮೇಲೆ ಮುಗಿದಿರುವ ಅವಧಿಯನ್ನು ಮತ್ತೆ ಇದನ್ನು 5 ವರ್ಷಗಳ ಕಾಲ ವಿಸ್ತರಣೆ ಮಾಡಿದ್ದೇವೆ. ಇದರದು ಇನ್ನೂ ಮೂರು ವರ್ಷಗಳು ಇದೆ. ಈಗ ಈ ಶಾಸಕರು ನಮ್ಮ ಪರಮೇಶ್ವರ ನಾಯಕ್‌ರವರು ಹೇಳಿದ ದಾಟಿಯಲ್ಲಿ ನೋಡಿದರೆ ಅವರು ಪ್ರತಿ ಕ್ಷೇತ್ರದಲ್ಲಿ ಏನೇನಾಗಬೇಕು ಅದನ್ನು ಮಾಡಿ ನೀವು ಆ ಕ್ಷೇತ್ರಕ್ಕೆ ಕೊಡುವುದು ಒಳ್ಳೆಯದು, ಎಲ್ಲಾ ಇಲಾಖೆಗಳಿಗೆ ಕೊಡುವುದು ಅಷ್ಟೊಂದು ಸಮಂಜಸವಲ್ಲವೆಂದು ಅವರು ಹೇಳುತ್ತಿದ್ದಾರೆ. ಈಗ ಮಾನ್ಯ ತಮ್ಮಣ್ಣನವರು ಏನು ಹೇಳುತ್ತಿದ್ದಾರೆ ಎಂದರೆ, ಕೆಲವು ಇಲಾಖೆಗಳ ಬಗ್ಗೆ ನಮಗೆ ಗೊತ್ತೇ ಇಲ್ಲ ಎಂದು ಹೇಳುವುದು. ಅದರ ಮಾಹಿತಿ ಈಗ ನಿಮಗೆ ಸಿಗುತ್ತದೆ. ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಹಣ ಕೊಡುತ್ತಿದ್ದೇವೆ ಎಂಬುದು ಬರುತ್ತದೆ.

ಶ್ರೀ ಡಿ.ಸಿ.ತಮ್ಮಣ್ಣ: ಮಾಹಿತಿ ಸಿಗಬಹುದು. ಮಾಹಿತಿ ಸಿಕ್ಕಿದರೂ ಸಹ ನಾವು ಕೇಳಿ ತೆಗೆದುಕೊಳ್ಳಬೇಕು. ಇಲ್ಲಿಯವರೆಗೆ ಯಾವ್ಯಾವ ಇಲಾಖೆಗೆ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದೇ ಗೊತ್ತಿಲ್ಲ. ಅನಾವಶ್ಯಕವಾಗಿ ಬೇರೆ ಇಲಾಖೆಗಳಿಗೆ ಕೊಟ್ಟರೆ ನಮ್ಮ ಕ್ಷೇತ್ರಕ್ಕೆ ಅನುಕೂಲವಾಗುವುದಿಲ್ಲ. ನಮಗೆ ಗೊತ್ತಿರುತ್ತದೆ. ಯಾವ ಇಲಾಖೆಯಲ್ಲಿ ನಾವು ಹಣ ಖರ್ಚು ಮಾಡಬೇಕೆಂದು ನಮಗೆ ಗೊತ್ತಿರುತ್ತದೆ. ಅದಕ್ಕೇ ಖರ್ಚು ಮಾಡಬಹುದು.

ಶ್ರೀ ಎಂ.ಆರ್.ಸೀತಾರಾಂ: ಅವರು ಹೇಳುತ್ತಿರುವುದು ಒಂದೇ, ತಾವು ಹೇಳುತ್ತಿರುವುದು ಒಂದೇ. ಅವರು ಹೇಳುತ್ತಿರುವುದು ಏನೆಂದರೆ, . .

ಉಪಾಧ್ಯಕ್ಷರು: ಪರಿಶೀಲನೆ ಮಾಡಿ.

ಶ್ರೀ ಎಂ.ಆರ್.ಸೀತಾರಾಂ: ತಮ್ಮಣ್ಣನವರೆ, ಅವರು ಹೇಳುತ್ತಿರುವುದು ಏನೆಂದರೆ, ನಮ್ಮ ಕ್ಷೇತ್ರಕ್ಕೆ ಕ್ಷೇತ್ರವಾರು ಮೂಲಭೂತ ಸೌಲಭ್ಯಗಳು ಏನು ಬೇಕಾಗುತ್ತದೋ ಆ ರೀತಿಯಾದ ಕ್ರಿಯಾ ಯೋಜನೆಯನ್ನು ಸರ್ಕಾರ ಮಾಡಿಕೊಟ್ಟರೆ ಒಳ್ಳೆಯದು ಎಂದು ಅವರು ಹೇಳಿದರು. ತಮ್ಮದೂ ಸಹ ಅದೇ ಅಭಿಮತ ಇದ್ದರೆ ನಾನು ಮೊದಲು ಒಂದು ಇಲಾಖಾವಾರು ಸಭೆ ಮಾಡಿ ನಂತರ ಎಲ್ಲಾ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶಾಸಕರನ್ನೂ ಕರೆದು ಯಾವ ರೀತಿಯಾದ ಅನುಕೂಲ ಮಾಡಿಕೊಡಬಹುದು ಈ ಒಂದು special development fund ನಲ್ಲಿ ಎಂದು ನಾನು ತೀರ್ಮಾನ ಮಾಡುತ್ತೇನೆ.

(ಮುಂದು . . .)

ದಿ:14-06-2017-6.10(40)-ಜೆ.ಎಲ್-ಎಸ್.ಪಿ

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಸಚಿವರೆ, ಪರಮೇಶ್ವರ ನಾಯ್ಕ್ ರವರು ವ್ಯಕ್ತಪಡಿಸಿರುವ ಅಭಿಪ್ರಾಯ ಅಕ್ಷರಶಃ ಸತ್ಯ. 18 ಇಲಾಖೆಗಳಿಗೆ ಹಂಚಿರ್ ಪಿಂಚಣ್ಣಿ ಎಂದು ಹಂಚಿ ಹಾಕಿದರೆ ಯಾವ ಕೆಲಸವೂ ಕ್ರಮಬದ್ಧವಾದಂತಹ, ಉತ್ತಮವಾದಂತಹ ಕೆಲಸವಾಗುವುದಿಲ್ಲ. ನಂಜುಂಡಪ್ಪ ವರದಿಯಲ್ಲಿ ಸಮತೋಲನವನ್ನು ಕಾಪಾಡುವಂತಹ ದೃಷ್ಟಿಯಿಂದ ನೀವು ಮಾಡಿರುವಂತಹ ಯೋಜನೆ ಏನಿದೆ, ಆ ಯೋಜನೆಯನ್ನು ದಯಮಾಡಿ ಜಾರಿಗೆ ತನ್ನಿ. ಆ ಕ್ಷೇತ್ರದಲ್ಲಿ ಒಬ್ಬರಿಗೆ ಕುಡಿಯುವ ನೀರಿನ ಆದ್ಯತೆಯಿರುತ್ತದೆ, ಒಬ್ಬರಿಗೆ ರಸ್ತೆಗಳ ಆದ್ಯತೆ ಇರುತ್ತದೆ ಸ್ಥಳೀಯ ಕ್ಷೇತ್ರದ ಶಾಸಕರ ಆದ್ಯತೆಯೇನಿದೆ ಅದನ್ನು ನೋಡಿ ಮಾಡಿ. 28 ಇಲಾಖೆಗಳಿಗೂ ಅದನ್ನು ಹಂಚಲೇಬೇಕೆಂಬ ಕಾನೂನೇನು ಇಲ್ಲ. ನಾನು ನೋಡಿದ್ದೇನೆ. ಆದರೆ ಇಲ್ಲಿ ಅಧಿಕಾರಿಗಳು ಹಂಚಿಕೊಂಡಿದ್ದಾರೆ. ಹಂಚಿಕೊಂಡು ಏನೇನು ಮಾಡುತ್ತಿದ್ದಾರೆಂಬುದು ಕೂಡ ನಮಗೆ ಗೊತ್ತಿದೆ. Personal ಆಗಿ ಬೇಕಾದರೆ ನಾನು ಹೇಳಬಲ್ಲೆ ಆ ರೀತಿ ನಂಜುಂಡಪ್ಪ ವರದಿಯನ್ನು ತಿಂದು ಹಾಕಿದ್ದಾರೆ. ಅದಕ್ಕೆ ಒಬ್ಬ ಅಧ್ಯಕ್ಷರು ಕೂಡ ಇರಬೇಕು. ಏನು ಮಾಡಿದ್ದಾರೆಂಬ ಬಗ್ಗೆ ಬಹಿರಂಗವಾಗಿ ಚರ್ಚೆ ಬೇಡ. ಶಾಸಕರ ಸಭೆಯನ್ನು ಕರೆದು ಕ್ಷೇತ್ರಗಳ ಅವಶ್ಯಕತೆಗನುಗುವಾಗಿ ಕ್ರಿಯಾ ಯೋಜನೆಯನ್ನು ಮಾಡುವುದಕ್ಕೆ ಅವಕಾಶ ಮಾಡಿದರೆ 114 ತಾಲ್ಲೂಕುಗಳಲ್ಲಿ ಬರುವ ನಾವೆಲ್ಲಾ ಶಾಸಕರು ನಿಮಗೆ ಕೃತಜ್ಞತೆ ಸಲ್ಲಿಸುತ್ತೇವೆ.

ಶ್ರೀ ಸಿ.ಎನ್.ಬಾಲಕೃಷ್ಣ: ಶಿವಲಿಂಗೇಗೌಡರು personal ಎನ್ನುವುದಕ್ಕಿಂತ open ಆಗಿ ಮಾತನಾಡಿದರೆ ಎಲ್ಲವೂ ಗೊತ್ತಾಗುತ್ತದೆ. Personal ಎಂದು ಜಾಸ್ತಿ ಬರೆಸಿಕೊಂಡುಬಿಡುತ್ತಾರೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಉಪಾಧ್ಯಕ್ಷರು: ಹೇಳಿದ್ದಾರೆ ಬಿಡಿ, ಈಗ ಚರ್ಚೆಗೆ ಅವಕಾಶ ಇಲ್ಲ. ಸುಮ್ಮನೆ issue ಅಷ್ಟೆ.

ಶ್ರೀ ಪಿ.ಟಿ.ಪರಮೇಶ್ವರ ನಾಯಕ್: ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಮಹತ್ವದ ವಿಚಾರವಾಗಿದೆ 114 ತಾಲ್ಲೂಕುಗಳಿಗೆ ಸಂಬಂಧಪಟ್ಟಿರುವಂತಹ ವಿಷಯವಾಗಿರುವುದರಿಂದ ಇದನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಬೇಕು ಮತ್ತು ಮಾನ್ಯ ಸಚಿವರು ಬಹಳ ತುರ್ತಾಗಿ ಸಭೆಯನ್ನು ಕರೆಸುತ್ತೇನೆಂಬ ಭರವಸೆಯನ್ನು ಕೊಟ್ಟಿದ್ದಾರೆ ಆದಷ್ಟು ಬೇಗ ಸಭೆ ಕರೆದು ಇದಕ್ಕೆ ಸೂಕ್ತವಾದಂತಹ ತೀರ್ಮಾನವನ್ನು ತೆಗೆದುಕೊಂಡು 114 ತಾಲ್ಲೂಕುಗಳ ಅಭಿವೃದ್ಧಿಗೆ ಮಾನ್ಯ ಸಚಿವರು ಮುಂದಾಗಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು: ಬೇಗ ಮಾತನಾಡಿ ಮುಗಿಸಿ.

ಶ್ರೀ ಎಂ.ಆರ್.ಸೀತಾರಾಂ(ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಮ್ಮ ಇಲಾಖೆಯಲ್ಲಿ ಮೊದಲು ಒಂದು ವಿಮರ್ಶೆ ಮಾಡಿ ನಂತರ ಎಲ್ಲಾ ಶಾಸಕರನ್ನು ಕರೆದು ಅವರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಈ ವರ್ಷದ ಯೋಜನೆಯನ್ನು ಮುಂದೆ ಮಾಡುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಈ ಸದನ ಮುಗಿಯುವಷ್ಟರಲ್ಲಿ ಮಾಡಿ.

ಉಪಾಧ್ಯಕ್ಷರು: ಕೆ.ಸುಧಾಕರ್ ರವರು ಮಾತನಾಡಿ.

ಡಾ.ಕೆ.ಸುಧಾಕರ್: ಮಾನ್ಯ ಉಪಾಧ್ಯಕ್ಷರೆ, ಗಣಿ ಸಚಿವರು ಈಗ ಸದನದಲ್ಲಿಲ್ಲ.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಉಪಾಧ್ಯಕ್ಷರೆ,

ಡಾ: ಕೆ.ಸುಧಾಕರ್: ಈ ವಿಷಯ ಬಹಳ ಗಂಭೀರವಾಗಿರುವುದರಿಂದ ಮಾನ್ಯ ಗಣಿ ಸಚಿವರೇ ಉತ್ತರಿಸಿದರೆ ಒಳ್ಳೆಯದು ಆದಕಾರಣ ಈ ವಿಷಯವನ್ನು ನಾಳೆ ತೆಗೆದುಕೊಳ್ಳಿ.

ಉಪಾಧ್ಯಕ್ಷರು: ಆಯಿತು ನಾಳೆ ತೆಗೆದುಕೊಳ್ಳೋಣ. ಮಾಲಕರೆಡ್ಡಿಯವರ ವಿಷಯವನ್ನು ನಾಳೆ ತೆಗೆದುಕೊಳ್ಳೋಣ. ಶ್ರೀ ಹೆಚ್.ಎಸ್.ಪ್ರಕಾಶ್ ರವರು ಮಾತನಾಡಿ

ಶ್ರೀ ಹೆಚ್.ಎಸ್.ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಭೂಸ್ವಾಧೀನದ ಬಗ್ಗೆ ಉತ್ತರ ಕೊಟ್ಟಿದ್ದಾರೆ.

ಉಪಾಧ್ಯಕ್ಷರು: ರೇವಣ್ಣ ಮತ್ತು ಹೆಚ್.ಕೆ.ಕುಮಾರಸ್ವಾಮಿಯವರು ಕೂಡ ಕೇಳಿದ್ದಾರೆ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ನಾನೂ ಕೂಡ ಪ್ರಶ್ನೆ ಕೇಳಿದ್ದೇನೆ. ಆದರೆ ಇದಕ್ಕೆ ಉತ್ತರ ಕೊಡುವವರು ಯಾರು?

ಶ್ರೀ ಕೃಷ್ಣ ಬೈರೇಗೌಡ: ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ನಾನಿದ್ದೇನೆ.

ವಿಷಯ: ಹಾಸನ ಜಿಲ್ಲೆ, ಯಗಚಿ ಜಲಾಶಯ ಯೋಜನೆಯ ಎಡದಂಡೆ ನಾಲೆ ಕಾಮಸಮುದ್ರ ಶಾಖಾ ನಾಲೆ ಕಿ.ಮೀ.0.00 ರಿಂದ 35.00 ರವರೆಗೆ ಅಭಿವೃದ್ಧಿ ಕಾಮಗಾರಿಯ ಸಂಬಂಧದಲ್ಲಿ ಗ್ರಾಮಗಳ ಜಮೀನುಗಳ ಭೂ ಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ರೈತರಿಗೆ ಪರಿಹಾರವನ್ನು ನೀಡುವ ಬಗ್ಗೆ

* * * * *

ಶ್ರೀ ಹೆಚ್.ಕೆ.ಕುಮಾರಸ್ವಾಮಿ(ಸಕಲೇಶಪುರ): ಮಾನ್ಯ ಉಪಾಧ್ಯಕ್ಷರೆ, ಹಾಸನ ಜಿಲ್ಲೆ, ಯಗಚಿ ಜಲಾಶಯ ಯೋಜನೆಯ ಎಡದಂಡೆ ನಾಲೆ ಕಾಮಸಮುದ್ರ ಶಾಖಾ ನಾಲೆ ಕಿ.ಮೀ.0.00 ರಿಂದ 35.00 ರವರೆಗೆ ಅಭಿವೃದ್ಧಿ ಕಾಮಗಾರಿಯ ಸಂಬಂಧದಲ್ಲಿ ಗ್ರಾಮಗಳ ಜಮೀನುಗಳ ಭೂ ಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ರೈತರಿಗೆ ಪರಿಹಾರವನ್ನು ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು)(ಕಂದಾಯ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

(ಉತ್ತರದ ಪ್ರತಿಯನ್ನು ಲಗತ್ತಿಸಿದೆ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ನಿನ್ನೆ ಕೂಡ ನಾನು ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆದಿದ್ದೆ. ಯಗಚಿ ಜಲಾಶಯ ಯೋಜನೆಯ ನಾಲೆಗಳಿಗೆ ನಡೆದಿರುವಂತಹ ಭೂಸ್ವಾಧೀನ ಪ್ರಕ್ರಿಯೆಗೆ ಬೆಳೆ ಪರಿಹಾರ ಕೊಟ್ಟಿದ್ದಾರೆ. ಇದು ಎಂಟು ವರ್ಷಗಳ ಕಥೆಯಾಗಿದೆ. ಕಾವೇರಿ ನೀರಾವರಿ ನಿಗಮದಿಂದ ಈ ಮೊತ್ತ ಬಿಡುಗಡೆಯಾದ ಕೂಡಲೇ ಸಂಬಂಧಿಸಿದ ಭೂ ಮಾಲೀಕರಿಗೆ ಪರಿಹಾರಧನವನ್ನು ಪಾವತಿಸಲಾಗುವುದು ಎಂದು ಮೊನ್ನೆ ನೀವು ಉತ್ತರದಲ್ಲಿ ಒಪ್ಪಿಕೊಂಡಿದ್ದೀರಿ. ನಿಗಮದವರು ನಮಗೆ ದುಡ್ಡು ಕೊಡುವುದು ಯಾವಾಗ? ನಾವು ಒತ್ತಾಯ ಮಾಡಿ ನಿಗಮದಿಂದ ಹಣವನ್ನು ತೆಗೆದುಕೊಳ್ಳಬೇಕು. R.R. cases ಗೆ ಆದ್ಯತೆಯ ಮೇಲೆ, ಅವರು

14-06-2017

ಮೊದಲು ಮಾನವೀಯತೆಯ ದೃಷ್ಟಿಯಿಂದ ಜಮೀನು ಬಿಟ್ಟುಕೊಟ್ಟಿದ್ದಾರೆ ಎಂಟು ವರ್ಷಗಳಾಗಿದೆ. ನಾವು ಹಠ ಮಾಡಿ ಅವತ್ತೇ ಜಮೀನು ಬಿಟ್ಟು ಕೊಡದೆ ಹೋಗಿದ್ದರೆ ನೀವು ದುಡ್ಡು ಕೊಡುತ್ತಿದ್ದಿರಿ. ಆದ್ದರಿಂದ ಮೊದಲು ಹಣವನ್ನು ಬಿಡುಗಡೆ ಮಾಡಿ, ದಯಮಾಡಿ ಪಾವತಿ ಮಾಡಿಸಿ. ನನ್ನ ಕ್ಷೇತ್ರದ ಕಟ್ಟಾಯಿ ಹೋಬಳಿ ಬಗ್ಗೆ  ನಾನು ಹೇಳಿದ್ದೇನೆ. ಇದೇ ರೀತಿ ಹೆಚ್.ಡಿ.ರೇವಣ್ಣರವರ ಕ್ಷೇತ್ರದಲ್ಲಿಯೂ ಬರುತ್ತದೆ. ದಯಮಾಡಿ ಆದಷ್ಟು ಬೇಗ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಲಿ. ಈಗ ರೆಡಿಯಾಗಿರುವುದಕ್ಕೆ ಆದಷ್ಟು ಬೇಗ ಹಣವನ್ನು ಪಾವತಿ ಮಾಡಿ.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಉಪಾಧ್ಯಕ್ಷರೆ, 3-4 ತರಹ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿದೆ. ನೀರಾವರಿ ಇಲಾಖೆಯಿಂದ 8 ಗ್ರಾಮಗಳಿಗೆ ಸಂಬಂಧಿಸಿದಂತೆ ಕೆಲವು ಅರ್ಜಿಗಳು ಈಗ ಬಂದಿವೆ. ಇನ್ನೂ ಕೆಲವು ಗ್ರಾಮಗಳಲ್ಲಿ ಸಮೀಕ್ಷೆಯಾಗಿದೆ.  ಇನ್ನು ಕೆಲವು ಗ್ರಾಮಗಳಲ್ಲಿ ಸಮೀಕ್ಷೆಯಾಗಿ ಭೂ-ಸ್ವಾಧೀನ ಪ್ರಕ್ರಿಯೆಯಾಗಿ ಪರಿಹಾರ ಮೊತ್ತ ತೀರ್ಪು ಆಗಿದೆ.  ಅಂತಹ ಪ್ರಕರಣಗಳಲ್ಲಿ ಹಣ ಕೊಡುವುದು ಬಾಕಿ ಇದೆ.  ತಾವು ಹೇಳಿದಂತೆ ಕಾವೇರಿ ನೀರಾವರಿ ನಿಗಮದಿಂದ 6 ಕೋಟಿ 40 ಲಕ್ಷ ರೂ.ಗಳಷ್ಟು ರೈತರು ಒಪ್ಪಿಕೊಂಡಿರುವ ಪ್ರಕರಣಗಳಲ್ಲಿ ಪರಿಹಾರ ಕೊಡುವುದು ಬಾಕಿ ಇದೆ.  ತಾವು ಹೇಳಿದಂತೆ ಅವರ ಜೊತೆ ನಾವೂ ಸಹ ಸಂಪರ್ಕ ಮಾಡಿ ಅವರಿಂದ ಆದಷ್ಟು ಬೇಗನೆ ಹಣವನ್ನು ಪಡೆದುಕೊಂಡು ರೈತರಿಗೆ ಪಾವತಿ ಮಾಡುತ್ತೇವೆ.  ಎರಡನೆಯದಾಗಿ ಭೂ-ಸ್ವಾಧೀನ ಪ್ರಕ್ರಿಯೆ ಬೇರೆ ಬೇರೆ ಹಂತದಲ್ಲಿ ಇದೆ.  ಅದನ್ನೂ ಸಹ ತ್ವರಿತಗೊಳಿಸುವುದಕ್ಕೆ ನಾವು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ.

ಉಪಾಧ್ಯಕ್ಷರು : ಈಗ ಹೆಚ್.ಕೆ.ಕುಮಾರಸ್ವಾಮಿ ಯವರು.

ವಿಷಯ: ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ 2018 ರಲ್ಲಿ ನಡೆಯಲಿರುವ ಮಹಾಮಸ್ತಕಾಭಿಷೇಕ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಶ್ರವಣಬೆಳಗೊಳ, ಹಾಸನ ನಗರ, ಬೇಲೂರು, ಹಳೇಬೀಡು ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳನ್ನು ಪಾರದರ್ಶಕವಾಗಿ ಕೈಗೊಳ್ಳುವ ಬಗ್ಗೆ.

* * * * *

ಶ್ರೀ ಹೆಚ್.ಎಸ್.ಪ್ರಕಾಶ್ (ಹಾಸನ): ಮಾನ್ಯ ಉಪಾಧ್ಯಕ್ಷರೆ, ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ 2018 ರಲ್ಲಿ ನಡೆಯಲಿರುವ ಮಹಾಮಸ್ತಕಾಭಿಷೇಕ ಕಾರ್ಯಕ್ರಮದ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಹಿನ್ನೆಲೆಯಲ್ಲಿ ಶ್ರವಣಬೆಳಗೊಳ, ಹಾಸನ ನಗರ, ಬೇಲೂರು, ಹಳೇಬೀಡು ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳನ್ನು ಪಾರದರ್ಶಕವಾಗಿ ಕೈಗೊಳ್ಳುವ ಬಗ್ಗೆ ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ.ಮಂಜು(ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು) (ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

(ಉತ್ತರದ ಪ್ರತಿಯನ್ನು ಲಗತ್ತಿಸಿದೆ)

ಶ್ರೀ ಹೆಚ್.ಎಸ್.ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ 2018 ರಲ್ಲಿ ಮಹಾಮಸ್ತಕಾಭಿಷೇಕ ಕಾರ್ಯಕ್ರಮ ಆಗುತ್ತಿದೆ. ಅದಕ್ಕಾಗಿ ಏನೇನು developments programme ತೆಗೆದುಕೊಳ್ಳುತ್ತಾರೆ ಅದನ್ನು ಪಾರದರ್ಶಕವಾಗಿ ಕೈಗೊಳ್ಳಬೇಕು. ಶ್ರವಣಬೆಳಗೊಳ, ಹಾಸನ ನಗರ, ಬೇಲೂರು, ಹಳೇಬೀಡುಗಳಲ್ಲಿ ಏನು ಅಭಿವೃದ್ಧಿ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆಂದು ಸಂಬಂಧಿಸಿದ ಯಾವುದೇ ಶಾಸಕರುಗಳ ಗಮನಕ್ಕೆ ಬಂದಿಲ್ಲ. ಆದುದರಿಂದ ದಯಮಾಡಿ ಸಚಿವರು ಏನೇನು ಕಾರ್ಯಕ್ರಮ ಮಾಡುತ್ತಿದ್ದಾರೆಂದು ಹೇಳಬೇಕು.

ಶ್ರೀ ಎ.ಮಂಜು: ಮಾನ್ಯ ಉಪಾಧ್ಯಕ್ಷರೆ, ಹೆಚ್.ಕೆ.ಕುಮಾರಸ್ವಾಮಿಯವರು, ಹೆಚ್.ಡಿ.ರೇವಣ್ಣ ನವರು, ಹೆಚ್.ಎಸ್.ಪ್ರಕಾಶ್ ಮತ್ತು ಕೆ.ಎಂ.ಶಿವಲಿಂಗೇಗೌಡರವರು ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ 2018 ರಲ್ಲಿ ನಡೆಯಲಿರುವ ಮಹಾಮಸ್ತಕಾಭಿಷೇಕ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಶ್ರವಣಬೆಳಗೊಳ, ಹಾಸನ ನಗರ, ಬೇಲೂರು, ಹಳೇಬೀಡು ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿ ಎಂದು ಹೇಳಿದ್ದಾರೆ ಬಹುಶ: ಇದು ಪಾರದರ್ಶಕವಾಗಿ ಇಡೀ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವ ಜವಾಬ್ದಾರಿಯನ್ನು ಈಗಾಗಲೇ ತೆಗೆದುಕೊಂಡು ಅಧಿಕಾರಿಗಳ ಜೊತೆ ಚರ್ಚೆಯನ್ನೂ ಮಾಡಿದ್ದೇವೆ. ನಮ್ಮ ಮುಖ್ಯಮಂತ್ರಿಗಳು ನೇರವಾಗಿ ಮಹಾಮಸ್ತಕಾಭಿಷೇಕ ಮಾಡಬೇಕೆಂದು 175 ಕೋಟಿ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಕೇಂದ್ರಸರ್ಕಾರ ಕೊಡದಿದ್ದರೂ ಕೂಡಾ ಮಹಾಮಸ್ತಕಾಭಿಷೇಕ ಮಾಡಬೇಕೆಂದು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ರಾಜ್ಯಸರ್ಕಾರ ಹಣ ಕೊಟ್ಟಿದೆ. ಬಹುಶ: ಅದರ ಜೊತೆಗೆ ಏನು ಅಭಿವೃದ್ಧಿ ಕಾರ್ಯ ಇದೆ, ಇಡೀ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನೊಳಗೊಂಡಂತೆ ಹಿಂದೆ ಮಹಾಮಸ್ತಕಾಭಿಷೇಕ ಆದಾಗ ಕೆಲವೇ ತಾಲ್ಲೂಕಿಗೆ ಈ ಹಣ ಸದ್ಬಳಕೆಯಾಗಿತ್ತು. ಆ ರೀತಿಯಾಗಿ ಈ ಬಾರಿ ಆಗುವುದಿಲ್ಲ. ಎಲ್ಲಾ ತಾಲ್ಲೂಕುಗಳಲ್ಲಿಯೂ ಅಭಿವೃದ್ದಿ ಕೆಲಸಗಳನ್ನು ಮಾಡುತ್ತೇವೆ.

ಶ್ರೀ ನಾರಾಯಣ ಗೌಡ: ಮಾನ್ಯ ಉಪಾಧ್ಯಕ್ಷರೆ, ಕೆ.ಆರ್.ಪೇಟೆ ತಾಲ್ಲೂಕು ಕೂಡಾ ತುಂಬಾ ಸಮೀಪದ ಅಂತರದಲ್ಲಿದೆ. ಅಲ್ಲಿಗೂ ಅಭಿವೃದ್ದಿ ಕಾಮಗಾರಿ ಕೈಗೊಳ್ಳಲು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು: ಅಲ್ಲಿ ಬರುವಂತಹ ತಾಲ್ಲೂಕುಗಳಲ್ಲೆಲ್ಲಾ ಅಭಿವೃದ್ಧಿ ಕಾಮಗಾರಿ ಮಾಡುತ್ತಾರೆ ಬಿಡಿ.

ಶ್ರೀ ಹೆಚ್.ಎಸ್.ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಮಹಾಮಸ್ತಕಾಭಿಷೇಕದ ಬಗ್ಗೆ ಸಾರ್ವಜನಿಕವಾಗಿ ಹೇಳಿದ್ದೀರಿ. ಆ ಹಿನ್ನೆಲೆಯಲ್ಲಿ ಮಾಡುತ್ತಿರುವ ಅಭಿವೃದ್ದಿ ಕಾಮಗಾರಿಗಳು ಪಾರದರ್ಶಕವಾಗಿ ಇರುತ್ತವೆ. ಅಧಿಕಾರಿಗಳನ್ನು ಕರೆದು ಮಾಡುತ್ತಿದ್ದೇವೆಂದು ಇವರು ಹೇಳಿದರಲ್ಲ, ಶಾಸಕರಿಗೆ ಅಲ್ಲಿ ಬೆಲೆ ಇಲ್ಲವೇನು? ನಾವು 7 ಜನ ಶಾಸಕರಿದ್ದೀವಿ. ಒಂದು ಸಭೆ ಕರೆದಿದ್ದೀರೇನು? ಅಧಿಕಾರಿಗಳನ್ನು ಕರೆದು ಮಾಡುವುದಾದರೆ, ಮಹಾಮಸ್ತಕಾಭಿಷೇಕಕ್ಕೂ ಅವರನ್ನೇ ಕರೆದು ಮಾಡಿ. ನಮ್ಮನ್ನೇಕೆ ಕರೆಯುತ್ತೀರಿ?

ಉಪಾಧ್ಯಕ್ಷರು: ಇನ್ನೂ ಮಾಡಿಲ್ಲ, ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಎಸ್.ಪ್ರಕಾಶ್: ನಮ್ಮನ್ನು ಏಕೆ ಅಲ್ಲಿಗೆ ಕರೆಯಬೇಕು? ಮಹಾಮಸ್ತಕಾಭಿಷೇಕ ಪ್ರಾಮಾಣಿಕವಾಗಿ ಪಾರದರ್ಶಕವಾಗಿ ನಡೆಯುತ್ತಿದೆ. ಆದರೆ ಇವರು ಮಾಡುವಂತಹ ಅಭಿವೃದ್ಧಿ ಕೆಲಸಗಳು ಶಾಸಕರ ಗಮನಕ್ಕೇ ಬಂದಿಲ್ಲ, ಅಧಿಕಾರಿಗಳು ಕೊಟ್ಟ ಪಟ್ಟಿ ಪ್ರಕಾರ ಅಭಿವೃದ್ಧಿ ಕೆಲಸ ಮಾಡುತ್ತೇವೆ ಎನ್ನುವುದಾದರೆ ಇದು ಯಾವ ರೀತಿ ಅಭಿವೃದ್ಧಿ ಕೆಲಸ? ಒಂದೇ ಒಂದು ಸಭೆ ಕರೆದು ಶಾಸಕರ ಅಭಿಪ್ರಾಯ ಕೇಳುವುದಿಲ್ಲ ಎನ್ನುವುದಾದರೆ ಅಧಿಕಾರಿಗಳನ್ನೇ ಕೂರಿಸಿಕೊಂಡು ಎಲ್ಲವನ್ನೂ ಮಾಡಿಕೊಳ್ಳಲಿ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಎ.ಮಂಜು: ಮಾನ್ಯ ಉಪಾಧ್ಯಕರೆ, ಗೌರವಾನ್ವಿತ ಸದಸ್ಯರು ಹೇಳುತ್ತಿದ್ದಾರೆ, ಮಹಮಸ್ತಾಕಭಿಷೇಕದ ಸಮಿತಿಯೊಂದು ಇದೆ. ಆ ಸಮಿತಿಯ ಮುಖಾಂತರವೇ ಎಲ್ಲವನ್ನೂ ಮಾಡುವುದು. ಆ ಸಮಿತಿಯ ಸದಸ್ಯರು ಯಾರ್‍ಯಾರು ಇದ್ದಾರೆ ಅವರುಗಳನ್ನು ಕರೆದೇ ಮಾಡುತ್ತೇವೆ. ಈಗ ಕೇವಲ ಲೋಕೋಪಯೋಗಿ ಇಲಾಖೆಗೆ ಬರುವಂತಹ ಕಾಮಗಾರಿಗಳನ್ನು ಅಧಿಕಾರಿಗಳನ್ನು ಕರೆಸಿ  ಯಾವ್ಯಾವ ರಸ್ತೆಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಹುದು ಎಂಬ ಮಾಹಿತಿಯನ್ನು ತೆಗೆದುಕೊಳ್ಳಬಹುದೇ ಹೊರತು, ಕಾರ್ಯರೂಪಕ್ಕೆ ತರುವಾಗಿ ಆ ಸಮಿತಿಯಲ್ಲಿ ಸದಸ್ಯರುಗಳ ಮುಂದೆ ಇಟ್ಟೇ ಮಾಡುತ್ತೇವೆ

ಉಪಾಧ್ಯಕ್ಷರು: ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಹೆಚ್.ಎಸ್.ಪ್ರಕಾಶ್: ಮಾನ್ಯ ಸಚಿವರಿಂದ ನಾನು ಈ ರೀತಿಯಾದಂತಹ ಉತ್ತರವನ್ನು ಬಯಸಿರಲಿಲ್ಲ. ಮಹಾಮಸ್ತಕಾಭಿಷೇಕ 2018ರ ಫೆಬ್ರವರಿಯಲ್ಲಿ ನಡೆಯುತ್ತಿದೆ. ಇಲ್ಲಿಯವರೆಗೆ ಸದಸ್ಯರನ್ನು ಸಭೆಗೆ ಕರೆದು ಕೇಳಿಲ್ಲ.  ಪಾರದರ್ಶಕವಾಗಿ ಟೆಂಡರ್ ಕರೆಯಬೇಕು, ಇದಕ್ಕೆ ಎರಡು ತಿಂಗಳಾಗುತ್ತದೆ. ಲೋಕೋಪಯೋಗಿ ಇಲಾಖೆಯವರು ಫೆಬ್ರವರಿಯಷ್ಟರಲ್ಲಿ ಸೇತುವೆ ಕಾಮಗಾರಿಯನ್ನೆಲ್ಲಾ ಮಾಡುತ್ತಾರಾ? ಈ ರೀತಿ ಹಾರಿಕೆ ಉತ್ತರ ಕೊಡುವುದು ಸರಿಯಲ್ಲ. ಸುಮಾರು ಒಂದು  ವರ್ಷಗಳಿಂದ ಹೇಳುತ್ತಿದ್ದೇವೆ. ಮಹಾಮಸ್ತಕಾಭಿಷೇಕದ ದಿನಾಂಕ ಅನೌನ್ಸ್ ಆಗಿದೆ, atleast ಶಾಸಕರ ಸಲಹೆಯನ್ನು ಕೇಳುವಷ್ಟು ಸೌಜನ್ಯ ಇಲ್ಲದಿದ್ದರೆ, ಅಧಿಕಾರಿಗಳನ್ನೇ ಕೇಳಿ ಮಾಡುತ್ತೇವೆ ಎನ್ನುವುದಾದರೆ ಹೇಗೆ? ಸಮಿತಿಯಲ್ಲಿ ಯಾರ್‍ಯಾರು ಇದ್ದಾರೆಂಬ ಬಗ್ಗೆ ದಯಮಾಡಿ ತಿಳಿಸಿ. ಮಹಾಮಸ್ತಕಾಭಿಷೇಕದ ಸಮಿತಿ ಸದಸ್ಯರು ಯಾರಿದ್ದಾರೆಂದರೆ, ರಾಜಕೀಯ ಮಾಡಿಕೊಂಡಿರುವ ನಾಲ್ಕು ಜನರಿದ್ದಾರೆ ಅಷ್ಟೆ.

ಉಪಾಧ್ಯಕ್ಷರು: ಪ್ರಕಾಶ್ ರವರೆ ಮೊದಲಿನಿಂದ ಇರುವ proceedure ಅನ್ನು follow ಮಾಡುತ್ತಾರೆ ಬಿಡಿ.

ಶ್ರೀ ಎ.ಮಂಜು: ಈ ಹಿಂದೆ ಯಾವ ರೀತಿ ಮಾಡಿಕೊಂಡು ಬಂದಿದ್ದಾರೆ ಆ ರೀತಿ ಅನ್ಯಾಯವಾಗದ ರೀತಿ ಎಲ್ಲಾ ಕ್ಷೇತ್ರಗಳನ್ನು ಅಭಿವೃದ್ಧಿ ಮಾಡುವಂತಹ ಜವಾಬ್ದಾರಿ ನಮ್ಮದು.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ಶ್ರೀ ಹೆಚ್.ಎಸ್.ಪ್ರಕಾಶ್: ಯಾವ ರೀತಿ ಅನ್ಯಾಯವಾಗಿದೆಯೆಂಬುದು ನಮಗೆ ಗೊತ್ತಾಗಬೇಕಲ್ಲ.

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಇದು ಪ್ರಜಾಸರ್ಕಾರ. ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಾಗ, ಶಾಸಕರನ್ನು ಕೇಳಿ ಕಾಮಗಾರಿಯನ್ನು ಕೈಗೊಳ್ಳಿ ಎಂಬುದಷ್ಟೇ ನಮ್ಮ ಬೇಡಿಕೆ, ಬೇರೆ ಇನ್ನೇನೂ ಅಲ್ಲ. ಶಾಸಕರನ್ನು ಕೇಳಿ ಪಟ್ಟಿ ತೆಗೆದುಕೊಳ್ಳಿಯೆಂಬುದು ನಮ್ಮ ಅಭಿಪ್ರಾಯ. ಯಾವ ರಸ್ತೆ ಹಾಳಾಗಿದೆ, ಯಾವ ರಸ್ತೆ ಚೆನ್ನಾಗಿದೆಯೆಂಬುದು ಅಧಿಕಾರಿಗಳಿಗಿಂತ ನಮಗೇ ಚೆನ್ನಾಗಿ ಗೊತ್ತು ಅಲ್ಲವೇ?

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರ ಅಭಿಪ್ರಾಯ ಏನಿದೆಯೆಂದರೆ, ಫೆಬ್ರವರಿಯಲ್ಲಿ ಮಹಾಮಸ್ತಕಾಭಿಷೇಕ ನಡೆಯುತ್ತಿದ್ದೆ.

(ಗೊಂದಲ)

ಶ್ರೀ ಹೆಚ್.ಎಸ್.ಪ್ರಕಾಶ್: ಮಹದೇವಪ್ಪರವರೆ, ಒಂದು ನಿಮಿಷ ಹೋದ ಬಾರಿ ಮಹಾಮಸ್ತಕಾಭಿಷೇಕವಾದಾಗ ನಾನು ಶಾಸಕನಾಗಿದ್ದೆ. ನಮ್ಮ ಸರ್ಕಾರ ಹಿಂದೆ ಆಗಿತ್ತು ಎಂದು ಮಂತ್ರಿಗಳು ಹೇಳಿದರು. ನಮ್ಮ ಸರ್ಕಾರ ಎಂದರೆ ಅದು ಕರ್ನಾಟಕ ಸರ್ಕಾರ. ಮಂತ್ರಿಗಳ ಸರ್ಕಾರವಲ್ಲ. ಸರ್ಕಾರ ಇಡೀ ಕರ್ನಾಟಕದ್ದು. ಹೋದ ಬಾರಿ ಮಹಾಮಸ್ತಕಾಭಿಷೇಕವಾದಾಗ ನಾನೂ ಶಾಸಕನಾಗಿದೆ.

ಉಪಾಧ್ಯಕ್ಷರು: ಪ್ರಕಾಶ್ ರವರೆ, ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ ಕೇಳಿಸಿಕೊಳ್ಳಿ.

(ಮುಂದುವರೆದಿದೆ)

ದಿನಾಂಕ: 14-06-2017-06.20 (41) AJ/SSD

ಡಾ. ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ರಾಜ್ಯ ಸರ್ಕಾರವು ಮಹಾಮಸ್ತಕಾಭಿಷೇಕವನ್ನು ಚೆನ್ನಾಗಿ ಮಾಡಬೇಕೆನ್ನುವ ದೃಷ್ಟಿಯಿಂದ ಸುಮಾರು 700 ಕೋಟಿ ರೂ.ಗಳ ಅಂದಾಜನ್ನು ಮಾಡಿ ಕೇಂದ್ರ ಸರ್ಕಾರವನ್ನು ಕೇಳಿದೆವು. ನಮ್ಮ ರಾಷ್ಟ್ರ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

14-06-2017

ನಾಯಕರು, ಮಾಜಿ ಪ್ರಧಾನಿಗಳಾದಂತಹ ಮಾನ್ಯ ದೇವೇಗೌಡರನ್ನೊಳಗೊಂಡಂತೆ ಪ್ರಧಾನಿಯವರನ್ನು ಭೇಟಿ ಮಾಡಿ ವಿಶ್ವವಿಖ್ಯಾತವಾದಂತಹ ಮಹಾಮಸ್ತಕಾಭಿಷೇಕವನ್ನು ಮಾಡುತ್ತಿದ್ದು, infrastructure ದೃಷ್ಟಿಯಿಂದ ಮತ್ತು ಈ ಒಂದು ಕಾರ್ಯಕ್ರಮಕ್ಕೆ ದೇಶ-ವಿದೇಶಗಳಿಂದ ಲಕ್ಷಾಂತರ ಜನರು ಸೇರುವುದರಿಂದ ನಮಗೆ ಹಣ ಕೊಡಬೇಕೆಂದು ಕೇಳಿದ್ದೆವು. ಆದರೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಹಣದ ಸಹಾಯ ಸಿಗಲಿಲ್ಲ. ಆ ನಂತರ ರಾಜ್ಯ ಸರ್ಕಾರವೇ ಸುಮಾರು 175 ಕೋಟಿ ರೂ.ಗಳನ್ನು ಮಂಜೂರು ಮಾಡಿ ಕೊಟ್ಟಿರುತ್ತದೆ. ಮಂಜೂರು ಮಾಡುವ ಸಮಯದಲ್ಲಿ, ಅಪೆಂಡಿಕ್ಸ್ -ಸಿ ಮತ್ತು ಸಿ.ಆರ್.ಎಫ್‌ನಲ್ಲಿ ಜಿಲ್ಲೆಯ ಎಲ್ಲಾ ಕಡೆಗಳಲ್ಲಿಯೂ ಈಗಾಗಲೇ ಸುಮಾರು 250 ಕೋಟಿ ರೂ.ಗಳಿಗೂ ಹೆಚ್ಚು ವೆಚ್ಚದಲ್ಲಿ ಕಾಮಗಾರಿಗಳ ಕೆಲಸ ನಡೆಯುತ್ತಿದೆ. 2018 ರ ಫೆಬ್ರವರಿಯಲ್ಲಿ ಈ ಕಾರ್ಯಕ್ರಮ ನಡೆಯುವುದರಿಂದ ಎಲ್ಲಾ ಗೌರವಾನ್ವಿತ ಶಾಸಕರುಗಳು ಮತ್ತು ನಾವೆಲ್ಲರೂ ಒಟ್ಟಾಗಿ ಸೇರಿ ಚೆನ್ನಾಗಿ ಈ ಕಾರ್ಯಕ್ರಮವನ್ನು ನೆರವೇರಿಸೋಣ. ಹಾಗಾಗಿ ನಮ್ಮನ್ನು involve ಮಾಡಿ, ಅವರವರ ಮತಕ್ಷೇತ್ರಗಳಲ್ಲಿ, ಎಲ್ಲೆಲ್ಲಿ ರಸ್ತೆ ಹದಗೆಟ್ಟಿರುವ ಬಗ್ಗೆ, ವಗೈರೆ ವಿಷಯ ಗಳ ಬಗ್ಗೆ ಹೇಳುತ್ತೇವೆ. ಅದನ್ನು ಅಂತಿಮವಾಗಿ ಸಮಿತಿಯಲ್ಲಿಟ್ಟು ಮಂಜೂರು ಮಾಡಬೇಕು ಮತ್ತು ಎಲ್ಲರನ್ನೂ ಸೇರಿಸಿಕೊಂಡು ಕಾರ್ಯಕ್ರಮ ಮಾಡಬೇಕೆನ್ನುವ ಅಭಿಪ್ರಾಯ ಅವರದಾಗಿದೆ. ಈ ಒಂದು ಸಮಿತಿಗೆ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿರುತ್ತಾರೆ, ಡಿ.ಸಿ. ಅವರು ಉಪಾಧ್ಯಕ್ಷರಾಗಿರುತ್ತಾರೆ. ಇವರ ಜೊತೆಗೆ ಶಾಸಕರನ್ನು ಕರೆದು ಒಟ್ಟಾರೆ ಎಲ್ಲರ ಅಭಿಪ್ರಾಯವನ್ನು ಸಂಗ್ರಹಿಸಿಕೊಂಡು, ಮಹಾಮಸ್ತಾಭಿಷೇಕ ರಾಷ್ಟ್ರೀಯ ಆಚರಣೆಯಾಗಿರುವುದರಿಂದ ಎಲ್ಲರೂ ಒಟ್ಟಾಗಿ ಸೇರಿ ಚೆನ್ನಾಗಿ ಆಚರಣೆ ಮಾಡಲಿ. ಇದಕ್ಕೆ ಎಲ್ಲರೂ ಸಹಕಾರ ಕೊಡಬೇಕು. ಇರುವುದರಲ್ಲಿ ಯಾವುದೇ ರೀತಿಯ ತೊಂದರೆಗಳನ್ನು ಮಾಡುವುದಿಲ್ಲ. ಎಲ್ಲರೂ ಸಹಕಾರ ಕೊಟ್ಟು ಕೆಲಸ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು : ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಮಿ : ಮಾನ್ಯ ಸಚಿವರೆ, ಉಸ್ತುವಾರಿ ಸಚಿವರೇ ಅಧ್ಯಕ್ಷರಾಗಿರಲಿ. ಇದು ಪ್ರಜಾ ಸರ್ಕಾರವಾಗಿರುವುದರಿಂದ ಅಧಿಕಾರಿಗಳ ಜೊತೆಗೆ ಚುನಾಯಿತ ಶಾಸಕರುಗಳನ್ನು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸದಸ್ಯರುಗಳನ್ನಾಗಿ ಮಾಡಿಕೊಂಡು, ಅವರ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಮಾಡಲಿಯೆಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎ. ಮಂಜು (ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು) : ಕುಮಾರಸ್ವಾಮಿ ಅವರೆ, ತಮ್ಮ ಹತ್ತಿರ ಚರ್ಚೆ ಮಾಡಿದ್ದೇನೆ. ತಮಗೂ ವಿಚಾರಗೊತ್ತಿದೆ. ಇದರಲ್ಲಿ ರಾಜಕೀಯ ಮಾಡುವ ಉದ್ದೇಶವೇನೂ ಇಲ್ಲ. ಬಹುಶ: ಇದರಲ್ಲಿ ಈ ಹಿಂದೆ ಏನಾಗಿತ್ತು ಎನ್ನುವುದರ ಬಗ್ಗೆ ಹೇಳುವುದಕ್ಕೆ ಹೋದರೆ, ಈ ಹಿಂದೆ ನೀವು ಶಾಸಕರಾಗಿದ್ದೀರಾ ಎಂದು ಕೇಳುತ್ತೀರಿ. ಆ ಸಮಯದಲ್ಲಿ ನಾನು ಶಾಸಕನಾಗಿರಲಿಲ್ಲ. ಬಹುಶ: ಆಗ ಏನೇನು ಆಗಿತ್ತು ಎಂಬುದರ ಬಗ್ಗೆ ವರದಿ ಬೇಕಾದರೆ ನಾನು ತರಿಸಿಕೊಂಡು ನಿಮಗೆ ಕೊಡುತ್ತೇನೆ. ಆ ರೀತಿಯ ಭಾವನೆ ನನಗಿಲ್ಲ. ಯಾವ ರಸ್ತೆ ಹೋಗಿದೆ ಎನ್ನುವ ಬಗ್ಗೆ ನಾನು ಯಾರನ್ನು ಕೇಳಬೇಕು?

(ಗೊಂದಲ)

ಶ್ರೀ ಹೆಚ್.ಎಸ್. ಪ್ರಕಾಶ್ : ಸ್ವಾಮಿ ಈ ಹಿಂದೆ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಮಹದೇವಪ್ಪ ನವರು ಸಚಿವರಾಗಿದ್ದರು. ನೀವು ಹೇಳಬೇಕು.

(ಗೊಂದಲ)

ಶ್ರೀ ಎ. ಮಂಜು : ತಾವು ಮೊದಲು ಕುಳಿತುಕೊಳ್ಳಿ. ನಂತರ ನಾನು ಹೇಳುತ್ತೇನೆ. ನನಗೆ ಮಾಹಿತಿ ಬೇಕಾಗಿರುವುದೇನೆಂದರೆ, ಯಾವ ರಸ್ತೆಗಳು ಚೆನ್ನರಾಯಪಟ್ಟಣಕ್ಕೆ ಬರುತ್ತವೆ, ಯಾವ್ಯಾವ ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕು. ರಾಜ್ಯ ಸರ್ಕಾರದಿಂದ ಮಹಾಮಸ್ತಕಾಭಿಷೇಕಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿರುತ್ತಾರೆ. ಆ ಸಮಿತಿಯೇ ಎಲ್ಲಾ ಕೆಲಸಗಳನ್ನು ನೋಡಿಕೊಳ್ಳುತ್ತದೆ. ಯಾರನ್ನು ಅಗೌರವ ಮಾಡಬೇಕು, ಮತ್ತೊಂದು ಮಾಡಬೇಕೆನ್ನುವುದೇನಿಲ್ಲ. ಬಹುಶ: ನನಗೆ ಗೊತ್ತಿರುವಂತೆ, ಈಗಾಗಲೇ ಶಾಸಕರುಗಳ ಜೊತೆ ಚರ್ಚೆ ಮಾಡಿದ್ದು, ಮಾಡಿರುವುದೇನು ಎಂಬುದನ್ನು ತೋರಿಸಿದ್ದೇನೆ. ಇದರಲ್ಲಿ ತಾರತಮ್ಯವಿದ್ದರೆ ಹೇಳಲಿ ಅದನ್ನು ಸರಿಪಡಿಸುತ್ತೇನೆ.

ಶ್ರೀ ಸಿ.ಎನ್. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ ಮಾತನಾಡುತ್ತೇನೆ.

(ಗೊಂದಲ)

14-06-2017

ಉಪಾಧ್ಯಕ್ಷರು : ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ. ರೇವಣ್ಣ ಅವರು . . . . ಇಲ್ಲ. ಕೋನರೆಡ್ಡಿ ಅವರೇ ಮಾತನಾಡಿ. ಈಗ ಆಗುವುದಿಲ್ಲ. ಆಮೇಲೆ ಮಾತನಾಡಿಕೊಳ್ಳಿ. ಬಾಲಕೃಷ್ಣ ಅವರೇ ಈಗ ಕುಳಿತುಕೊಳ್ಳಿ. ಕೋನರೆಡ್ಡಿ ಅವರೇ ನೀವು ಕೇಳುತ್ತೀರಾ ಅಥವಾ ಇಲ್ಲವೇ? ಈಗಾಗಲೇ ಅದರ ಚರ್ಚೆ ಮುಗಿದಿದೆ. ದಯವಿಟ್ಟು ಕುಳಿತುಕೊಳ್ಳಿ. ಪ್ರಕಾಶ್ ರವರೇ ಕುಳಿತುಕೊಳ್ಳಿ. ಈಗಾಗಲೇ ಮಾನ್ಯ ಸಚಿವರು ಹೇಳಿರುತ್ತಾರೆ. ನಂತರ ನೀವು ಮಾತನಾಡಿಕೊಳ್ಳಿ.

ಶ್ರೀ ಸಿ.ಎನ್. ಬಾಲಕೃಷ್ಣ : ಒಂದೇ ಒಂದು ವಿಷಯ ಕೇಳುತ್ತೇನೆ. ಏಕೆಂದರೆ ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟಿರುತ್ತದೆ. ಬೇರೆ ರೀತಿಯೇನೂ ಇಲ್ಲ.

ಉಪಾಧ್ಯಕ್ಷರು : ಗಮನ ಸೆಳೆಯುವ ಸಮಯದಲ್ಲಿ discussion ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ.ಎನ್. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ ದಯಮಾಡಿ ಅವಕಾಶ ಕೊಡಿ.

ಉಪಾಧ್ಯಕ್ಷರು : ಈಗ ಆಗುವುದಿಲ್ಲ. ಅವಕಾಶವಿಲ್ಲ. ಕುಳಿತುಕೊಳ್ಳಿ. ಕೋನರೆಡ್ಡಿ ಅವರೆ ಮಾತನಾಡಿ.

**ವಿಷಯ : ರಾಜ್ಯದಲ್ಲಿ ಕುಡುಒಕ್ಕಲಿಗ ಜನಾಂಗದವರನ್ನು ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನಂತೆ 3ಎ ವರ್ಗಕ್ಕೆ ಸೇರ್ಪಡೆಗೊಳಿಸುವ ಬಗ್ಗೆ.**

******

ಶ್ರೀ ಎನ್.ಹೆಚ್. ಕೋನರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಕುಡುಒಕ್ಕಲಿಗ ಜನಾಂಗದವರಿಗೆ ಸೇರಿದ ಸಾವಿರಾರು ಜನ ಉತ್ತರ ಕರ್ನಾಟಕದ ಭಾಗದಲ್ಲಿದ್ದಾರೆ. ಈ ಜಾತಿಯು ಇಲ್ಲಿಯವರೆಗೆ ಯಾವುದೇ ಜಾತಿ ಮೀಸಲಾತಿ ಪಟ್ಟಿಯಲ್ಲಿರುವುದಿಲ್ಲ. ವಿದ್ಯಾರ್ಥಿಗಳಿಗಾಗಿ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಸರ್ಕಾರಿ ಉದ್ಯೋಗಕ್ಕಾಗಿ ಮತ್ತು ಚುನಾವಣೆಯಲ್ಲಿ ಸ್ಪರ್ಧೆ ಮಾಡುವಂತಹ ಸಮಯದಲ್ಲಿ ಜಾತಿ ಪ್ರಮಾಣ ಪತ್ರ ದೊರೆಯದೇ ಬಹಳ ತೊಂದರೆಯಾಗಿರುತ್ತದೆ. ಹಾಗಾಗಿ ಈ ಜನಾಂಗದವರನ್ನು ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನಂತೆ 3ಎ ವರ್ಗಕ್ಕೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

14-06-2017

ಸೇರ್ಪಡೆಗೊಳಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನ ಸೆಳೆಯಬಯಸುತ್ತೇನೆ.

(ಉತ್ತರ ಪ್ರತಿ ಲಗತ್ತಿಸಿದೆ)

ಶ್ರೀ ಎ. ಮಂಜು (ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು) (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ) : ಮಾನ್ಯ ಸದಸ್ಯರಾದ ಕೋನರೆಡ್ಡಿ ಅವರು ಸಮಾಜ ಕಲ್ಯಾಣ ಮಂತ್ರಿಗಳಿಗೆ ಏನು ಪ್ರಶ್ನೆಯನ್ನು ಕೇಳಿದ್ದಾರೆ, 30.3.2002ರ ಜಾತಿ ಮೀಸಲಾತಿ ಪಟ್ಟಿಯಲ್ಲಿ ಈ ಜನಾಂಗವು ಸೇರಿರುವುದಿಲ್ಲ ಎನ್ನುವ ದಾಖಲೆ ಇದೆ. ಈ ಹಿಂದೆ ಸಿದ್ದಗಂಗಯ್ಯ ನೇತೃತ್ವದ ಸಮಿತಿಯು 2005ರಲ್ಲಿ ತನ್ನ ಮಧ್ಯಂತರ ವರದಿಯಲ್ಲಿ ಲಿಂಗಾಯಿತ/ವೀರಶೈವ ಜಾತಿಗೆ ಸೇರಿರುವ 3(ಬಿ) ಗೆ ಕುಡು ಒಕ್ಕಲಿಗ ಜಾತಿಯನ್ನು ಸೇರಿಸಬೇಕೆಂದು ಸಲಹೆ ಮಾಡಿರುತ್ತಾರೆ. ಆದಾದನಂತರ ಶಂಕರಪ್ಪ ನೇತೃತ್ವದ ಆಯೋಗ 2013 ರಲ್ಲಿ ಈ ಜಾತಿಯನ್ನು ಪ್ರವರ್ಗ 3ಎ ಅಡಿಯಲ್ಲಿ ಸೇರಿಸಬೇಕೆಂದು ಸಲಹೆ ಮಾಡಿರುತ್ತಾರೆ. ಬಹುಶ: ಕುಡು ಒಕ್ಕಲಿಗ ಜನಾಂಗವನ್ನು ಜಾತಿ ಮೀಸಲಾತಿ ಪಟ್ಟಿಯಲ್ಲಿ ಸೇರಿಸುವ ಕುರಿತು ಆಯೋಗದವರಿಗೆ ಮನವಿಯನ್ನು ಸಹ ಕುಡು ಒಕ್ಕಲಿಗ ಜನಾಂಗದ ಸಮಾಜದವರು ಸಲ್ಲಿಸಿರುತ್ತಾರೆ. ಬಹುಶ:2015-16ನೇ ಸಾಲಿನಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಂಡಿದ್ದು, ಸದರಿ ಸಮೀಕ್ಷೆಯಡಿಯಲ್ಲಿ ಕುಡು ಒಕ್ಕಲಿಗ ಜಾತಿ ಜನಾಂಗದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗಳ ಬಗ್ಗೆ ಲಭ್ಯವಾಗುವ ಮಾಹಿತಿಗಳನ್ನು ಹಾಗೂ ಬಹಿರಂಗ ವಿಚಾರಣೆಯಲ್ಲಿ ಕಂಡು ಬಂದಿರುವ ಅಂಶಗಳನ್ನು ಆಧರಿಸಿ ಆಯೋಗವು ಸರ್ಕಾರಕ್ಕೆ ಸಲ್ಲಿಸುವ ವರದಿಯ ಸಲಹೆ ಮತ್ತು ಶಿಪಾರಸ್ಸುಗಳನ್ನು ನೋಡಿ, ಮೀಸಲಾತಿಯನ್ನು ಕಲ್ಪಿಸುವುದಕ್ಕೆ ಪರಿಶೀಲಿಸಲಾಗುತ್ತದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಅವರು ಹೇಳುತ್ತಿರುವ ಉತ್ತರ ಮತ್ತು ಕೊಟ್ಟಿರುವ ಉತ್ತರ ಬೇರೆ ಬೇರೆಯಾಗಿರುತ್ತದೆ. ಈಗಾಗಲೇ ವರದಿ ಸಲ್ಲಿಸಿದ್ದು, ಅದನ್ನು ಸರ್ಕಾರ ಜಾರಿ ಮಾಡುವುದು ಮಾತ್ರ ಬಾಕಿಯಿರುತ್ತದೆ. ನೀವು ಸದನದಲ್ಲಿ ಬೇರೆ ಉತ್ತರವನ್ನು ಓದಿದ್ದೀರಿ. ಇದನ್ನು ಆದಷ್ಟು ಬೇಗನೆ ಜಾರಿ ಮಾಡಬೇಕು.

## 14-06-2017

ಶ್ರೀ ಎ.ಮಂಜು : ಮಾನ್ಯ ಉಪಾಧ್ಯಕ್ಷರೆ, 2015-16ನೇ ಸಾಲಿನಲ್ಲಿ ವರದಿ ಏನು ಕೊಡುತ್ತಾರೆ, ಅದರ ಆಧಾರದ ಮೇಲೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ. ನಿಜವಾಗಿಯೂ ಅವರು ಕೇಳುತ್ತಿರುವುದು ಸರಿಯಿದೆ. ಸಮಾಜಕ್ಕೆ ಅನ್ಯಾಯಕ್ಕೆ ಆಗಿರುವ ಬಗ್ಗೆ ನಮ್ಮ ಗಮನದಲ್ಲಿದೆ. ಅದನ್ನು ಪರಿಗಣಿಸುತ್ತೇವೆ.

ಉಪಾಧ್ಯಕ್ಷರು : Ok., ವೈ.ಎ. ನಾರಾಯಣ ಸ್ವಾಮಿ ಅವರು ಇಲ್ಲ. ಬೋಪಯ್ಯನವರೇ ನಿಮ್ಮ ಪ್ರಶ್ನೆಗೆ ಉತ್ತರ ಬಂದಿರುತ್ತದೆ. ತಾವು ರೈಸ್ ಮಾಡಬಹುದು.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು circular ಅನ್ನು ಹೊರಡಿಸಿರುತ್ತಾರೆ.

ಉಪಾಧ್ಯಕ್ಷರು : ಸರಿ ಇದೆಯೇ?

ಶ್ರೀ ಕೆ.ಜಿ.ಬೋಪಯ್ಯ : ಸರಿ ಇದೆ.

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 10.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 27 ನಿಮಿಷಕ್ಕೆ ಮುಕ್ತಾಯಗೊಂಡು, ಪುನ: ದಿನಾಂಕ 15ನೇ ಜೂನ್ 2017 ರಂದು, ಬೆಳಿಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು.)**

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.